ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ರೀಡಾಕೂಟ ಚೀನಾದ ಹಂಗ್‌ಝೌನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ನಡೆದ ನೃತ್ಯ ಪ್ರದರ್ಶನ



ನೀರು ನಿಲ್ಲಿಸಿ ಮೇಲ್ಮನವಿ ಸಲ್ಲಿಸಿ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಮಂಡ್ಯ: 'ತಮಿಳುನಾಡಿಗೆ ಹರಿಯುತ್ತಿರುವ ಕಾವೇರಿ ನೀರನ್ನು ನಿಲ್ಲಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಸಾಧ್ಯವಿದೆ. ಪಾಲನೆ ಮಾಡಲಾಗದ ಸನ್ನಿವೇಶದಲ್ಲಿ ಆದೇಶವನ್ನು ಪಾಲಿಸದಿದ್ದರೆ ನ್ಯಾಯಾಂಗ ನಿಂದನೆಯಾಗುವುದಿಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಶನಿವಾರ ಹೇಳಿದರು.

ಶನಿವಾರ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಕರೆ ನೀಡಿದ್ದ ಮಂಡ್ಯ ಬಂದ್‌ನಲ್ಲಿ ಪಾಲ್ಗೊಂಡು ಮಾತನಾಡಿ, '2016ರ ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಾಂಗ ನಿಂದನೆ ಬಗ್ಗೆ ವಿಸ್ತೃತ ಆದೇಶ ನೀಡಿದೆ. ನೀರು ಬಿಡದಿದ್ದರೆ ನ್ಯಾಯಾಂಗ ನಿಂದನೆಯಾಗುತ್ತದೆಂಬ ಭಯ ರಾಜ್ಯ ಸರ್ಕಾರದ್ದು. ಜಲಾಶಯಗಳಲ್ಲಿ ನೀರಿಲ್ಲವೆಂಬ ಕಾರಣ ನೀಡಿ ಆದೇಶ ಪಾಲಿಸಲು ಸಾಧ್ಯವಿಲ್ಲ ಎಂದು ಮೇಲ್ಮನವಿ ಸಲ್ಲಿಸಬೇಕು' ಎಂದು ಪ್ರತಿಪಾದಿಸಿದರು.

'ಪ್ರಾಧಿಕಾರದ ಆದೇಶವನ್ನು ಪಾಲಿಸದೆ ತಕರಾರು ಅರ್ಜಿ ಹಾಕಿ ಎಂದು ಮೊದಲೇ ಹೇಳಿದ್ದೆ. ಕೋರ್ಟ್ ಆದೇಶಕ್ಕೂ ಮೊದಲೇ ರಾಜ್ಯ ಸರ್ಕಾರ ನೀರುಬಿಟ್ಟು ತಪ್ಪು ಮಾಡಿದೆ. ಸರಿಯಾಗಿ ನಿರ್ಧರಿಸಿದ್ದರೆ ನೀರು ಉಳಿಸಬಹುದಾಗಿತ್ತು' ಎಂದರು.

'ಕಾವೇರಿ ವಿಚಾರದಲ್ಲಿ ಸಾಕಷ್ಟು ಹೋರಾಡಿರುವ ದೇವೇಗೌಡರ ಸಲಹೆ ಪಡೆಯದೇ ಸರ್ಕಾರಗಳು ನೀರು ಹರಿಸಿವೆ. ತಮಿಳುನಾಡಿನ ರಾಜಕೀಯ ಒತ್ತಡದಿಂದ 125 ವರ್ಷಗಳಿಂದಲೂ ರಾಜ್ಯಕ್ಕೆ ಅನ್ಯಾಯವಾಗುತ್ತಲೇ ಇದೆ. ಈಗಾಗಲೇ ₹ 30 ಸಾವಿರ ಕೋಟಿ ಮೌಲ್ಯದ ಬೆಳೆ ನಷ್ಟವಾಗಿದೆ. ಕಾವೇರಿ ನೀರು ನಿರ್ವಹಣಾ ಸಮಿತಿ ಸಭೆಯಲ್ಲಿ ನಮ್ಮ ಪ್ರತಿನಿಧಿಗಳು ಲಘುವಾಗಿ ವರ್ತಿಸಿದ್ದಾರೆ' ಎಂದರು.

'ಜನರ ಉಳಿವಿಗಾಗಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳಲಾಗಿದೆ. ಆ ಬಗ್ಗೆ ಜನರ ಮುಂದೆ ಹೋಗಿ ಜಾಗಟೆ ಬಾರಿಸುವುದಿಲ್ಲ. ದೇವೇಗೌಡರು ಹಾಗೂ ನನ್ನನ್ನು ಜನ ಬೆಳೆಸಿದ್ದಾರೆ. ಐದು ವರ್ಷದ ಸರ್ಕಾರ ಕೊಡದಿದ್ದರೆ ಪಕ್ಷ ವಿಸರ್ಜಿಸುವುದಾಗಿ ತಿಳಿಸಿದ್ದೆ. ಜನ ಆಶೀರ್ವಾದ ಮಾಡಲಿಲ್ಲ, ಈಗ ಗೆದ್ದವರು ಪಕ್ಷ ವಿಸರ್ಜಿಸಿ ಎನ್ನುತ್ತಿದ್ದಾರೆ. ಆದರೆ ಅವರು ಜನರ ಸಮಸ್ಯೆ ಕೇಳುತ್ತಿದ್ದಾರಾ? ಜನರನ್ನು ಉಳಿಸಲು ನಾವು ಹೊಸ ನಿರ್ಧಾರ ಕೈಗೊಂಡಿದ್ದೇವೆ' ಎಂದರು.

ಕೇಂದ್ರಕ್ಕೆ ಮನವರಿಕೆ: ಮಂಡ್ಯ ಭೇಟಿಗೂ ಮುನ್ನ ಅವರು ಕೆಆರ್‌ಎಸ್‌ಗೆ ಭೇಟಿ ನೀಡಿ ಜಲಾಶಯ ವೀಕ್ಷಿಸಿದರು. 'ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ನೀರಿನ ಕೊರತೆ ಇದ್ದು ವಾಸ್ತವ ಸಂಗತಿಯನ್ನು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇನೆ' ಎಂದರು.

ಸೂಟ್‌ಕೇಸ್ ಸಂಬಂಧ: ಬಿಜೆಪಿ ಮುಖಂಡ ಸಿ.ಟಿ.ರವಿ ಬಂದ್ ಬೆಂಬಲಿಸಿ ಮಾತನಾಡಿ, 'ತಮಿಳುನಾಡು ಹಾಗೂ ಕರ್ನಾಟಕದ ನಡುವೆ ಸೂಟ್‌ಕೇಸ್ ಸಂಬಂಧವಿದೆ. ತಮಿಳುನಾಡು ಚುನಾವಣೆ ವೇಳೆಗೆ ಕರ್ನಾಟಕದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸ್ಟಾಲಿನ್ ಪರ ಪ್ರಚಾರ ಮಾಡಿದ್ದರು. ನಮ್ಮ ವಿಧಾನಸಭಾ ಚುನಾವಣೆ ವೇಳೆ ಸ್ಟಾಲಿನ್ ಸೂಟ್‌ಕೇಸ್ ಸಮೇತ ಬಂದಿದ್ದರು' ಎಂದು ಆರೋಪಿಸಿದರು.

'ಕಾವೇರಿ ವಿಷಯದಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮಧ್ಯ ಪ್ರವೇಶಿಸಬೇಕು. ಸೆಟ್ಲ್‌ಮೆಂಟ್ ರಾಜಕಾರಣ ಮಾಡುತ್ತಿರುವ ಅವರ ಮಾತನ್ನು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಕೇಳುತ್ತಾರೆ. ಅಧಿಕಾರಕ್ಕಾಗಿ ಡಿ.ಕೆ.ಶಿವಕುಮಾರ್ ಪಾದಯಾತ್ರೆ ಮಾಡಿದ್ದರು. ಆದರೆ ಅಧಿಕಾರ ಸಿಕ್ಕ ನಂತರ ನೀರಿನ ಹಕ್ಕನ್ನು ಬಿಟ್ಟುಕೊಟ್ಟಿದ್ದಾರೆ' ಎಂದರು.



ರೈತ ಹಿತರಕ್ಷಣಾ ಸಮಿತಿ ಕರೆ ನೀಡಿದ್ದ ಮಂಡ್ಯ ಬಂದ್ ಬೆಂಬಲಿಸಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌ಡಿ.ಕುಮಾರಸ್ವಾಮಿ ಮಾತನಾಡಿದರು

3ನೇ ಜನ್ಮ ಪಡೆದು ಬಂದೆ

ಆರೋಗ್ಯ ಸ್ಥಿತಿ ಬಗ್ಗೆ ಮಾತನಾಡಿದ ಎಚ್‌.ಡಿ.ಕುಮಾರಸ್ವಾಮಿ 'ನಾನು ಯಾವತ್ತೋ ಮಣ್ಣಿಗೆ ಹೋಗಬೇಕಾಗಿತ್ತು, 3ನೇ ಬಾರಿ ಜನ್ಮ ಪಡೆದು ಬಂದಿದ್ದೇನೆ. ದೇವರು ಹಾಗೂ ಜನರ ಆಶೀರ್ವಾದದಿಂದ ಬದುಕಿದ್ದೇನೆ' ಎಂದರು. 'ಚುನಾವಣೆ ವೇಳೆ ತಡರಾತ್ರಿ 3 ಗಂಟೆಯಾದರೂ ಹಳ್ಳಿ ಹಳ್ಳಿ ಸುತ್ತಿ ಪ್ರಚಾರ ಮಾಡಿದೆ. ಆದರೂ ಜನರು ಆಶೀರ್ವದಿಸಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

26ಕ್ಕೆ ಬೆಂಗಳೂರು ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಸೆ.26ರಂದು ಕಾವೇರಿ ಜಲ ಸಂರಕ್ಷಣಾ ಸಮಿತಿ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ಬೆಂಗಳೂರು ಬಂದ್‌ಗೆ ಕರೆ ನೀಡಿವೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ನಡೆದ ಸಭೆಯಲ್ಲಿ ಬಂದ್ ನಡೆಸಲು ತೀರ್ಮಾನ ಕೈಗೊಳ್ಳಲಾಯಿತು.

ಬಂದ್‌ಗೆ ರೈತ ಸಂಘಟನೆಗಳ ಒಕ್ಕೂಟ, ಆಮ್ ಆದ್ಮಿ ಪಕ್ಷ, ರಾಜ್ಯ ಕಬ್ಬು ಬೆಳೆಗಾರರ ಸಂಘ, ಕರ್ನಾಟಕ ನವನಿರ್ಮಾಣ ಸೇನೆ ಬೆಂಬಲ ಘೋಷಿಸಿವೆ. ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣಗೌಡ ಬಣ ಸೇರಿ ಹಲವು ಕನ್ನಡ ಸಂಘಟನೆಗಳು ಬಂದ್‌ಗೆ ಬೆಂಬಲ ಘೋಷಿಸಿಲ್ಲ.

ಸಿನಿಮಾ ಉದ್ಯಮ, ಐಟಿ-ಬಿಟಿ ಕಂಪನಿಯ ಉದ್ಯೋಗಿಗಳು, ವಿದ್ಯಾಸಂಸ್ಥೆಗಳು, ಅಪಾರ್ಟ್‌ಮೆಂಟ್ ಸಂಘ ಸಂಸ್ಥೆಗಳು, ಖಾಸಗಿ ಕಾರ್ಖಾನೆಗಳು, ಹೋಟೆಲ್ ಉದ್ದಿಮೆದಾರರು, ಅಂಗಡಿ ಮಾಲೀಕರು ಸ್ವಯಂಪ್ರೇರಿತವಾಗಿ ಬಂದ್‌ಗೆ ಬೆಂಬಲ ವ್ಯಕ್ತಪಡಿಸುವಂತೆ ಪ್ರತಿಭಟನಾಕಾರರು ಕೋರಿದರು.

ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಅಂದು ಬೆಳಿಗ್ಗೆ 11ಕ್ಕೆ ಪುರಭವನದಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ಆರಂಭವಾಗಲಿದೆ ಎಂದರು.

ಆಮ್ ಆದ್ಮಿ ಪಕ್ಷದ ರಾಜ್ಯ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಮಾತನಾಡಿ, ಸರ್ಕಾರದ ಬೇಜವಾಬ್ದಾರಿಯಿಂದ ಸಮಸ್ಯೆ ಮತ್ತಷ್ಟು ಜಟಿಲವಾಗಿದೆ. ಡಿ.ಕೆ. ಶಿವಕುಮಾರ್ ಅವರು ಮೇಕೆದಾಟು ಯೋಜನೆಗೆ ಪಾದಯಾತ್ರೆ ನಡೆಸಿದ್ದರು. ಅಧಿಕಾರ ಸಿಕ್ಕಿದ ಮೇಲೆ ಮೌನ ವಹಿಸಿದ್ದಾರೆ ಎಂದು ಕಿಡಿಕಾರಿದರು.

'ಅಖಂಡ ಕರ್ನಾಟಕ ಬಂದ್' ಮಾಡಲು ಇದೇ 25ರಂದು ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ' ಎಂದು ಕನ್ನಡ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ತಿಳಿಸಿದರು.

ಏನಿರುತ್ತೆ?

ಔಷಧದ ಅಂಗಡಿಗಳು
ಆಸ್ಪತ್ರೆಗಳು ಹಾಲು, ತರಕಾರಿ
ಮಾರಾಟ ಮೆಟ್ರೊ ಸಂಚಾರ
ಬಿಎಂಟಿಸಿ, ಕೆಎಸ್ಆರ್‌ಟಿಸಿ

ಏನಿರಲ್ಲ?

ಓಲಾ, ಊಬರ್ ಸಂಚಾರ
ಖಾಸಗಿ ಬಸ್, ಟ್ಯಾಕ್ಸಿ ಸೇವೆ
ಯಶವಂತಪುರ ಎಪಿಎಂಸಿ
ಮಾರುಕಟ್ಟೆ

ಕಾಂಗ್ರೆಸ್ ತಮಿಳುನಾಡು ಏಜೆಂಟ್: ಬಿಎಸ್‌ವೈ

ಸ್ಟಾಲಿನ್ ಜತೆ ಮಾತುಕತೆಗೆ ಸೋನಿಯಾ ಗಾಂಧಿ ಮಧ್ಯಸ್ಥಿಕೆ ವಹಿಸಲಿ: ಬಸವರಾಜ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ, ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಖಾಲಿ ಕೊಡಗಳನ್ನು ಹಿಡಿದು ಶನಿವಾರ ಪ್ರತಿಭಟಿಸಿದರು.

ಖಾಲಿ ಕೊಡಗಳ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಭಾವಚಿತ್ರ ಅಂಟಿಸಿ ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮಾತನಾಡಿ, 'ಕೋರ್ಟ್ ಸೂಚನೆಗೂ ಮೊದಲೇ ತಮಿಳುನಾಡಿಗೆ ನೀರು ಹರಿಸಿದ್ದು ಅಪರಾಧ. ತಮಿಳುನಾಡಿನ ಏಜೆಂಟ್ ರೀತಿ ಕಾಂಗ್ರೆಸ್ ವರ್ತಿಸುತ್ತಿದೆ' ಎಂದು ಆಪಾದಿಸಿದರು.

ಶಾಸಕ ಬಸವರಾಜ ಬೊಮ್ಮಾಯಿ ಮಾತನಾಡಿ, 'ಕಾವೇರಿ ನೀರು ಹಂಚಿಕೆ ಸಮಸ್ಯೆ ಬಗೆಹರಿಸಲು ಇಂಡಿಯಾ ಒಕ್ಕೂಟದ ಮುಖ್ಯಸ್ಥೆ ಸೋನಿಯಾ ಗಾಂಧಿ ಮಧ್ಯಸ್ಥಿಕೆ ವಹಿಸಬೇಕು. ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿರುವ ಕಾರಣಕ್ಕೆ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸುವುದು ಅಸಾಧ್ಯ' ಎಂದು ತಿಳಿಸಿದರು.

'ತಮಿಳುನಾಡು ಅಕ್ರಮವಾಗಿ ನೀರು ಬಳಕೆ ಮಾಡುತ್ತಿದೆ. ಕಾನೂನು ಪ್ರಕಾರ 1.8 ಲಕ್ಷ ಎಕರೆ ಪ್ರದೇಶದಲ್ಲಿ ಬೆಳೆ ಬೆಳೆಯಲು ಅವಕಾಶ ಇದೆ. ಅಕ್ರಮವಾಗಿ 4 ಲಕ್ಷ ಎಕರೆಯಲ್ಲಿ ಬೆಳೆ ಬೆಳೆದಿದ್ದಾರೆ. 32 ಟಿಎಂಸಿ ಅಡಿ ನೀರಿನ ಬದಲಿಗೆ 67 ಟಿಎಂಸಿ ಅಡಿ ನೀರು ಪಡೆದಿದ್ದಾರೆ' ಎಂದು ಆಪಾದಿಸಿದರು.

ಮಂಡ್ಯ, ಮೈಸೂರು ಭಾಗದ ರೈತರಿಗೆ ನೀರು ಬಿಡದೆ ಬೆಳೆ ಒಣಗಿದೆ. ಪ್ರತಿ ಎಕರೆಗೆ ₹ 25 ಸಾವಿರ ಪರಿಹಾರ ನೀಡಬೇಕು. ರೈತರ ಹೋರಾಟಕ್ಕೆ ಬಿಜೆಪಿ ಬೆಂಬಲ ನೀಡಲಿದೆ ಎಂದು ಹೇಳಿದರು.

ರಸ್ತೆ ತಡೆ ನಡೆಸಲು ಮುಂದಾದ ವೇಳೆ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಶಾಸಕರಾದ ಸಿ.ಎನ್.ಅಶ್ವತ್ಥ ನಾರಾಯಣ್, ಛಲವಾದಿ ನಾರಾಯಣಸ್ವಾಮಿ, ಮಾಜಿ ಸಚಿವ ಗೋವಿಂದ ಕಾರಜೋಳ ಸೇರಿದಂತೆ ಹಲವರನ್ನು ಪೊಲೀಸರು ವಶಕ್ಕೆ ಪಡೆದರು. ನಂತರ ಬಿಡುಗಡೆ ಮಾಡಿದರು.



ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಬೆಂಗಳೂರಿನಲ್ಲಿ ಶನಿವಾರ ಬಿಜೆಪಿಯಿಂದ ಪ್ರತಿಭಟನೆ ನಡೆಯಿತು. – ಪ್ರಜಾವಾಣಿ ಚಿತ್ರ

> **ಕಾವೇರಿಯಿಂದ ಒಂದು ಹನಿ ನೀರನ್ನೂ ತಮಿಳುನಾಡಿಗೆ ಬಿಡಬಾರದು. ನೀರು ಬಿಟ್ಟರೆ ಹೋರಾಟ ನಡೆಸುತ್ತೇವೆ**
> **ಬಿ.ಎಸ್.ಯಡಿಯೂರಪ್ಪ,** ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

> **ಕಾಂಗ್ರೆಸ್ ಸರ್ಕಾರದಲ್ಲಿ ತಾಳಮೇಳ ಇಲ್ಲ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ತಮಿಳುನಾಡಿನ ಹಿತ ಕಾಯಲು ರಾಜ್ಯದ ಜನರಿಗೆ ತೊಂದರೆ ಕೊಡುತ್ತಿದ್ದಾರೆ**
> **ಬಸವರಾಜ ಬೊಮ್ಮಾಯಿ,** ಶಾಸಕ

'ವಿಪಕ್ಷಗಳ ಕಾವೇರಿ ರಾಜಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವೇರಿ ನದಿ ನೀರಿನ ವಿಷಯದಲ್ಲಿ ನಮ್ಮ ರೈತರ ಹಿತ ರಕ್ಷಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಆದರೆ, ವಿರೋಧ ಪಕ್ಷಗಳು ಈ ವಿಷಯಕ್ಕೆ ರಾಜಕೀಯ ಬಣ್ಣ ನೀಡಲು ಪ್ರಯತ್ನಿಸುತ್ತಿವೆ' ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೂರಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ತಮಿಳುನಾಡಿಗೆ ನೀರು ಹರಿಸಬೇಕೆಂಬ ತೀರ್ಮಾನವನ್ನು ಪುನರ್ ಪರಿಶೀಲಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರ ಅರ್ಜಿ ಸಲ್ಲಿಸಿದೆ. ಈಗ ಬಂದ್ ಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ' ಎಂದರು.

'ನಾವು ರಾಜ್ಯದ ರೈತರ ಹಿತಾಸಕ್ತಿ ರಕ್ಷಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ. ಆದರೆ, ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಎಚ್‌.ಡಿ. ಕುಮಾರಸ್ವಾಮಿ ಅವರು ಹೊಸ ಹುರುಪಿನಲ್ಲಿ ಅವರದ್ದೇ ಆದ ರಾಜಕೀಯ ಮಾಡಲು ಹೊರಟಿದ್ದಾರೆ. ಅವರು ನೀರಿನಲ್ಲಿ ರಾಜಕೀಯ ಮಾಡುತ್ತಿದ್ದರೆ, ನಾವು ರೈತರನ್ನು ಕಾಪಾಡುವ ಕೆಲಸ ಮಾಡುತ್ತಿದ್ದೇವೆ' ಎಂದು ಹೇಳಿದರು.

'ಬೆಂಗಳೂರು ಬಂದ್ ಬೇಡ'

'ಬೆಂಗಳೂರಿನ ಘನತೆಗೆ ಧಕ್ಕೆ ಮಾಡಿದರೆ ನಿಮ್ಮ ಹೃದಯಕ್ಕೆ ನೀವೇ ಚುಚ್ಚಿಕೊಂಡಂತೆ ಆಗುತ್ತದೆ. ದಯಮಾಡಿ ಬಂದ್‌ನಂತಹ ತಪ್ಪು ಮಾಡಬೇಡಿ' ಎಂದು ಬಂದ್ ಕರೆ ನೀಡಿರುವವರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು. 'ಈ ಬಂದ್‌ನಿಂದ ರೈತರಿಗೆ ಏನು ಲಾಭ ಆಗುತ್ತದೆ? ಲಾಭ ಆಗುವುದಾದರೆ ಹೋರಾಟ ಮಾಡಲಿ. ರೈತರ ಪರವಾಗಿ ನಾವು ಹೋರಾಟ ಮಾಡುತ್ತಿಲ್ಲವೆ' ಎಂದು ಪ್ರಶ್ನಿಸಿದರು.

'ಚಳವಳಿಗಳನ್ನು ತಡೆಯುವುದಿಲ್ಲ'

'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚಳವಳಿಗಳು ಸಹಜ. ಚಳವಳಿಗಾರರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ನಾವು ಚಳವಳಿಗಳನ್ನು ನಿಲ್ಲಿಸಲು ಪ್ರಯತ್ನಿಸುವುದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಾವೇರಿ ನದಿ ನೀರಿನ ವಿಚಾರದಲ್ಲಿ ಸರ್ಕಾರದ ವಿರುದ್ಧ ನಡೆಯುತ್ತಿರುವ ಹೋರಾಟದ ಕುರಿತು ಸುದ್ದಿಗಾರರಿಗೆ ಶನಿವಾರ ಪ್ರತಿಕ್ರಿಯಿಸಿದ ಅವರು, 'ಯಾವುದೇ ಹೋರಾಟವನ್ನು ನಮ್ಮ ಸರ್ಕಾರ ಹತ್ತಿಕ್ಕುವುದಿಲ್ಲ' ಎಂದರು. ಸುಪ್ರೀಂ ಕೋರ್ಟ್ ಆದೇಶ ಹೊರಬೀಳುವ ಮುನ್ನವೇ ತಮಿಳುನಾಡಿಗೆ ನೀರು ಹರಿಸಲಾಗಿತ್ತು ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಕೋರ್ಟ್‌ಗೆ ಸುಳ್ಳು ಹೇಳಲು ಸಾಧ್ಯವೆ' ಎಂದು ಪ್ರಶ್ನಿಸಿದರು.

'ಕಾನೂನು ಉಲ್ಲಂಘಿಸಿದರೆ ಕ್ರಮ'

ತುಮಕೂರು: ಕಾನೂನಿನ ಚೌಕಟ್ಟಿನಲ್ಲಿ ಬೆಂಗಳೂರು ಬಂದ್ ಮಾಡಬೇಕು. ಸರ್ಕಾರಿ ಅಥವಾ ಖಾಸಗಿ ಆಸ್ತಿಪಾಸ್ತಿಗೆ ನಷ್ಟ ಉಂಟು ಮಾಡಬಾರದು. ಅನುಮತಿ ಪಡೆದುಕೊಳ್ಳಬೇಕು. ನಿಯಮ ಬಾಹಿರವಾಗಿ ನಡೆದುಕೊಂಡರೆ ಕ್ರಮ ಅನಿವಾರ್ಯವಾಗುತ್ತದೆ. ಶಾಂತಿಯುತವಾಗಿ ಬಂದ್, ಪ್ರತಿಭಟನೆ ಮಾಡಿದರೆ ಸರ್ಕಾರ ಅನುಮತಿ ಕೊಡಲಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.



> **ಇಂದಿನ ಸಂಕಷ್ಟದ ಸಂದರ್ಭದಲ್ಲಿ ಸಾಮಾಜಿಕ ಸೇವಾ ಸಂಸ್ಥೆಗಳು, ಮಠಗಳು ರೈತರ ನೆರವಿಗೆ ಮುಂದಾಗಬೇಕು. ರೈತ ಹೋರಾಟಕ್ಕೆ ನಮ್ಮ ಬೆಂಬಲವಿದೆ**
> **ಸಿದ್ಧರಾಮ ಸ್ವಾಮೀಜಿ,** ತೋಂಟದಾರ್ಯ ಮಠ, ಗದಗ



> **ಕೇಂದ್ರ ಸರ್ಕಾರವು ತಕ್ಷಣವೇ ರಾಜ್ಯ ಸರ್ಕಾರಗಳ ಸಭೆ ಕರೆಯಬೇಕು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಕಾವೇರಿ ನೀರು ನಿಯಂತ್ರಣ ಸಮಿತಿ ಕಣ್ಣುಮುಚ್ಚಿ ನಿರ್ಧಾರ ಕೈಗೊಂಡಿವೆ**
> **ವಿ.ಎಸ್.ಉಗ್ರಪ್ಪ,** ಕಾಂಗ್ರೆಸ್ ಮುಖಂಡ



> **ಕಾವೇರಿ ಸಮಸ್ಯೆ ರಾಜ್ಯ ಸರ್ಕಾರವೇ ಪರಿಹರಿಸಲಿ ಎನ್ನುವುದು ಸರಿಯಲ್ಲ. ರಾಜ್ಯದ 28 ಸಂಸದರು ಸೇರಿ ಎಲ್ಲರೂ ಪಕ್ಷ, ಪಂಗಡ ಮೀರಿ ಒಗ್ಗಟ್ಟು ಪ್ರದರ್ಶಿಸಬೇಕು**
> **ಜಗದೀಶ ಶೆಟ್ಟರ್,** ವಿಧಾನ ಪರಿಷತ್ ಸದಸ್ಯ




> **ಕಾವೇರಿ ಜಲನ್ಯಾಯ ಮಂಡಳಿ ಅರೆನ್ಯಾಯಿಕ ವ್ಯವಸ್ಥೆಯಿಂದ ಕೂಡಿದ್ದು, ಇದರಲ್ಲಿ ಕೇಂದ್ರ ಸರ್ಕಾರಕ್ಕೆ ಮಧ್ಯೆಪ್ರವೇಶಿಸಲು ಆಗದು. ಇದು ಎಲ್ಲರಿಗೂ ಗೊತ್ತಿರುವ ವಿಷಯ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

ಬಿಜೆಪಿ ಜತೆಗೆ ಸಹಜ; ಕಾಂಗ್ರೆಸ್ ಜತೆಗಿದ್ದುದು ಅಸಹಜ ಮೈತ್ರಿ– ಕುಮಾರಸ್ವಾಮಿ

'ಎಲ್‌ಒಸಿಗೆ ಶೇ 10ರಷ್ಟು ಕಮಿಷನ್'

● ವೈ.ಗ. ಜಗದೀಶ್

ಪ್ರಜಾವಾಣಿ ಸಂದರ್ಶನ



ಎಚ್‌ಡಿ. ಕುಮಾರಸ್ವಾಮಿ

'ಕಾಮಗಾರಿ ಮುಗಿದ ಬಳಿಕ ಗುತ್ತಿಗೆದಾರರಿಗೆ ಎಲ್‌ಒಸಿ(ಹಣ ಭರವಸೆ ಪತ್ರ) ನೀಡಲು ಶೇ 7ರಿಂದ 10 ಪರ್ಸೆಂಟ್ ವಸೂಲಿ ಮಾಡಲಾಗುತ್ತಿದೆ. ಬಿಲ್ಡರ್‌ಗಳಿಂದ ಪ್ರತಿ ಚದರಡಿಗೆ ₹200 ನಿಗದಿ ಮಾಡಿ, ವಸೂಲು ಮಾಡಲಾಗುತ್ತಿದೆ. ಹಿಂದೆಂದೂ ಇಷ್ಟು ಭ್ರಷ್ಟಾಚಾರ ಇದ್ದುದನ್ನು ನಾನು ನೋಡಿಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

'ಪ್ರಜಾವಾಣಿ'ಗೆ ನೀಡಿದ ಸಂದರ್ಶನದಲ್ಲಿ ಸರ್ಕಾರದ ವೈಫಲ್ಯ, ಭ್ರಷ್ಟಾಚಾರದ ಪರಿ ಹಾಗೂ ಮೈತ್ರಿಯ ಅನಿವಾರ್ಯದ ಕುರಿತು ಅವರು ಮಾತನಾಡಿದರು.

'ತಮ್ಮ ಜೀವನದಲ್ಲಿ ಎಂದೂ ಕಾಣದಿದ್ದ ಭ್ರಷ್ಟ ಬಿಜೆಪಿ ಸರ್ಕಾರ ಎಂದು ಹಳಿಯುತ್ತಿದ್ದಿರಿ. ಈಗ ಅದೆಲ್ಲ ಹೋಯಿತಾ' ಎಂದು ಕೇಳಿದ ಪ್ರಶ್ನೆಗೆ, 'ಹೇಳಿದ್ದು ಹೌದು; ನಾಲ್ಕು ವರ್ಷ ಅಧಿಕಾರ ನಡೆಸಿದ ಬಳಿಕ ಕೊನೆ ವರ್ಷ ಆಡಳಿತ ವಿರೋಧಿ ಅಲೆ ಏಳುವುದು ಸಹಜ. ನಾಲ್ಕೇ ತಿಂಗಳಲ್ಲಿ ಕಾಂಗ್ರೆಸ್ ಅಂತಹ ಪರಿಸ್ಥಿತಿ ಎದುರಿಸುತ್ತಿದೆ. ಯಾರ್‍ಯಾರಿಗೆ ಎಷ್ಟು ದರ ನಿಗದಿ ಮಾಡಿದ್ದಾರೆ. ಬೆಂಗಳೂರಿನಲ್ಲಿ ಯಾರಿಂದ ಎಷ್ಟು ವಸೂಲಿ ಮಾಡಲಾಗುತ್ತಿದೆ. ನಾಲ್ಕು ವರ್ಷದ ಭ್ರಷ್ಟಾಚಾರವನ್ನು ನಾಲ್ಕೇ ತಿಂಗಳಲ್ಲಿ ಮೀರಿಸಿದ್ದಾರೆ' ಎಂದರು.

● ಮೈತ್ರಿಯ ಉದ್ದೇಶವೇನು?

ಎಚ್‌ಡಿಕೆ: 2006ರಲ್ಲಿ ಬಿಜೆಪಿ ಜತೆ ಸೇರಿ ಸರ್ಕಾರ ಮಾಡಿದಾಗ ಅದು ಸಹಜ ಮೈತ್ರಿಯಾಗಿತ್ತು. ನಾನಾ ಕಾರಣಗಳಿಂದ ಅದು ಮುರಿದು ಬಿತ್ತು. ಆಗ ಕುಮಾರಸ್ವಾಮಿ ಒಳ್ಳೆಯ ಸರ್ಕಾರ ಕೊಟ್ಟರು ಎಂದು ಕರ್ನಾಟಕದ ಮನೆಮನೆಗಳಲ್ಲಿ ಜನ ಮಾತನಾಡುತ್ತಿದ್ದರು. ಆಗ ಮೂಡಿದ ಒಳ್ಳೆಯ ಅಭಿಪ್ರಾಯವೇ (ಗುಡ್‌ವಿಲ್) ಇಂದು ನಮ್ಮ ಪಕ್ಷವನ್ನು ಉಳಿಸಿದೆ. ಆದರೆ, ಕಾಂಗ್ರೆಸ್ ಜತೆ ಮಾಡಿಕೊಂಡ ಅಸಹಜ ಮೈತ್ರಿಯಿಂದಾಗಿ ಎಲ್ಲವೂ ಕಳೆದುಹೋಯಿತು.

● ಎನ್‌ಡಿಎ ಭಾಗವಾಗಿರುವುದರಿಂದ ರಾಜ್ಯಕ್ಕೆ ಹಿತವೋ ನಿಮ್ಮ ಪಕ್ಷಕ್ಕೋ?

ಎಚ್‌ಡಿಕೆ: ಅಧಿಕಾರಕ್ಕಾಗಿ ಮೈತ್ರಿಯಲ್ಲ. ಈ ಸರ್ಕಾರದ ನಡವಳಿಕೆ ನೋಡಿದರೆ ಮುಂದೆ ಐದು ವರ್ಷ ಇವರೇ ಇದ್ದರೆ ರಾಜ್ಯವನ್ನು ಉಳಿಸುವುದಿಲ್ಲ ಎಂಬುದು ಸ್ಪಷ್ಟ. ಪಕ್ಷವನ್ನು ಬಲಗೊಳಿಸುವ ಜತೆಗೆ ರಾಜ್ಯವನ್ನು ಉಳಿಸುವುದು ನಮ್ಮ ಮುಂದಿರುವ ಗುರಿ. ಸರ್ಕಾರ ನಡೆಸುವ ಹಿಡಿಮಂದಿ ಸೇರಿಕೊಂಡು ಖಜಾನೆಯನ್ನೇ ಲೂಟಿ ಹೊಡೆಯುತ್ತಿದ್ದಾರೆ. ಇದಕ್ಕೆ ತಡೆಯೊಡ್ಡಬೇಕಿದೆ.

● ಅಂದರೆ ಮತ್ತೆ ಇಬ್ಬರು ಸೇರಿ ಸರ್ಕಾರ ರಚಿಸುತ್ತೀರಾ?

ಎಚ್‌ಡಿಕೆ: ನಾಲ್ಕು ತಿಂಗಳಲ್ಲೇ ಅವರಲ್ಲಿನ ಭಿನ್ನಾಭಿಪ್ರಾಯ ಹೊರಬಂದಿದೆ. ಮೂವರು ಡಿಸಿಎಂ ಸೃಷ್ಟಿ ಚರ್ಚೆ ನಡೆದಿದೆ. ಇವೆಲ್ಲ ನೋಡುತ್ತಿದ್ದರೆ, ಕಾಂಗ್ರೆಸ್ ನಾಯಕರಲ್ಲಿ, ಜನರಲ್ಲಿ ಈ ಸರ್ಕಾರ ಐದು ವರ್ಷ ಇರುತ್ತದೆಯೇ ಎಂಬ ಅನುಮಾನ ಮೂಡಿದೆ. ಎರಡೂ ಪಕ್ಷಗಳು ಸೇರಿ ಲೋಕಸಭೆಯಲ್ಲಿ ಅತಿ ಹೆಚ್ಚು ಸ್ಥಾನ ಗೆಲ್ಲುತ್ತೇವೆ. 2019ರಲ್ಲಿ ಲೋಕಸಭಾ ಫಲಿತಾಂಶ ಬಂದರೆ ನಂತರ ಏನಾಯ್ತು?

● ನಿಮ್ಮ ನೇತೃತ್ವದ ಸರ್ಕಾರ ಉರುಳಿಸಿದಂತೆ ಮತ್ತೆ ಈ ಸರ್ಕಾರವನ್ನೂ...

ಎಚ್‌ಡಿಕೆ: 135 ಸದಸ್ಯರ ಬಲದ ಸರ್ಕಾರ ಹೋಗುತ್ತದೆ ಎಂದು ಹೇಳಲಾರೆ. ಲೋಕಸಭೆ ಚುನಾವಣೆಯಲ್ಲಿ ನಿರೀಕ್ಷಿತ ಗೆಲುವು ಸಾಧಿಸದೇ ಇದ್ದರೆ ಸರ್ಕಾರ ವಿಸರ್ಜನೆ ಮಾಡಬೇಕಾದ ಸಂದರ್ಭ ಬರಬಹುದು ಎಂದು ಸಚಿವ ಕೆ.ಎನ್. ರಾಜಣ್ಣ ಹೇಳಿದ್ದಾರೆ. 25–26 ಸೀಟು ವಿರೋಧ ಪಕ್ಷಗಳ ಪಾಲಾದರೆ ಕಾಂಗ್ರೆಸ್ ಸರ್ಕಾರದ ಸ್ಥಿತಿ ಏನು ಎಂಬುದನ್ನು ಸಚಿವರೇ ಪ್ರಶ್ನಿಸುತ್ತಿದ್ದಾರೆ. ಅವರ ಮಾತುಗಳಲ್ಲೇ ಎಲ್ಲ ಅರ್ಥ ಇದೆಯಲ್ಲ!

● ನೀವು ವಿರೋಧ ಪಕ್ಷದ ನಾಯಕರಾ ಅಥವಾ ಕೇಂದ್ರ ಸಚಿವರಾ?

ಎಚ್‌ಡಿಕೆ: ಎರಡೂ ಆಗುವುದಿಲ್ಲ. ಬಿಜೆಪಿಯಿಂದ 66 ಶಾಸಕರು ಗೆದ್ದಿದ್ದು, ಆ ಪಕ್ಷದಲ್ಲೇ ವಿರೋಧ ಪಕ್ಷದ ನಾಯಕರಾಗುವ ಸಮರ್ಥರು ಸಾಕಷ್ಟಿದ್ದಾರೆ. ಅದನ್ನು ಕೇಂದ್ರ ನಾಯಕರಿಗೆ ಮನವರಿಕೆ ಮಾಡಿಕೊಡುತ್ತೇನೆ ವಿನಃ ವಿರೋಧ ಪಕ್ಷದ ನಾಯಕ ಸ್ಥಾನ ಒಪ್ಪಲಾರೆ. ಎರಡೂ ಪಕ್ಷದ ಮಧ್ಯೆ ಸಮನ್ವಯಕಾರನಾಗಿ ಕೆಲಸ ಮಾಡುತ್ತೇನೆ. ಅಧಿಕಾರ ಬೇಡ.

● ಹಿಂದೆಲ್ಲ ಜನತಾ ಪರಿವಾರ ಕೈಜೋಡಿಸಿದಾಗ ಬಿಜೆಪಿಗೆ ಲಾಭವಾಗಿದೆ. ಜನತಾ ಪರಿವಾರ ಮುಳುಗಿದೆಯಲ್ಲ?

ಎಚ್‌ಡಿಕೆ: ಬಿಜೆಪಿ ಜತೆಗಿನ ಮೈತ್ರಿ ಮುರಿಯದೇ ಹೋಗಿದ್ದರೆ ಒಡಿಶಾದಲ್ಲಿ ಬಿಜು ಪಟ್ನಾಯಕ್– ನವೀನ್ ಪಟ್ನಾಯಕ್ ರೀತಿಯಲ್ಲೇ ಕರ್ನಾಟಕದಲ್ಲೂ ನಮ್ಮ ಪಕ್ಷ ಬಲಿಷ್ಠವಾಗಿರುತ್ತಿತ್ತು.

● ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರನ್ನು ಹೊರಗಿಟ್ಟು ಮಾತುಕತೆ ನಡೆಸಿದ್ದೀರಿ?

ಎಚ್‌ಡಿಕೆ: ದೆಹಲಿಗೆ ಹೋಗುವ ಮೊದಲು ಎಲ್ಲವನ್ನೂ ಇಬ್ರಾಹಿಂ ಅವರ ಜತೆ ಚರ್ಚೆ ನಡೆಸಿಯೇ ಹೋಗಿರುವೆ. ಅವರನ್ನು ಹೊರಗಿಟ್ಟು ಏನನ್ನೂ ಮಾಡಿಲ್ಲ. ಬಿಜೆಪಿ ಜತೆಗಿನ ಮೈತ್ರಿ ಬಗ್ಗೆ ಎಲ್ಲ ವಿವರಗಳನ್ನೂ ಅವರಿಗೆ ನೀಡಿರುವೆ. ಮುಂದಿನ ಚರ್ಚೆಗಳಲ್ಲಿ ಅವರೂ ಇರಲಿದ್ದಾರೆ.

'ಅನಂತಕುಮಾರ್ ಡಿಸಿಎಂ ಮಾಡಲು ಸಿದ್ದರಾಮಯ್ಯ ಅಣಿಯಾಗಿರಲಿಲ್ಲವೇ?'

ತಾವು ಮುಖ್ಯಮಂತ್ರಿ, ಅನಂತಕುಮಾರ್ ಉಪ ಮುಖ್ಯಮಂತ್ರಿಯಾಗಿ ಸರ್ಕಾರ ರಚಿಸಲು ಸಿದ್ದರಾಮಯ್ಯನವರು 2004ರಲ್ಲಿ ಜೆಡಿಎಸ್‌ನಲ್ಲಿದ್ದಾಗಲೇ ಅಣಿಯಾಗಿರಲಿಲ್ಲವೇ? ಆಗ ಜಾತ್ಯತೀತ ಸಿದ್ಧಾಂತ ನೆನಪಿಗೆ ಬರಲಿಲ್ಲವೇ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

'ನಿಮ್ಮ ಪಕ್ಷದ ಜತೆಗೆ ಅಂಟಿಕೊಂಡ ಜಾತ್ಯತೀತ ಪದದ ಕತೆಯೇನು' ಎಂಬ ಪ್ರಶ್ನೆಗೆ, 'ಕಾಂಗ್ರೆಸ್‌ನ ಕೆಳಹಂತದ ನಾಯಕರು ಇದರ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಜೋಷಿ, ಸಂತೋಷ್ ಅವರ ಬಗ್ಗೆ ಟೀಕಿಸಿದ್ದೆ ಎಂದು ಹೇಳುತ್ತಿದ್ದಾರೆ. ಸಿದ್ದರಾಮಯ್ಯ ಮಾಡಿದ್ದೇನು' ಎಂದು ಕೇಳಿದರು.

'2004ರಲ್ಲಿ ಯಾರಿಗೂ ಬಹುಮತ ಬರದೇ ಇದ್ದಾಗ ಅಂದಿನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ವೆಂಕಯ್ಯನಾಯ್ಡು ಅವರನ್ನು ಸಿದ್ದರಾಮಯ್ಯ ಏಕೆ ಭೇಟಿಯಾಗಿದ್ದರು. ಬೆಂಗಳೂರಿನಲ್ಲಿ ನಿಗದಿಯಾಗಿದ್ದ ಭೇಟಿ ಚೆನ್ನೈಗೆ ಬದಲಾಗಿತ್ತು. ಆಗ ನಾಲ್ವರು ಚೆನ್ನೈಗೆ ವಿಮಾನ ಟಿಕೆಟ್ ಬುಕ್ ಮಾಡಿದ್ದರಲ್ಲ; ಅದೆಲ್ಲ ಮರೆತುಹೋಯಿತಾ. ಈಗ ಅನಂತಕುಮಾರ್ ಅವರಿಲ್ಲ; ಸಿದ್ದರಾಮಯ್ಯ(ಜೆಡಿಎಸ್) ಮುಖ್ಯಮಂತ್ರಿ, ಅನಂತಕುಮಾರ್ ಉಪಮುಖ್ಯಮಂತ್ರಿಯಾಗಿ ಸರ್ಕಾರ ರಚಿಸುವ ಮಾತುಕತೆಯಾಗಿತ್ತಲ್ಲವೇ? ಅಂದು ಕೆಎಎಸ್ ಅಧಿಕಾರಿಗಳ ಸಂಘದಲ್ಲಿ ನಡೆದ ಸಭೆಯಲ್ಲಿ ಯಾರ್‍ಯಾರು ಪಾಲ್ಗೊಂಡಿದ್ದರು?' ಎಂದರು.

'2008ರಲ್ಲಿ ಮಲ್ಲಿಕಾರ್ಜುನ ಖರ್ಗೆಯವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಮಾಡಿದಾಗ ಸಿಟ್ಟಿಗೆದ್ದ ಸಿದ್ದರಾಮಯ್ಯ ಯಡಿಯೂರಪ್ಪನವರನ್ನು ಭೇಟಿಯಾಗಿ, ಹಣಕಾಸು ಖಾತೆ ಕೊಡಿ. ಮಹದೇವಪ್ಪ, ಸತೀಶ ಜಾರಕಿಹೊಳಿ ಪಕ್ಷ ಸೇರುತ್ತೇವೆ ಎಂಬ ಪ್ರಸ್ತಾವ ಮುಂದಿಟ್ಟರಲಿಲ್ಲವೇ? ಸಿದ್ದರಾಮಯ್ಯನವರು ನಮ್ಮ ಪಕ್ಷದಲ್ಲಿದ್ದಾಗ ಸೋನಿಯಾಗಾಂಧಿಯವರನ್ನು ಬೈಯ್ದಿರಲಿಲ್ಲವೇ? ಎಂದು ಪ್ರಶ್ನಿಸಿದರು.

'ಬಿಜೆಪಿ, ಕಾಂಗ್ರೆಸ್ ಮಧ್ಯೆ ವ್ಯತ್ಯಾಸವಿಲ್ಲ'



ಬಿ.ಎಂ. ಫಾರೂಕ್

ಬೆಂಗಳೂರು: 'ಅಲ್ಪಸಂಖ್ಯಾತರ ವಿಚಾರದಲ್ಲಿ ಬಿಜೆಪಿ, ಕಾಂಗ್ರೆಸ್ ಪಕ್ಷಗಳ ಮಧ್ಯೆ ವ್ಯತ್ಯಾಸವಿಲ್ಲ. ಎರಡೂ ಪಕ್ಷಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಎರಡೂ ಪಕ್ಷಗಳನ್ನು ಬೇರೆ ಬೇರೆ ರೀತಿಯಲ್ಲಿ ನೋಡಲು ಸಾಧ್ಯವಿಲ್ಲ' ಎಂದು ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಬಿ.ಎಂ. ಫಾರೂಕ್ ಹೇಳಿದರು.

ಬಿಜೆಪಿ ಜತೆ ಜೆಡಿಎಸ್ ಮೈತ್ರಿ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ಅಲ್ಪಸಂಖ್ಯಾತರು ದೀರ್ಘ ಕಾಲದಿಂದಲೂ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿಕೊಂಡು ಬಂದಿದ್ದಾರೆ. ಕಾಂಗ್ರೆಸ್ ಅಲ್ಪಸಂಖ್ಯಾತರಿಗೆ ಏನು ನೀಡಿದೆ. ಬಿಜೆಪಿ ಸರ್ಕಾರ ಹಿಂಪಡೆದಿದ್ದ ಶೇಕಡ 4ರಷ್ಟು ಮೀಸಲಾತಿಯನ್ನು ಅಲ್ಪಸಂಖ್ಯಾತರಿಗೆ ಮರಳಿ ನೀಡುವುದಾಗಿ ಕಾಂಗ್ರೆಸ್ ಭರವಸೆ ನೀಡಿತ್ತು. ಅಧಿಕಾರಕ್ಕೆ ಬಂದು ನೂರು ದಿನಗಳನ್ನು ಕಳೆದರೂ ಒಂದು ತೀರ್ಮಾನ ಆಗಿಲ್ಲ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ₹ 10,000 ಕೋಟಿ ಒದಗಿಸುವ ಭರವಸೆಯನ್ನು ಮರೆತೇಬಿಟ್ಟಿದ್ದಾರೆ' ಎಂದರು.

'ಬಿಜೆಪಿ 1 ಸ್ಥಾನಕ್ಕೆ ಇಳಿಯಲಿದೆ'

ಬೆಂಗಳೂರು: ಜೆಡಿಎಸ್ ಪಕ್ಷವು ಬಿಜೆಪಿಯ ಬಿ ಟೀಂ ಎಂಬುದು ಸಾಬೀತಾಗಿದ್ದು, ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕದ ಬಿಜೆಪಿ ಒಂದು ಸ್ಥಾನಕ್ಕೆ ಇಳಿಯಲಿದೆ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿ, ಜೆಡಿಎಸ್ ತನ್ನ ಹೆಸರಿನಲ್ಲಿರುವ ಜಾತ್ಯತೀತ ಪದ ತೆಗೆಯುವುದು ಸೂಕ್ತ ಎಂದು ಕುಟುಕಿದರು.

'2019ರಲ್ಲಿ ಜೆಡಿಎಸ್ ಜತೆ ಹೋಗಿದ್ದಕ್ಕೆ ಒಂದು ಕ್ಷೇತ್ರದಲ್ಲಿ ಮಾತ್ರ ಗೆದ್ದೆವು. 2024 ರಲ್ಲಿ ಬಿಜೆಪಿ ಅದೇ ಸ್ಥಿತಿ ತಲುಪಲಿದೆ' ಎಂದರು. ಮೈತ್ರಿ ಮಾತುಕತೆಗೆ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರನ್ನು ಕರೆದಿಲ್ಲ. ಅವರು ಮುಸ್ಲಿಂ ಸಮುದಾಯಕ್ಕೆ ಸೇರಿದ್ದಾರೆ ಎಂದು ಕರೆದಿಲ್ಲವೇ ಎಂದು ಪ್ರಶ್ನಿಸಿದರು.

ಜೆಡಿಎಸ್ ತೊರೆಯಲು ಹಲವು ಮುಸ್ಲಿಂ ಮುಖಂಡರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟಕ್ಕೆ (ಎನ್‌ಡಿಎ) ಸೇರುವ ಜೆಡಿಎಸ್ ನಿರ್ಧಾರ ವಿರೋಧಿಸಿ ಮಾಜಿ ಸಚಿವ ಎನ್.ಎಂ.ನಬಿ ಸೇರಿದಂತೆ ಹಿರಿಯ ಮುಸ್ಲಿಂ ಮುಖಂಡರು ರಾಜೀನಾಮೆ ನೀಡಲು ನಿರ್ಧರಿಸಿದ್ದಾರೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾದ ನಂತರ ಜೆಡಿಎಸ್‌ನ ಹಲವು ಮುಸ್ಲಿಂ ಮುಖಂಡರು ಪ್ರತ್ಯೇಕ ಸಭೆ ನಡೆಸಿದರು.

ನಬಿ ಅವರೊಂದಿಗೆ ಜೆಡಿಎಸ್‌ನ ಹಿರಿಯ ಉಪಾಧ್ಯಕ್ಷ ಸೈಯದ್ ಶಫಿವುಲ್ಲಾ, ರಾಜ್ಯ ಸರ್ಕಾರದ ದೆಹಲಿ ಪ್ರತಿನಿಧಿಯಾಗಿದ್ದ ಮೊಹಿದ್ ಅಲ್ತಾಫ್, ಯುವ ಘಟಕದ ಅಧ್ಯಕ್ಷ ಎನ್.ಎಂ. ನೂರ್, ಅಲ್ಪಸಂಖ್ಯಾತ ವಿಭಾಗದ ಮಾಜಿ ಅಧ್ಯಕ್ಷ ನಾಸಿರ್ ಹುಸೇನ್ ಉಸ್ತಾದ್ ಪಕ್ಷ ತೊರೆಯುವ ನಿರ್ಧಾರ ಮಾಡಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೆಚ್ಚು ಮುಸ್ಲಿಂ ಮತಗಳನ್ನು ಪಡೆಯಲು ಕಾಂಗ್ರೆಸ್‌ನಲ್ಲಿದ್ದ ಸಿ.ಎಂ. ಇಬ್ರಾಹಿಂ ಅವರನ್ನು ಸೆಳೆದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಆದರೆ, ಚುನಾವಣೆಯಲ್ಲಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿ ಕಾಂಗ್ರೆಸ್ ಬೆಂಬಲಿಸಿದ್ದರು.

'ಜೆಡಿಎಸ್ ಬಿಜೆಪಿಯ 'ಬಿ' ಟೀಮ್ ಎಂದು ಕಾಂಗ್ರೆಸ್ ಚುನಾವಣೆ ಸಮಯದಲ್ಲಿ ಬಿಂಬಿಸಿತ್ತು. ಇದರಿಂದ ಕಾಂಗ್ರೆಸ್‌ಗೆ ಲಾಭವಾಗಿತ್ತು. ಪಕ್ಷದ ನಾಯಕರು ತೆಗೆದುಕೊಂಡಿರುವ ನಿರ್ಧಾರ ಕಾಂಗ್ರೆಸ್ ಆರೋಪವನ್ನು ಪುಷ್ಟೀಕರಿಸಿದೆ. ಜಾತ್ಯತೀತ ನಿಲುವು ಸಡಿಲಗೊಂಡಿರುವ ಕಾರಣ ಪಕ್ಷ ತೊರೆಯಲು ನಿರ್ಧರಿಸಲಾಗಿದೆ. ಈ ಬೆಳವಣಿಗೆಯಿಂದ ಮುಸ್ಲಿಂ ಮುಖಂಡರು ಅಸಮಾಧಾನಗೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಪದಾಧಿಕಾರಿಗಳು ರಾಜೀನಾಮೆ ನೀಡಲಿದ್ದಾರೆ' ಎಂದು ಸೈಯದ್ ಶಫಿವುಲ್ಲಾ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.


'ಉಳಿದ ಮುಸ್ಲಿಮರೂ ಸೇರಿದಂತೆ ಇತರೆ ಸಮುದಾಯಗಳ ಜಾತ್ಯತೀತ ನಾಯಕರ ಜತೆ ಚರ್ಚಿಸಿದ ನಂತರ ಮುಂದಿನ ನಿರ್ಧಾರ ಪ್ರಕಟಿಸಲಾಗುವುದು' ಎಂದು ಹೇಳಿದರು.

ದೇವೇಗೌಡ ಸ್ಪರ್ಧೆಗೆ ವಿರೋಧ

ಪ್ರಜಾವಾಣಿ ವಾರ್ತೆ

ತುಮಕೂರು: ತುಮಕೂರು ಲೋಕಸಭಾ ಕ್ಷೇತ್ರದಿಂದ ಎಚ್‌.ಡಿ. ದೇವೇಗೌಡ ಅವರ ಸ್ಪರ್ಧೆಗೆ ಬಿಜೆಪಿ ಸಂಸದ ಜಿ.ಎಸ್.ಬಸವರಾಜು ಬಹಿರಂಗವಾಗಿ ವಿರೋಧ ವ್ಯಕ್ತಪಡಿಸಿದ್ದಾರೆ.

ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಒಂದು ವೇಳೆ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ದೇವೇಗೌಡರು ತುಮಕೂರು ಕ್ಷೇತ್ರದಿಂದ ಸ್ಪರ್ಧಿಸಿದರೆ ಜಿಲ್ಲೆಯ ಜನರು ಅವರಿಗೆ ಖಂಡಿತ ಮತ ಹಾಕುವುದಿಲ್ಲ ಎಂದು ಅವರು ಹೇಳಿದ್ದಾರೆ.



ಜಿ.ಎಸ್. ಬಸವರಾಜು

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಮ್ಮ ಪಕ್ಷದವರು ಮೈತ್ರಿ ಮಾಡಿಕೊಂಡು ಜಿಲ್ಲೆಯಿಂದ ದೇವೇಗೌಡ ಅವರನ್ನು ಚುನಾವಣೆಗೆ ನಿಲ್ಲಿಸಲು ಹೊರಟಿದ್ದಾರೆ. ಹೇಮಾವತಿ ನೀರಿನ ವಿಚಾರದಲ್ಲಿ ಜಿಲ್ಲೆಗೆ ಗೌಡರು ಎಂದೂ ಕಂಡರಿಯದಷ್ಟು ಮೋಸ ಮಾಡಿದ್ದಾರೆ. ಯಾರಿಗಾದರೂ ವೋಟ್ ಹಾಕಲಿ. ಗೌಡರಿಗೆ ಮತ ಹಾಕಬಾರದು. ಅವರಿಗೆ ಮತ ಕೊಟ್ಟರೆ ಜಿಲ್ಲೆಯ ಜನತೆ ಪಾಪ ಮಾಡಿದಂತಾಗುತ್ತದೆ' ಎಂದರು.

ಜೆಡಿಎಸ್‌ನವರು ಐದು ಲೋಕಸಭಾ ಕ್ಷೇತ್ರ ಕೇಳಿದ್ದಾರೆ. ತುಮಕೂರು ಕ್ಷೇತ್ರವನ್ನು ಬಿಟ್ಟುಕೊಡುವಂತೆ ಬೇಡಿಕೆ ಇಟ್ಟಿದ್ದಾರೆ.

'ರಕ್ತ ಕೊಟ್ಟರೂ ಜಿಲ್ಲೆಗೆ ಹೇಮಾವತಿ ನೀರು ಕೊಡಲ್ಲ' ಎಂದು ಹೇಳಿದ್ದ ದೇವೇಗೌಡ ಅವರನ್ನು ಇಲ್ಲಿನ ಜನರು ಒಮ್ಮೆ ಸೋಲಿಸಿದ್ದಾರೆ. ಈ ಬಾರಿ ಸ್ಪರ್ಧಿಸಿದರೆ ಮತ್ತೊಮ್ಮೆ ಸೋಲಿಸುತ್ತಾರೆ. ಅವರ ಸಂಬಂಧಿಗಳು ಸ್ಪರ್ಧಿಸಿದರೂ ಮತ ಹಾಕಲ್ಲ. ಒಕ್ಕಲಿಗ ಸಮುದಾಯದ ಒಬ್ಬರೂ ಅವರಿಗೆ ಮತ ಹಾಕಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ತುಮಕೂರಿನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುವಂತೆ ವಿ.ಸೋಮಣ್ಣ ಅವರಿಗೆ ನಾನು ಹೇಳಿಲ್ಲ. ಬಿಜೆಪಿಯಲ್ಲಿಯೇ ಇರುವಂತೆ ಸಲಹೆ ಕೊಟ್ಟಿದ್ದೇನೆ. ಎಲ್ಲಿಯೇ ನಿಂತರೂ ಬೆಂಬಲಿಸುತ್ತೇನೆ ಎಂದು ಹೇಳಿದ್ದೇನೆ. ಅವರ ಭವಿಷ್ಯಕ್ಕೆ ಅಡ್ಡಿಯಾಗುವುದಿಲ್ಲ. ಕಳೆದ ಚುನಾವಣೆಯಲ್ಲಿ ನಾನು ಗೆಲ್ಲಲು ಸೋಮಣ್ಣ ಕಾರಣ. ಚುನಾವಣೆ ಖರ್ಚಿಗೆ ಅವರೇ ದುಡ್ಡು ಕೊಟ್ಟಿದ್ದು' ಎಂದು ಹೇಳಿದರು.

ಮೈತ್ರಿಗೆ ಜನ ಒಪ್ಪಲ್ಲ: ಜಿ. ಪರಮೇಶ್ವರ

ಲೋಕಸಭೆ ಚುನಾವಣೆಗೆ ಜೆಡಿಎಸ್– ಬಿಜೆಪಿ ಮಾಡಿಕೊಂಡಿರುವ ಮೈತ್ರಿಯನ್ನು ಜನ ಒಪ್ಪುವುದಿಲ್ಲ. ಮೈತ್ರಿಯಿಂದ ಕಾಂಗ್ರೆಸ್‌ಗೆ ಲಾಭವೂ ಇಲ್ಲ, ನಷ್ಟವೂ ಇಲ್ಲ ಎಂದು ಗೃಹ ಸಚಿವ ಜಿ.ಪರಮೇಶ್ವರ ಪ್ರತಿಕ್ರಿಯಿಸಿದ್ದಾರೆ.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಳೆದ ಲೋಕಸಭೆ ಚುನಾವಣೆಯಲ್ಲಿ ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಂಡಿದ್ದೆವು. ಪರಿಣಾಮ ಏನಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ಚುನಾವಣೆ ಫಲಿತಾಂಶದ ನಂತರ ಬಿಜೆಪಿಯವರಿಗೂ ಪರಿಣಾಮ ಗೊತ್ತಾಗಲಿದೆ' ಎಂದರು.

www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
'ವರ್ಕ್ ಫ್ರಮ್ ಹೋಂ' ಮುಗಿದು, ಹೈಬ್ರಿಡ್ ಕೆಲಸದ ಮಾದರಿ ಶುರುವಾಗಿದೆ. ಈ ಕರೆಗೂ ಒಲ್ಲೆ ಎನ್ನುವ ಟೆಕ್ಕಿಗಳೂ ನಮ್ಮ ನಡುವೆ ಇದ್ದಾರೆ.

ಸರಣಿ ಕೈವಶದತ್ತ ಭಾರತ ತಂಡದ ಚಿತ್ತ 14
'ಸರಳ ಭಾಷೆಯಲ್ಲಿ ಕಾನೂನು ರಚನೆಗೆ ಯತ್ನ'
'ಭಾರತದ ಜತೆ ಪುರಾವೆ ಹಂಚಿಕೊಳ್ಳಲಾಗಿತ್ತು' 7
ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಕಾನೂನಿರಬೇಕು: ಮೋದಿ 7

ಭಿನ್ನವಾಗಿ ಯೋಚಿಸಿದವರು ಮಾರುಕಟ್ಟೆಯಲ್ಲಿ ಗೆದ್ದರು, ಜರ್ಜರಿತರಾದ ಸಂಪ್ರದಾಯಸ್ಥರು

ಮಗ್ಗ ನಂಬಿದವರು ನುಗ್ಗಾದರು

ಮಗ್ಗದಾರರ ಬೇಡಿಕೆಗಳೇನು?

- ವಿದ್ಯುತ್ ಮಗ್ಗಗಳಿಗೆ ಉಚಿತವಾಗಿ ವಿದ್ಯುತ್ ಕೊಡಬೇಕು.
- ಶೂನ್ಯ ಬಡ್ಡಿದರದಲ್ಲಿ ಕಚ್ಚಾ ವಸ್ತುಗಳನ್ನು (ರೇಷ್ಮೆ, ಪಾಲಿಸ್ಟರ್, ಹತ್ತಿ ಇತ್ಯಾದಿ) ಒದಗಿಸಬೇಕು.
- ನೇಕಾರರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಒದಗಿಸಬೇಕು. ಈಗಾಗಲೇ ಪಡೆದಿರುವ ವೈಯಕ್ತಿಕ ಮತ್ತು ಸಂಘದ ಸಾಲ ಮನ್ನಾ ಮಾಡಬೇಕು.
- ಕಾರ್ಮಿಕರಿಗೆ ಇಎಸ್ಐ ರೂಪದಲ್ಲಿ ಆರೋಗ್ಯ ಸೇವೆ ನೀಡಬೇಕು.
- ನೇಕಾರರ ಮಕ್ಕಳ ಶಿಕ್ಷಣಕ್ಕೆ ವಿದ್ಯಾರ್ಥಿವೇತನ, ಶುಲ್ಕದಲ್ಲಿ ರಿಯಾಯಿತಿ ನೀಡಬೇಕು.

• ಇ.ಎಸ್. ಸುಧೀಂದ್ರ ಪ್ರಸಾದ್

ಒಳನೋಟ

ಪ್ರಿಯದರ್ಶನ್ ನಿರ್ದೇಶನದಲ್ಲಿ 2008ರಲ್ಲಿ ತೆರೆಕಂಡ ಚಿತ್ರ 'ಕಾಂಚೀವರಂ'. ಪ್ರಕಾಶ್ ರೈ ನಟನೆಯ ಈ ಚಿತ್ರದ ಕೊನೆಯ ದೃಶ್ಯ ನೇಕಾರರ ಬದುಕನ್ನು ಕಟ್ಟಿಕೊಟ್ಟಿದೆ. ಸೀರೆ ಮಗ್ಗದಲ್ಲಿ ಕೆಲಸ ಮಾಡುವ ತಂದೆ, ನಿತ್ಯವೂ ಸ್ವಲ್ಪ ರೇಷ್ಮೆಯನ್ನು ಬಾಯಲ್ಲಿಟ್ಟುಕೊಂಡು ಮನೆಗೆ ಬಂದು ಮಗಳಿಗಾಗಿ ಕಾಂಚೀವರಂ ಸೀರೆ ನೇಯುತ್ತಿರುತ್ತಾನೆ. ದೌರ್ಜನ್ಯಕ್ಕೆ ಮಗಳ ಬಲಿಯಾಗುತ್ತದೆ. ಮಗಳ ಶವದ ಮೇಲೆ ತಾನು ನೇಯ್ದ ಅಪೂರ್ಣ ಸೀರೆಯನ್ನು ಹೊದಿಸುತ್ತಾನೆ. ಮುಖವನ್ನು ಮುಚ್ಚಿದರೆ ಕಾಲು ಕಾಣಿಸುತ್ತದೆ. ಕಾಲು ಮುಚ್ಚಲು ಸೀರೆ ಸರಿಸಿದರೆ ಮಗಳ ನಿಸ್ತೇಜ ಮುಖ ಕಾಣಿಸುತ್ತದೆ. ಅಲ್ಲಿಗೆ ಚಿತ್ರ ಕೊನೆಯಾಗುತ್ತದೆ.

ಚಿತ್ರದ ಕಥಾವಸ್ತು 1948ರದ್ದು. ಸ್ವದೇಶಿ ಚಳವಳಿ ಮೂಲಕ ದೇಶದಲ್ಲಿ ಉಚ್ಛ್ರಾಯ ಸ್ಥಿತಿಗೆ ತಲುಪಿದ್ದ ನೇಕಾರಿಕೆಯನ್ನು ಬಹಳಷ್ಟು ಜನ ನೆಚ್ಚಿಕೊಂಡರೂ, ಅದರಿಂದ ಪೂರ್ಣ ಹೊಟ್ಟೆ ತುಂಬುತ್ತಿರಲಿಲ್ಲ. ಆತ್ಮನಿರ್ಭರದ ವಿಷಯವಾದ ಈ ವೃತ್ತಿಯನ್ನು ನೆಚ್ಚಿಕೊಂಡವರ ಇಂದಿನ ಸ್ಥಿತಿಯೂ ಭಿನ್ನವಾಗೇನೂ ಇಲ್ಲ. ಕೈಮಗ್ಗ ಹೊಂದಿದವರು ವಿದ್ಯುತ್ ಮಗ್ಗ ಬಂದಾಗ ಒಂದಷ್ಟು ಹಿನ್ನಡೆ ಅನುಭವಿಸಿದರು. ಆದರೆ ಫ್ಯಾಷನ್ ಜಗತ್ತು ಬೇರೆಯದೇ ಹಾದಿಯಲ್ಲಿ ಹೊರಟಿರುವ ಕಾಲದಲ್ಲಿ ಸಾಂಪ್ರದಾಯಿಕ ಬಟ್ಟೆಗಳನ್ನು ತಯಾರಿಸುವ ವಿದ್ಯುತ್ ಮಗ್ಗಗಳು ಈಗ ನಷ್ಟದ ಹಾದಿಯಲ್ಲಿವೆ. ಕೈಮಗ್ಗಗಳದ್ದು ಮತ್ತು ಅಲ್ಲಿ ಕೆಲಸ ಮಾಡುವ ಕಾರ್ಮಿಕರದ್ದಂತೂ ಶೋಚನೀಯ ಸ್ಥಿತಿ.

ಮೊದಲು ವರ್ಷಕ್ಕೊಮ್ಮೆ ದೀಪಾವಳಿ, ರಂಜಾನ್ ಅಥವಾ ಕ್ರಿಸ್ಮಸ್ ಸಂದರ್ಭದಲ್ಲಿ ಬಟ್ಟೆ ಖರೀದಿಸುವ ವಾಡಿಕೆ ಇತ್ತು. ಆದರೆ ಇಂದು ಬಟ್ಟೆ ಖರೀದಿಗೆ ಹಿಂದಿನಂತೆ ಹಬ್ಬಕ್ಕೇ ಕಾಯಬೇಕೆಂದೇನೂ ಇಲ್ಲ. ವರ್ಷದಲ್ಲಿ ಮೂರ್ನಾಲ್ಕು ಬಾರಿ ಬದಲಾಗುವ ಫ್ಯಾಷನ್ ಜಗತ್ತಿನಲ್ಲಿ ಶತಕೋಟಿ ವಹಿವಾಟು ನಡೆಯುತ್ತದೆ. ಆದರೆ ಇದರ ಯಾವುದೇ ಲಾಭ ನಮ್ಮ ಮಗ್ಗಗಳಿಗೆ ಸಿಗುತ್ತಿಲ್ಲ ಎಂಬುದು ವಾಸ್ತವ.

ಅಸಂಘಟಿತವಾಗಿದ್ದ ಮಗ್ಗಗಳು ನಷ್ಟದ ಹಾದಿಗೆ ಜಾರಿದಾಗ ಸಹಕಾರ ಸಂಸ್ಥೆಗಳು ಒಂದಷ್ಟು ಬಲ ನೀಡಿದವು. ಆದರೆ ಬೇಡಿಕೆಯ ಸಮಸ್ಯೆ ಎದುರಿಸುತ್ತಿರುವ ಈ ಮಗ್ಗಗಳಲ್ಲಿ ಹಲವು ಇಂದು ಬಾಗಿಲು ಮುಚ್ಚಿವೆ. ಗುಣಮಟ್ಟದ ಹತ್ತಿ ಉತ್ಪಾದನೆಯ ಜತೆಗೆ, ಗುಣ ಮಟ್ಟದ ಸೂಟ್ ಬಟ್ಟೆ ತಯಾರಿಸುತ್ತಿದ್ದ ಧಾರವಾಡ ತಾಲ್ಲೂಕಿನ ಉಪ್ಪಿನಬೆಟಗೇರಿಯ ಮಗ್ಗ, ಈಗ ಹಾಳು ಸುರಿಯುತ್ತಿದೆ.

4ನೇ ಪುಟ ನೋಡಿ


ಬಾಗಲಕೋಟೆ ಜಿಲ್ಲೆ ಬನಹಟ್ಟಿಯ ಕುಣಿ ಮಗ್ಗ ನೇಕಾರಿಕೆ ಪ್ರಜಾವಾಣಿ ಚಿತ್ರ– ವಿಶ್ವಜ ಕಾಡದೇವರ

ಮಗ್ಗಗಳ ಉತ್ತೇಜನಕ್ಕೆ ಸರ್ಕಾರದ ಸೌಲಭ್ಯಗಳು

- ₹2 ಲಕ್ಷವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ
- ಪವರ್‌ಲೂಮ್‌ನವರು ₹35 ಲಕ್ಷ ಸಾಲ ತೆಗೆದುಕೊಳ್ಳಬಹುದು
- ಸಾಮಾನ್ಯವರ್ಗದವರಿಗೆ ಶೇ 50, ಪರಿಶಿಷ್ಟ ಜಾತಿ, ಪಂಗಡದವರಿಗೆ ಶೇ90ರಷ್ಟು ಸಬ್ಸಿಡಿ
- ಮುದ್ರಾಯೋಜನೆಯಡಿ ₹50 ಸಾವಿರ ಸಾಲವನ್ನು 191 ಜನ ಕೈಮಗ್ಗ ನೇಕಾರರು ಪಡೆದುಕೊಂಡಿದ್ದಾರೆ.
- ನೇಕಾರರ ಸಮ್ಮಾನ ಯೋಜನೆಯಡಿ 13 ಸಾವಿರ ಕೈಮಗ್ಗ, ಪವರ್‌ಲೂಮ್ 18 ಸಾವಿರ ಜನರಿಗೆ ತಲಾ ₹5 ಸಾವಿರವನ್ನು ಸರ್ಕಾರ ನೀಡಿದೆ


ಆಟದ ಹಬ್ಬ
ಮರುಬಳಕೆ ಸಾಮಗ್ರಿಗಳಿಂದ ಸಿದ್ಧಗೊಂಡ ಖಾಕಿ ಬಣ್ಣದ, ಆಕರ್ಷಕ ಚಿತ್ತಾರದ ಸೀರೆ ಹಾಗೂ ಹೈ ನೆಕ್ ರವಿಕೆ ಧರಿಸಿದ್ದ ಭಾರತದ ಮಹಿಳಾ ಕ್ರೀಡಾಪಟುಗಳು ಹಾಂಗ್‌ಝೌನಲ್ಲಿ ನಡೆದ 19ನೇ ಏಷ್ಯನ್ ಗೇಮ್ಸ್ ಉದ್ಘಾಟನೆ ಸಮಾರಂಭದ ಪಥಸಂಚಲನದಲ್ಲಿ ಹೆಜ್ಜೆ ಹಾಕಿದರು ಪಿಟಿಐ ಚಿತ್ರ

ಎಸ್‌ಎಫ್‌ಜೆ ಉಗ್ರನ ಆಸ್ತಿ ಜಪ್ತಿ

ನವದೆಹಲಿ/ಚಂಡೀಗಢ (ಪಿಟಿಐ): ಕೆನಡಾದಲ್ಲಿ ನೆಲೆಸಿರುವ ಘೋಷಿತ ಖಾಲಿಸ್ತಾನಿ ಉಗ್ರ ಗುರುಪತ್ವಂತ್ ಸಿಂಗ್ ಪನ್ನೂ ಸುತ್ತಲಿನ ಕುಣಿಕೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಇನ್ನಷ್ಟು ಬಿಗಿಗೊಳಿಸುವ ಕ್ರಮ ಕೈಗೊಂಡಿದೆ. ನಿಷೇಧಿತ ಸಿಖ್ ಫಾರ್ ಜಸ್ಟೀಸ್ (ಎಸ್‌ಎಫ್‌ಜೆ) ಸಂಘಟನೆಯ ಮುಖ್ಯಸ್ಥನಾಗಿರುವ ಪನ್ನೂಗೆ ಸೇರಿದ ಆಸ್ತಿಯನ್ನು ಎನ್‌ಐಎ ಮುಟ್ಟುಗೋಲು ಹಾಕಿಕೊಂಡಿದೆ.

ಪನ್ನೂ ವಿರುದ್ಧ ಶನಿವಾರ ಕಾರ್ಯಾಚರಣೆ ನಡೆಸಿದ ಎನ್‌ಐಎ, ಪಂಜಾಬ್‌ನ ಚಂಡೀಗಢದಲ್ಲಿರುವ ಆತನ ಮನೆ, ಅಮೃತಸರದಲ್ಲಿರುವ ಜಮೀನನ್ನು ಮುಟ್ಟುಗೋಲು ಹಾಕಿಕೊಂಡಿದೆ ಎಂದು ಎನ್‌ಐಎ ವಕ್ತಾರ ತಿಳಿಸಿದ್ದಾರೆ.

ಭಾರತದ ಹಿರಿಯ ರಾಜತಾಂತ್ರಿಕ ಅಧಿಕಾರಿಗಳು ಮತ್ತು ಸರ್ಕಾರದ ಅಧಿಕಾರಿಗಳಿಗೆ ಸಾರ್ವಜನಿಕ ವೇದಿಕೆಯಿಂದಲೇ ಈತ ಇತ್ತೀಚೆಗೆ ಬೆದರಿಕೆ ಹಾಕಿದ್ದ. ಕೆನಡಾದಲ್ಲಿರುವ ಹಿಂದೂಗಳು ದೇಶ ತೊರೆಯುವಂತೆಯೂ ಬೆದರಿಕೆಯೊಡ್ಡಿದ್ದ.

ಪಂಜಾಬ್‌ನಲ್ಲಿ ಈತನ ವಿರುದ್ಧ ದೇಶದ್ರೋಹದ ಮೂರು ಪ್ರಕರಣಗಳು ಸೇರಿದಂತೆ 22 ಕ್ರಿಮಿನಲ್ ಪ್ರಕರಣಗಳಿವೆ.

ಕೋರ್ಟ್ ಆದೇಶ: ಮೊಹಾಲಿಯ ಎಸ್.ಎಸ್. ನಗರದ ಎನ್‌ಐಎ ವಿಶೇಷ ನ್ಯಾಯಾಲಯ ಹೊರಡಿಸಿದ ಆದೇಶದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ. ಕೆನಡಾ ಸೇರಿದಂತೆ ವಿವಿಧ ದೇಶಗಳಲ್ಲಿ ಸಕ್ರಿಯರಾಗಿದ್ದ ಪ್ರತ್ಯೇಕತಾವಾದಿಗಳು ಮತ್ತು ಉಗ್ರರ ವಿರುದ್ಧ ಭಾರತ ಕೈಗೊಂಡಿರುವ ಕಾರ್ಯಾಚರಣೆಗೆ ಈ ಕ್ರಮ ಭಾರಿ ಉತ್ತೇಜನ ನೀಡಿದೆ ಎಂದು ವಕ್ತಾರ ಹೇಳಿದ್ದಾರೆ.

ಮುಟ್ಟುಗೋಲು ಹಾಕಿಕೊಂಡ ಆಸ್ತಿಗಳಲ್ಲಿ, ಅಮೃತಸರದಲ್ಲಿರುವ ಖಾನ್‌ಕೋಟ್ ಗ್ರಾಮದ 5.7 ಎಕರೆ ಕೃಷಿಭೂಮಿ ಮತ್ತು ಚಂಡೀಗಢದ ಸೆಕ್ಟರ್ 15/ಸಿ ಪ್ರದೇಶದಲ್ಲಿರುವ ಮನೆಯ ನಾಲ್ಕನೇ ಒಂದು ಭಾಗ ಸೇರಿದೆ ಎಂದಿದ್ದಾರೆ.

ಈ ಹಿಂದೆ ಪ್ರತ್ಯೇಕ ಪ್ರಕರಣಗಳಲ್ಲಿ ಸರ್ಕಾರ ಹೊರಡಿಸಿದ ಆದೇಶದ ಅನ್ವಯ ಈ ಆಸ್ತಿಗಳನ್ನು ಜಪ್ತಿ ಮಾಡಲಾಗಿತ್ತು. ಈಗ ಇವನ್ನು ನ್ಯಾಯಾಲಯದ ಆದೇಶದ ಮೇರೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. 2020ರ ಏ. 5ರಂದು ಯುಎಪಿಎ ಪ್ರಕರಣ ದಾಖಲಾಗಿತ್ತು ಎಂದೂ ವಿವರಿಸಿದ್ದಾರೆ.

ಇದೇ ಮೊದಲು: ತಲೆಮರೆಸಿಕೊಂಡಿರುವ ಆರೋಪಿಯ ಆಸ್ತಿಯನ್ನು ಯುಎಪಿಎಯ 33 (5) ಸೆಕ್ಷನ್‌ನಡಿ ಇದೇ ಮೊದಲ ಬಾರಿಗೆ ಮುಟ್ಟುಗೋಲು ಹಾಕಿಕೊಂಡಿದೆ.

ಮೊದಲಿಗೆ ಈ ಪ್ರಕರಣವು 2018ರ ಅ. 19ರಂದು ಅಮೃತಸರದ ಸುಲ್ತಾನ್‌ವಿಂಡಿ ಪೊಲೀಸ್‌ಠಾಣೆಯಲ್ಲಿ ದಾಖಲಾಗಿತ್ತು. ನಂತರ ಇದನ್ನು ಎನ್‌ಐಎಗೆ ವರ್ಗಾಯಿಸಲಾಯಿತು. ಈವರೆಗೆ ಪನ್ನೂ ಸೇರಿದಂತೆ ಒಟ್ಟು 10 ಮಂದಿ ಆರೋಪಿಗಳ ಮೇಲೆ ಆರೋಪ ಪಟ್ಟಿ ಸಲ್ಲಿಸಲಾಗಿದೆ.

ಕಾವೇರಿ: ಸಕ್ಕರೆ ನಗರಿ ಸ್ತಬ್ಧ

ಮಂಡ್ಯ, ಮದ್ದೂರು ಬಂದ್‌ಗೆ ಜನರಿಂದ ವ್ಯಾಪಕ ಬೆಂಬಲ

ಪ್ರಜಾವಾಣಿ ವಾರ್ತೆ

ಮಂಡ್ಯ: ತಮಿಳುನಾಡಿಗೆ ನಿತ್ಯ 5 ಸಾವಿರ ಕ್ಯೂಸೆಕ್ ಕಾವೇರಿ ನೀರು ಹರಿಸಬೇಕೆಂಬ ಆದೇಶಕ್ಕೆ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ಸಿಗದ ಕಾರಣ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಶನಿವಾರ ಕರೆ ನೀಡಿದ್ದ ಮಂಡ್ಯ, ಮದ್ದೂರು ಬಂದ್‌ಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ವಿವಿಧ ಸಂಘಟನೆಗಳ ಸದಸ್ಯರು, ಪಕ್ಷಗಳ ಮುಖಂಡರು, ಸಾರ್ವಜನಿಕರು, ವಿದ್ಯಾರ್ಥಿಗಳು, ವಕೀಲರು, ಮಕ್ಕಳು ಶಾಂತಿಯುತ ಹೋರಾಟ ನಡೆಸಿ ರಾಜ್ಯ, ಕೇಂದ್ರ ಸರ್ಕಾರಗಳಿಗೆ ಎಚ್ಚರಿಕೆಯ ಸಂದೇಶ ನೀಡಿದರು.

ಬೆಳಿಗ್ಗೆಯೇ ರಸ್ತೆಗಿಳಿದ ರೈತರು ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲೇ ಕಾಫಿ ಕಾಯಿಸಿ ಕುಡಿದರು. ಜೆ.ಸಿ. ವೃತ್ತದಲ್ಲಿ ಎಮ್ಮೆ ಕಟ್ಟಿ ಮೇವು ಹಾಕಿದರು. ನಗರದ ವಿವಿಧೆಡೆ ನೂರಾರು ಕಾರ್ಯಕರ್ತರು ಬೈಕ್ ರ‍್ಯಾಲಿ ನಡೆಸಿ ಹೋರಾಟವನ್ನು ಬೆಂಬಲಿಸುವಂತೆ ಕರಪತ್ರಗಳನ್ನು ಹಂಚಿದರು. ವ್ಯಾಪಾರಿಗಳು ಸ್ವಯಂಪ್ರೇರಿತರಾಗಿ ಅಂಗಡಿ ಮುಚ್ಚಿ ಬೆಂಬಲಿಸಿದರು.

5ನೇ ಪುಟ ನೋಡಿ

ರಾಜಕೀಯ ಪಕ್ಷಗಳ ವೇದಿಕೆಯಾದ ಧರಣಿ ಸ್ಥಳ

ಸರ್ ಎಂ.ವಿ ಪ್ರತಿಮೆ ಎದುರು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿ ಸ್ಥಳ ರಾಜಕೀಯ ಪಕ್ಷಗಳ ವೇದಿಕೆಯಾಗಿ ಪರಿವರ್ತನೆಯಾಯಿತು. ಬಿಜೆಪಿ, ಜೆಡಿಎಸ್ ಮುಖಂಡರು ಪ್ರತ್ಯೇಕವಾಗಿ ಬಂದು ಹೋರಾಟದಲ್ಲಿ ಪಾಲ್ಗೊಂಡರು. ಎರಡೂ ಪಕ್ಷಗಳ ಮುಖಂಡರು ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಬಿಜೆಪಿ ನಾಯಕ ಸಿ.ಟಿ.ರವಿ ಬಂದಾಗ ನೂರಾರು ಬಿಜೆಪಿ ಕಾರ್ಯಕರ್ತರು ಪಾಲ್ಗೊಂಡರು. ಕೇಸರಿ ಶಾಲು ತೊಟ್ಟ ಕಾರ್ಯಕರ್ತರು ಬಿಜೆಪಿಗೆ ಜಯಘೋಷ ಮೊಳಗಿಸಿದರು. ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ಬಂದಾಗ ಮುಖಂಡರು ಜೆಡಿಎಸ್ ಪರ ಘೋಷಣೆ ಕೂಗಿದರು.

'ಅವಕಾಶವಾದಿತನ ಉಲ್ಲೇಖಿಸಿ ಹೇಳಿಕೆ ನೀಡಿದ್ದೆ'

ನವದೆಹಲಿ: ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ ಕಾರಣಕ್ಕೆ ಎಐಸಿಸಿ ಶಿಸ್ತುಸಮಿತಿಯಿಂದ ಷೋಕಾಸ್ ನೋಟಿಸ್ ಪಡೆದಿದ್ದ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಅದಕ್ಕೆ ಉತ್ತರ ನೀಡಿದ್ದಾರೆ. 7

53 ಸಾವಿರ ಮಂದಿಗಿಲ್ಲ 'ಗೃಹಲಕ್ಷ್ಮಿ'

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ರಾಜ್ಯ ಸರ್ಕಾರದ 'ಗೃಹಲಕ್ಷ್ಮಿ' ಯೋಜನೆಗೆ ನೋಂದಣಿ ಮಾಡಿಕೊಂಡ 53 ಸಾವಿರ ಫಲಾನುಭವಿಗಳ ಖಾತೆಗೆ ಹಣ ಸಂದಾಯವಾಗಿಲ್ಲ. ಹೀಗಾಗಿ, ಸೌಲಭ್ಯ ವಂಚಿತ ಜನ ಬ್ಯಾಂಕು, ಸೇವಾ ಕೇಂದ್ರಗಳಿಗೆ ಅಲೆದಾಡುವಂತಾಗಿದೆ.

ರಾಜ್ಯದಲ್ಲಿ 1.33 ಕೋಟಿ ಪಡಿತರ ಚೀಟಿದಾರರಿದ್ದು, 'ಗೃಹ ಲಕ್ಷ್ಮಿ'ಗೆ ಈವರೆಗೆ 1.14 ಕೋಟಿ (ಶೇ 85) ಜನರ ನೋಂದಣಿ ಆಗಿದೆ. ಹಾವೇರಿ (ಶೇ 90.10), ಮಂಡ್ಯ (ಶೇ 89.71) ಮತ್ತು ಚಾಮರಾಜನಗರ (ಶೇ 89.49) ಜಿಲ್ಲೆಗಳು ನೋಂದಣಿಯಲ್ಲಿ ಮುಂಚೂಣಿಯಲ್ಲಿವೆ.

5ನೇ ಪುಟ ನೋಡಿ

> ಹಣ ಪಾವತಿಯಾಗದೇ ಇರುವ ಫಲಾನುಭವಿಗಳು ಸಿಡಿಪಿಒ ಕಚೇರಿ ಸಂಪರ್ಕಿಸಿ ನಿರ್ದಿಷ್ಟ ಕಾರಣ ತಿಳಿಯಬಹುದು. ಸಮಸ್ಯೆ ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು
> **ರಘುನಂದನ ಮೂರ್ತಿ**
> ಜಿಲ್ಲಾಧಿಕಾರಿ, ಹಾವೇರಿ

> ಎರಡು ವರ್ಷಗಳ ಹಿಂದೆ ನಮ್ಮ ಅತ್ತೆ ತೀರಿಹೋಗಿದ್ದು, ಪಡಿತರ ಚೀಟಿಯಲ್ಲಿ ತಿದ್ದುಪಡಿ ಮಾಡಿಸಿದ್ದೇನೆ. ಆದರೆ, 'ಗೃಹಲಕ್ಷ್ಮಿ'ಗೆ ಅರ್ಜಿ ಸಲ್ಲಿಸಲು ತಾಂತ್ರಿಕ ಕಾರಣ ಅಡ್ಡಿಯಾಗಿದೆ
> **ನಿರ್ಮಲಾ ದೊಡ್ಡಮನಿ**
> ದೂಪದಹಳ್ಳಿ, ಹಿರೇಕೆರೂರು ತಾಲ್ಲೂಕು

ಏಕಕಾಲಕ್ಕೆ ಚುನಾವಣೆ ನಿಲುವು ಆಲಿಸಲು ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆ, ವಿಧಾನಸಭೆಗಳ ಚುನಾವಣೆಯನ್ನು ಏಕಕಾಲಕ್ಕೆ ನಡೆಸುವ ಕುರಿತಂತೆ ಅಭಿಪ್ರಾಯಗಳನ್ನು ಆಲಿಸಲು ವಿವಿಧ ಪಕ್ಷಗಳ ನಾಯಕರನ್ನು ಆಹ್ವಾನಿಸಲು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಸಮಿತಿ ಶನಿವಾರ ನಿರ್ಧರಿಸಿದೆ.

ಕೋವಿಂದ್ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ಮೊದಲ ಸಭೆಯಲ್ಲಿ ಈ ಕುರಿತು ಚರ್ಚಿಸಿ, ನಿರ್ಣಯ ಕೈಗೊಳ್ಳಲಾಯಿತು ಎಂದು ಸಮಿತಿ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಎಲ್ಲ ರಾಷ್ಟ್ರೀಯ ಪಕ್ಷಗಳು, ರಾಜ್ಯಗಳಲ್ಲಿನ ಆಡಳಿತಾರೂಢ ಪಕ್ಷಗಳು, ಸಂಸತ್‌ನಲ್ಲಿ ಪ್ರಾತಿನಿಧ್ಯ ಹೊಂದಿರುವ ಹಾಗೂ ರಾಜ್ಯಗಳಲ್ಲಿ ಮಾನ್ಯತೆ ಹೊಂದಿರುವ ಪಕ್ಷಗಳ ನಾಯಕರನ್ನು ಆಹ್ವಾನಿಸಿ, ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವ ಕುರಿತಂತೆ ಅವರಿಂದ ಸಲಹೆ/ಅಭಿಪ್ರಾಯಗಳನ್ನು ಪಡೆಯಲು ಸಭೆ ತೀರ್ಮಾನಿಸಿದೆ ಎಂದು ತಿಳಿಸಲಾಗಿದೆ.

ಕಾನೂನು ಆಯೋಗದ ಪ್ರತಿನಿಧಿಗಳನ್ನು ಕೂಡ ಆಹ್ವಾನಿಸಿ, ಅವರ ಸಲಹೆಗಳನ್ನು ಪಡೆಯುವುದಕ್ಕೆ ಕೂಡ ಸಮಿತಿ ನಿರ್ಧರಿಸಿದೆ ಎಂದು ತಿಳಿಸಿದೆ.

ಗೃಹ ಸಚಿವ ಅಮಿತ್ ಶಾ, ಕಾನೂನು ಸಚಿವ ಅರ್ಜುನ್‌ರಾಮ್ ಮೇಘವಾಲ್, ರಾಜ್ಯಸಭೆಯ ವಿರೋಧ ಪಕ್ಷದ ಮಾಜಿ ನಾಯಕ ಗುಲಾಂ ನಬಿ ಆಜಾದ್, ಹಣಕಾಸು ಆಯೋಗದ ಮಾಜಿ ಅಧ್ಯಕ್ಷ ಎನ್.ಕೆ.ಸಿಂಗ್, ಲೋಕಸಭೆಯ ಮಾಜಿ ಮಹಾ ಪ್ರಧಾನ ಕಾರ್ಯದರ್ಶಿ ಸುಭಾಷ್ ಕಶ್ಯಪ್, ಜಾಗೃತ ದಳದ ಮಾಜಿ ಮುಖ್ಯ ಆಯುಕ್ತ ಸಂಜಯ್ ಕೊಠಾರಿ ಸಭೆಯಲ್ಲಿ ಪಾಲ್ಗೊಂಡಿದ್ದರು. ಸಮಿತಿ ಸದಸ್ಯರಾದ ಹಿರಿಯ ವಕೀಲ ಹರೀಶ್ ಸಾಳ್ವೆ ವರ್ಚುವಲ್ ಆಗಿ ಪಾಲ್ಗೊಂಡಿದ್ದರು.

ಲೋಕಸಭೆಯಲ್ಲಿ ಪ್ರಮುಖ ವಿರೋಧ ಪಕ್ಷವಾಗಿರುವ ಕಾಂಗ್ರೆಸ್‌ನ ನಾಯಕ ಅಧೀರ್ ರಂಜನ್ ಚೌಧರಿ ಸಭೆಗೆ ಗೈರಾಗಿದ್ದರು. 'ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸಮಿತಿಯಲ್ಲಿ ಸ್ಥಾನ ನೀಡಿಲ್ಲ. ಹೀಗಾಗಿ, ನಾನು ಸಮಿತಿಯ ಭಾಗವಾಗುವುದಿಲ್ಲ' ಎಂದು ಚೌಧರಿ ಅವರು ಈ ಹಿಂದೆಯೇ ಸಚಿವ ಶಾ ಅವರಿಗೆ ಪತ್ರ ಬರೆದಿದ್ದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು



ಸುಬ್ರಮಣ್ಯೇಶ್ವರ ಕೋ–ಆಪರೇಟಿವ್ ಬ್ಯಾಂಕ್‌ನ 2022–23ನೇ ಸಾಲಿನಲ್ಲಿ ₹5.76 ಕೋಟಿ ಲಾಭ ಗಳಿಸಿದ ಲೆಕ್ಕಪತ್ರವನ್ನು ಸಂಸ್ಥಾಪಕ ಅಧ್ಯಕ್ಷ ಕೆ.ಎಂ. ರಂಗಧಾಮ ಶೆಟ್ಟಿ ಬಿಡುಗಡೆ ಮಾಡಿದರು. ಉಪಾಧ್ಯಕ್ಷ ಡಿ.ಆರ್ ವಿಜಯ ಸಾರಥಿ, ನಿರ್ದೇಶಕರು ಇದ್ದಾರೆ

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ಲಾಭ ₹8.27 ಕೋಟಿ

ಬೆಂಗಳೂರು: ಚಾರ್ಟರ್ಡ್ ಸಹಕಾರಿ ಬ್ಯಾಂಕ್ 2023ರ ಮಾರ್ಚ್ ಅಂತ್ಯಕ್ಕೆ ತೆರಿಗೆ ಪಾವತಿಸಿದ ನಂತರ ₹8.27 ಕೋಟಿ ಲಾಭ ಗಳಿಸಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಮುನಿರೆಡ್ಡಿ ಹೇಳಿದ್ದಾರೆ.

ಠೇವಣಿ ಸಂಗ್ರಹವು ₹272 ಕೋಟಿ ಠೇವಣಿ ಇದ್ದು, ₹122 ಕೋಟಿ ಸಾಲ ನೀಡಲಾಗಿದೆ. ಬ್ಯಾಂಕ್‌ನ ವಸೂಲಾಗದ ಸಾಲದ ನಿವ್ವಳ ಪ್ರಮಾಣವು (ಎನ್‌ಪಿಎ) ಶೂನ್ಯ ಮಟ್ಟದಲ್ಲಿ ಇದ್ದು, ಸಾಲದ ಮೇಲಿನ ನಿರ್ವಹಣಾ ಶುಲ್ಕವನ್ನು ಶೇ 0.50ರಿಂದ ಶೇ0.25ಕ್ಕೆ ಇಳಿಕೆ ಮಾಡಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

12 ದಿನಗಳಲ್ಲೇ ಫಲಿತಾಂಶ

ಬೆಂಗಳೂರು: ಪರೀಕ್ಷೆಗಳು ಮುಗಿದ 12 ದಿನಗಳಲ್ಲೇ ಬಿಸಿಎ, ಬಿಬಿಎ ಮತ್ತು ಬಿಕಾಂನ 6ನೇ ಸೆಮಿಸ್ಟರ್ ಫಲಿತಾಂಶವನ್ನು ಬೆಂಗಳೂರು ವಿ.ವಿ ಪ್ರಕಟಿಸಿದೆ. ಸೆ.11ರವರೆಗೆ ಪರೀಕ್ಷೆಗಳು ನಡೆದಿದ್ದವು. ವಿದ್ಯಾರ್ಥಿಗಳು www.bangaloreuniversity.karnataka.gov.in ನಲ್ಲಿ ಫಲಿತಾಂಶ ವೀಕ್ಷಿಸಬಹುದು.

ಗಾರ್ಮೆಂಟ್ಸ್ ಮಹಿಳೆಯರ ಸಮಾವೇಶ ಇಂದು

ಬೆಂಗಳೂರು: 'ಮುನ್ನಡೆ' ಸಂಸ್ಥೆ ವತಿಯಿಂದ ಇದೇ 24ರಂದು (ಭಾನುವಾರ) 'ಗಾರ್ಮೆಂಟ್ಸ್ ಮಹಿಳೆಯರ ಸಮಾವೇಶ' ವಸಂತನಗರದಲ್ಲಿರುವ ದೇವರಾಜ ಅರಸು ಭವನದಲ್ಲಿ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಪಿ.ಎಚ್. ಯಶೋದಾ, 'ಕೆಲಸದ ಅವಧಿ 12 ಗಂಟೆಗಳಿಗೆ ಹೆಚ್ಚಿಸಿರುವ ಕಾನೂನು ಹಿಂಪಡೆಯಬೇಕು. ತಿಂಗಳಿಗೆ ₹33,920 ಕನಿಷ್ಠ ವೇತನವನ್ನು ನಿಗದಿಪಡಿಸಬೇಕು ಎಂದು ಸಮಾವೇಶದಲ್ಲಿ ಒತ್ತಾಯ ಮಾಡಲಾಗುವುದು' ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ

'ತುರ್ತು ಚಿಕಿತ್ಸೆ ತರಬೇತಿ'

ಪ್ರಜಾವಾಣಿ ವಾರ್ತೆ



ಸಮ್ಮೇಳನದಲ್ಲಿ ತುರ್ತು ಚಿಕಿತ್ಸೆಯ ಬಗ್ಗೆ ಮಾಹಿತಿ ಪಡೆದ ದಿನೇಶ್ ಗುಂಡೂರಾವ್

ಬೆಂಗಳೂರು: 'ತುರ್ತು ಚಿಕಿತ್ಸೆಯ ಗುಣಮಟ್ಟ ವೃದ್ಧಿಗೆ ವೈದ್ಯರಿಗೆ ಹೆಚ್ಚಿನ ತರಬೇತಿ ಒದಗಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ವೈದೇಹಿ ವೈದ್ಯಕೀಯ ಮತ್ತು ಸಂಶೋಧನಾ ಕೇಂದ್ರ ನಗರದಲ್ಲಿ ಶನಿವಾರ ಹಮ್ಮಿಕೊಂಡ 3ನೇ ವಾರ್ಷಿಕ ರಾಜ್ಯಮಟ್ಟದ ತುರ್ತು ಔಷಧ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

'ಕೋವಿಡ್ ಕಾಣಿಸಿಕೊಂಡ ಸಂದರ್ಭದಲ್ಲಿ ತುರ್ತು ಚಿಕಿತ್ಸಾ ವಿಭಾಗದ ಮಹತ್ವ ಅರಿವಿಗೆ ಬಂದಿತು. ವೈದ್ಯಕೀಯ ಕ್ಷೇತ್ರದಲ್ಲಿ ತುರ್ತು ಔಷಧ ವಿಭಾಗ ಅತ್ಯಂತ ಪ್ರಮುಖ ವಿಭಾಗವಾಗಿದೆ. ಸಾವು ಮತ್ತು ಬದುಕಿನ ನಡುವೆ ಹೋರಾಟ ನಡೆಸುತ್ತಿರುವ ರೋಗಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಒದಗಿಸಿದಲ್ಲಿ ಆತನನ್ನು ಉಳಿಸಿಕೊಳ್ಳಲು ಸಾಧ್ಯ. ಆದ್ದರಿಂದ ವೈದ್ಯಕೀಯ ಕಾಲೇಜುಗಳಲ್ಲಿನ ತುರ್ತು ಔಷಧ ವಿಭಾಗವನ್ನು ಬಲಪಡಿಸಿ, ತುರ್ತು ಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತಿದೆ. ವೈದ್ಯರಿಗೆ ಸಹ ಈ ವಿಭಾಗದಲ್ಲಿ ಹೆಚ್ಚಿನ ತರಬೇತಿ ಒದಗಿಸಲಾಗುವುದು' ಎಂದು ಹೇಳಿದರು.

'ವೈದ್ಯಕೀಯ ಚಿಕಿತ್ಸೆಗಳನ್ನು ಸುಲಭವಾಗಿಸಲು ಅತ್ಯಾಧುನಿಕ ತಂತ್ರಜ್ಞಾನಗಳ ನೆರವನ್ನು ಪಡೆದುಕೊಳ್ಳಬೇಕು. ವೈದ್ಯಕೀಯ ಕ್ಷೇತ್ರದಲ್ಲಿನ ಪ್ರಯೋಗಗಳಿಗೆ ಸರ್ಕಾರವೂ ಅಗತ್ಯ ಪ್ರೋತ್ಸಾಹ ನೀಡಲಿದೆ' ಎಂದು ತಿಳಿಸಿದರು.

ಸಂಸ್ಥೆಯ ಅಧ್ಯಕ್ಷೆ ಕಲ್ಪಜ ಡಿ.ಎ, 'ತುರ್ತು ಔಷಧ ವಿಭಾಗದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಆಸ್ಪತ್ರೆಗಳು ಸಹ ಈ ವಿಭಾಗದ ಮಹತ್ವವನ್ನು ಅರಿತುಕೊಳ್ಳಬೇಕು. ಕೋವಿಡ್ ಕಾಯಿಲೆ ಕಾಣಿಸಿಕೊಂಡಾಗ ಹಲವರು ತುರ್ತು ಚಿಕಿತ್ಸೆ ಸಮಯಕ್ಕೆ ಸರಿಯಾಗಿ ಸಿಗದೆ ಸಮಸ್ಯೆ ಎದುರಿಸಿದರು. ಆದ್ದರಿಂದ ಸದಾ ಈ ವಿಭಾಗವನ್ನು ಚಿಕಿತ್ಸೆಗೆ ಸನ್ನದ್ಧವಾಗಿಟ್ಟುಕೊಳ್ಳಬೇಕು' ಎಂದು ಹೇಳಿದರು.


ಸಂಸ್ಥೆಯ ವೈದ್ಯಕೀಯ ಸಲಹೆಗಾರ ಡಾ. ಮಹೇಶ್ ಕೊತ್ತಪಲ್ಲಿ, 'ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭದಲ್ಲಿ ತುರ್ತು ಚಿಕಿತ್ಸೆ ಅಗತ್ಯ. ಇತ್ತೀಚೆಗೆ ತುರ್ತು ಔಷಧ ವಿಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಚಿಕಿತ್ಸೆಗೆ ಒಳಪಡುತ್ತಿದ್ದಾರೆ. ಪ್ರತಿ ನಗರದಲ್ಲಿ 3 ಹಂತಗಳ ಟ್ರಾಮಾ ಕೇಂದ್ರಗಳಿರಬೇಕು. ತುರ್ತು ಸಂದರ್ಭದಲ್ಲಿ ರೋಗಿಗೆ ಸಾಮಾನ್ಯ ನರ್ಸಿಂಗ್ ಹೋಮ್‌ನಲ್ಲಿ ಚಿಕಿತ್ಸೆ ಒಳಪಡಿಸಿದಾಗ, ಸೂಕ್ತ ಚಿಕಿತ್ಸೆ ದೊರೆಯದೆ ಆತನ ಸ್ಥಿತಿ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ತುರ್ತು ಔಷಧ ವಿಭಾಗಕ್ಕೆ ಆದ್ಯತೆ ನೀಡಬೇಕು' ಎಂದು ತಿಳಿಸಿದರು.

ನಗರದಲ್ಲಿ ಮಳೆ

ಬೆಂಗಳೂರು: ನಗರದಲ್ಲಿ ಶನಿವಾರ ತಡರಾತ್ರಿ ಮಳೆಯಾಯಿತು. ಬೆಳಿಗ್ಗೆಯಿಂದ ಮೋಡ - ಬಿಸಿಲು ವಾತಾವರಣವಿತ್ತು. ಶಾಂತಿನಗರ, ಎಚ್.ಎ.ಎಲ್, ಹಲಸೂರು, ಶಿವಾಜಿನಗರ, ಮೆಜೆಸ್ಟಿಕ್, ಸಂಪಂಗಿರಾಮನಗರ, ಕೆ.ಆರ್. ಮಾರುಕಟ್ಟೆ, ಹೊಸ ಗುಡ್ಡದಹಳ್ಳಿ, ಮಲ್ಲೇಶ್ವರ, ರಾಜಾಜಿನಗರ, ಬಸವನಗುಡಿ, ವಿಜಯನಗರ, ರಾಜರಾಜೇಶ್ವರಿ ನಗರ, ಕೆಂಗೇರಿ, ಜಯನಗರ ಮುಂತಾದ ಪ್ರದೇಶಗಳಲ್ಲಿ ಮಳೆಯಾಯಿತು.


ನಗರದಲ್ಲಿ ಇಂದು

ಜಿ. ನಾರಾಯಣ ಜನ್ಮಶತಮಾನೋತ್ಸವ ಸಮಾರೋಪ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಪುಸ್ತಕ ಬಿಡುಗಡೆ: ರಾಮಲಿಂಗಾರೆಡ್ಡಿ, ಅತಿಥಿಗಳು: ಲೀಲಾದೇವಿ ಆರ್. ಪ್ರಸಾದ್, ಎಂ. ಕೃಷ್ಣಪ್ಪ, ಅಧ್ಯಕ್ಷತೆ: ಎ.ಜೆ. ಸದಾಶಿವ, ಪ್ರಸ್ತಾವನೆ: ಹಂ.ಪ.ನಾಗರಾಜಯ್ಯ, ಉಪಸ್ಥಿತಿ: ಜಿನಾ. ಗೋಪಾಲಕೃಷ್ಣ, ಆಯೋಜನೆ: ನಾಡೋಜ ಡಾ. ಜಿ. ನಾರಾಯಣ ಜನ್ಮಶತಮಾನೋತ್ಸವ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9.30ರಿಂದ



ಹಂ.ಪ. ನಾಗರಾಜಯ್ಯ

ವಾಸುದೇವ ನಾಡಿಗ್ ಅವರ 'ನಿನ್ನ ಧ್ಯಾನದ ನೂರೊಂದು ಹಣತೆ', ನಂದಿನಿ ಹೆದ್ದುರ್ಗ ಅವರ 'ಒಂದು ಆದಿಮ ಪ್ರೇಮ', ಫಾಲ್ಗುಣ ಗೌಡ ಅವರ 'ಬಿಂಜೆಮುಳ್ಳು', ಸದಾಶಿವ ಸೊರಟೂರು ಅವರ 'ಗಾಯಗೊಂಡ ಸಾಲುಗಳು', ಪಾಪುಗುರು ಅವರ 'ಮಣ್ಣೇ ಮೊದಲು' ಕವನ ಸಂಕಲನಗಳ ಬಿಡುಗಡೆ: ಅತಿಥಿಗಳು: ಜಯಂತ ಕಾಯ್ಕಿಣಿ, ಟಿ.ಎನ್. ಸೀತಾರಾಮ್, ಜೋಗಿ, ಅಬ್ದುಲ್ ರಶೀದ್, ರಾಜಶೇಖರ್ ಮಠಪತಿ, ಆಯೋಜನೆ: ವೀರಲೋಕ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 9.30



ಜಯಂತ ಕಾಯ್ಕಿಣಿ

ಆಲ್ಕೋಹಾಲಿಕ್ಸ್ ಅನಾನಿಮಸ್ ವಾರ್ಷಿಕೋತ್ಸವ: ಅತಿಥಿಗಳು: ಡಾ. ಎಸ್. ಮಾನಸ, ಸ್ಥಳ: ಕಾರ್ಮೆಲ್ ಕಾನ್ವೆಂಟ್, ಬನ್ನೇರುಘಟ್ಟ ರಸ್ತೆ, ಜಯನಗರ, ಬೆಳಿಗ್ಗೆ 10

ಶಿಕ್ಷಕರ ದಿನಾಚರಣೆ: ಗೌರವ ಸನ್ಮಾನ: ರಾಮಲಿಂಗೇಶ್ವರ, ಆರ್. ಸುರೇಖಾ, ಅನುಪಮಾ ಕಿಶೋರ್, ಆರ್. ಪ್ರಶಾಂತ್, ಸ್ಥಳ: ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10

ಸುಮಾ ಮೂರ್ತಿ ಅವರ 'ಭೂಪಾಳಂ ಚಂದ್ರಶೇಖರಯ್ಯನವರ ಯಶೋಗಾಥೆ', ಟಿ.ವಿ. ಸುರೇಶ ಗುಪ್ತಾ ಅವರ 'ನಾ ಕಂಡ ಪುಟ್ಟ ಗೋಪಾಲ ಕೃಷ್ಣ ಶೆಟ್ಟರು', ಶಾರದಾ ಗೋಪಾಲ್ ಅವರ 'ಅಜಂಪುರ ಸುಬ್ರಹ್ಮಣ್ಯ ಶೆಟ್ಟರ ಸಾಧನೆಯ ಪರ್ವ', ಸುಮಾ ಸತೀಶ್ ಅವರ 'ಮಾನಂದಿ ನಂಜುಂಡಶೆಟ್ಟಿ ಶೂನ್ಯದಿಂದ ಸಿಂಹಾಸನದವರೆಗೆ' ಪುಸ್ತಕಗಳ ಬಿಡುಗಡೆ: ಭೂಪಾಳಂ ಸಿ. ಪ್ರಭಾಕರ್, ಉದ್ಘಾಟನೆ: ಮಾನಂದಿ ನಂಜುಂಡ ಶೆಟ್ಟರು, ಅತಿಥಿಗಳು: ಮಾನಂದಿ ಸುರೇಶ್, ಪುಟ್ಟು ಶ್ರೀನಿವಾಸ್, ಅಧ್ಯಕ್ಷತೆ: ಕೆ.ಎಲ್. ನಟರಾಜ್, ಆಯೋಜನೆ: ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು, ಸ್ಥಳ: ಮಾರುತಿ ಸಭಾಂಗಣ, ವಾಸವಿ ವಿದ್ಯಾನಿಕೇತನ ಶಾಲೆ, ವಿ.ವಿ. ಪುರ, ಬೆಳಿಗ್ಗೆ 10

ಅಖಿಲ ಭಾರತ ಅನುಭವ ಮಂಟಪ ಪ್ರತಿನಿಧಿಗಳ ಅಧಿವೇಶನ: 'ರಾಜಕಾರಣ ಜನತಾಂತ್ರಿಕರಣ' 'ಸಂವಿಧಾನ ಒಕ್ಕೂಟ ವ್ಯವಸ್ಥೆ ಚುನಾವಣೆ ಸುಧಾರಣೆಗಳು': ಅಧ್ಯಕ್ಷತೆ: ಬಡಗಲಪುರ ನಾಗೇಂದ್ರ, ಭಾಷಣಕಾರರು: ಆನಂದಕುಮಾರ್, ಬಾಲಗೋಪಾಲನ್, ಬಿ.ಆರ್. ಪಾಟೀಲ, ಎಸ್.ಆರ್. ಆರಾಧ್ಯ, ಮಹಮದ್ ಯೂಸೂಫ್ ಕೆನ್ನಿ, ನೂರ್ ಶ್ರೀಧರ್, ಆಯೋಜನೆ: ಸಿಟಿಜನ್ಸ್ ಫಾರ್ ಡೆಮಾಕ್ರಸಿ, ಜನಾಂದೋಲನಗಳ ಮಹಾಮೈತ್ರಿ ಕರ್ನಾಟಕ ಮಹಾರಾಷ್ಟ್ರ ಜಂಟಿ ಕ್ರಿಯಾ ಸಮಿತಿ, ಸ್ಥಳ: ಗಾಂಧಿಭವನ, ಶಿವಾನಂದ ವೃತ್ತ,ಬೆಳಿಗ್ಗೆ 10

ಜಪಾನ್ ಆನ್ ಕ್ಯಾನವಾಸ್: ಅತಿಥಿಗಳು: ಬಿ.ಎನ್. ಸುರೇಶ್, ತೇಜಸ್ವಿ ಸೂರ್ಯ, ಸಿ.ಕೆ. ರಾಮಮೂರ್ತಿ, ಸಮೀರ್ ಸಿಂಹ, ತಾರಾ ಅನುರಾಧ, ಹರಿಕೃಷ್ಣ ಭಟ್, ಆಯೋಜನೆ: ಸಕುರಾ ಇಂಡಿಯಾ ಫೌಂಡೇಷನ್, ಸ್ಥಳ: ಯುವಪಥ, ಜಯನಗರ, ಬೆಳಿಗ್ಗೆ 10

ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿ: ಎಸ್. ಎಸ್. ಪಡಶೆಟ್ಟಿ, ಉಪಸ್ಥಿತಿ: ಶಾಲಿನಿ ಮಲ್ಲಿಕಾರ್ಜುನ್, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಸಹಕಾರನಗರ, ಬೆಳಿಗ್ಗೆ 10

'ಅಸ್ತಮಿದ ಐಸಿರ': ಉದ್ಘಾಟನೆ: ನಳಿನ್ ಕುಮಾರ್ ಕಟೀಲ್, ಅತಿಥಿಗಳು: ಧರಣಿ ದೇವಿ ಮಾಲಗತ್ತಿ, ಜಯಪ್ರಸಾದ್ ಶೆಟ್ಟಿ ಇರ್ಮಾಡಿ, ಮರುಳೀಧರ ಹೆಗ್ಡೆ, ಉಮೇಶ್ ಶೆಟ್ಟಿ, ದೇವೇಂದ್ರ ಕೊಕ್ರಾಡಿ, ಮಧುಕರ್ ಶೆಟ್ಟಿ, ಪುರುಷೋತ್ತಮ ಚೇಂಡ್ಲ, ಆಯೋಜನೆ: ತುಳುನಾಡ ಜವನೆರ್ ಬೆಂಗಳೂರು, ಸ್ಥಳ: ಬಂಟರ ಸಂಘ, ವಿಜಯನಗರ, ಬೆಳಿಗ್ಗೆ 10

'ಕರ್ನಾಟಕ ಶಿಕ್ಷಣ ನೀತಿ' ರೂಪಿಸಲು ದುಂಡು ಮೇಜಿನ ಸಮಾವೇಶ: ಭಾಗವಹಿಸುವವರು: ಕೆ.ಎಂ. ಮರುಳಸಿದ್ದಪ್ಪ, ಎಸ್.ಜಿ. ಸಿದ್ಧರಾಮಯ್ಯ, ವಿ.ಪಿ. ನಿರಂಜನಾರಾಧ್ಯ, ಶ್ರೀಪಾದ್ ಭಟ್, ಸಿದ್ದನಗೌಡ ಪಾಟೀಲ, ಶಿವಸುಂದರ್, ವಸುಂಧರ ಭೂಪತಿ, ಮಾವಳ್ಳಿ ಶಂಕರ್, ಅಕ್ಕೈ ಪದ್ಮಶಾಲಿ, ಶಿವಮಣಿ, ಜ್ಯೋತಿ ಅನಂತ ಸುಬ್ಬುರಾವ್, ಅಖಿಲಾ ವಿದ್ಯಾಸಂದ್ರ, ಎಂ.ಎಸ್. ಆಶಾದೇವಿ, ಮುರುಳಿ ಮೋಹನ್ ಕಾಟಿ, ಮಲ್ಲಿಕಾ ಘಂಟಿ, ಆಯೋಜನೆ: ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್, ಸ್ಥಳ: ಸಮ್ಮೇಳನ ಸಭಾಂಗಣ, ಶಾಸಕರ ಭವನ–2, ಬೆಳಿಗ್ಗೆ 10.30



ಎಸ್.ಜಿ. ಸಿದ್ಧರಾಮಯ್ಯ

ರಜತ ಮಹೋತ್ಸವ, ಪ್ರತಿಭಾ ಪುರಸ್ಕಾರ: ಉದ್ಘಾಟನೆ: ಉಪೇಂದ್ರ ತ್ರಿಪಾಠಿ, ಅತಿಥಿಗಳು: ಎಂ. ಕೃಷ್ಣಪ್ಪ, ಕೆ. ಗೋಪಾಲಯ್ಯ, ಸೌಮ್ಯಾ ರೆಡ್ಡಿ, ಹನುಮಂತರಾಯಪ್ಪ, ಲಾಂಛನ ಬಿಡುಗಡೆ: ಜಿ. ಸತ್ಯವತಿ, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ನೌಕರರ ಪತ್ತಿನ ಸಹಕಾರ ಸಂಘ, ಸ್ಥಳ: ಸರ್ ಪುಟ್ಟಣ್ಣ ಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಎಸ್.ಎಂ. ನಂಜುಂಡಪ್ಪ ಅವರ ಸಂಸ್ಮರಣಾ ಮಹೋತ್ಸವ, ಪ್ರತಿಭಾ ಪುರಸ್ಕಾರ: ಉದ್ಘಾಟನೆ: ಎಸ್. ಪ್ರಕಾಶ್, ಅಧ್ಯಕ್ಷತೆ: ಕೆ.ಸಿ. ಜಯಕುಮಾರ್, ಉಪನ್ಯಾಸ: ಎಸ್. ವೀರಭದ್ರಯ್ಯ, ಪುರಸ್ಕಾರ ವಿತರಣೆ: ಎ.ಬಿ. ಶಿವಸುಬ್ರಮಣ್ಯಂ, ಆಯೋಜನೆ: ಎಸ್. ಎಂ. ನಂಜುಂಡಪ್ಪ ಧರ್ಮ ಸಂಸ್ಥೆ, ಸ್ಥಳ: ನಗರೇಶ್ವರಸ್ವಾಮಿ ಜ್ಞಾನ ಮಂದಿರ, ಬಸವನಗುಡಿ, ಬೆಳಿಗ್ಗೆ 10.30

ವಿಶ್ವ ಶ್ವಾಸಕೋಶ ದಿನದ ಅಂಗವಾಗಿ 'ವಾಯು' ಕೇಂದ್ರದ ಉದ್ಘಾಟನೆ: ಅತಿಥಿಗಳು: ಸಾಲುಮರದ ತಿಮ್ಮಕ್ಕ, ಡಾ. ರವೀಂದ್ರ ಮೆಹ್ತಾ, ಆಯೋಜನೆ ಮತ್ತು ಸ್ಥಳ: ವಾಯು ಕೇಂದ್ರ, ಜಯನಗರ, 5ನೇ ಬ್ಲಾಕ್, ಬೆಳಿಗ್ಗೆ 10.30ರಿಂದ




ಸಾಲುಮರದ ತಿಮ್ಮಕ್ಕ

ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನ ವಿತರಣಾ ಸಮಾರಂಭ: ಉದ್ಘಾಟನೆ: ವೂಡೇ ಪಿ. ಕೃಷ್ಣ, ಪ್ರತಿಭಾ ಪುರಸ್ಕಾರ: ರೊನಾಲ್ಡ್ ಕೊಲಾಸೊ, ಕೆ.ಎ. ಮುನೀಂದ್ರಕುಮಾರ್, ಉಪನ್ಯಾಸ: ಎನ್.ಎಸ್. ಶ್ರೀಧರಮೂರ್ತಿ, ಅಧ್ಯಕ್ಷತೆ: ಎನ್. ಸೊಣ್ಣಪ್ಪ, ಆಯೋಜನೆ: ವಿದ್ಯಾ ಪೋಷಕರ ಸಂಘ, ಸ್ಥಳ: ಶೇಷಾದ್ರಿಪುರ ಕಾಲೇಜು, ಯಲಹಂಕ ಉಪನಗರ, ಬೆಳಿಗ್ಗೆ 11

'ಕೃಷ್ಣನಿರ್ಯಾಣ' ಯಕ್ಷಗಾನ ಪ್ರದರ್ಶನ: ಅರ್ಥಧಾರಿ: ಕೆ. ದಿವಾಕರ ಹೆಗಡೆ, ಭಾಗವತ: ಅನಂತ ಹೆಗಡೆ ದಂತಳಿಗೆ, ಮದ್ದಳೆ: ಅನಂತ ಪದ್ಮನಾಭ ಫಾಟಕ್, ಆಯೋಜನೆ: ರಾಗವಲ್ಲಿ ಫೈನ್ ಆರ್ಟ್ಸ್ ಫೌಂಡೇಷನ್, ಸ್ಥಳ: ಕೋರ್ಟ್‌ಯಾರ್ಡ್ ಕೋಟಾ, ಗುಡ್‌ಅರ್ಥ್ ಮಲ್ಹಾರ್, ಕೆಂಗೇರಿ, ಬೆಳಿಗ್ಗೆ 11

'ವಿ.ಕೃ. ಗೋಕಾಕ್' ಪ್ರಶಸ್ತಿ ಪ್ರದಾನ–2023: ಎನ್. ಸಂತೋಷ್ ಹೆಗ್ಡೆ, ಪ್ರಶಸ್ತಿ ಪುರಸ್ಕೃತರು: ಚಿರಂಜೀವಿ ಸಿಂಘ್, ಅಭಿನಂದನಾ ನುಡಿ: ಸುಗತ ಶ್ರೀನಿವಾಸರಾಜು, ಅಧ್ಯಕ್ಷತೆ: ಅನಿಲ್ ಗೋಕಾಕ್, ಆಯೋಜನೆ: ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್, ಭಾರತೀಯ ವಿದ್ಯಾಭವನ, ಸ್ಥಳ: ಕೆ.ಜಿ.ಆರ್. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11



ಚಿರಂಜೀವಿ ಸಿಂಘ್

ಕೆ.ಕೆ. ಗಂಗಾಧರನ್ ಅನುವಾದಿಸಿದ 'ಕಮಲಾದಾಸ್ ಕಥೆಗಳು', ಮುಹಮ್ಮದ್ ಕಟ್ಪಾಡಿ ಅವರ 'ಸೂಫಿ ಅಧ್ಯಾತ್ಮ ದರ್ಶನ', ಲತಾ ಗುತ್ತಿ ಅವರ 'ಚದುರಂಗ', ಎಚ್.ಆರ್. ರಮೇಶ ಅವರ 'ಯಾಬ್ಲಿ' ಪುಸ್ತಕಗಳ ಬಿಡುಗಡೆ: ಮಲ್ಲೇಪುರಂ ಜಿ. ವೆಂಕಟೇಶ್, ಅತಿಥಿಗಳು: ಬಸವರಾಜ ಕಲ್ಗುಡಿ, ಎಚ್. ಎಸ್. ಸತ್ಯನಾರಾಯಣ, ಆಯೋಜನೆ: ಅಂಕಿತ ಪುಸ್ತಕ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ವಿಶೇಷ ಉಪನ್ಯಾಸಗಳು: 'ಉತ್ತರ ಭಾರತದ ಶಿಲಾಶಾಸನಗಳಲ್ಲಿ ಪ್ರತಿಬಿಂಬವಾಗಿರುವ ಶಿಕ್ಷಣ ವ್ಯವಸ್ಥೆ' ಕುರಿತ ಉಪನ್ಯಾಸ: ಟಿ.ಎಸ್. ರವಿಶಂಕರ್, 'ಕರಾವಳಿ ಪ್ರದೇಶದಲ್ಲಿ ಸ್ವಾತಂತ್ರ್ಯ ಹೋರಾಟ' ಕುರಿತ ಉಪನ್ಯಾಸ: ಶ್ರೀಕಾಂತ್ ಶೆಟ್ಟಿ, ಆಯೋಜನೆ ಮತ್ತು ಸ್ಥಳ: ಶತಮಾನೋತ್ಸವ ಸಭಾಂಗಣ, ದಿ. ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಮ್ಯೂಸಿಕಲ್ ಚರಕ: ಸಂಗೀತ ಶಿವಕುಮಾರ್, ಆಯೋಜನೆ ಮತ್ತು ಸ್ಥಳ: ತ್ವಮಿ ಕ್ರಾಫ್ಟ್ಸ್, ಬೆಂಗಳೂರು ಸಂತೆ, ವಿವೇಕಾನಂದ ಮೆಟ್ರೊ ನಿಲ್ದಾಣ, ಮಧ್ಯಾಹ್ನ 12.30

'ಚತುರ್ಜನ್ಮ ಮೋಕ್ಷ' ಯಕ್ಷಗಾನ ಪ್ರದರ್ಶನ: ಭಾಗವತರು: ಗಿರೀಶ ರೈ ಕಕ್ಕೆಪದವು, ದೇವರಾಜ ಆಚಾರ್ಯ, ಚಂಡೆ, ಮದ್ದಳೆ: ಚಂದ್ರಶೇಖರ ಸರಪಾಡಿ, ಶ್ರೀಧರ ವಿಟ್ಲ, ಚಕ್ರತಾಳ: ವಸಂತ ಕುಮಾರ್, ಆಯೋಜನೆ: ಯಕ್ಷಮಿತ್ರರು, ಸ್ಥಳ: ವಿ.ಎಲ್. ಎಸ್. ಶಾಲಾ ಪಕ್ಕದ ಮೈದಾನ, ಬಸವೇಶ್ವರನಗರ, ಮಧ್ಯಾಹ್ನ 3

'ದಶಾವತಾರ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಹೊಸಮೂಲೆ, ಬಳ್ಳಮಂಜ, ತಲಪಾಡಿ, ಹಿಮ್ಮೇಳ: ಮಿಜಾರು, ಬೆಳಾಲು ಕಲ್ಲೂರಾಯ, ನಿಡ್ಲೆ, ಹೆಬ್ಬಾರ್, ವಿಟ್ಲ, ಆಯೋಜನೆ: ತೆಂಕುತಿಟ್ಟಿನ ಯಕ್ಷಗಾನ ಬಯಲಾಟ, ಸ್ಥಳ: ಬಿಬಿಎಂಪಿ ಮೈದಾನ, ಪದ್ಮನಾಭನಗರ, ಮಧ್ಯಾಹ್ನ 3

'ಸತ್ವಶೈಥಿಲ್ಯ' ಯಕ್ಷಗಾನ ತಾಳಮದ್ದಳೆ: ಹಿಮ್ಮೇಳದ ಭಾಗವತ: ಅನಂತ ಹೆಗಡೆ, ಮದ್ದಳೆ: ಎ.ಪಿ. ಫಾಟಕ, ಅರ್ಥಧಾರಿಗಳು: ಅಜಿತ್ ಕಾರಂತ, ಪ್ರಸನ್ನ ಮಾಗೋಡು, ಗಣೇಶ್ ಸುಂಕಸಾಳ, ಸುಹಾಸ್ ಮರಾಠೆ, ಸ್ಥಳ: ಚಿತ್ಪಾವನ ಸುವರ್ಣ ಭವನ, ರಾಜಾಜಿನಗರ, ಸಂಜೆ 4

ನಾಟ್ಯ ಸಂಭ್ರಮ–2023: ಅಧ್ಯಕ್ಷತೆ: ಸುಧೀಂದ್ರ ರಾವ್, ಅತಿಥಿಗಳು: ನೆ.ಲ. ನರೇಂದ್ರಬಾಬು, ಶಂಕರ್ ಎಸ್.ಎನ್., ಮಹೇಂದ್ರ ಮುನ್ನೋತ್, ಲೇಪಾಕ್ಷಿ ಸಂತೋಷ್ ರಾವ್, ಆಯೋಜನೆ: ನಾಟ್ಯ ಸನ್ನಿಧಿ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ರಿತು ಕೈವಾರ್, ಅತಿಥಿಗಳು: ವಿದ್ಯಾ ರಾವ್, ಪದ್ಮಾ ಮುರಳಿ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30

ರಂಗಾಭಿವಂದನೆ: ಅಂಜಲಿ ಮುರಳೀಧರ್, ಅತಿಥಿಗಳು: ಆರ್.ಕೆ. ಪದ್ಮನಾಭ, ವೀಣಾ ಮೂರ್ತಿ ವಿಜಯ, ಸ್ಥಳ: ಬೆಂಗಳೂರು ಗಾಯನ ಸಮಾಜ, ಬಸವನಗುಡಿ, ಸಂಜೆ 6

'ಬೀಚಿ ಹೌಸ್' ನಾಟಕ ಪ್ರದರ್ಶನ: ರಚನೆ: ಎನ್.ಸಿ. ಮಹೇಶ್, ನಿರ್ದೇಶನ: ರಾಜೇಂದ್ರ ಕಾರಂತ್, ಆಯೋಜನೆ: ಡ್ರಾಮಾಟ್ರಿಕ್ಸ್, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಬಿ.ಪಿ. ವಾಡಿಯಾರಸ್ತೆ, ಬಸವನಗುಡಿ, ಸಂಜೆ 7

'ಬೆಗ್ ಬಾರೋ ಅಳಿಯ' ನಾಟಕ ಪ್ರದರ್ಶನ: ನಿರ್ದೇಶನ: ಹನು ರಾಮಸಂಜೀವ, ರಚನೆ: ಎಂ.ಎಸ್. ನರಸಿಂಹಮೂರ್ತಿ, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7

ದಾಸವಾಣಿ: ಗಾಯನ: ಎ.ಆರ್. ಕೌಸಲ್ಯಾ, ಎ.ಜಿ. ಚಂದ್ರಕಲಾ, ಪಿಟೀಲು: ಹಂಸಾ, ಮೃದಂಗ: ಸರ್ವಜಿತ್, ಆಯೋಜನೆ ಮತ್ತು ಸ್ಥಳ: ವ್ಯಾಸರಾಜಮಠ, ಗಾಂಧಿಬಜಾರ್, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in



ಮಲ್ಲೇಶ್ವರ ವೃತ್ತದ ಬಳಿ ಕರ್ನಾಟಕ ರಕ್ಷಣಾ ವೇದಿಕೆ (ಎಚ್. ಶಿವರಾಮೇಗೌಡ ಬಣ) ಕಾರ್ಯಕರ್ತರು ಪ್ರತಿಭಟನೆ ನಡೆಸಿ ರಸ್ತೆತಡೆ ನಡೆಸಿದಾಗ ಪೊಲೀಸರು ವಶಕ್ಕೆ ಪಡೆದರು –ಪ್ರಜಾವಾಣಿ ಚಿತ್ರ



ಸ್ವಾತಂತ್ರ್ಯ ಉದ್ಯಾನದ ಬಳಿ ಜಯಕರ್ನಾಟಕ ಸಂಘಟನೆ ಕಾರ್ಯಕರ್ತರು ಉರುಳು ಸೇವೆ ಮಾಡಿ ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ • ರಸ್ತೆ ತಡೆ, ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟನೆ

ಕಾವೇರಿ: ಹೋರಾಟದ ಕಾವು ತೀವ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರಿಗೆ ಕಾವೇರಿ ಅವಲಂಬಿಸಿರುವ ಬೆಂಗಳೂರು ನಗರದಲ್ಲೂ ಕಾವೇರಿ ಹೋರಾಟ ತೀವ್ರಗೊಂಡಿದೆ. ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ನಗರದಲ್ಲಿ ಶನಿವಾರ ಸರಣಿ ಪ್ರತಿಭಟನೆಗಳು ನಡೆದವು.

ಸ್ವಾತಂತ್ರ್ಯ ಉದ್ಯಾನದಲ್ಲಿ ಆಮ್ ಆದ್ಮಿ ಪಕ್ಷದ ನೇತೃತ್ವದಲ್ಲಿ ಸರ್ವ ಸಂಘಟನೆಗಳು ನಡೆಸಿದ ಕಾವೇರಿ ಹೋರಾಟದ ಜಾಗೃತಿ ಸಭೆಯಲ್ಲಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತವಾಯಿತು. ಧಿಕ್ಕಾರ ಕೂಗಲಾಯಿತು.

ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟಿಸಲಾಯಿತು. ಅತ್ತಿಬೆಲೆಯಲ್ಲಿ ರಕ್ಷಣಾ ವೇದಿಕೆ ಸದಸ್ಯರು ತಮಿಳುನಾಡಿನಿಂದ ಬರುತ್ತಿದ್ದ ವಾಹನಗಳನ್ನು ತಡೆದರು.

ಮಲ್ಲೇಶ್ವರ ವೃತ್ತದ ಮೇಲ್ಸೇತುವೆ ಬಳಿ ಕರ್ನಾಟಕ ರಕ್ಷಣಾ ವೇದಿಕೆ (ಎಚ್. ಶಿವರಾಮೇಗೌಡ ಬಣ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಮುಂದಾದ ಜಯಕರ್ನಾಟಕ ಸಂಘಟನೆಯ ಪದಾಧಿಕಾರಿಗಳನ್ನು ಪೊಲೀಸರು ಮಾರ್ಗ-ಮಧ್ಯದಲ್ಲಿ ತಡೆದರು.



ತಮಿಳುನಾಡಿಗೆ ನೀರು ಹರಿಸುವುದನ್ನು ವಿರೋಧಿಸಿ ರತ್ನ ಭಾರತ ರೈತ ಸಮಾಜದ ಸಂಘಟನೆಯ ಕಾರ್ಯಕರ್ತರು ಶನಿವಾರ ಕೆ.ಆರ್.ಪುರದ ಬಿಬಿಎಂಪಿ ಕಚೇರಿ ಎದುರು ಕೇಶಮುಂಡನ ಮಾಡಿಸಿಕೊಂಡು ಪ್ರತಿಭಟಿಸಿದರು. ಸಂಘಟನೆ ರಾಜ್ಯ ಅಧ್ಯಕ್ಷ ಲಕ್ಷ್ಮಣ್ ಅವರು ನೇತೃತ್ವ ವಹಿಸಿದ್ದರು.

ಆಮ್ ಆದ್ಮಿ ಪಕ್ಷದ ರಾಜ್ಯ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಮಾತನಾಡಿ, 'ಅಧಿವೇಶನ ಕರೆದು ನೀರು ಬಿಡುವುದಿಲ್ಲ ಎಂಬ ನಿರ್ಣಯ ಕೈಗೊಳ್ಳಬೇಕು. ಕೋರ್ಟ್ ಜೈಲಿಗೂ ಕಳುಹಿಸಬಹುದು. ರಾಜ್ಯದ ಜನರ ಹಿತಕ್ಕಾಗಿ ಜೈಲಿಗೆ ಹೋದರೆ ತಪ್ಪೇನು' ಎಂದು ಪ್ರಶ್ನಿಸಿದರು.

'ತಮಿಳುನಾಡಿಗೆ ನೀರು ಬಿಟ್ಟರೆ ಮುಂದಿನ ದಿನಗಳಲ್ಲಿ ಬೆಂಗಳೂರಿಗೆ ಕುಡಿಯುವ ನೀರಿನ ಕೊರತೆಯಾಗಲಿದೆ. ಇಷ್ಟು ವರ್ಷ ಅಧಿಕಾರ ನಡೆಸಿದ ಮೂರು ಪಕ್ಷಗಳು, ಸಮಸ್ಯೆಗೆ ಶಾಶ್ವತ ಪರಿಹಾರ ಹುಡುಕುವಲ್ಲಿ ವಿಫಲವಾಗಿವೆ' ಎಂದು ದೂರಿದರು.

'ಬೆಂಗಳೂರಿನಲ್ಲಿ 1.30 ಕೋಟಿ ಜನಸಂಖ್ಯೆಯಿದೆ. ಇದರಲ್ಲಿ 65 ಲಕ್ಷ ಜನ ಬೇರೆ ಭಾಷಿಕರು. ಅವರಿಗೂ ಕುಡಿಯುವ ನೀರಿನ ಅವಶ್ಯಕತೆ ಇದೆ. 45 ದಿನಗಳಿಂದ ಕಾವೇರಿ ನೀರಿಗಾಗಿ ಹೋರಾಟ ನಡೆಯುತ್ತಿದ್ದರೂ ಬೆಂಗಳೂರಿನ ಜನರು ಮಲಗಿದ್ದಾರೆ. ಇದು ಸರಿಯಲ್ಲ' ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಹೇಳಿದರು.

ಸಹಿ ಸಂಗ್ರಹ ಚಳವಳಿ: ಎಎಪಿ ರಾಜ್ಯ ಉಪಾಧ್ಯಕ್ಷ ಮೋಹನ್ ದಾಸರಿ ಮಾತನಾಡಿ, 'ಬೆಂಗಳೂರಿನ ಜನ ಬೀದಿಗಿಳಿಯುವುದು ಕಷ್ಟ ಎನ್ನಲಾಗುತ್ತದೆ. ಆದರೆ, ಉಕ್ಕಿನ ಸೇತುವೆ ವಿಚಾರದಲ್ಲಿ ಬೆಂಗಳೂರಿಗರು ಫ್ರೀಡಂ ಪಾರ್ಕ್‌ನಲ್ಲಿ ಹೋರಾಟ ಮಾಡಿದ್ದರು. ಅಂತಹ ಕೆಲಸ ಮತ್ತೆ ಆಗಬೇಕು. ನಾವೇ ಜನರ ಬಳಿ ಹೋಗಿ ಸಹಿ ಸಂಗ್ರಹಣೆ ಮಾಡಿ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಬೇಕು' ಎಂದು ಹೇಳಿದರು.

ಶಾಶ್ವತ ನೀರಾವರಿ ಹೋರಾಟ ಸಮಿತಿಯ ಮುಖಂಡ ಆರ್. ಆಂಜನೇಯ ರೆಡ್ಡಿ ಮಾತನಾಡಿ, 'ರಾಜ್ಯದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದೆ. ಹೀಗಾಗಿ ಸುಪ್ರೀಂ ಕೋರ್ಟ್ ಆದೇಶದಂತೆ ನೀರು ಬಿಡಲು ಸಾಧ್ಯವಿಲ್ಲ. ಇದಕ್ಕಾಗಿ ನಾವು ಹೋರಾಟ ಮಾಡಬೇಕು' ಎಂದರು.

ಉದ್ಯಮಿ ವಿಜಯಸಿಂಗ್ ಮಾತನಾಡಿ, 'ನಾವು ಈ ರಾಜ್ಯದ ನೀರು ಕುಡಿದು ಬದುಕುತ್ತಿದ್ದೇವೆ. ಹೋರಾಟಕ್ಕೆ ನಮ್ಮ ಬೆಂಬಲವಿದೆ' ಎಂದು ಹೇಳಿದರು.

ಕರ್ನಾಟಕ ತಮಿಳು ಭಾಷೆ ಸಂಘದ ಅಧ್ಯಕ್ಷ ಮುತ್ತುಮಣಿ ಮಾತನಾಡಿ, 'ನಾವು ಈ ರಾಜ್ಯದಲ್ಲಿ ವಾಸಿಸುತ್ತಿದ್ದೇವೆ. ನಮ್ಮ ತಮಿಳು ಜನರು ಕಾವೇರಿ ನೀರಿನ ವಿಚಾರದಲ್ಲಿ ಕರ್ನಾಟಕ ಪರವಾಗಿದ್ದೇವೆ' ಎಂದು ಘೋಷಿಸಿದರು.



ಕೆಂಗೇರಿ: ವಿದ್ಯುತ್ ಚಿತಾಗಾರ ಸ್ಥಗಿತ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಕೆಂಗೇರಿ ವಿದ್ಯುತ್ ಚಿತಾಗಾರದಲ್ಲಿ ತುರ್ತು ನಿರ್ವಹಣೆ ನಡೆದಿದೆ. ಹೀಗಾಗಿ, ಇದೇ 30ರವರೆಗೆ ದಹನ ಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ವಿದ್ಯುತ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

9ನೇ ತರಗತಿ, ಪ್ರಥಮ ಪಿಯುಗೆ 'ಬೋರ್ಡ್' ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 5 ಮತ್ತು 8ನೇ ತರಗತಿ ಮಾದರಿಯಲ್ಲೇ 9ನೇ ತರಗತಿಗೂ ಮೌಲ್ಯಾಂಕನ ಪರೀಕ್ಷೆ ಹಾಗೂ ಪ್ರಥಮ ಪಿಯುಗೆ ವಾರ್ಷಿಕ ಪರೀಕ್ಷೆ ನಡೆಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿದೆ.

ಇದುವರೆಗೂ ಪ್ರಥಮ ಪಿಯುಗೆ ಆಯಾ ಜಿಲ್ಲಾಮಟ್ಟದಲ್ಲೇ ಪರೀಕ್ಷೆ-ನಡೆಸಲಾಗುತ್ತಿತ್ತು. ಇದೇ ಶೈಕ್ಷಣಿಕ ವರ್ಷದಿಂದ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯೇ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ, ಜಿಲ್ಲಾ ಉಪ ನಿರ್ದೇಶಕರ ಮೂಲಕ ಎಲ್ಲ ಕಾಲೇಜುಗಳಿಗೆ ಕಳುಹಿಸಿಕೊಡುತ್ತದೆ. ವಿದ್ಯಾರ್ಥಿಗಳು ತಾವು ಓದುತ್ತಿರುವ ಕಾಲೇಜಿನಲ್ಲೇ ಪರೀಕ್ಷೆ ಬರೆಯಲು, ಅದೇ ಕಾಲೇಜಿನ ಉಪನ್ಯಾಸಕರೇ ಮೌಲ್ಯಮಾಪನ ಮಾಡಲು ಅವಕಾಶ ನೀಡಿದೆ. ಅನುತ್ತೀರ್ಣರಾದವರಿಗೆ ಕಾಲೇಜು ಹಂತದಲ್ಲೇ ಪೂರಕ ಪರೀಕ್ಷೆ ನಡೆಸಲು ಸಮ್ಮತಿಸಲಾಗಿದೆ.

ತಾಲ್ಲೂಕು ಹಂತದಲ್ಲಿ ಮೌಲ್ಯಮಾಪನ: ಕಳೆದ ಶೈಕ್ಷಣಿಕ ಸಾಲಿನಿಂದ 5 ಮತ್ತು 8ನೇ ತರಗತಿಗೆ ಮೌಲ್ಯಾಂಕನ ಪರೀಕ್ಷೆ ನಡೆಸಲಾಗಿತ್ತು. ಅದನ್ನು 9ನೇ ತರಗತಿಗೆ ವಿಸ್ತರಿಸಲಾಗಿದೆ. ಆಯಾ ಶಾಲೆಗಳಲ್ಲೇ ಪರೀಕ್ಷೆ ನಡೆಸಿದರೂ, ಸಮೀಪದ ಇತರೆ ಶಾಲೆಯ ಶಿಕ್ಷಕರನ್ನು ಕೊಠಡಿ ಮೇಲ್ವಿಚಾರಕರಾಗಿ ನೇಮಿಸಲು , ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ತಾಲ್ಲೂಕು ಹಂತದಲ್ಲಿ ಕೈಗೊಳ್ಳಲು ಸೂಚಿಸಲಾಗಿದೆ. ಆದರೆ, ಯಾರನ್ನೂ ಅನುತ್ತೀರ್ಣಗೊಳಿಸಬಾರದು ಎಂಬ ಷರತ್ತು ವಿಧಿಸಲಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಕಲಿಕಾಮಟ್ಟ, ಹಿಂದುಳಿದಿರುವಿಕೆ ಗುರುತಿಸಲು, ಅಂತವರಿಗೆ ಅಗತ್ಯ ಬೋಧನೆಗೆ ಅವಕಾಶ ಕಲ್ಪಿಸಲಷ್ಟೆ ಮೌಲ್ಯಾಂಕನ ಮಾಡಲಾಗುತ್ತಿದೆ ಎಂದು ವಿವರಿಸಲಾಗಿದೆ.

9ನೇ ತರಗತಿ ಹಾಗೂ ಪ್ರಥಮ ಪಿಯು ಪ್ರಶ್ನೆಪತ್ರಿಕೆ ಸಿದ್ಧಪಡಿಸಲು ಅಗತ್ಯ ಅನುದಾನವನ್ನು ಪರೀಕ್ಷಾ ಮಂಡಳಿಯೇ ಭರಿಸಲಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹೇಳಿದೆ.

ಪಾಲಿಕೆ ನೌಕರರ ಸಂಘ ಬೆಂಬಲ

ಬೆಂಗಳೂರು: ಕಾವೇರಿ ನದಿ ನೀರು ಬಿಡುಗಡೆ ವಿಚಾರದಲ್ಲಿ ರಾಜ್ಯದ ರೈತ ಸಂಘಗಳು ಹಾಗೂ ಕನ್ನಡ ಪರ ಸಂಘಗಳು ಹಮ್ಮಿಕೊಂಡಿರುವ ಹೋರಾಟಕ್ಕೆ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ ಬೆಂಬಲ ವ್ಯಕ್ತಪಡಿಸಿದೆ.

'ಕೆ.ಆರ್.ಎಸ್.ನಲ್ಲಿ ನೀರಿನ ಪ್ರಮಾಣ ಕಡಿಮೆ ಇದ್ದು, ಕಾವೇರಿ ಕೊಳ್ಳದ ರೈತರ ಬೆಳೆಗೆ ನೀರಿಲ್ಲ. ಬೆಂಗಳೂರು ನಗರದಲ್ಲಿ 1 ಕೋಟಿ 30 ಲಕ್ಷ ಜನರು ಕುಡಿಯುವ ನೀರಿಗಾಗಿ ಕಾವೇರಿ ನದಿ ಮೇಲೆ ಅವಲಂಬಿತರಾಗಿದ್ದಾರೆ. ಆದರೆ, ಸುಪ್ರೀಂ ಕೋರ್ಟ್ ತಮಿಳುನಾಡಿಗೆ ನೀರು ಹರಿಸುವಂತೆ ನೀಡಿರುವ ತೀರ್ಪು ರಾಜ್ಯಕ್ಕೆ ಮಾರಕವಾಗಿದೆ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಎ. ಅಮೃತ್ ರಾಜ್ ತಿಳಿಸಿದ್ದಾರೆ.

'ನಾಡು-ನುಡಿ-ಜಲಕ್ಕೆ ತೊಂದರೆಯಾದ ಸಂದರ್ಭದಲ್ಲಿ ಹಲವಾರು ಹೋರಾಟಗಳನ್ನು ನಮ್ಮ ಸಂಘವು ಬೆಂಬಲಿಸಿದೆ. ಇದೀಗ, ರಾಜ್ಯದ ಜನರು ನೀರಿಲ್ಲದ ತೊಂದರೆ ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ರೈತ ಸಂಘಗಳು ಮತ್ತು ಕನ್ನಡ ಪರ ಸಂಘಟನೆಗಳು ಹೋರಾಟವನ್ನು ಹಮ್ಮಿಕೊಂಡಿವೆ. ಈ ಹೋರಾಟಕ್ಕೆ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ, ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಮತ್ತು ಬಿಬಿಎಂಪಿ ನೌಕರರ ಕನ್ನಡ ಸಂಘಗಳು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿವೆ' ಎಂದು ಅವರು ಹೇಳಿದ್ದಾರೆ.

'ಅನಂತ್ ಇದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ'

'ಅನಂತ ನಮನ–64' ಕಾರ್ಯಕ್ರಮ; ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಅಭಿವೃದ್ಧಿ ವಿಷಯ ಬಂದಾಗ ಅನಂತಕುಮಾರ್ ಅವರು ಪಕ್ಷಭೇದ ಮರೆತು ಮುಂಚೂಣಿಯಲ್ಲಿ ನಿಂತು ಕೆಲಸ ಮಾಡುತ್ತಿದ್ದರು. ಅವರಿದ್ದಿದ್ದರೆ ಕಾವೇರಿ ವಿಚಾರದಲ್ಲಿ ಇಂದು ನಮಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಅನಂತಕುಮಾರ್ ಅವರ ಜನ್ಮ ದಿನದ ಪ್ರಯುಕ್ತ ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅದಮ್ಯ ಚೇತನ ಫೌಂಡೇಷನ್ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಅನಂತ ನಮನ-64' ಕಾರ್ಯಕ್ರಮದಲ್ಲಿ 'ಹಸಿರು ಭಾನುವಾರ' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'ರಾಜ್ಯ ನಾಯಕರು ಯಾವುದೆ ಕೆಲಸ ಸಂಬಂಧ ನವದೆಹಲಿಗೆ ಹೋದರೂ ತಮ್ಮ ಕಚೇರಿಯಲ್ಲೇ ಸಂಬಂಧಪಟ್ಟ ಸಚಿವರನ್ನು ಕರೆಸಿ, ಕೆಲಸ ಆಗುವಂತೆ ನಿರ್ವಹಣೆ ಮಾಡುತ್ತಿದ್ದರು. ಕೆಲ ವರ್ಷಗಳ ಹಿಂದೆ ಕಾವೇರಿ ವಿವಾದ ಪ್ರಾರಂಭವಾದಾಗ ಆಗಿನ ಜಲ ಸಂಪನ್ಮೂಲ ಸಚಿವೆ ಉಮಾ ಭಾರತಿ ಅವರಿಂದ ನ್ಯಾಯಾಲಯಕ್ಕೆ ಸಲ್ಲಿಸಬೇಕಾದ ಅಫಿಡವಿಟ್ ತಿದ್ದಿಸಿ, ಸಲ್ಲಿಸುವಂತೆ ಮಾಡಿದ್ದರು. ಈ ಬಾರಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಮನೆಯಲ್ಲಿ ಕುಳಿತಾಗಲೂ ಅನಂತಕುಮಾರ್ ಅವರನ್ನು ನೆನಪಿಸಿಕೊಂಡು, ಅವರಿದ್ದರೆ ನಮಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ ಅಂದುಕೊಂಡೆವು' ಎಂದು ಹೇಳಿದರು.

'ತೇಜಸ್ವಿನಿ ಅನಂತಕುಮಾರ್ ಅವರ ಜೊತೆಗೆ ರಾಜಕೀಯ ಭಿನ್ನಾಭಿಪ್ರಾಯ ಇದೆ. ಇದೇ ವೇಳೆ ಮೃದು ಧೋರಣೆಯೂ ಇದೆ. ರಾಜ್ಯದಲ್ಲಿ ನೂರಾರು ಜನನಾಯಕರನ್ನು ಬೆಳೆಸಿದ ಅವರ ಕುಟುಂಬ ರಾಜಕಾರಣದಲ್ಲಿ ಇರಬೇಕು' ಎಂದು ತಿಳಿಸಿದರು.

'ಅನಂತ ನಮನ' ಪುಸ್ತಕ ಲೋಕಾರ್ಪಣೆ ಮಾಡಿದ ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ, 'ನನ್ನ ಮತ್ತು ಅನಂತಕುಮಾರ್ ಅವರ ಸ್ನೇಹ ರಾಜಕೀಯ ಮೀರಿದ್ದಾಗಿದೆ. ಜೊತೆಯಲ್ಲಿಯೇ ರಾಜ್ಯ ಸುತ್ತಿ, ಪಕ್ಷವನ್ನು ಬೆಳೆಸಿದೆವು. ಇಂದು ನಮ್ಮ ಪಕ್ಷ ಈ ಹಂತಕ್ಕೆ ಬರಲು ಪ್ರಮುಖ ಕಾರಣ ಅನಂತಕುಮಾರ್. ರಾಜ್ಯಕ್ಕೆ ಹಾಗೂ ಪಕ್ಷಕ್ಕೆ ಅವರ ಮಾರ್ಗದರ್ಶನ ಇನ್ನೂ ಅಗತ್ಯವಿತ್ತು. ಅವರನ್ನು ಕಳೆದುಕೊಂಡು ತಬ್ಬಲಿಗಳಾಗಿದ್ದೇವೆ' ಎಂದು ಹೇಳಿದರು.

ಅದಮ್ಯ ಚೇತನ ಫೌಂಡೇಷನ್ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಕೃಷ್ಣ ಭಟ್, ವಿಜ್ಞಾನಿ ವಿ.ಕೆ. ಆತ್ರೆ, ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಹಾಗೂ ಆರೆಸ್ಸೆಸ್‌ನ ಹಿರಿಯ ಕ್ಷೇತ್ರೀಯ ಸಂಘ ಚಾಲಕ ವಿ. ನಾಗರಾಜ್ ಇದ್ದರು.



ಅನಂತಕುಮಾರ್ ಅವರ ಹಳೆಯ ಭಾವಚಿತ್ರಗಳ ಬಗ್ಗೆ ಡಿ.ಕೆ. ಶಿವಕುಮಾರ್ ಹಾಗೂ ಬಿ.ಎಸ್. ಯಡಿಯೂರಪ್ಪ ಅವರಿಗೆ ತೇಜಸ್ವಿನಿ ಅನಂತಕುಮಾರ್ ವಿವರಿಸಿದರು. ಕೃಷ್ಣ ಭಟ್ ಹಾಗೂ ಗೋವಿಂದ ಕಾರಜೋಳ ಇದ್ದಾರೆ

'ಮೆಟ್ರೊ ತಂದಿದ್ದೆ ಅನಂತ್'

'ಬೆಂಗಳೂರಿಗೆ ಮೊನೊ ರೈಲು ಬೇಕೊ ಅಥವಾ ಮೆಟ್ರೊ ರೈಲು ಬೇಕೊ ಎಂಬ ಗೊಂದಲ ಉಂಟಾಗಿತ್ತು. ಆ ಸಂದರ್ಭದಲ್ಲಿ ಆಗಿನ ಕೇಂದ್ರ ನಗರಾಭಿವೃದ್ಧಿ ಸಚಿವರಾಗಿದ್ದ ಅನಂತಕುಮಾರ್ ಅವರು, ರಾಜ್ಯ ನಗರಾಭಿವೃದ್ಧಿ ಸಚಿವನಾಗಿದ್ದ ನನ್ನನ್ನು ಹಾಗೂ ಇನ್ನಿತರ ಐವರು ಸಚಿವರು ಮತ್ತು ಅಧಿಕಾರಿಗಳನ್ನು ವಿದೇಶಕ್ಕೆ ಅಧ್ಯಯನ ನಡೆಸಲು ಕಳುಹಿಸಿದ್ದರು. ಆ ಅಧ್ಯಯನ ಪ್ರವಾಸದ ನಂತರ ಹಾಗೂ ನವದೆಹಲಿಯ ಮೆಟ್ರೊ ರೈಲು ನೋಡಿದ ಬಳಿಕ ಬೆಂಗಳೂರಿಗೆ ಮೆಟ್ರೊ ರೈಲೇ ಒಳ್ಳೆಯದು ಎಂಬ ನಿರ್ಧಾರಕ್ಕೆ ಬರಲಾಯಿತು. ಬೆಂಗಳೂರಿಗೆ ಮೆಟ್ರೊ ತರಲು ನೂರಾರು ಜನರು ತಾವೇ ಕಾರಣ ಎಂದು ಹೇಳಿದರೂ ಮೂಲ ಕಾರಣ ಅನಂತಕುಮಾರ್' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಹಿಂಜರಿತ ಬಿಟ್ಟು ಶ್ರಮಪಟ್ಟರೆ ಯಶಸ್ಸು ಸಾಧ್ಯ'

ಬೆಂಗಳೂರು: 'ಯುವ ವಕೀಲರು ಭಾಷೆ ಹಿಂಜರಿತವಿಲ್ಲದೆ, ಶ್ರಮಪಟ್ಟು ಕಾರ್ಯನಿರ್ವಹಿಸಿದರೆ ನ್ಯಾಯಾಧೀಶರಾಗಬಹುದು' ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಚ್.ಬಿ. ಸಂದೇಶ್ ಶನಿವಾರ ಹೇಳಿದರು.

ವಿರಾಟ್ ವಿಶ್ವ ಗ್ಲೋಬಲ್ ಫೌಂಡೇಷನ್ ಮತ್ತು ರಾಜ್ಯ ವಕೀಲರ ಪರಿಷತ್ ಆಶ್ರಯದಲ್ಲಿ ನಡೆದ 'ಸಿವಿಲ್ ನ್ಯಾಯಾಧೀಶರ ಹುದ್ದೆಯ ಮುಖ್ಯ ಪರೀಕ್ಷೆ ತರಬೇತಿ ಶಿಬಿರ'ದ ಸಮಾರೋಪದಲ್ಲಿ ಮಾತನಾಡಿದರು.

'ಯುವಕರು ಅದರಲ್ಲೂ ಗ್ರಾಮೀಣ ಪ್ರತಿಭೆಗಳಿಗೆ ನೆರವಾಗಲು ಸಂಸ್ಥೆ ತರಬೇತಿ ಏರ್ಪಡಿಸುತ್ತಿದೆ. 100 ಯುವ ವಕೀಲರು ಈ ತರಬೇತಿಯಲ್ಲಿ ಭಾಗವಹಿಸಿ, ನ್ಯಾಯಾಧೀಶರ ಹುದ್ದೆಗೆ ನಡೆಯುವ ಮುಖ್ಯ ಪರೀಕ್ಷೆ ಎದುರಿಸುವ ಸಲಹೆ ಪಡೆದುಕೊಂಡಿದ್ದಾರೆ' ಎಂದು ವಿರಾಟ್ ವಿಶ್ವ ಗ್ಲೋಬಲ್ ಫೌಂಡೇಷನ್ ಅಧ್ಯಕ್ಷ ಎಸ್. ಮಾಳಿಗಾಚಾರ್ ಹೇಳಿದರು.

ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಗಳ ಅಧ್ಯಕ್ಷ ಬಿ.ಎ. ಪಾಟೀಲ್, ಸರ್ಕಾರದ ಕಾನೂನು ಪ್ರಧಾನ ಕಾರ್ಯದರ್ಶಿ ಪ್ರಭಾವತಿ ಹಿರೇಮಠ, ಜಿಲ್ಲಾ ನಿವೃತ್ತ ನ್ಯಾಯಾಧೀಶರಾದ ಎಸ್.ಆರ್. ಸೋಮಶೇಖರ್, ನಂಜುಂಡಸ್ವಾಮಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಚ್.ಆರ್. ರವಿಕುಮಾರ್, ಎಚ್.ಕೆ. ನವೀನ್, ಲೋಕಾಯುಕ್ತ ಸಂಸ್ಥೆಯ ಕಾನೂನು ಘಟಕ ಮುಖ್ಯಸ್ಥ ನಿವೃತ್ತ ನ್ಯಾಯಾಧೀಶ ಅಮರನಾರಾಯಣ, ವಕೀಲರ ಪರಿಷತ್ತಿನ ಅಧ್ಯಕ್ಷ ವಿಶಾಲ್ ರಘು, ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ನಿರ್ದೇಶಕ ಪ್ರಭಾಕರ್ ನರಹರಿ ಮರಾಠೆ ಅವರು ತರಬೇತಿಯಲ್ಲಿ ಉಪನ್ಯಾಸಕರಾಗಿ ಸಲಹೆ, ಮಾರ್ಗದರ್ಶನ ನೀಡಿದರು.

ವಕೀಲರಾದ ಕೋಕಿಲಾ, ಶ್ರೀಧರ್, ಉಷಾ, ನಾಗರಾಜ್ ಅವರು ತರಬೇತಿ ಶಿಬಿರವನ್ನು ನಿರ್ವಹಿಸಿದರು.


ಕೆಎಫ್‌ಸಿಸಿ: ಎನ್.ಎಂ.ಸುರೇಶ್ ಅಧ್ಯಕ್ಷ



ಬೆಂಗಳೂರು: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ-ಯ(ಕೆಎಫ್‌ಸಿಸಿ) ಅಧ್ಯಕ್ಷರಾಗಿ 'ಎಕ್ಸ್‌ಕ್ಯೂಸ್ ಮಿ' ಸಿನಿಮಾ ಖ್ಯಾತಿಯ ನಿರ್ಮಾಪಕ ಎನ್.ಎಂ.ಸುರೇಶ್ ಅವರು ಆಯ್ಕೆಯಾಗಿದ್ದಾರೆ.

ಶನಿವಾರ ಮಧ್ಯಾಹ್ನ 2ರಿಂದ ಸಂಜೆ 6ರವರೆಗೆ ರೇಸ್ ಕೋರ್ಸ್ ರಸ್ತೆಯಲ್ಲಿರುವ ಗುರುರಾಜ ಕಲ್ಯಾಣ ಮಂಟಪದಲ್ಲಿ 65ನೇ ವರ್ಷದ ವಾರ್ಷಿಕ ಚುನಾವಣೆ ನಡೆದಿತ್ತು. ಈ ಬಾರಿ ಮತದಾನಕ್ಕೆ ಇವಿಎಂ ಬಳಸಲಾಗಿತ್ತು. ಒಟ್ಟು 1,599 ಮತಗಳ ಪೈಕಿ 967 ಮತಗಳು ಚಲಾವಣೆಯಾಗಿದ್ದು, ಎನ್.ಎಂ.ಸುರೇಶ್ 337 ಮತ ಪಡೆದರು. ಈ ಬಾರಿ ವಿತರಕರ ವಲಯದಿಂದ ಅಧ್ಯಕ್ಷರು ಆಯ್ಕೆ ನಡೆದಿತ್ತು. ಎನ್.ಎಂ.ಸುರೇಶ್ ಅವರ ಜೊತೆ ಗಣೇಶ್ ಎ.(204 ಮತ), ಶ್ರೀನಿವಾಸ್ ಎಚ್.ಸಿ.(217 ಮತ) ಹಾಗೂ ಸುರೇಶ್ ವಿ.ಎಚ್.(ಮಾರ್ಸ್ ಸುರೇಶ್)(181ಮತ) ಕಣದಲ್ಲಿದ್ದರು.

ಉಪಾಧ್ಯಕ್ಷ ಸ್ಥಾನಕ್ಕೆ ನಿರ್ಮಾಪಕ ವಲಯದಿಂದ ಪ್ರಮಿಳಾ ಜೋಷಾಯ್, ವಿತರಕ ವಲಯದಿಂದ ವೆಂಕಟೇಶ್ ಜಿ., ಪ್ರದರ್ಶಕ ವಲಯದಿಂದ ನರಸಿಂಹಲು ಎಂ. ಆಯ್ಕೆಯಾಗಿದ್ದಾರೆ. ಗೌರವ ಕಾರ್ಯದರ್ಶಿ ಸ್ಥಾನಕ್ಕೆ ನಿರ್ಮಾಪಕ ವಲಯದಿಂದ ಭಾ.ಮ.ಗಿರೀಶ್, ವಿತರಕ ವಲಯದಿಂದ ಸುಬ್ರಮಣಿ ವಿ.(ಕರಿಸುಬ್ಬು) ಆಯ್ಕೆಯಾಗಿದ್ದಾರೆ. ಪ್ರದರ್ಶಕ ವಲಯದಿಂದ ಗೌರವ ಕಾರ್ಯದರ್ಶಿ ಸ್ಥಾನಕ್ಕೆ ಸುಂದರ್ ರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದರು. ಖಜಾಂಚಿಯಾಗಿ ಜಯಸಿಂಹ ಮುಸುರಿ ಬಿ.ಕೆ. ಅವರು ಆಯ್ಕೆಯಾಗಿದ್ದಾರೆ. ನೂತನ ಪದಾಧಿಕಾರಿಗಳು ಭಾನುವಾರ (ಸೆ.24) ಮಧ್ಯಾಹ್ನ ಅಧಿಕಾರ ಸ್ವೀಕರಿಸಲಿದ್ದಾರೆ.







ಮಗ್ಗ ನಂಬಿದವರು ನುಗ್ಗಾದರು

ಒಂದನೇ ಪುಟದಿಂದ...

ಸರ್ಕಾರದ ನೆರವು, ಸಾಲ ಸೌಲಭ್ಯದ ಹೊರತಾಗಿಯೂ ಹಳೆಯ ಮಾದರಿಯಲ್ಲೇ ವಸ್ತ್ರ ತಯಾರಿಸುವ ಮಗ್ಗಗಳು ಬೇಡಿಕೆಯ ಕೊರತೆಯನ್ನು ಎದುರಿಸುತ್ತಿವೆ. ಆದರೆ ಮತ್ತೊಂದೆಡೆ ಭಿನ್ನವಾಗಿ ಯೋಚಿಸಿ, ಆಧುನಿಕ ಶೈಲಿಗೆ ಹಾಗೂ ಬದಲಾಗುತ್ತಿರುವ ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ವಸ್ತ್ರ ತಯಾರಿಸುತ್ತಿರುವ ರಾಜ್ಯದ ಕೆಲ ಭಾಗಗಳ ಮಗ್ಗಗಳು ದೇಶ, ವಿದೇಶಗಳಲ್ಲಿ ಮಾರುಕಟ್ಟೆ ಕಂಡುಕೊಂಡ ಉದಾಹರಣೆಗಳೂ ಇವೆ. ಬೆಳಗಾವಿಯ ವಡಗಾವಿ, ಶಿವಮೊಗ್ಗದ ಚರಕ, ಉಡುಪಿಯ ಸೀರೆ, ಮೊಳಕಾಲ್ಮೂರು ಸೀರೆಗಳು ದೇಶ ಹಾಗೂ ವಿದೇಶ ಮಾರುಕಟ್ಟೆಗಳಲ್ಲಿ ಸದ್ದು ಮಾಡುತ್ತಿವೆ.

ಮಗ್ಗದ ಉದ್ಯೋಗದಲ್ಲೂ ಮಧ್ಯವರ್ತಿಗಳ ಹಾವಳಿಯಿಂದಾಗಿ ನೇಯ್ಗೆ ನಂಬಿದವರಿಗೆ ಸಿಗುತ್ತಿರುವುದು ಬಿಡಿಗಾಸು ಮಾತ್ರ.

'ನಷ್ಟದ ಹಾದಿಯಲ್ಲಿರುವ ಮಗ್ಗಗಳಿಗೆ ಮಧ್ಯವರ್ತಿಗಳ ಕಾಟ ವಿಪರೀತವಾಗಿದೆ. ಕಚ್ಚಾವಸ್ತುಗಳನ್ನು ಖರೀದಿಸಿ ಅಭಾವ ಸೃಷ್ಟಿಸುವ ಇವರು, ದರ ಹೆಚ್ಚಳವಾದಾಗ ಮಾರಾಟ ಮಾಡಿ ಲಾಭ ಮಾಡಿಕೊಳ್ಳುತ್ತಿದ್ದಾರೆ. ಒಂದು ಸೀರೆ ನೇಯ್ದರೆ ₹20ಸಾವಿರಕ್ಕೆ ಮಾರಾಟವಾದರೂ, ಅದನ್ನು ನೇಯುವವರಿಗೆ ಸಿಗುವುದು ₹800ರಿಂದ ₹1 ಸಾವಿರ ಮಾತ್ರ. ಮಗ್ಗದ ನಿರ್ವಹಣೆ ಹಾಗೂ ಇತರ ಖರ್ಚು ಕಳೆದರೆ ಸಿಗುವುದು ₹500ಕ್ಕಿಂತಲೂ ಕಡಿಮೆ' ಎಂದು ಮಗ್ಗದ ವಾಸ್ತವ ಸ್ಥಿತಿಯನ್ನು ಬಿಚ್ಚಿಟ್ಟರು ಮಾಗಡಿಯ ಕೆಂಪೇಗೌಡ ಉತ್ಪಾದಕರ ಕಂಪನಿ ಅಧ್ಯಕ್ಷ ಎ.ಎಲ್.ರಾಘವೇಂದ್ರ.


ಈ ಪರಿಸ್ಥಿತಿಯಿಂದಾಗಿ ರೇಷ್ಮೆ ನಾಡು ಎಂದೇ ಖ್ಯಾತಿ ಪಡೆದಿರುವ ರಾಮನಗರದಲ್ಲಿ ಹಾಗೂ ಮಾಗಡಿಯಲ್ಲಿ ಮಗ್ಗ ನಂಬಿ ಬದುಕಿನ ಬಂಡಿ ಸಾಗದು ಅಂದುಕೊಂಡ ಎಷ್ಟೋ ಮಂದಿ ಮಗ್ಗದ ಕೋಣೆಗೆ ಬೀಗ ಜಡಿದಿದ್ದಾರೆ. ಬದುಕಿಗೆ ಬೇರೆ ಕೆಲಸಗಳನ್ನು ಆಶ್ರಯಿಸಿದ್ದಾರೆ.

ನಾಲ್ಕು ದಶಕಗಳ ಹಿಂದೆ ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ (ಗದಗ, ಧಾರವಾಡ, ಹಾವೇರಿ) 10 ಸಾವಿರಕ್ಕೂ ಹೆಚ್ಚು ಕೈಮಗ್ಗಗಳು ಇದ್ದವು. 33 ಸಾವಿರ ಕುಟುಂಬಗಳಿಗೆ ಇವು ಉದ್ಯೋಗ ಒದಗಿಸಿದ್ದವು. ಈಗ ಇವರ ಸಂಖ್ಯೆ ಸಾವಿರ ದಾಟದು. ಗದಗ, ನರಗುಂದ, ಬೆಂಗೇರಿ, ಹೆಬ್ಬಳ್ಳಿ ಭಾಗದಲ್ಲಿ ಈಗಲೂ ಮಗ್ಗಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ.

ದೇಶದಲ್ಲಿ ಉತ್ತಮ ಸ್ಥಿತಿಯಲ್ಲಿದ್ದ ಮಗ್ಗಗಳಲ್ಲಿ ದುಡಿಯುವವರಿಗೆ ಪ್ರೋತ್ಸಾಹದಾಯಕ ಮಜೂರಿ ಇರಲಿಲ್ಲ. ಹಾಲಿ ನಶಿಸಿದ ನಷ್ಟದ ಹಾದಿಗೆ ಇಳಿದ ಮಗ್ಗಗಳ ಪುನಶ್ಚೇತನ ಮತ್ತು ಕಾರ್ಮಿಕರನ್ನು ಸೆಳೆಯಲು ಎಸ್.ಬಂಗಾರಪ್ಪ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಮೊದಲ ಬಾರಿಗೆ ನೂಲುವವರಿಗೆ ಪ್ರತಿ ಲಡಿಗೆ 10 ಪೈಸೆಯಂತೆ ಪ್ರೋತ್ಸಾಹಧನ ನೀಡಲು ಆರಂಭಿಸಲಾಯಿತು. ಆದರೆ ಈ ದರದಷ್ಟೆ ಪರಿಷ್ಕರಣೆ ಮುಂದೆ ನಡೆದಿದ್ದು 2014ರಲ್ಲಿ.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನೂಲುವವರಿಗೆ ವರ್ಷದಲ್ಲಿ ಗರಿಷ್ಠ 150 ದಿನಗಳ ಮೀರದಂತೆ ಪ್ರತಿ ಲಡಿಗೆ ₹3, ನೇಕಾರರಿಗೆ ಪ್ರತಿ ಮೀಟರ್‌ಗೆ ₹7ರಂತೆ ಪ್ರೋತ್ಸಾಹಧನ (150 ದಿನ ಮೀರದಂತೆ) ಘೋಷಿಸಲಾಯಿತು. ಇತರೆ ಕಸಬುದಾರರಿಗೆ (ರೀಲ್ ಸುತ್ತುವವರು ಹಾಗೂ ಇತರೆ) ವರ್ಷದಲ್ಲಿ 300 ದಿನ ಮೀರದಂತೆ ಪ್ರತಿ ದಿನಕ್ಕೆ ₹9.50 ಹಾಗೂ ಇತರೆ ಸಹಾಯಕರು ಹಾಗೂ ಕಾರ್ಯಕರ್ತರಿಗೆ ಉತ್ಪಾದನೆ ಮೇಲೆ ಶೇ 9ರಷ್ಟು ಪ್ರೋತ್ಸಾಹಧನ ನೀಡಲಾಗುತ್ತಿದೆ. ಇದನ್ನು ಹೆಚ್ಚಿಸಬೇಕು ಎಂಬ ಬೇಡಿಕೆ ಮಗ್ಗಗಳಿಂದ ಕೇಳಿ ಬರುತ್ತಿದೆ.

'ಸರ್ಕಾರವು ನೇಕಾರರಿಗೆ ಪ್ರತಿ ಮೀಟರ್‌ಗೆ ನೀಡುವ ಪ್ರೋತ್ಸಾಹ ಧನವನ್ನು ₹ 10ಕ್ಕೆ ಹಾಗೂ ನೂಲುವವರಿಗೆ ₹ 2ಕ್ಕೆ ಹೆಚ್ಚಿಸಬೇಕು. ಉದ್ಯಮಕ್ಕೆ ಪ್ರೋತ್ಸಾಹ ನೀಡಬೇಕು. ಆಗ ಮಾತ್ರ ಮಗ್ಗ ಉದ್ಯಮ ಉಳಿಯುತ್ತದೆ' ಎಂದೆನ್ನುತ್ತಾರೆ. ಧಾರವಾಡ ತಾಲ್ಲೂಕು ಗರಗ ಕ್ಷೇತ್ರೀಯ ಸೇವಾ ಸಂಘದ ಅಧ್ಯಕ್ಷ ಈಶ್ವರಪ್ಪ ಇಟಗಿ.



ಧಾರವಾಡ ಜಿಲ್ಲೆಯ ಗರಗ ಗ್ರಾಮದಲ್ಲಿ ಕಾರ್ಮಿಕರೊಬ್ಬರು ನೂಲುವ ಕಾಯಕದಲ್ಲಿ ತೊಡಗಿರುವುದು. ಪ್ರಜಾವಾಣಿ ಚಿತ್ರ– ಬಿ.ಎಂ.ಕೇದಾರನಾಥ

ಇದು ಸಂಘದವರ ಮಾತಾದರೆ, ಮಗ್ಗದಲ್ಲಿ ದುಡಿಯುವವರದ್ದು ಬೇರೆಯದೇ ಸಂಕಷ್ಟ. 'ಬೆಳಿಗ್ಗೆಯಿಂದ ಸಂಜೆವರೆಗೂ ಕೈ ಮಗ್ಗದಲ್ಲಿ ನೂಲು ತೆಗೆದರೆ ₹ 150ರಿಂದ ₹ 200 ಪಗಾರ ಸಿಗ್ತೈತಿ. ಹೊಲದ್ ಕೆಲಸಕ್ಕೆ ಹೋದ್ರಾ ₹ 300 ರಿಂದ ₹ 500ರವೆಗೆ ಕೂಲಿ ಕೊಡ್ತಾರಾ. ಹಿಂಗಾಗಿ, ಮಗ್ಗದ ಕೆಲಸ ಬಿಟ್ಟೇವಿ' ಎಂದು ಗರಗ ಗ್ರಾಮದ ಮಲ್ಲಮ್ಮ ಶೆಟ್ಟಣ್ಣನವರ ಹೇಳುತ್ತಾರೆ.

ಕೋವಿಡ್ ಕಾಲದಲ್ಲಿ ನೇಕಾರರ ಪರಿಸ್ಥಿತಿ ತೀರಾ ಹದಗೆಟ್ಟಿತ್ತು. ನೇಯ್ದ ಸೀರೆಗಳನ್ನು ಕೊಳ್ಳುವವರಿಲ್ಲದೆ ಸಾಕಷ್ಟು ಸಂಕಷ್ಟ ಅನುಭವಿಸಿದರು. ಅಲ್ಲದೆ ಆ ಸಮಯದಲ್ಲಿ ಸಣ್ಣ ಪ್ರಮಾಣದಲ್ಲಿ ನೇಯ್ಗೆ ಮಾಡುವ ನೇಕಾರರು ಮಗ್ಗಗಳನ್ನೇ ಬಂದ್ ಮಾಡಿ ಬೇರೆ ಉದ್ಯೋಗ ಹುಡುಕಿಕೊಂಡರು. ಈಗಲೂ ವಿದ್ಯುತ್ ಮಗ್ಗಗಳ ನೇಕಾರರ ಸ್ಥಿತಿ ಸರಿ ಇಲ್ಲ ಎಂಬುದು ಮಗ್ಗದವರ ಅಳಲು.

> **ಅಸಂಘಟಿತ ವಲಯದ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳು ನೇಕಾರರಿಗೂ ದೊರೆಯುವಂತಾಗಬೇಕು. ಆಗ ಮಾತ್ರ ಮಗ್ಗಗಳು ಉಳಿಯಲು ಸಾಧ್ಯ.**
> **ಚಂದ್ರಕಾಂತ ಶೇಖಾ,** ಅಧ್ಯಕ್ಷ, ಬಾಗಲಕೋಟೆ ಜಿಲ್ಲಾ ನೇಕಾರರ ಒಕ್ಕೂಟ

> **ವಿದ್ಯುತ್ ಚಾಲಿತ ಮಗ್ಗಗಳಿಗೆ 20 ಎಚ್‌ಪಿ ವರೆಗೂ ಉಚಿತ ವಿದ್ಯುತ್ ನೀಡಬೇಕು. ₹10 ಲಕ್ಷದವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡಬೇಕು. ಮನೆ ನಿರ್ಮಾಣಕ್ಕೆ ನೆರವು ನೀಡಬೇಕು.**
> **ವಿಷ್ಣು ಗೌಡರ,** ಅಧ್ಯಕ್ಷರು, ಬಾಗಲಕೋಟೆ ಜಿಲ್ಲಾ ನೇಕಾರ ಸಹಕಾರ ಸಂಘಗಳ ಮಹಾಮಂಡಳ

> **ಮಾರುಕಟ್ಟೆಗೆ ಏನು ಬೇಕೊ ಅದನ್ನು ಕೊಡದೇ ಹಳೆಯದ್ದೇ ರೀತಿಯ ವಿನ್ಯಾಸದಲ್ಲಿ ಸೀರೆ ನೇಯುತ್ತಾ ಇದ್ದರೆ ನಷ್ಟದಲ್ಲಿರುತ್ತೇವೆ. ಸಂಪ್ರದಾಯದ ಜೊತೆಗೆ ಹೊಸತನ ಸ್ವಲ್ಪ ಸೇರಿಸಿಕೊಂಡರೆ ಗ್ರಾಹಕರಿಗೆ ಇಷ್ಟವಾಗುತ್ತದೆ.**
> **ಪದ್ಮಶ್ರೀ,** ವ್ಯವಸ್ಥಾಪಕಿ, ಚರಕ ಸಂಸ್ಥೆ

ನೇಯ್ಗೆಯ ಬಲೆಯಲ್ಲಿ ನೇಕಾರರು

ಸೀರೆ, ಖಣದ ಬಟ್ಟೆಗೆ ಹೆಸರುವಾಸಿಯಾದ ಬಾಗಲಕೋಟೆ ಜಿಲ್ಲೆಯ ಇಳಕಲ್ ಸೀರೆ, ಗುಳೇದಗುಡ್ಡದ ಖಣ, ರಬಕವಿ–ಬನಹಟ್ಟಿಯ ಕಾಟನ್ ಸೀರೆಗಳು ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿವೆ. ಆದರೆ, ಇವುಗಳನ್ನು ನೇಯುವ ನೇಕಾರರ ಬದುಕು ನೇಯ್ಗೆಯ ಬಲೆಯಲ್ಲಿ ಸಿಲುಕಿ, ಹೊರಬರಲಾಗದೆ ಒದ್ದಾಡುತ್ತಿದ್ದಾರೆ. ಜಿಲ್ಲೆಯ ಬಾಗಲಕೋಟೆ, ಬಾದಾಮಿ, ಇಳಕಲ್, ಹುನಗುಂದ, ರಬಕವಿ ಬನಹಟ್ಟಿ, ತೇರದಾಳ ತಾಲ್ಲೂಕು ಸೇರಿದಂತೆ ಜಿಲ್ಲೆಯ ವಿವಿಧೆಡೆ ತಲೆತಲಾಂತರದಿಂದ ನೇಕಾರಿಕೆಯನ್ನು ಹಲವು ಕುಟುಂಬಗಳು ಮುಂದುವರೆಸಿಕೊಂಡು ಬಂದಿವೆ. ಕಚ್ಚಾ ವಸ್ತುಗಳ ಬೆಲೆ ಹೆಚ್ಚಳ, ವಿದ್ಯುತ್ ದರ ಏರಿಕೆ, ಕಾರ್ಮಿಕರ ಕೊರತೆ, ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಹಿಡಿತದಿಂದಾಗಿ ಹಲವು ಕುಟುಂಬದವರು ಬೇರೆ ಉದ್ಯೋಗ ಅರಸಿಕೊಂಡು ಹೋಗಿದ್ದಾರೆ.

2018ರ ಗಣತಿ ಪ್ರಕಾರ ಬಾಗಲಕೋಟೆ ಜಿಲ್ಲೆಯಲ್ಲಿ 6,154 ಕೈಮಗ್ಗ ಹಾಗೂ 17,729 ಪವರ್ ಲೂಮ್‌ಗಳಿವೆ. ಪವರ್ ಲೂಮ್‌ಗಳಿಗೆ ವಿದ್ಯುತ್ ದರದಲ್ಲಿ ರಿಯಾಯಿತಿ ನೀಡಲಾಗುತ್ತಿದೆ. ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಗುಳೇದಗುಡ್ಡದಲ್ಲಿ ಜವಳಿ ಪಾರ್ಕ್ ನಿರ್ಮಾಣದ ನಿರ್ಧಾರವಾಗಿತ್ತು. ಐದು ವರ್ಷಗಳ ಕಾಲ ಮತ್ತೊಂದು ಸರ್ಕಾರ ಬಂದು ಈಗ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿದ್ದಾರೆ. ಈಗಲಾದರೂ ಬೇಡಿಕೆ ಈಡೇರಲಿದೆಯೇ ಎಂಬ ನಿರೀಕ್ಷೆಯಲ್ಲಿ ಇಲ್ಲಿನ ನೇಕಾರರು ಇದ್ದಾರೆ.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ ರಬಕವಿ ಬನಹಟ್ಟಿಯಲ್ಲಿ ಜವಳಿ ಪಾರ್ಕ್ ಘೋಷಣೆಯಾಗದೆ.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲ್ಲೂಕು ರೇಷ್ಮೆ ಸೀರೆಗೆ ಪ್ರಸಿದ್ಧಿ ಪಡೆದಿದೆ. ಕಟ್ಟು ಸೀರೆ ಮೊಳಕಾಲ್ಮುರು ಖ್ಯಾತಿಗೆ ಮುಖ್ಯ ಕಾರಣ. ವಿಶೇಷ ವಿನ್ಯಾಸಕ್ಕಾಗಿ ಮೂರು ಲಾಳಿ ಬಳಸಿ (ಸೀರೆ ಮೇಲೆ ಯಾವುದೇ ರೀತಿಯ ಚಿತ್ತಾರ ರಚಿಸಲು ಮೂರು ಲಾಳಿ ಬಳಸಲಾಗುತ್ತದೆ) ಈ ಸೀರೆ ನೇಯ್ಗೆ ಮಾಡಲಾಗುತ್ತದೆ. ಕೈಮಗ್ಗದ ಈ ರೇಷ್ಮೆ ಸೀರೆಗೆ ರಾಜ್ಯದಲ್ಲಿಯೂ ಬೇಡಿಕೆ ಇದೆ. ಆದರೆ, ಇತ್ತೀಚೆಗೆ ಈ ಮಗ್ಗಗಳು ಒಂದೊಂದಾಗಿ ಮುಚ್ಚಿಹೋಗುತ್ತಿವೆ.

ಮೊಳಕಾಲ್ಮುರು ಪಟ್ಟಣ, ತೊರೆಕೊಲಮ್ಮನಹಳ್ಳಿ, ಕೊಂಡ್ಲಹಳ್ಳಿ, ಅಬ್ಬೇನಹಳ್ಳಿ, ಓಬಣ್ಣನಹಳ್ಳಿ ಸೇರಿ ಹಲವು ಗ್ರಾಮಗಳು ರೇಷ್ಮೆ ಸೀರೆಯ ಕೈಮಗ್ಗಗಳಿಗೆ ಹೆಸರಾಗಿದ್ದವು. ದಶಕಗಳ ಹಿಂದೆ ಮೊಳಕಾಲ್ಮುರು ತಾಲ್ಲೂಕಿನಲ್ಲಿ ಸಾವಿರಕ್ಕೂ ಅಧಿಕ ಮಗ್ಗಗಳಿದ್ದವು. ಇವುಗಳ ಸಂಖ್ಯೆ ಈಗ ನೂರಕ್ಕೆ ಇಳಿದಿದೆ. ಸಂಕಷ್ಟ ನಿವಾರಣೆಗೆ ಸರ್ಕಾರದ ಎದುರು ಅಲವತ್ತುಕೊಂಡು ಸಾಕಾದ ನೇಕಾರರು ಕೈಮಗ್ಗದಿಂದ ವಿಮುಖರಾಗುತ್ತಿದ್ದಾರೆ.

ಕಚ್ಚಾಸಾಮಗ್ರಿ ಕೊರತೆ

ಹೆಚ್ಚಾದ ಕಚ್ಚಾಮಾಲುಗಳ ದರ, ಕೂಲಿಕಾರರ ಸಮಸ್ಯೆ, ಮಾರುಕಟ್ಟೆ ಕೊರತೆಯಿಂದಾಗಿ ನೇಕಾರರು ಈಗಲೂ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಲಕ್ಷಾಂತರ ಕಿಮ್ಮತ್ತಿನ ನೇಯ್ದ ವಸ್ತುಗಳು ನೇಕಾರರ ಮನೆಯಲ್ಲಿ ಕೊಳೆಯುತ್ತಿವೆ. ಸರ್ಕಾರ ಕೂಡ ನೇಕಾರರ ಕಡೆ ಗಮನ ಕೊಟ್ಟಿಲ್ಲ. ಕೇವಲ ಹಾಳೆಗಳಲ್ಲಿ ಮಾತ್ರ ನೇಕಾರರ ಅಭಿವೃದ್ಧಿಯ ಮಾತುಗಳಿವೆ. ಆದರೆ ಅವುಗಳು ಜಾರಿಗೆ ಬಂದಿಲ್ಲ. ಕಾರಣ ನೇಕಾರರ ಕಷ್ಟವೂ ಕಡಿಮೆ ಆಗಿಲ್ಲ ಎಂಬುದು ಅವರ ಬೇಸರ.

ಇಷ್ಟು ಸಾಲದು ಎಂಬಂತೆ, ಕರ್ನಾಟಕ ಜವಳಿ ಮತ್ತು ಕೈಮಗ್ಗ ಅಭಿವೃದ್ಧಿ ನಿಗಮ (ಕೆಎಚ್‌ಡಿಸಿ)ದಿಂದ ಕೈಮಗ್ಗಗಳಿಗೆ ರೇಷ್ಮೆ ನೂಲು ಹಾಗೂ ಜರಿ ಪೂರೈಕೆಯನ್ನು ಸಾಕಾಲಕ್ಕೆ ನೀಡುತ್ತಿಲ್ಲ ಎಂಬ ಆರೋಪವೂ ಇದೆ. ಜತೆಗೆ ಗುಣಮಟ್ಟದ ಕುರಿತೂ ನೇಕಾರರು ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಈಚಿನ ದಿನಗಳಲ್ಲಿ ಮುಖ್ಯ ಕಚ್ಚಾ ವಸ್ತುವಾಗಿರುವ ಮಸರಾಯಿ ಬೆಲೆ ಗಗನಕ್ಕೇರಿರುವುದು ನೇಕಾರಿಕೆಗೆ ದೊಡ್ಡ ಹೊಡೆತ ನೀಡಿದೆ.

ಆರು ತಿಂಗಳಿಗೊಮ್ಮೆ ಕಚ್ಚಾ ಸಮಾಗ್ರಿ ನೀಡಿದರೆ ಮಗ್ಗಗಳನ್ನು ನಡೆಸಲು ಸಾಧ್ಯವಾಗುವುದಿಲ್ಲ. ಈ ಸಮಸ್ಯೆ ಬಗ್ಗೆ ಸರ್ಕಾರದ ಗಮನ ಸೆಳೆದರೂ ಪ್ರಯೋಜನವಾಗಿಲ್ಲ' ಎಂದು ಬೇಸರ ವ್ಯಕ್ತಪಡಿಸುತ್ತಾರೆ ಚಿತ್ರದುರ್ಗದ ನೇಕಾರ ಪಿ.ಶ್ರೀನಿವಾಸುಲು.

ಚಳ್ಳಕೆರೆ ಹಾಗೂ ಮೊಳಕಾಲ್ಮುರು ತಾಲ್ಲೂಕಿನಲ್ಲಿ ಸಾವಿರಕ್ಕೂ ಅಧಿಕ ಕಂಬಳಿ ಮಗ್ಗಗಳಿದ್ದವು. ಮಾರುಕಟ್ಟೆ ಸಮಸ್ಯೆಯಿಂದ ಇತ್ತೀಚೆಗೆ ಈ ಮಗ್ಗಗಳು ನೆಲಕಚ್ಚುತ್ತಿವೆ ಎಂದೆನ್ನುತ್ತಾರೆ ಓಬಳಾಪುರದ ನೇಕಾರ ಎಂ.ಪಾತಲಿಂಗಪ್ಪ.

ಸೂರತ್ ಸೀರೆ ಅಬ್ಬರ

ಗುಜರಾತ್‌ನ ಸೂರತ್ ಶಟಲ್‌ಲೆಸ್ (ಲಾಳಿ ಇಲ್ಲದ) ವಿದ್ಯುತ್ ಮಗ್ಗಗಳ ಅಬ್ಬರಕ್ಕೆ ದೊಡ್ಡಬಳ್ಳಾಪುರದ ಸಾಂಪ್ರದಾಯಿಕ ಕೈಮಗ್ಗಗಳು ಸೋತು ಸುಣ್ಣವಾಗಿವೆ. ಸೂರತ್ ಸೀರೆಗಳ ಆಕರ್ಷಣೆಯಲ್ಲಿ ದೊಡ್ಡಬಳ್ಳಾಪುರದ ಕೈಮಗ್ಗದ ಸಾಂಪ್ರದಾಯಿಕ ಸೀರೆಗಳು ಮಾರುಕಟ್ಟೆಯಲ್ಲಿ ಕಳೆದು ಹೋಗಿವೆ.

ಸೂರತ್‌ನಲ್ಲಿ ಒಬ್ಬ ಕಾರ್ಮಿಕ 8 ತಾಸು ಕೆಲಸ, ತಿಂಗಳ ಲೆಕ್ಕದಲ್ಲಿ ಸಂಬಳ. ಕನಿಷ್ಠ 8 ರಿಂದ 10 (ಲಾಳಿ ಇಲ್ಲದ) ಮಗ್ಗಗಳನ್ನು ಏಕ ಕಾಲಕ್ಕೆ ನಡೆಸುತ್ತಾರೆ. ಹೀಗಾಗಿ ಸೀರೆಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲು ಅಲ್ಲಿನ ನೇಕಾರಿಗೆ ಸಾಧ್ಯವಾಗಿದೆ ಎನ್ನುವುದು ಮಗ್ಗದವರ ಮಾತು.

ಚಿಂತಾಮಣಿ ತಾಲ್ಲೂಕಿನ ನರನಕಲ್ಲು, ಕೋನಪ್ಪಲ್ಲಿ, ಮುದ್ದಲಹಳ್ಳಿ, ಮಾದರಕಲ್ಲು, ಶಿಡ್ಲಘಟ್ಟ ತಾಲ್ಲೂಕಿನ ಮಾದೇನಹಳ್ಳಿ, ಬಯ್ಯಪ್ಪನಹಳ್ಳಿ, ದೊಡ್ಡತೇಕಹಳ್ಳಿ, ಸುಗುಟೂರು, ವೆಂಕಟಾಪುರ, ನಾಗಮಂಗಲ, ಮಳಮಾಚನಹಳ್ಳಿ, ದೊಡ್ಡದಾಸರಹಳ್ಳಿ, ಚಿಕ್ಕದಾಸರಹಳ್ಳಿ, ಬಾಗೇಪಲ್ಲಿ ತಾಲ್ಲೂಕಿನ ಯಲ್ಲಂಪಲ್ಲಿ, ನಲ್ಲರಾಳಪಲ್ಲಿ ಮತ್ತಿತರ ಗ್ರಾಮಗಳಲ್ಲಿ ಒಮ್ಮೆ ಉಚ್ಛ್ರಾಯವಾಗಿದ್ದ ಕೈಮಗ್ಗಗಳು ಈಗ ಕೆಲವೇ ಉಳಿದಿವೆ. ಹತ್ತಿರದಲ್ಲೇ ಬೆಂಗಳೂರಿನಂತ ಮಹಾನಗರ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಿದ್ದರೂ ಸೋತು ಸುಣ್ಣವಾಗಿವೆ.

ಮಗ್ಗಗಳ ಏಳುಬೀಳುಗಳ ಹಾದಿಯಲ್ಲಿ ಹೊಸತನಕ್ಕೆ ಹಾತೊರೆದವರು ಅಲ್ಲಲ್ಲಿ ಭರವಸೆಯ ಬೆಳಕು ಮೂಡಿಸಿದ್ದಾರೆ. ದಶಕಗಳಿಂದ ಸಿದ್ಧಪಡಿಸಿಕೊಂಡು ಬರಲಾಗುತ್ತಿರುವ ವಸ್ತ್ರಗಳನ್ನೇ ನೇಯುವ ಬದಲು, ಹೊಸ ಆಲೋಚನೆಯೊಂದಿಗೆ ಫ್ಯಾಷನ್ ಪರಿಕರಗಳನ್ನು ಸಿದ್ಧಪಡಿಸಿ ಕಾಲದೊಂದಿಗೆ ಹೆಜ್ಜೆ ಹಾಕಿದರೆ ಮಗ್ಗಗಳು ಆರ್ಥಿಕ ಲಾಭದ ಹಾದಿಯಲ್ಲಿ ಸಾಗಲಿವೆ ಎಂದು ಟೈಟನ್ ಪರಿಚಯಿಸಿದ ಖಾದಿ ವಾಚ್ ಪಟ್ಟಿ ಬಿಡುಗಡೆ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದನ್ನು ನೆನಪಿಸಿಕೊಳ್ಳುವ ಗ್ರಾಹಕರು, ರಾಜ್ಯದ ಮಗ್ಗಗಳು ಹೊಸ ಆಲೋಚನೆಗೆ ಒಗ್ಗಿಕೊಂಡು ಇಂದಿನ ಜನಾಂಗದ ಬೇಡಿಕೆಗೆ ಪೂರಕ ವಸ್ತ್ರ, ಪರಿಕರಗಳನ್ನು ಸಿದ್ಧಪಡಿಸುವುದು ಅನಿವಾರ್ಯ.

(ಪೂರಕ ಮಾಹಿತಿ: ಬಸವವರಾಜ ಹವಲ್ದಾರ್, ಬಿ.ಜೆ. ಧನ್ಯಪ್ರಸಾದ್, ಕೆ.ಎಂ. ಸತೀಶ ಬೆಳ್ಳಕ್ಕಿ, ಸಂತೋಷ ಈ. ಚಿನಗುಡಿ, ಡಿ.ಬಿ.ನಾಗರಾಜ್, ಜಿ.ಎಚ್.ವೆಂಕಟೇಶ್, ಓದೇಶ ಸಕಲೇಶಪುರ, ಎಚ್. ಬಾಲಚಂದ್ರ, ಡಿ.ಎಂ. ಕುರ್ಕೆ ಪ್ರಶಾಂತ, ಮೈಲಾರಿ ಲಿಂಗಪ್ಪ, ನಟರಾಜ ನಾಗಸಂದ್ರ)

ಮಾರುಕಟ್ಟೆ ಹುಡುಕಿಕೊಂಡ ಸ್ವದೇಶಿ ಮಗ್ಗಗಳು

ಬೆಳಗಾವಿ ವಡಗಾವಿಗೆ ಇಂದಿಗೂ ಇದೆ ಬೇಡಿಕೆ

ಬೆಳಗಾವಿ ಜಿಲ್ಲೆಯಲ್ಲಿ ಸ್ಥಳೀಯ ಸಾಂಪ್ರದಾಯಿಕ ಶೈಲಿ ಬಳಸಿಕೊಂಡು ಸಿದ್ಧಪಡಿಸುವ 'ವಡಗಾವಿ ಸೀರೆ'ಗಳಿಗೆ ದೇಶದ ವಿವಿಧೆಡೆ ಹಾಗೂ ವಿದೇಶಗಳಲ್ಲೂ ಬೇಡಿಕೆ ಇದೆ. ವಡಗಾವಿ ಸೀರೆಗಳಗೆ 120 ವರ್ಷಗಳ ಇತಿಹಾಸವಿದೆ. ತಲೆಮಾರುಗಳಿಂದಲೂ ಬೆಳಗಾವಿಯ ವಡಗಾವಿ ಪ್ರದೇಶದ ನೇಕಾರರು ಈ ಮಾದರಿಯ ಸೀರೆಗಳನ್ನು ಸಿದ್ಧಪಡಿಸುವಲ್ಲಿ ನಿಪುಣರು. ಆರಂಭದಲ್ಲಿ ಈ ಸೀರೆಗಳಿಗೆ ಮಹಾರಾಷ್ಟ್ರದ ಶಹಾಪುರದಲ್ಲಿ ದೊಡ್ಡ ಮಾರುಕಟ್ಟೆ ಇತ್ತು. ಅಲ್ಲಿನ ಮಾರವಾಡಿಗಳು ಇದನ್ನು ಖರೀದಿಸುತ್ತಿದ್ದುದರಿಂದ ಇದನ್ನು ಶಹಾಪುರಿ ಸೀರೆ ಎಂದೂ ಗುರುತಿಸಲಾಗುತ್ತದೆ.

ಕಂಚಿಯ ಸೀರೆಗಳ ವಿನ್ಯಾಸವನ್ನೇ ತಮ್ಮ ಮಗ್ಗಗಳಿಗೆ ಹೊಂದಿಸಿಕೊಳ್ಳುತ್ತ, ಸಮಕಾಲೀನ ಟ್ರೆಂಡ್ ಜೊತೆಗೆ ಹೆಜ್ಜೆ ಹಾಕುತ್ತಿರುವ ಶಹಾಪುರಿ ಸೀರೆಗೆ ತನ್ನದೇ ಆದ ವಿನ್ಯಾಸ ಅಥವಾ ಸ್ವರೂಪ ಇಲ್ಲ. ಸಣ್ಣ ಗೋಪುರದ ಅಂಚಿನಿಂದ ಆರಂಭಿಸಿ, ಎಲ್ಲ ಬಗೆಯ ಅಂಚುಗಳೂ ಕಂಗೊಳಿಸುತ್ತವೆ. ಒಡಲಿನ ತುಂಬ ಜರಿಯಿರುವುದರಿಂದ ವಿಜೃಂಭಣೆಯ ಸೀರೆ ಇದು ಎಂದೆನಿಸುತ್ತದೆ. ದಿನ ಉಡಲು ಅನುವಾಗುವ ಈ ಸೀರೆಗಳು ಎಲ್ಲ ವರ್ಗದವರೂ ಆಸೆ ಪಡುತ್ತಾರೆ. ಕೂಲಿ ಕೆಲಸ ಮಾಡಿದರೂ, ಹೊಲದಲ್ಲಿ ಗೇಯ್ಮೆ ಮಾಡಿದರೂ, ಮದುವೆಯಂಥ ಸಮಾರಂಭಗಳಿಗೆ ಹೋದರೂ, ಎಲ್ಲದಕ್ಕೂ ಸಲ್ಲುವ ಗುಣ ಇರುವ ಈ ಸೀರೆ, ಈ ಭಾಗದ ಜನಜೀವನದಲ್ಲಿ ಹಾಸು ಹೊಕ್ಕಿದೆ. ರಾಜ್ಯದ ಗಡಿಗೆ ಹೊಂದಿಕೊಂಡಿರುವ ಗುಳೇದಗುಡ್ಡದ ಖಣಗಳು ಮತ್ತು ಷಾಪುರಿ ಸೀರೆಗಳು, ಅಲ್ಲಿಯ ಶ್ರಮಿಕ ವರ್ಗದ ಹೆಮ್ಮೆಯಾಗಿ ತಮ್ಮ ಅಸ್ತಿತ್ವ ಕಂಡುಕೊಂಡಿವೆ.

ತಯಾರಾಗುವ ವಡಗಾವಿ ಸೀರೆಗಳಲ್ಲಿ ಶೇ 50ರಷ್ಟು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟವಾದರೆ, ಮಲೇಷಿಯಾ, ಬಾಂಗ್ಲಾದೇಶ, ಶ್ರೀಲಂಕಾ ದೇಶಗಳಲ್ಲಿ ಈ ಸೀರೆಗಳಿಗೆ ಬೇಡಿಕೆ ಇದೆ. ನೆರೆಯ ಮಹಾರಾಷ್ಟ್ರ, ಆಂಧ್ರ, ತೆಲಂಗಾಣ, ಕೇರಳ, ತಮಿಳುನಾಡು, ಗುಜರಾತ್ ವರೆಗೆ ಬೆಳಗಾವಿಯ ಈ ಸೀರೆಗೆ ಬೇಡಿಕೆ ಇದೆ.

700ಕ್ಕೂ ಹೆಚ್ಚು ಜನರಿಗೆ ಸುಸ್ಥಿರ ಬದುಕು ಕೊಟ್ಟ ಚರಕ

ಶಿವಮೊಗ್ಗ: ನೇಯ್ಗೆ, ಕೈಮಗ್ಗ ಅಂದರೆ ನಷ್ಟದ ಬಾಬ್ತು. ನೇಕಾರಿಕೆಗೆ ಭವಿಷ್ಯವಿಲ್ಲ ಎಂಬ ಗೊಣಗಾಟದ ನಡುವೆಯೇ ಸಾಗರ ತಾಲ್ಲೂಕು ಹೆಗ್ಗೋಡಿನ ಚರಕ ಸಂಸ್ಥೆ ಕಳೆದ ಮೂರು ದಶಕಗಳಿಂದ ಕೈಮಗ್ಗಗಳ ಸದ್ದು ನಂಬಿಯೇ 700ಕ್ಕೂ ಹೆಚ್ಚು ಜನರಿಗೆ ಸುಸ್ಥಿರ ಬದುಕು ಕಟ್ಟಿಕೊಟ್ಟಿದೆ. ಅದೇ ಹಾದಿಯಲ್ಲಿ ಸಾಗುತ್ತಿದೆ. 90 ದಶಕದ ಆರಂಭದಲ್ಲಿ ಸಹಕಾರ ತತ್ವದಡಿ ಸಂಸ್ಥೆಯ ಕಟ್ಟಿ ಬೆಳೆಸಿದವರು ರಂಗಕರ್ಮಿ ಪ್ರಸನ್ನ ಹಾಗೂ ಗೆಳೆಯರು. ಕಾಲಕಾಲಕ್ಕೆ ಗ್ರಾಹಕರ ಒಲವು–ನಿಲುವುಗಳ ಅರ್ಥೈಸಿಕೊಂಡು ಉತ್ಪನ್ನಗಳಿಗೆ ಹೊಸ ಸ್ಪರ್ಶ ನೀಡಿದ ಪರಿಣಾಮ ಚರಕ ಸಂಸ್ಥೆ ಇಂದು ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿದೆ.

ಉತ್ಪನ್ನಗಳಿಗೆ ನೈಸರ್ಗಿಕ ಬಣ್ಣ ಬಳಸುವ ಚರಕದ ಉತ್ಪನ್ನಗಳು 'ದೇಸಿ' ಹೆಸರಿನ ಅಂಗಡಿಗಳಲ್ಲಿ ಮಾರಾಟ ಆಗುತ್ತಿರುವುದರಿಂದಮಧ್ಯವರ್ತಿಗಳ ಹಾವಳಿ ಇಲ್ಲ.



ಬೆಳಗಾವಿ ಜಿಲ್ಲೆಯ ವಡಗಾವಿಯಲ್ಲಿ ನೇಕಾರರೊಬ್ಬರು ಸೀರೆ ನೂಲುವ ಕಾಯಕದಲ್ಲಿ ತೊಡಗಿರುವುದು

ಉಡುಪಿ ಸೀರೆಗೆ ಬಂತು ಮತ್ತೆ ಕಳೆ

ಸಾಂಪ್ರದಾಯಿಕ ಕೈಮಗ್ಗಗಳಿಂದ ತಯಾರಾಗುವ ಕರಾವಳಿಯ 'ಉಡುಪಿ ಸೀರೆ'ಗೆ ಮತ್ತೆ ಕಳೆ ಬಂದಿದೆ. ಹಿಂದೆ, ಮಾರುಕಟ್ಟೆಯ ಪೈಪೋಟಿಗೆ ಸಿಲುಕಿ ಬೇಡಿಕೆ ಕಳೆದುಕೊಂಡು ಬಣ್ಣ ಮಾಸಿದ್ದ ಉಡುಪಿ ಸೀರೆಗಳು ಈಗ ಹೊಸತನದೊಂದಿಗೆ ಗ್ರಾಹಕರನ್ನು ಸೆಳೆಯುತ್ತಿದೆ.

2018ರಲ್ಲಿ ಆರಂಭವಾದ ಕದಿಕೆ ಟ್ರಸ್ಟ್ ಉಡುಪಿ ಸೀರೆಗಳಿಗೆ ಪುನಶ್ಚೇತನ ನೀಡುವ ಹಾಗೂ ವಿನಾಶದ ಅಂಚಿಗೆ ತಲುಪಿರುವ ಕರಾವಳಿಯ ನೇಕಾರಿಕಾ ವೃತ್ತಿ ಉಳಿಸುವ ಕೆಲಸದಲ್ಲಿ ನಿರತವಾಗಿದೆ. ಬೇಡಿಕೆ ಹಾಗೂ ಲಾಭವಿಲ್ಲದೆ ಅವನತಿಗೆ ಸಾಗುತ್ತಿದ್ದ ನೇಕಾರಿಕೆ ವೃತ್ತಿಯನ್ನು ಉಳಿಸಲು ಉಡುಪಿ ಸೀರೆಗಳನ್ನು ತಯಾರಿಸುತ್ತಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿಯ ತಾಳಿಪ್ಪಾಡಿ ನೇಕಾರರ ಸಂಘದೊಂದಿಗೆ ಕೈಜೋಡಿಸಿ ಅಲ್ಲಿನ ನೇಕಾರರು ತಯಾರಿಸಿದ ಸೀರೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡಿತು. ಸಾಗರದ ಹೆಗ್ಗೋಡಿನ ಚರಕ ಸಂಸ್ಥೆಯ ನೆರವಿನೊಂದಿಗೆ ಹಲವು ಮಾರಾಟ ಮೇಳಗಳನ್ನು ಆಯೋಜಿಸಿ ಉಡುಪಿ ಸೀರೆಗಳನ್ನು ಮಾರಾಟ ಮಾಡಿತು.


'ಆಕರ್ಷಕ ಲೋಗೋ ಹಾಗೂ ಸೀರೆಯ ಪ್ಯಾಕಿಂಗ್ ಮೇಲೆ ಉಡುಪಿ ಸೀರೆ ನೇಯ್ದ ನೇಕಾರರ ಫೋಟೊಗಳನ್ನು ಬಳಸಿದ ತಂತ್ರಗಾರಿಕೆ ಗ್ರಾಹಕರನ್ನು ಹೆಚ್ಚು ಸೆಳೆಯಿತು. ಸೀರೆಗಳಿಗೆ ಉತ್ತಮ ಬೆಲೆಯೂ ಲಭ್ಯವಾಗಿ ನೇಕಾರರ ಆರ್ಥಿಕ ಮಟ್ಟ ಸುಧಾರಿಸಿತು. ಯುವಜನತೆಗೂ ನೇಕಾರಿಕೆಯ ತರಬೇತಿ ನೀಡ– ಲಾಗುತ್ತಿದೆ. ಇಲ್ಲಿನ ಸೀರೆಗಳು ಮಹಿಳೆಯರ ಜತೆಗೆ ಈಗ ಈ ಯುಗದ ಯುವತಿಯರನ್ನೂ ಸೆಳೆಯುತ್ತಿದೆ.ಸೀರೆ ತಯಾರಿಕೆಯಲ್ಲಿ ಬಳಸುವ ವಿಶಿಷ್ಟ ತಂತ್ರಗಾರಿಕೆ ಹಾಗೂ ವಿನ್ಯಾಸಕ್ಕಾಗಿ ಉಡುಪಿ ಸೀರೆಗಳಿಗೆ ಭೌಗೋಳಿಕ ಭಿನ್ನತೆ (ಜಿಐ) ಮಾನ್ಯತೆ ದೊರೆತಿದೆ. ಇದರೊಂದಿಗೆ ಯಕ್ಷಗಾನದಲ್ಲಿ ಬಳಸುವ ಕಸೆ ಸೀರೆಯನ್ನು ಯುವತಿಯರು ಉಡಲು ಅನುಕೂಲವಾಗುವಂತೆ ಮಾರ್ಪಡಿಸಲಾಗಿದ್ದು, ಉತ್ತಮ ಬೇಡಿಕೆ ವ್ಯಕ್ತವಾಗಿದೆ' ಎನ್ನುತ್ತಾರೆ ಮಮತಾ ರೈ.

ಕಲ್ಲೂರು ರೇಷ್ಮೆ ಸೀರೆಗೆ ಬೇಡಿಕೆ

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ವೈ.ಎನ್.ಹೊಸಕೋಟೆಯಲ್ಲಿ ತಯಾರಾಗುವ ರೇಷ್ಮೆ ಸೀರೆಗಳಿಗೆ ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಬೇಡಿಕೆ ಇದೆ. ನಾನಾ ಭಾಗದ ಜನರು ಇಲ್ಲಿಗೆ ಭೇಟಿ ನೀಡಿ, ಸೀರೆ ಖರೀದಿ ಮಾಡುತ್ತಿದ್ದಾರೆ. ಆನ್‌ಲೈನ್ ಮೂಲಕವೂ ವ್ಯಾಪಾರ ನಡೆಯುತ್ತಿದೆ.

ಜಿಲ್ಲೆಯಲ್ಲಿ 4,800 ಕೈಮಗ್ಗ, 5,200 ವಿದ್ಯುತ್ ಮಗ್ಗಗಳು ಒಳಗೊಂಡಂತೆ ಒಟ್ಟು 10 ಸಾವಿರ ಮಗ್ಗಗಳಿವೆ. ಸುಮಾರು 600 ಕುಟುಂಬಗಳು ಇಂದಿಗೂ ಮಗ್ಗಗಳನ್ನು ನಂಬಿ ಜೀವನ ಸಾಗಿಸುತ್ತಿವೆ. ಗುಬ್ಬಿ ತಾಲ್ಲೂಕಿನ ಕಲ್ಲೂರು, ಪಾವಗಡ ತಾಲ್ಲೂಕಿನ ವೈ.ಎನ್. ಹೊಸಕೋಟೆ ಭಾಗದಲ್ಲಿ ಕೈಮಗ್ಗ ಇನ್ನೂ ಚಾಲ್ತಿಯಲ್ಲಿವೆ. ತಿಪಟೂರು ಭಾಗದಲ್ಲಿ ವಿದ್ಯುತ್ ಮಗ್ಗಗಳಿಂದ ವಿವಿಧ ರೀತಿಯ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ಕೈಮಗ್ಗದಿಂದ ತಯಾರಿಸಿದ ಒಂದು ರೇಷ್ಮೆ ಸೀರೆಗೆ ₹6 ಸಾವಿರದಿಂದ ₹40 ಸಾವಿರದವರೆಗೆ ಬೆಲೆ ಇದೆ. ರೇಷ್ಮೆ ಬೆಲೆ ಆಧರಿಸಿ ಸೀರೆಗಳಿಗೆ ಬೆಲೆ ನಿಗದಿಯಾಗುತ್ತಿದೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 24-9-1998

● **ಬಿಹಾರ: ಸಮಾಲೋಚನೆ ಬಳಿಕ ರಾಷ್ಟ್ರಪತಿ ನಿರ್ಧಾರ**

ನವದೆಹಲಿ, ಸೆ.23– ರಾಬ್ಡಿ ದೇವಿ ನೇತೃತ್ವದ ಬಿಹಾರ ಸರ್ಕಾರವನ್ನು ವಜಾ ಮಾಡಬೇಕೆಂಬ ಕೇಂದ್ರ ಸರ್ಕಾರದ ಶಿಫಾರಸಿನ ಎಲ್ಲ ಅಂಶಗಳ ಬಗೆಗೆ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅಧ್ಯಯನ ಮಾಡುತ್ತಿದ್ದು, ಕಾನೂನು ತಜ್ಞರ ಜತೆಯೂ ಸಮಾಲೋಚನೆ ನಡೆಸುತ್ತಿರುವುದಿರಂದ ರಾಷ್ಟ್ರಪತಿ ಭವನದ ತೀರ್ಮಾನ ನಾಳೆ ಹೊರ ಬೀಳುವ ಸಾಧ್ಯತೆಗಳು ಹೆಚ್ಚಾಗಿದೆ. ಈ ಮಧ್ಯೆ ರಾಷ್ಟ್ರಪತಿ ಅವರನ್ನು ಇಂದು ಬಿಜೆಪಿಯೇತರ ಪ್ರತಿಪಕ್ಷಗಳ ನಾಯಕರು ಭೇಟಿಯಾಗಿ ಶಿಫಾರಸನ್ನು ವಾಪಸ್ ಕಳುಹಿಸಬೇಕೆಂದು ಒತ್ತಾಯಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 24-9-1973

● **ಪಾಕ್ ಯುದ್ಧ ಕೈದಿಗಳ ವಿಚಾರಣೆ ವಿಶ್ವ ಕಾನೂನಿಗೆ ತದ್ವಿರುದ್ಧ**

ನ್ಯೂಯಾರ್ಕ್, ಸೆ.23– ಅಧ್ಯಕ್ಷ ನಿಕ್ಸನ್ ಅವರು ತಮ್ಮ ರಾಷ್ಟ್ರಕ್ಕೆ ಶಸ್ತ್ರಾಸ್ತ್ರ ಸರಬರಾಜು ಪ್ರಾರಂಭಿಸುವ ಬಗ್ಗೆ ಆಶ್ವಾಸನೆ ನೀಡಲಿಲ್ಲ ಎಂದು ಪಾಕಿಸ್ತಾನದ ಪ್ರಧಾನಿ ಭುಟ್ಟೋ ಶನಿವಾರ ಇಲ್ಲಿ ಹೇಳಿದರು. ಶಸ್ತ್ರಾಸ್ತ್ರ ಸಹಾಯ ಮಾಡುವುದು ಇನ್ನೂ 'ತೆರೆದ ಪ್ರಶ್ನೆ'ಯಾಗಿಯೇ ಉಳಿದುಕೊಂಡಿರುವುದೆಂದೂ ತಿಳಿಸಿದರು.

ಎನ್.ಬಿ.ಸಿ ಪತ್ರಿಕಾ ಸಂದರ್ಶನದಲ್ಲಿ ಭಾಗವಹಿಸಿದ ಭುಟ್ಟೋ ಅವರು ಭಾರತ ಮತ್ತು ಪಾಕಿಸ್ತಾನಗಡೆರಡರಲ್ಲೂ ಸೇನಾ ಬಲ ತಗ್ಗಿಸುವ ಸಲಹೆಗೆ ತಮ್ಮ ಸರ್ಕಾರ ಬೆಂಬಲ ನೀಡುವುದೆಂದು ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಸೆಪ್ಟೆಂಬರ್ 24, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ನವಮಿ ಗಂ. 10-24 ನಕ್ಷತ್ರ: ಪೂರ್ವಾಷಾಢ ಗಂ. 13-42 ಯೋಗ: ಶೋಭನ ಗಂ. 18-39 ಕರಣ: ಕೌಲವ ಗಂ. 10-24, ಕನ್ಯಾ ಮಾಸದ 07 ನೇ ದಿನ, ಮಳೆನಕ್ಷತ್ರ: ಉತ್ತರ ಫಲ್ಗುಣಿ 4. ರಾಹುಕಾಲ : ಸಾಯಂಕಾಲ 04-30 – 06-00, ಸೂರ್ಯೋದಯ : 06-23 ಸೂರ್ಯಾಸ್ತ : 06-22, ಮುಸ್ಲಿಂ ದಿನಾಂಕ : 08 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 9, 2

ಮೇಷ: ಶ್ರಮದ ಜೀವನದಿಂದ ಆರ್ಥಿಕ ಅಡಚಣೆಗಳು ಹಂತಹಂತವಾಗಿ ನಿವಾರಣೆಯಾಗಲಿವೆ. ಮನೆಯನ್ನು ಅಲಂಕರಿಸಿ ಸೂಕ್ತ ಬದಲಾವಣೆ ತರಲು ಒಳ್ಳೆಯ ದಿನ. ಬಟ್ಟೆ ವ್ಯಾಪಾರಿಗಳಿಗೆ ಲಾಭಾಂಶ ಹೆಚ್ಚುತ್ತದೆ.

ವೃಷಭ: ಧಾರ್ಮಿಕ ಕೆಲಸ ಕಾರ್ಯಗಳನ್ನು ಮಾಡುವ ಅವಕಾಶ ಸಿಗುವುದು. ಅದರ ಫಲವಾಗಿ ಪುಣ್ಯ ಸಂಪಾದನೆ ಆಗುತ್ತದೆ. ದ್ವಂದ್ವ ರೀತಿಯಆಲೋಚನೆಗಳಿಂದ ನಿರ್ಧಾರ ಕೈಗೊಳ್ಳುವಲ್ಲಿ ವಿಳಂಬ ಮುಂದುವರಿಯುವುದು.

ಮಿಥುನ: ಕೆಲಸದಲ್ಲಿನ ದಕ್ಷತೆಯಿಂದಾಗಿ ಮೇಲಧಿಕಾರಿಗಳ ಮೆಚ್ಚುಗೆ ಗಳಿಸುವಿರಿ. ಸಮಾಜಸೇವೆಗೆ ಅಲ್ಪಗಮನ ನೀಡಿದರೆ ಸಾಕೆನಿಸುವುದು. ವೈವಾಹಿಕ ಮಾತುಕತೆಗಳ ಭಿನ್ನಾಭಿಪ್ರಾಯಗಳು ದೂರಾಗುವುದು.

ಕರ್ಕಾಟಕ: ಮೇಲಧಿಕಾರಿಗಳ ಒತ್ತಾಯದ ಕೆಲಸಗಳಿಗೆ ಸಮರ್ಪಕವಾಗಿ ಉತ್ತರಗಳನ್ನು ನೀಡುವಲ್ಲಿ ಯಶಸ್ವಿಯಾಗುವಿರಿ. ಶ್ರೀ ವಿಷ್ಣುಸಹಸ್ರನಾಮವನ್ನು ಪಠಿಸಿ ಹೆಚ್ಚಿನ ಅಭಿವೃದ್ಧಿಯನ್ನು ಹೊಂದುವಲ್ಲಿ ಕಾರಣವಾಗುವುದು.

ಸಿಂಹ: ಜವಾಬ್ದಾರಿಯುತ ಹುದ್ದೆಯನ್ನು ಅಲಂಕರಿಸಲು ಅವಕಾಶ ಮತ್ತು ಆಸೆ ಇದ್ದರೂ ಸಾಮರ್ಥ್ಯದ ಕೊರತೆ ಕಾಣುವುದು. ಹೊಸಹೂಡಿಕೆ ಮತ್ತು ಒಪ್ಪಂದಗಳು ನಿಶ್ಚಿತ ಹಂತ ತಲುಪಿದ್ದಕ್ಕೆ ಸಂತೃಪ್ತಿಯ ಭಾವವಿರುವುದು.

ಕನ್ಯಾ: ಶಾರೀರಿಕ ಆಯಾಸ ಇತ್ಯಾದಿ ತೋರಿ ಬಂದರೂ ಪ್ರಗತಿ ಇರುತ್ತದೆ. ಸಾಂಸಾರಿಕ ಸಮಸ್ಯೆಗೆ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಉದ್ಯೋಗಾಕಾಂಕ್ಷಿಗಳಿಗೆ ಅಮೋಘ ಅವಕಾಶ ಲಭಿಸುವುದು.

ತುಲಾ: ಮಕ್ಕಳ ಜೊತೆ ಸಂತೋಷದಿಂದ ಕಾಲ ಕಳೆಯುವ ದಿಕ್ಕಿನಲ್ಲಿ ಕೆಲ ನಿರ್ಧಾರಗಳನ್ನು ಕೈಗೊಳ್ಳಬೇಕಾಗುವುದು ಮತ್ತು ದೈನಂದಿನ ಬದುಕಿಗೆ ವಿಶ್ರಾಂತಿ ಮಾಡಬೇಕಾಗುತ್ತದೆ. ಷೇರು ಕೊಳ್ಳುವಾಗ ಆಲೋಚಿಸುವಿರಿ.

ವೃಶ್ಚಿಕ: ವ್ಯವಹಾರದ ಪ್ರಯುಕ್ತ ಇರುವ ಪ್ರವಾಸವು ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿ ಅನಿರೀಕ್ಷಿತ ಲಾಭವನ್ನೂ ತಂದು ಕೊಡುವುದು. ವಿವಾದವಿರುವ ಬಹುತೇಕ ವಿಷಯಗಳು ಇತ್ಯರ್ಥಗೊಂಡು ಮನಸ್ಸಿಗೆ ಹಿತವೆನಿಸುವುದು.

ಧನು: ಈಗಾಗಲೇ ಒಪ್ಪಿಕೊಂಡಿರುವ ಒಪ್ಪಂದವೊಂದು ಮುರಿದು ಬೀಳದಂತೆ ಎಚ್ಚರವಹಿಸುವುದರಿಂದ ಗೌರವವು ಉಳಿಯುವುದು. ಆಡಿದ ಮಾತಿನಿಂದ ಶುಭ ಮತ್ತು ಅಶುಭದ ಮಿಶ್ರಣ ಫಲ ಅನುಭವಿಸುವಂತಾಗಲಿದೆ.

ಮಕರ: ಜೀವನದಲ್ಲಿ ಮುಂದುವರಿಯಬೇಕು, ಉನ್ನತ ಸ್ಥಾನ ಅಲಂಕರಿಸಬೇಕು ಎಂಬ ಉತ್ಕಟವಾದ ಅಭಿಲಾಷೆ ಈ ದಿನ ನಿಮ್ಮ ಕೆಲಸದಲ್ಲಿ ಕಾಣುವುದು. ಸಾಧನೆಗೆ ದೇಹಬಲಕ್ಕಿಂತ ಬುದ್ಧಿಬಲದ ತಂತ್ರಗಾರಿಕೆ ಉಪಯೋಗಿಸಿ.

ಕುಂಭ: ವ್ಯಾಪಾರದಲ್ಲಿ ಸ್ವಂತ ತೀರ್ಮಾನದಿಂದ ಮುಂದುವರಿದರೆ ಧನಾದಾಯ ಹೆಚ್ಚಲಿದೆ. ಸಾಕಷ್ಟು ಋಣ ಮುಕ್ತರಾಗುವ ಉದ್ದೇಶದಿಂದ ಮಿತವ್ಯಯಿಗಳಾಗಿರಿ. ಲಲಿತ ಕಲೆಗಳಲ್ಲಿ ಸಫಲತೆಯ ದಾರಿಗಳು ಒದಗಲಿವೆ.

ಮೀನ: ಜೀವನದಲ್ಲಿದ್ದ ನಿರುತ್ಸಾಹವನ್ನು ದೂರ ಮಾಡಿಕೊಂಡು ಹೆಚ್ಚಿನ ಅವಕಾಶಗಳನ್ನು ನಿಮ್ಮದಾಗಿಸಿಕೊಳ್ಳಿರಿ. ಮನಸ್ಸಿಗೆ ಮುದ ತರುವ ಸಂಗತಿಗಳು ಜರುಗಲಿದೆ. ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ನಿಮ್ಮ ಆಸಕ್ತಿ ಹೆಚ್ಚಲಿದೆ.

ಪದಬಂಧ 5450

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವ್ಯತ್ಯಾಸ ಈ ತರ ಬಂದಿದೆ (3)
3. ಮೊಸರು ಮಾರುವವಳಿಗೆ ಸಿಡಿದಿರುವ ರಾಡಿ (3)
5.ಅರಸನಿಲ್ಲಿ ತಿರುಗಿದ್ದಾನೆ (2)
6. ಜನರ ನಡುವೆಯೇ ಈ ಆಳು ನುಸುಳಿಹನಲ್ಲಾ? (3)
8.ಉದಾರಿ ತೋರಿಸಿದ ರಸ್ತೆ (2)
9.ಚೇಲಾ ಅಲ್ಲ! ಶ್ರೀ ಕೃಷ್ಣನ ಸ್ನೇಹಿತ (3)
10.ಇಳೆಯಲ್ಲಿ ಸಿಕ್ಕಿರುವ ಸ್ನೇಹಿತ (3)
11.ಇದು ಒಳ್ಳೆಯ ದಿನ ಬಿಡಿ (3)
12.ಗುರುಗುಟ್ಟುತ್ತಿರುವ ಗಂಡು ಕುರಿ (3)
14.ಶಿಕಾರಿ ಮಾಡುತ್ತಲೇ ತಲುಪಿದ್ದು ವಿಶ್ವನಾಥನ ಸನ್ನಿಧಿ (2)
15.ಕಳ್ಳನಿಗೆ ಅಂಟಿಕೊಂಡಿರುವ ಅಪವಾದ (3)
16.ಹರಿಯುವಂತಹ ವಸ್ತು (2)
17.ಪಾಪ ಮಾಡಿದವನು ಇಲ್ಲಿದ್ದಾನೆ (3)
18.ಮಿತಿಗೆ ಒಳಪಟ್ಟ ಕನ್ನಡಿಗರ ಕಮಿಟಿ! (3)

ಮೇಲಿಂದ ಕೆಳಕ್ಕೆ
2.ಪರಾಕು ಹೇಳಿದರೂ ಕಪಾಳಮೋಕ್ಷ! (4)
4.ದಾಯಾದಿ ಹತ್ತಿರ ಕಾಣಿಸಿರುವ ಗುಂಪು (4)
6.ನೀರಿನಿಂದಾದ ಅನಿಲ (5)
7.ಇದು ಹಾಸ್ಯ ಪ್ರಹಸನ (5)
11.ಶಿಕ್ಷೆ ಸಿಕ್ಕರೂ ಒಳ್ಳೆಯ ಶಿಕ್ಷಣ ಪಡೆದವ (4)
13.ದರಿದ್ರನ ಹಣ ಹೂಳಿದ ಸ್ಮಶಾನ (4)

1	2		■	■	■	3	4	
■		■	■	■	■	■		■
5		■	6		7	■	8	
■	9			■	10			■
■	■	■		■		■	■	■
■	11			■	12		13	■
14		■	15			■	16	
■		■	■	■	■	■		■
17			■	■	■	18		

5449ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಗಂತುಕ 3.ಪರಂಧಾಮ 5.ಸವತಿ 6.ಹವನ 8.ಲೋಲಕ 9.ಪತ್ರ 10.ಚುಂಬು 11.ಕಣಜ 12.ಕಡಿಮೆ 14.ವಕ್ತಾರ 16.ಕಡವರ 17.ನಟ್ಟಿರುಳು

ಮೇಲಿಂದ ಕೆಳಕ್ಕೆ:
1.ಆಗ್ರಹ 2.ಕಸ 3.ಪತಿ 4.ಮರುಕ 7.ನಕ್ಷತ್ರಪುಂಜ 8.ಲೋಹಚುಂಬಕ 11.ಕನಕ 13.ಮೆದುಳು 14.ವರ 15.ರನ

ಸುಡೊಕು 5836

	8			9		5		
6		5					1	
		2	1		5		7	6
		4	8		3		5	
	5					1		9
2				5			6	
1			9					
	3					6		1
8		6		3	1		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5835 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸೇತುವೆ ಜಲಾವೃತ: ನೀರಿನ ಹರಿವು ಇಳಿದ ಬಳಿಕ ವೃದ್ಧೆಯ ಶವಸಂಸ್ಕಾರ

ಚಿಂಚೋಳಿ, ಚಿತ್ತಾಪುರದಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಭರ್ತಿಯಾದ ಜಲಾಶಯಗಳಿಂದ ನದಿಗೆ ಹರಿದ ನೀರಿನಿಂದ ಪ್ರವಾಹ
- ತುಂಬಿ ಹರಿದ ನಾಗಾವಿ ಗ್ರಾಮದ ಬಳಿಯ ಹಳ್ಳ
- ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಐದು ಮನೆಗಳಿಗೆ ಹಾನಿ

ಕಲಬುರಗಿ: ಜಿಲ್ಲೆಯ ಚಿಂಚೋಳಿ ಹಾಗೂ ಚಿತ್ತಾಪುರ ತಾಲ್ಲೂಕುಗಳಲ್ಲಿ ಶುಕ್ರವಾರ ರಾತ್ರಿ ಭಾರಿ ಮಳೆಯಾಗಿದ್ದರಿಂದ ಶನಿವಾರ ಬೆಳಿಗ್ಗೆ ಜಲಾಶಯಗಳು ಭರ್ತಿಯಾಗಿವೆ. ನೀರನ್ನು ನದಿಗೆ ಹರಿಸಿದ್ದರಿಂದ ಪ್ರವಾಹ ಪರಿಸ್ಥಿತಿ ಎದುರಾಗಿದ್ದು, ಹಲವು ಸೇತುವೆಗಳು ಮುಳುಗಿದ್ದವು.

ಚಿಂಚೋಳಿ ತಾಲ್ಲೂಕಿನ ಜೀವನದಿ ಮುಲ್ಲಾಮಾರಿ ಮತ್ತೆ ಉಕ್ಕೇರಿ ಹರಿಯಿತು. ಇದರಿಂದಾಗಿ ಚಿಮ್ಮನಚೋಡ, ತಾಜಲಾಪುರ ಹಾಗೂ ಗಾರಂಪಳ್ಳಿ ಗ್ರಾಮದ ಸೇತುವೆಗಳು ಮುಳುಗಡೆಯಾಗಿದ್ದವು.

ಗಾರಂಪಳ್ಳಿ ಗ್ರಾಮದಲ್ಲಿ ಹಳೆ ಊರು ಹಾಗೂ ಹೊಸ ಊರಿನ ಮಧ್ಯೆ ಮುಲ್ಲಾಮಾರಿ ನದಿಗೆ ನಿರ್ಮಿಸಿದ ಸೇತುವೆ ಮುಳುಗಿತ್ತು. ಮೃತಪಟ್ಟಿದ್ದ ನರಸಮ್ಮ ಶಿವರಾಯ ಮೇಲಿನಕೇರಿ (85) ಎಂಬ ವೃದ್ಧೆಯ ಅಂತ್ಯಸಂಸ್ಕಾರಕ್ಕೆ ಪ್ರವಾಹ ಅಡ್ಡಿಯಾಯಿತು.

ಹಳೆ ಊರು ಪಕ್ಕದಿಂದ ಸ್ಮಶಾನ ಭೂಮಿಗೆ ತಲುಪಿ ಅಂತ್ಯ ಸಂಸ್ಕಾರ ನಡೆಸಬೇಕಾಗಿತ್ತು. ಆದರೆ, ಶವ ಸಾಗಿಸಲು ಸೇತುವೆಯ ಮೇಲಿನಿಂದ ಹರಿಯುತ್ತಿರುವ ನೀರು ಅಡ್ಡಿಯಾಗಿತ್ತು. ಶನಿವಾರ ಮಧ್ಯಾಹ್ನದ ಬಳಿಕ ನೀರಿನ ಪ್ರವಾಹ ತಗ್ಗಿದ್ದರಿಂದ ಸೇತುವೆ ಸಂಚಾರಕ್ಕೆ ಮುಕ್ತಗೊಂಡ ಬಳಿಕ ಅಂತ್ಯಕ್ರಿಯೆ ನಡೆಸಲಾಯಿತು.



ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಗಾರಂಪಳ್ಳಿ ಗ್ರಾಮದ ಸೇತುವೆ ಶನಿವಾರ ಜಲಾವೃತವಾಗಿತ್ತು

ಚಿತ್ತಾಪುರ ತಾಲ್ಲೂಕಿನಲ್ಲಿ ಭಾರಿ ಮಳೆ ಸುರಿದಿದ್ದರಿಂದ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಐತಿಹಾಸಿಕ ನಾಗಾವಿ ಗ್ರಾಮದ ಬಳಿಯ ಹಳ್ಳ ತುಂಬಿ ಹರಿಯಿತು.

ಸತತ ಮಳೆಯಿಂದಾಗಿ ಬೀದರ್ ಜಿಲ್ಲೆಯ ಬಸವಕಲ್ಯಾಣ ಪಟ್ಟಣದಲ್ಲಿ ಐದು ಮನೆಗಳಿಗೆ ಹಾನಿ ಉಂಟಾಗಿದೆ.

ಕಾವೇರಿ ಕಿಚ್ಚು; ಸಕ್ಕರೆ ನಗರಿ ಸ್ತಬ್ಧ

ಒಂದನೇ ಪುಟದಿಂದ...

ಆಟೊರಿಕ್ಷಾ, ಖಾಸಗಿ ಬಸ್, ಸಾರಿಗೆ ಸಂಸ್ಥೆ ಬಸ್‌ಗಳು ರಸ್ತೆಗೆ ಇಳಿಯಲಿಲ್ಲ. ರಾಷ್ಟ್ರೀಯ ಹೆದ್ದಾರಿ, ವಿವಿ ರಸ್ತೆ, ಆರ್‌ಪಿ ರಸ್ತೆ, ನೂರಡಿ ರಸ್ತೆಗಳು ವಾಹನ ಸಂಚಾರವಿಲ್ಲದೇ ಬಿಕೋ ಎನ್ನುತ್ತಿದ್ದವು. ಎಕ್ಸ್‌ಪ್ರೆಸ್‌ವೇ ಸಂಚಾರ ಎಂದಿನಂತಿದ್ದ ಕಾರಣ ಮೈಸೂರು– ಬೆಂಗಳೂರು ನಡುವೆ ವಾಹನಗಳಿಗೆ ತೊಂದರೆಯಾಗಲಿಲ್ಲ. ಸರ್ವೀಸ್ ರಸ್ತೆಯಲ್ಲಿ ವಾಹನಗಳಿಗೆ ನಗರದ ಹೊರವಲಯದಲ್ಲೇ ಬದಲಿ ಮಾರ್ಗ ಕಲ್ಪಿಸಲಾಗಿತ್ತು.

ಬಹುತೇಕ ಖಾಸಗಿ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ವಿದ್ಯಾರ್ಥಿಗಳೂ ಹೋರಾಟದಲ್ಲಿ ಪಾಲ್ಗೊಂಡಿದ್ದರಿಂದ ಜಿಲ್ಲಾಡಳಿತ ರಜೆ ಘೋಷಿಸದಿದ್ದರೂ ಕಾಲೇಜುಗಳು ನಡೆಯಲಿಲ್ಲ. ಮಾಲ್, ಪೆಟ್ರೋಲ್ ಬಂಕ್‌ಗಳು ಬಂದ್ ಆಗಿದ್ದವು. 4ನೇ ಶನಿವಾರವಾಗಿದ್ದರಿಂದ ಸರ್ಕಾರಿ ಕಚೇರಿಗಳಲ್ಲಿ ಚಟುವಟಿಕೆ ಇರಲಿಲ್ಲ.

ಮಾತಿನ ಚಕಮಕಿ: ನಗರ ಪ್ರವೇಶಿಸುವ ಮಾರ್ಗದಲ್ಲಿ ಪ್ರತಿಭಟನೆಗೆ ಬರುತ್ತಿದ್ದ ರೈತರನ್ನು ಕ್ಷಿಪ್ರ ಕಾರ್ಯಾಚರಣೆ ಪಡೆ, ಜಿಲ್ಲಾ ಸಶಸ್ತ್ರ ಮೀಸಲು ಪಡೆ, ಕೆಎಸ್‌ಆರ್‌ಪಿ ಸಿಬ್ಬಂದಿ ತಡೆದರು. ಅದರಿಂದ ಆಕ್ರೋಶಗೊಂಡ ರೈತರು ಪೊಲೀಸರೊಂದಿಗೆ ವಾಗ್ವಾದ ನಡೆಸಿದರು. ಮುಖಂಡರಿಂದ ಆಕ್ಷೇಪ ವ್ಯಕ್ತವಾದ ಬಳಿಕ ಅವರನ್ನು ಬಿಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ಸಿಬ್ಬಂದಿಗೆ ಸೂಚಿಸಿದರು.



ಮಂಡ್ಯದ ಜೆ.ಸಿ ವೃತ್ತದಲ್ಲಿ ರೈತರು ಎಮ್ಮೆಗಳೊಂದಿಗೆ ಪ್ರತಿಭಟನೆ ನಡೆಸಿದರು

ಸಿ.ಎಂ ಅಂಕಲ್, ನೀರು ಬಿಡಬೇಡಿ ಪ್ಲೀಸ್

ಕಾವೇರಿ ಹೋರಾಟದಲ್ಲಿ ಮಕ್ಕಳು ಕೂಡ ಪಾಲ್ಗೊಂಡಿದ್ದು ಗಮನ ಸೆಳೆಯಿತು. ಖಾಲಿ ಕೊಡ ಹೊತ್ತು ಮೆರವಣಿಗೆಯಲ್ಲಿ ಬಂದ ಕ್ಯಾತುಂಗೆರೆ ಮಕ್ಕಳು 'ಕಾವೇರಿ ನೀರು ನಮ್ಮದು' ಎಂದು ಘೋಷಣೆ ಕೂಗಿದರು.

'ಸಿ.ಎಂ, ಅಂಕಲ್ ತಮಿಳುನಾಡಿಗೆ ನೀರು ಬಿಡಬೇಡಿ ಪ್ಲೀಸ್. ಕುಡಿಯಲು ನೀರು ಸಿಗುತ್ತಿಲ್ಲ, ಗದ್ದೆಗೆ ನೀರಿಲ್ಲ, ಹಸು ಕುಡಿಯಲೂ ನೀರಿಲ್ಲ. ತಮಿಳುನಾಡಿಗೆ ನೀರು ಕೊಡುವುದನ್ನು ನಿಲ್ಲಿಸಿ' ಎಂದು ಮಕ್ಕಳು ಒತ್ತಾಯಿಸಿದರು. ಬೀಡಿ ಕಾರ್ಮಿಕರ ಕಾಲೊನಿಯ ಮುಸ್ಲಿಂ ಮಕ್ಕಳೂ ಪಾಲ್ಗೊಂಡರು.

ಮಣ್ಣು ತಿಂದ ಕಾರ್ಯಕರ್ತ: ಬಿಜೆಪಿ ಕಾರ್ಯಕರ್ತ ಶಿವಕುಮಾರ್ ಆರಾಧ್ಯ ಮಣ್ಣು ತಿಂದು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. 'ಕಾಂಗ್ರೆಸ್ ಸರ್ಕಾರ ರೈತರಿಗೆ ಮಣ್ಣು ತಿನ್ನಿಸುತ್ತಿದೆ ಕಣಪ್ಪೋ, ರೈತರ ಬಾಯಿಗೆ ಮಣ್ಣು ಹಾಕಿದರಲ್ಲಪ್ಪೋ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಮದ್ದೂರು ಪಟ್ಟಣದ ಬಂದ್‌ನಲ್ಲೂ ಸಂಘಟನೆಗಳ ನೂರಾರು ಮಂದಿ ಮೆರವಣಿಗೆ ನಡೆಸಿದರು.

ಸೇಡಂ: ಇ.ಇ ಸೇರಿ ಮೂವರು ಎಂಜಿನಿಯರ್‌ಗಳ ಅಮಾನತು

ಪ್ರಜಾವಾಣಿ ವಾರ್ತೆ

ಕಲಬುರಗಿ: ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಕೈಗೆತ್ತಿಕೊಂಡ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಯಲ್ಲಿ ಅವ್ಯವಹಾರ ನಡೆಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಜಿಲ್ಲೆಯ ಪಂಚಾಯತ್‌ರಾಜ್ ಎಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಮೋನಪ್ಪ ಸೇರಿದಂತೆ ಮೂವರು ಎಂಜಿನಿಯರ್‌ಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅಮಾನತು ಮಾಡಿದೆ.

2020–21ನೇ ಸಾಲಿನಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ₹ 1 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾದ ಸೇಡಂ ತಾಲ್ಲೂಕಿನ ಬಿಬ್ಬಳ್ಳಿ ಗ್ರಾಮದ ಚರಂಡಿ ನಿರ್ಮಾಣ, ಸೇಡಂ ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದಿಂದ ಉಡಗಿಯವರೆಗಿನ ರಸ್ತೆ ಅಭಿವೃದ್ಧಿ ಹಾಗೂ ಸೇಡಂ ಮುಖ್ಯ ರಸ್ತೆಯಿಂದ ಆಡಕಿ ಗ್ರಾಮದ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನದವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪ ಕೇಳಿ ಬಂದಿತ್ತು.



ಮೋನಪ್ಪ



ಹನುಮಪ್ಪ

ಹೀಗಾಗಿ, ಪಿಆರ್‌ಇ ವಿಭಾಗದ ಇಇ ಮೋನಪ್ಪ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹನುಮಪ್ಪ ಅಡವಣಿ, ಸೇಡಂ ಉಪವಿಭಾಗದ ಕಿರಿಯ ಎಂಜಿನಿಯರ್ ಮಿರಾಜುದ್ದೀನ್ ಪಟೇಲ್ ಅವರನ್ನು ಅಮಾನತುಗೊಳಿಸಲಾಗಿದೆ.

50 ಶಾಸಕರ ಅಹವಾಲು ಆಲಿಸಿದ ಸಿ.ಎಂ

ಬೆಂಗಳೂರು: ಪ್ರತಿ ಶನಿವಾರ ಶಾಸಕರು ಮತ್ತು ಸಂಸದರನ್ನು ಭೇಟಿ ಮಾಡಿ ಅಹವಾಲು ಆಲಿಸಲು ನಿರ್ಧರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೊದಲ ದಿನವೇ 50 ಮಂದಿಯನ್ನು ಭೇಟಿ ಮಾಡಿದ್ದಾರೆ.

ಇದೇ ಶನಿವಾರದಿಂದ ಶಾಸಕರು, ಸಂಸದರ ಭೇಟಿ ಆರಂಭಿಸಲಾಗಿದೆ. ಅಹವಾಲು ಆಲಿಸುವುದಕ್ಕಾಗಿಯೇ ಬೆಳಿಗ್ಗೆ 11ರಿಂದ ಮಧ್ಯಾಹ್ನ 2 ಗಂಟೆವರೆಗೂ ಸಮಯ ಮೀಸಲಿಟ್ಟಿದ್ದರು ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

53 ಸಾವಿರ ಮಂದಿಗಿಲ್ಲ 'ಗೃಹಲಕ್ಷ್ಮಿ'

ಒಂದನೇ ಪುಟದಿಂದ...

'ಯಾವ ಕಾರಣಕ್ಕೆ ಹಣ ಬಂದಿಲ್ಲ ಎಂಬುದು ತಿಳಿಯುತ್ತಿಲ್ಲ. ದುಡಿಮೆ ಬಿಟ್ಟು ನಿತ್ಯ ಬ್ಯಾಂಕು, ಸೇವಾ ಕೇಂದ್ರ, ಸಿಡಿಪಿಒ ಕಚೇರಿಗೆ ಅಲೆದಾಡಿ ಕಾಲು ಬಿದ್ದು ಹೋಗಿವೆ. ತಾಂತ್ರಿಕ ಸಮಸ್ಯೆಯಿಂದ ಹಣ ಬಂದಿಲ್ಲ ಎಂದು ಸೇವಾ ಕೇಂದ್ರದ ಸಿಬ್ಬಂದಿ ಹೇಳುತ್ತಾರೆ' ಎಂದು ಹಾವನೂರು ಗ್ರಾಮದ ದುರ್ಗವ್ವ ಬನ್ನಿಮಟ್ಟಿ ಮತ್ತು ಹೊನ್ನವ್ವ ಕೆಂಗನಿಂಗಪ್ಪನವರ ಸಮಸ್ಯೆ ತೋಡಿಕೊಂಡರು.

ತಾಂತ್ರಿಕ ಕಾರಣ: 'ಬ್ಯಾಂಕ್ ಖಾತೆ ಸಂಖ್ಯೆ ತಪ್ಪಾಗಿದ್ದರೆ, ಆಧಾರ್ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆ ಜೋಡಣೆ ಆಗಿರದಿದ್ದರೆ, ಬ್ಯಾಂಕ್ ಖಾತೆ ನಿಷ್ಕ್ರಿಯವಾಗಿದ್ದರೆ ಮತ್ತು ಬೇರೆ ಬೇರೆ ತಾಂತ್ರಿಕ ಕಾರಣಗಳಿಂದ ಹಣ ಪಾವತಿ ಆಗುವುದಿಲ್ಲ. ಹಣ ಸಿಗದಿರುವ ಜನರು ತಮ್ಮ ಬ್ಯಾಂಕ್ ಖಾತೆ ಮತ್ತು ದಾಖಲೆಗಳನ್ನು ಪುನರ್ ಪರಿಶೀಲಿಸಿಕೊಳ್ಳಬೇಕು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ತಿಳಿಸಿದರು.

'ಹಾವೇರಿ ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಯೋಜನೆಯಡಿ 3.55 ಲಕ್ಷ ಮಂದಿ ನೋಂದಣಿ ಮಾಡಿಕೊಂಡಿದ್ದು, 2.87 ಲಕ್ಷ ಫಲಾನುಭವಿಗಳ ಖಾತೆಗೆ ಹಣ ಜಮೆ ಮಾಡಲು ಕ್ರಮ ಕೈಗೊಂಡಿದ್ದೇವೆ. 'ಅಕೌಂಟ್ ಸೀಡಿಂಗ್' ಆಗಿರದ 14 ಸಾವಿರ ಫಲಾನುಭವಿಗಳಲ್ಲಿ ಶೇ 50ರಷ್ಟು ಮಂದಿಯ ಖಾತೆಗಳನ್ನು ಈಗಾಗಲೇ ಅಪ್‌ಡೇಟ್ ಮಾಡಿಸಿದ್ದೇವೆ. ಉಳಿದವರಿಗೂ ಹಂತ–ಹಂತವಾಗಿ ಹಣ ಪಾವತಿಯಾಗಲಿದೆ' ಎಂದು ಇಲಾಖೆಯ ಉಪನಿರ್ದೇಶಕ ಶ್ರೀನಿವಾಸ ಆಲದರ್ತಿ ತಿಳಿಸಿದರು.



ಹಾವೇರಿ ತಾಲ್ಲೂಕಿನ ಹಾವನೂರು ಗ್ರಾಮದ 'ಗ್ರಾಮ ಒನ್' ಕೇಂದ್ರದಲ್ಲಿ ಗೃಹಲಕ್ಷ್ಮಿ ಯೋಜನೆಯ ಹಣ ಬಾರದಿರುವುದನ್ನು ವಿಚಾರಿಸುತ್ತಿರುವ ಫಲಾನುಭವಿಗಳು –ಪ್ರಜಾವಾಣಿ ಚಿತ್ರ

ಗೃಹಲಕ್ಷ್ಮಿ ಯೋಜನೆಯ ಅಂಕಿಅಂಶ

1.33 ಕೋಟಿ ಒಟ್ಟು ಪಡಿತರ ಚೀಟಿದಾರರು	1.14 ಕೋಟಿ ನೋಂದಣಿ ಮಾಡಿಕೊಂಡವರು	94.79 ಲಕ್ಷ ಮಂಜೂರಾತಿ ಪಡೆದ ಫಲಾನುಭವಿಗಳು
89.71 ಲಕ್ಷ ಫಲಾನುಭವಿಗಳ ಖಾತೆಗೆ ಹಣ ಜಮೆ ಆಗಿದೆ	ಗೃಹಲಕ್ಷ್ಮಿ ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000	53,106 ಫಲಾನುಭವಿಗಳ ಖಾತೆಗೆ ಹಣ ಜಮೆ ಆಗಿಲ್ಲ

ಪಡಿತರ ಚೀಟಿ ತಿದ್ದುಪಡಿಯಿಂದ ಸಮಸ್ಯೆ

'ಮೃತರ ಹೆಸರು ತೆಗೆದುಹಾಕಲು, ಹೊಸದಾಗಿ ಮದುವೆಯಾದವರ ಹೆಸರು ಸೇರಿಸಲು, ಅತ್ತೆ ಬದಲು ಸೊಸೆಯನ್ನು, ಪತಿಯ ಬದಲು ಪತ್ನಿಯನ್ನು 'ಯಜಮಾನಿ' ಎಂದು ನಮೂದಿಸಲು ಪಡಿತರ ಚೀಟಿಯಲ್ಲಿ ಸಾವಿರಾರು ಜನರು ತಿದ್ದುಪಡಿ ಮಾಡಿಸಿದ್ದಾರೆ. ಇಂಥವರಿಗೆ ಗೃಹಲಕ್ಷ್ಮಿ ಸೌಲಭ್ಯಕ್ಕಾಗಿ 'ಸೇವಾಸಿಂಧು' ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಪಡಿತರ ಚೀಟಿಯ ತಿದ್ದುಪಡಿ, ಪೋರ್ಟಲ್‌ನಲ್ಲಿ ಅಪ್‌ಡೇಟ್ ಆಗದಿರುವುದೇ ಸಮಸ್ಯೆಗೆ ಕಾರಣ' ಎಂದು 'ಗ್ರಾಮ ಒನ್' ಸೇವಾ ಕೇಂದ್ರದ ಸಿಬ್ಬಂದಿ ತಿಳಿಸಿದರು.

ಗೃಹಲಕ್ಷ್ಮಿ ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000

ಗೃಹಲಕ್ಷ್ಮಿ ಯೋಜನೆ: ಮನೆ ಯಜಮಾನಿ ಬ್ಯಾಂಕ್ ಖಾತೆಗೆ ₹2000

ಮಹಿಳೆಯರ ಸ್ವಾವಲಂಬನೆಗೆ ದಿಟ್ಟ ಹೆಜ್ಜೆ

ಪ್ರಗತಿಯ ಹಾದಿಯಲ್ಲಿ ಯಾರೂ ಅವಕಾಶ ವಂಚಿತರಾಗಬಾರದು, ಸಮಾಜದ ಪ್ರತಿಯೊಬ್ಬರಿಗೂ ಪ್ರಗತಿಯ ಫಲಗಳು ತಲುಪಬೇಕು, ಎಲ್ಲರೂ ಅಭಿವೃದ್ಧಿಯ ಪಾಲುದಾರರಾಗಬೇಕು ಎನ್ನುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯಸರ್ಕಾರ ಅಧಿಕಾರಕ್ಕೆ ಬಂದು ನೂರು ದಿನಗಳನ್ನು ಪೂರೈಸಿ ಮುನ್ನಡೆಯುತ್ತಿದೆ. ಚುನಾವಣೆಗೆ ಮುನ್ನ ಘೋಷಿಸಿದ್ದ 'ಪಂಚ ಖಾತ್ರಿ' ಯೋಜನೆಗಳಲ್ಲಿ ನಾಲ್ಕು ಯೋಜನೆಗಳನ್ನು ಈಗಾಗಲೇ ಅನುಷ್ಠಾನಗೊಳಿಸಿ ನುಡಿದಂತೆ ನಡೆದಿದೆ. ಆದಷ್ಟು ಬೇಗನೆ ಯುವನಿಧಿ ಯೋಜನೆಯನ್ನೂ ಜಾರಿಗೆ ತರುವ ಸಿದ್ಧತೆಯಲ್ಲಿದೆ.

ಸಮಾಜದ ಕೆಳಸ್ತರದಲ್ಲಿರುವ ಮಹಿಳೆಯರಿಗೆ ಆರ್ಥಿಕ ಸಹಾಯ ಕಲ್ಪಿಸುವ ಮಹತ್ವದ 'ಗೃಹಲಕ್ಷ್ಮಿ ಯೋಜನೆ'ಯನ್ನು ಜಾರಿಗೊಳಿಸಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಡಲು ರಾಜ್ಯ ಸರ್ಕಾರ ಮುಂದಾಗಿದೆ. ಮನೆ ಯಜಮಾನಿಯ ಬ್ಯಾಂಕ್ ಖಾತೆಗೆ ಮಾಸಿಕ ₹2000 ವರ್ಗಾಯಿಸುವ ಗೃಹಲಕ್ಷ್ಮಿ ಯೋಜನೆಗೆ ಅರಮನೆ ನಗರಿ ಮೈಸೂರಲ್ಲಿ ಇತ್ತೀಚೆಗೆ ಅಧಿಕೃತವಾಗಿ ಚಾಲನೆ ನೀಡಲಾಯಿತು. ಈ ಕಾರ್ಯಕ್ರಮಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಾಕ್ಷಿಯಾಗಿದ್ದರು.

'ರಕ್ಷಾ ಬಂಧನದ ದಿನವೇ ಕನ್ನಡ ನಾಡಿನ ಕೋಟ್ಯಂತರ ಅಕ್ಕ–ತಂಗಿಯರಿಗೆ ಕೊಟ್ಟ ಮಾತನ್ನು ಈಡೇರಿಸಿದ್ದೇವೆ. ನಾಲ್ಕನೇ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ದೇಶದ ಅತಿ ದೊಡ್ಡ ಸಮಾಜಮುಖಿ ಕಾರ್ಯಕ್ರಮ ಇದು' ಎಂದು ಅವರು ಬಣ್ಣಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಭಾರತದ ರಾಜಕೀಯ ಇತಿಹಾಸದಲ್ಲೇ ಗೃಹಲಕ್ಷ್ಮಿ ಯೋಜನೆ ದೊಡ್ಡ ಪ್ರಮಾಣದ ಜನೋಪಯೋಗಿ ಕಾರ್ಯಕ್ರಮ' ಎಂದು ವರ್ಣಿಸಿದ್ದರು. ಅಲ್ಲದೇ, ಖಾತ್ರಿ ಯೋಜನೆಗಳ ಜಾರಿಯಿಂದ ರಾಜ್ಯ ದಿವಾಳಿಯೇನೂ ಆಗಿಲ್ಲ. ಇತರ ಕಾರ್ಯಕ್ರಮಗಳಿಗೂ ಅನುದಾನ ಒದಗಿಸುತ್ತಿದ್ದೇವೆ. ಸತ್ಯವೀಗ ನಿಮ್ಮ ಮುಂದಿದೆ ಎಂದು ಟೀಕಾಕಾರರ ಬಾಯಿ ಮುಚ್ಚಿಸಿದ್ದು ಆಗಿದೆ.

ಕರ್ನಾಟಕದಲ್ಲಿ ಗೃಹಲಕ್ಷ್ಮಿ ಯೋಜನೆಯ ಒಟ್ಟು ಫಲಾನುಭವಿಗಳ ಸಂಖ್ಯೆ 1.28 ಕೋಟಿ ಇದ್ದು, ಅದರಲ್ಲಿ ನೋಂದಾಯಿತ ಮಹಿಳೆಯ ಸಂಖ್ಯೆ ಸುಮಾರು 1.13 ಕೋಟಿ ಆಗಿದೆ. ಉಳಿದವರ ನೋಂದಣಿ ಆಗಿಬೇಕಿದ್ದು, ತಾಂತ್ರಿಕ ಸಮಸ್ಯೆಯಿಂದ ನೋಂದಣಿಗೆ ತಾತ್ಕಾಲಿಕ ತಡೆ ನೀಡಲಾಗಿದೆ. ಆಧಾರ್ ಕಾರ್ಡ್ ಲಿಂಕ್ ಆಗಿರುವ ಮನೆಯೊಡತಿಯರ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳು ₹2 ಸಾವಿರವನ್ನು ನೇರ ಜಮೆ (ಡಿಬಿಟಿ) ಮಾಡುವ ಈ ಯೋಜನೆ ರಾಜ್ಯದ ಕೋಟ್ಯಂತರ ಕುಟುಂಬಗಳಲ್ಲಿ ಬೆಳಕು ತರಲಿದೆ. ಪ್ರತಿ ಮಾಸ ಮನೆಯೊಡತಿ ಕೈಗೆ ಸಿಗುವ 2 ಸಾವಿರ ಹಣ ವಾರ್ಷಿಕ ₹24 ಸಾವಿರ ಆಗಲಿದ್ದು, ಅವರ ಆರ್ಥಿಕತೆಯ ಚಲನಶೀಲತೆಗೆ ನೆರವಾಗಲಿದೆ.





ಗೃಹಲಕ್ಷ್ಮಿ ಯೋಜನೆ ಮೂಲಕ ಮಹಿಳಾ ಆರ್ಥಿಕ ಸಬಲೀಕರಣದತ್ತ ದಿಟ್ಟ ಹೆಜ್ಜೆ ಇಟ್ಟಿರುವ ರಾಜ್ಯ ಸರ್ಕಾರ, ಈ ಯೋಜನೆ ವ್ಯಾಪ್ತಿಗೆ ಅಂತ್ಯೋದಯ, ಬಿಪಿಎಲ್ ಹಾಗೂ ಎಪಿಎಲ್ ಕಾರ್ಡುದಾರರನ್ನೂ ಒಳಪಡಿಸಿದೆ. ಈಗಾಗಲೇ ಒಂದು ಕೋಟಿಗೂ ಅಧಿಕ ಮಹಿಳೆಯರು ನೋಂದಾಯಿಸಿಕೊಂಡಿರುವ ಯೋಜನೆಯಲ್ಲಿ ರಾಜ್ಯದ ಶೇ.85 ರಷ್ಟು ಮಹಿಳೆಯರು ಯೋಜನೆ ವ್ಯಾಪ್ತಿಗೆ ಒಳಪಡುವ ನಿರೀಕ್ಷೆಯಿದೆ.

ಅರ್ಜಿ ಸಲ್ಲಿಸುವ ವಿಧಾನ

ಆನ್‌ಲೈನ್‌ನಲ್ಲಿ ಸೇವಾ ಸಿಂಧು ಪೋರ್ಟಲ್ ಮೂಲಕ ಅಥವಾ ನಾಡ ಕಚೇರಿಗಳಲ್ಲಿ ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿದಾರರು ಪಡಿತರ ಚೀಟಿ ಸಂಖ್ಯೆ, ಮನೆಯ ಯಜಮಾನಿ ಹಾಗೂ ಪತಿಯ ಆಧಾರ್ ಕಾರ್ಡ್ ಸಂಖ್ಯೆ, ಆಧಾರ್ ಲಿಂಕ್ ಆಗಿರುವ ಬ್ಯಾಂಕ್ ಖಾತೆ ವಿವರಗಳನ್ನು ಆಫ್ ಲೈನ್ ಅರ್ಜಿಯೊಂದಿಗೆ ಸಲ್ಲಿಸಬೇಕು. ಫಲಾನುಭವಿಗಳು ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಖಾತೆಯನ್ನು ಕಡ್ಡಾಯವಾಗಿ ಲಿಂಕ್ ಮಾಡಿರಬೇಕು.

ನಿಜವಾದ ಫಲಾನುಭವಿಗಳ್ಯಾರು?

ಕುಟುಂಬದ ಯಜಮಾನಿ ಎಂದು ನಮೂದಿಸಿರುವವರು ಮಾತ್ರ ಗೃಹಲಕ್ಷ್ಮಿ ಯೋಜನೆ ಫಲಾನುಭವಿಯಾಗಲಿದ್ದಾರೆ. ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಮಹಿಳೆಯರಿದ್ದರೆ, ಒಬ್ಬ ಮಹಿಳೆಗೆ ಮಾತ್ರ ಈ ಯೋಜನೆ ಅನ್ವಯವಾಗಲಿದೆ. ವೃದ್ಧಾಪ್ಯ ವೇತನ, ವಿಧವಾ ಮಾಸಾಶನ, ಅಂಗವಿಕಲರ ಪಿಂಚಣಿ ಸೇರಿದಂತೆ ಸಾಮಾಜಿಕ ಭದ್ರತಾ ಯೋಜನೆಯಡಿ ಯಾವುದೇ ಮಾಸಾಶನ ಪಡೆಯುತ್ತಿದ್ದರೂ ಈ ಯೋಜನೆಯಡಿ ಮನೆಯೊಡತಿ 2 ಸಾವಿರ ರೂ. ಪಡೆಯಲು ಅರ್ಹತೆ ಹೊಂದಿರುತ್ತಾರೆ.


ಆದರೆ, ಕುಟುಂಬದ ಯಜಮಾನಿ ಅಥವಾ ಪತಿ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸುವವರಾಗಿದ್ದರೆ, ಆದಾಯ ತೆರಿಗೆ ಪಾವತಿದಾರರಾಗಿದ್ದರೆ ಆ ಕುಟುಂಬದ ಯಜಮಾನಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

ಇನ್ನೂ ಫಲಾನುಭವಿಗಳು ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಿದ್ದರೆ ಹಾಗೂ ಈಗ ಅವರು ನಿವೃತ್ತರಾಗಿದ್ದು ಪಿಂಚಣಿ ಪಡೆಯುತ್ತಿದ್ದವರೂ ಸಹ ಈ ಯೋಜನೆಯಲ್ಲಿ ನೋಂದಾಯಿಸಿಕೊಳ್ಳಬಹುದು. ಆದರೆ, ಅವರು ಆದಾಯ ತೆರಿಗೆ ಪಾವತಿಸುವವರು ಆಗಿರಬಾರದು. ಆಸ್ತಿ ತೆರಿಗೆ ಪಾವತಿಸುವವರು ಈ ಯೋಜನೆಗೆ ಅರ್ಹರು.

ಕುಟುಂಬದಲ್ಲಿ ಮಗ ಅಥವಾ ಮಗಳು ಆದಾಯ ತೆರಿಗೆ ಪಾವತಿದಾರರಾಗಿದ್ದರೂ ಕೂಡ ಕುಟುಂಬದ ಯಜಮಾನಿ ಗೃಹಲಕ್ಷ್ಮಿ ಯೋಜನೆಗೆ ಅರ್ಹರು. ಪಡಿತರ ಚೀಟಿಯಲ್ಲಿ ಮನೆಯ ಯಜಮಾನಿ ಎಂದು ಘೋಷಿತರಾಗಿರುವ ಲಿಂಗತ್ವ ಅಲ್ಪಸಂಖ್ಯಾತರು ಕೂಡ ಅರ್ಹರಾಗಿರುತ್ತಾರೆ.

ಈ ಯೋಜನೆಯ ಮತ್ತೊಂದು ವಿಶೇಷವೆಂದರೆ, ಪಡಿತರ ಚೀಟಿಯಲ್ಲಿ ಪತಿಯು ಕುಟುಂಬದ ಮುಖ್ಯಸ್ಥ ಎಂದಿರುವುದನ್ನು ಕುಟುಂಬದ ಯಜಮಾನಿ ಮಹಿಳೆ ಎಂದು ಬದಲಾಯಿಸಿ ನೋಂದಾಯಿಸಿಕೊಳ್ಳಬಹುದು. ಇಂತಹ ಪ್ರಕರಣಗಳನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳುವ ಅವಕಾಶವಿದೆ. ತಪ್ಪು ಮಾಹಿತಿ ನೀಡಿ ಸೌಲಭ್ಯ ಪಡೆದು ಸಾಬೀತಾದರೆ, ಪಾವತಿಸಿರುವ ಮೊತ್ತವನ್ನು ವಸೂಲು ಮಾಡಿ ಸೂಕ್ತ ಕ್ರಮ ಜರುಗಿಸುವ ಎಚ್ಚರಿಕೆಯನ್ನು ಸರ್ಕಾರ ನೀಡಿದೆ. ❖

ಗತ ವೈಭವ ಮರುಸೃಷ್ಟಿ




ಗೃಹಲಕ್ಷ್ಮಿ ಯೋಜನೆಯ ಅನುಷ್ಠಾನದೊಂದಿಗೆ ರಾಜ್ಯದ ಸುಮಾರು 1.10 ಕೋಟಿಗೂ ಹೆಚ್ಚಿನ ತಾಯಂದಿರು ಫಲಾನುಭವಿಗಳಾಗಿದ್ದಾರೆ. 2 ಸಾವಿರ ಹಣ ಅವರವರ ಬ್ಯಾಂಕ್ ಖಾತೆಗೆ ವರ್ಗಾವಣೆಯಾಗಿರುವ ಸಂದೇಶ ಮೊಬೈಲ್‌ಗೆ ಬರುತ್ತಿದ್ದಂತೆ ನಮ್ಮ 'ಲಕ್ಷ್ಮಿ'ಯರ ಮುಖದಲ್ಲಿ ಸಂತಸ ಮೂಡಿತ್ತು. ಆ ಮೂಲಕ ಪ್ರಧಾನಿ ಇಂದಿರಾ ಗಾಂಧಿ ಅವರ ಕಾಲದ ಗತ ವೈಭವ ಮರುಸೃಷ್ಟಿಯಾಗಿದೆ. ನಾವು ಐದು ಯೋಜನೆಗಳನ್ನು ಜನರ ಮುಂದಿಟ್ಟದ್ದೇವು. ಅವುಗಳಲ್ಲಿ ನಾಲ್ಕು ಯೋಜನೆಗಳನ್ನು 100 ದಿನಗಳೊಳಗೆ ಜಾರಿಗೆ ತಂದಿದ್ದೇವೆ.

ರಾಹುಲ್ ಗಾಂಧಿಯವರು ನಡೆಸಿದ ಭಾರತ್ ಜೋಡೋ ಯಾತ್ರೆಗೆ ರಾಜ್ಯದ ವಿವಿಧ ಭಾಗಗಳಿಂದ ಜನರು ಬಂದು ಶಕ್ತಿ ತುಂಬಿದ್ದರು. ಆ ಸಂದರ್ಭದಲ್ಲಿ ರಾಜ್ಯದ ಜನರ ಹಸಿವು, ಬೆಲೆ ಏರಿಕೆ, ರೈತರ ಸಮಸ್ಯೆ, ಯುವಕರ ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ತಿಳಿಸಿದ್ದರು. ಅವರ ಮಾರ್ಗದರ್ಶನ ಹಾಗೂ ಸಲಹೆ ಮೇರೆಗೆ ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ರಮಿಸಿದೆವು. ಅದರ ಪರಿಣಾಮವೇ ಈ ಪಂಚ ಗ್ಯಾರಂಟಿ ಯೋಜನೆಗಳು.

ಡಿ.ಕೆ ಶಿವಕುಮಾರ್, ಉಪಮುಖ್ಯಮಂತ್ರಿ

ಗೃಹಲಕ್ಷ್ಮಿ: ಆರ್ಥಿಕ ಭದ್ರತೆ



ಇಡೀ ದೇಶದಲ್ಲೇ ಅತಿ ದೊಡ್ಡ ಆರ್ಥಿಕ ಭದ್ರತಾ ಯೋಜನೆಯಾಗಿರುವ ಗೃಹಲಕ್ಷ್ಮಿ ಯೋಜನೆಯು ನಮ್ಮ ರಾಜ್ಯದ ಮಹಿಳೆಯರ ಬದುಕಿನ ನಿರ್ವಹಣೆಗೆ ಹೆಚ್ಚು ಅನುಕೂಲ ಮಾಡಿಕೊಡಲಿದೆ ಹಾಗೂ ಅವರಿಗೆ ಆರ್ಥಿಕ ಭದ್ರತೆ ಒದಗಿಸಲಿದೆ. ಅಂದಾಜು 1.28 ಕೋಟಿ ಕುಟುಂಬಗಳಿಗೆ ಈ ಯೋಜನೆಯು ತಲುಪಲಿದ್ದು, ಫಲಾನುಭವಿಗಳ ಖಾತೆಗೆ ಡಿಬಿಟಿ ಮೂಲಕ ನೇರವಾಗಿ ₹2 ಸಾವಿರ ಜಮೆ ಆಗಲಿದೆ. ಸದ್ಯದಲ್ಲಿ ಹೊಸ ನೋಂದಣಿ ಪ್ರಕ್ರಿಯೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಎಲ್ಲ ಫಲಾನುಭವಿಗಳಿಗೂ ಹಣ ತಲುಪಿದ ಬಳಿಕ ಮತ್ತೆ ಪ್ರಕ್ರಿಯೆ ಆರಂಭಿಸಲಾಗುವುದು. ಸಹಾಯವಾಣಿ ಸಂಖ್ಯೆ 1902 ಕ್ಕೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ.

ಲಕ್ಷ್ಮೀ ಹೆಬ್ಬಾಳ್ಕರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್





ಚೀನಾದ ಹಾಂಗ್‌ಝೌನಲ್ಲಿ ಶನಿವಾರ ನಡೆದ ಏಷ್ಯನ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಕ್ರೀಡಾಜ್ಯೋತಿಯನ್ನು ಪ್ರಜ್ವಲಿಸಿದ ಡಿಜಿಟಲ್ ಟಾರ್ಚ್ ಬೇರರ್ (ಎಡಚಿತ್ರ) ಚೀನಾದ ಕಲಾವಿದರಿಂದ ಆಕರ್ಷಕ ನೃತ್ಯ ಪ್ರದರ್ಶನ –ಎಎಫ್‌ಪಿ ಚಿತ್ರಗಳು

ಏಷ್ಯನ್ ಕ್ರೀಡಾಕೂಟಕ್ಕೆ ಚಾಲನೆ; ಪ್ರಾಚೀನ ಸಂಸ್ಕೃತಿ, ಆಧುನಿಕ ತಂತ್ರಜ್ಞಾನದ ಮಿಲನಕ್ಕೆ ವೇದಿಕೆಯಾದ ಚೀನಾ

‘ಡಿಜಿಟಲ್ ಜ್ಯೋತಿ’ಯ ವೈಭವ

ಹಾಂಗ್‌ಝೌ(ಪಿಟಿಐ): ಕ್ರೀಡಾಜ್ಯೋತಿಯನ್ನು ಹಿಡಿದು ಓಡೋಡಿ ಬಂದ ಆ ‘ಕ್ರೀಡಾಪಟು’ವಿನ ಮೈತುಂಬ ದೀಪಗಳು. ಆ ಓಟಗಾರ ಓಡಿದ ಹಾದಿಯುದ್ದಕ್ಕೂ ಬೆಳಕಿನ ರಂಗವಲ್ಲಿ ಮೂಡಿತು. ಕಾಲ್ಡ್ರನ್‌ನಲ್ಲಿ ಕ್ರೀಡಾಜ್ಯೋತಿಯನ್ನು ಪ್ರಜ್ವಲಿಸಿದಾಗ ನೋಡಿದವರೆಲ್ಲರ ಕಂಗಳಲ್ಲಿ ಅಚ್ಚರಿ, ಆನಂದದ ಬೆಳಕು ಚಿಮ್ಮಿತು!

ಹೌದು; ಶನಿವಾರ ರಾತ್ರಿ ಒಲಿಂಪಿಕ್ ಸ್ಪೋರ್ಟ್ಸ್ ಸೆಂಟರ್ ಕ್ರೀಡಾಂಗಣದಲ್ಲಿ ನಡೆದ 19ನೇ ಏಷ್ಯನ್ ಗೇಮ್ಸ್ ಉದ್ಘಾಟನೆ ಸಮಾರಂಭದಲ್ಲಿ ಜ್ಯೋತಿ ಬೆಳಗಿಸಿದ ಕ್ರೀಡಾಪಟು ಅಂತಿಂಥ ವ್ಯಕ್ತಿಯಲ್ಲ. ಅದು ಡಿಜಿಟಲ್ ಕ್ರೀಡಾಪಟು. ಇದೇ ಮೊದಲ ಬಾರಿಗೆ ಕೃತಕ ಬುದ್ಧಿಮತ್ತೆ ಮತ್ತು ಪರಿಸರ ತಂತ್ರಜ್ಞಾನದ ಸಮ್ಮಿಲನದ ವೈಭವ ಪ್ರದರ್ಶಿಸಿದ ಕಾರ್ಯಕ್ರಮ ಕಣ್ಮನ ಸೆಳೆಯಿತು.

ಭವಿಷ್ಯದ ಜಗತ್ತಿನ ತಂತ್ರಜ್ಞಾನದ ವೈಭವ ಕಣ್ಣಿಗೆ ಕಟ್ಟಿತು. ‘ಏಷ್ಯಾದ ಅಲೆಗಳ ಅಬ್ಬರ’ ಘೋಷಣೆಯ ಈ ಕೂಟದಲ್ಲಿ ಮುಂಬರುವ ಯುಗದಲ್ಲಿ ಚೀನಾ, ಏಷ್ಯಾ ಮತ್ತು ವಿಶ್ವವನ್ನು ಮಿಲನಗೊಳಿಸುವ ಸಂದೇಶವನ್ನು ಸಾರಲಾಯಿತು. ಏಷ್ಯಾದ ಸರ್ವ ಜನರ ಏಕತೆ, ಪ್ರೀತಿ ಮತ್ತು ಸ್ನೇಹದ ಬೆಸುಗೆಯೂ ಅಲ್ಲಿತ್ತು.

ಅರುಣಾಚಲಪ್ರದೇಶ ಗಡಿ ವಿವಾದದ ಹಿನ್ನೆಲೆಯಲ್ಲಿ ಭಾರತದ ಮೂವರು ವುಷು ಕ್ರೀಡಾಪಟುಗಳಿಗೆ ವೀಸಾ ನಿರಾಕರಿಸಿದ್ದ ಚೀನಾ ಉದ್ಘಾಟನೆ ಸಮಾರಂಭದಲ್ಲಿ ಡಿಜಿಟಲ್ ಲೋಕವನ್ನು ಪ್ರದರ್ಶಿಸಿತು.



ಏಷ್ಯನ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದ ಪಥಸಂಚಲನದಲ್ಲಿ ಹರ್ಮನ್‌ಪ್ರೀತ್ ಸಿಂಗ್ ಮತ್ತು ಲವ್ಲಿನಾ ಬೊರ್ಗೊಹೈನ್ ಅವರು ತ್ರಿವರ್ಣ ಧ್ವಜ ಹಿಡಿದು ಭಾರತ ತಂಡವನ್ನು ಮುನ್ನಡೆಸಿದರು –ಪಿಟಿಐ ಚಿತ್ರ

ಡಿಜಿಟಲ್ ದೀಪೋತ್ಸವ, ಡಿಜಿಟಲ್ ಟಾರ್ಚ್ ರಿಲೆಯ ವೈಭವ ಗಮನ ಸೆಳೆಯಿತು. ಕ್ವಿಯಾಂಟಗ್ ನದಿಯ ಮೇಲಿಂದ ಬೀಸಿ ಬಂದ ತಂಗಾಳಿಯೂ ಮನಕ್ಕೆ ಮುದ ನೀಡಿತು. 3ಡಿ ತಂತ್ರಜ್ಞಾನವೂ ಮೊಟ್ಟಮೊದಲ ಬಾರಿಗೆ ಪ್ರದರ್ಶಿತವಾಯಿತು. ನದಿಯ ಅಲೆಗಳ ಮೇಲೆ ಹೆಜ್ಜೆಯಿಡುತ್ತ ಬಂದ ಒಬ್ಬ ಪುರುಷ ಮತ್ತು ಒಬ್ಬ ಮಹಿಳೆ ಗಾಳಿಯಲ್ಲಿಯೇ ನರ್ತಿಸಿ ಅಚ್ಚರಿ ಮೂಡಿಸಿದರು.

ಅಹ್ಲಾದಕರ ಸಂಜೆ ನಡೆದ ಎರಡು ಗಂಟೆಗಳ ಕಾರ್ಯಕ್ರಮ ಚೀನಾದ ಸಂಸ್ಕೃತಿ, ಪರಂಪರಾಗತ ನೃತ್ಯ ಹಾಗೂ ಗಾಯನಕ್ಕೂ ವೇದಿಕೆಯಾಯಿತು. ಸಾವಿರಾರು ವರ್ಷಗಳ ನಾಗರಿಕತೆ ಮತ್ತು ಆಧುನಿಕ ತಂತ್ರಜ್ಞಾನದ ಬೆಳವಣಿಗೆಯನ್ನು ಅದ್ಭುತ ವಿಡಿಯೊ ತುಣುಕುಗಳ ಮೂಲಕ ಪ್ರದರ್ಶನಗೊಂಡವು.

ಏಷ್ಯಾ ಖಂಡದ 45 ದೇಶಗಳ ಸುಮಾರು 12 ಸಾವಿರ ಕ್ರೀಡಾಪಟುಗಳು ಭಾಗವಹಿಸಿರುವ ಈ ಕ್ರೀಡಾಕೂಟವನ್ನು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಉದ್ಘಾಟಿಸಿದರು. ಅಕ್ಟೋಬರ್ 8ರವರೆಗೂ ಕ್ರೀಡಾ ಸ್ಪರ್ಧೆಗಳು ನಡೆಯಲಿವೆ.

ಈ ಸಂದರ್ಭದಲ್ಲಿ ಏಷ್ಯಾ ಒಲಿಂಪಿಕ್ ಕೌನ್ಸಿಲ್ (ಒಸಿಎ) ಹಂಗಾಮಿ ಅಧ್ಯಕ್ಷ ರಣಧೀರ್ ಸಿಂಗ್, ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಮುಖ್ಯಸ್ಥ ಥಾಮಸ್ ಬಾಕ್, ಬೇರೆ ಬೇರೆ ದೇಶಗಳ ರಾಷ್ಟ್ರೀಯ ಒಲಿಂಪಿಕ್ ಕಮಿಟಿಯ ಮುಖ್ಯಸ್ಥರು ಹಾಜರಿದ್ದರು.

ಡಿಜಿಟಲ್ ಪಟಾಕಿ: ಈ ಬಾರಿ ‘ಇಂಗಾಲ ತಟಸ್ಥ ಹಾಗೂ ಹಸಿರು ಕ್ರೀಡಾಕೂಟ’ ನಡೆಸಲಾಗುತ್ತಿದೆ. ಅದರಿಂದಾಗಿ ಎಂದಿನಂತೆ ಸುಡುಮದ್ದುಗಳನ್ನು ಬಳಸಲಿಲ್ಲ. ಆದರೆ ಡಿಜಿಟಲ್ ಪಟಾಕಿ, ಮದ್ದುಗಳು ಸುಂದರ ಚಿತ್ತಾರ ಮೂಡಿಸಿದವು.

ದೊಡ್ಡ ಕಮಲ ಹೂವಿನ ಆಕಾರದಲ್ಲಿರುವ ಕ್ರೀಡಾಂಗಣದಲ್ಲಿ ಸೇರಿದ್ದ 80 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಚಪ್ಪಾಳೆ ತಟ್ಟಿ ಅಭಿನಂದಿಸಿದರು. ಹೋದ ವರ್ಷವೇ ಈ ಕ್ರೀಡಾಕೂಟ ನಡೆಯಬೇಕಿತ್ತು. ಆದರೆ ಚೀನಾದಲ್ಲಿ ಕೋವಿಡ್ ಹರಡಿದ್ದ ಕಾರಣ ಮುಂದೂಡಲಾಗಿತ್ತು.

ಕುರ್ತಾ, ಸೀರೆಯಲ್ಲಿ ಮಿಂಚಿದ ಭಾರತ ತಂಡ

ಭಾರತ ತಂಡದ 100ಕ್ಕೂ ಹೆಚ್ಚು ಕ್ರೀಡಾಪಟುಗಳೂ ಪಥಸಂಚಲನದಲ್ಲಿ ಭಾಗವಹಿಸಿದರು. ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಒಲಿಂಪಿಯನ್ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಅವರು ಧ್ವಜಧಾರಿಗಳಾಗಿ ತಂಡವನ್ನು ಮುನ್ನಡೆಸಿದರು.

ಮರುಬಳಕೆ ಸಾಮಗ್ರಿಗಳಿಂದ ಸಿದ್ಧಗೊಂಡ ಖಾಕಿ ಬಣ್ಣದ, ಆಕರ್ಷಕ ಚಿತ್ತಾರದ ಸೀರೆ ಹಾಗೂ ಹೈ ನೆಕ್ ರವಿಕೆ ಧರಿಸಿದ್ದ ಭಾರತದ ಮಹಿಳಾ ಕ್ರೀಡಾಪಟುಗಳು ಪಥಸಂಚಲನದಲ್ಲಿ ಹೆಜ್ಜೆ ಹಾಕಿದರು. ಪುರುಷ ಅಥ್ಲೀಟ್‌ಗಳು ಬಣ್ಣಬಣ್ಣದ ಹೂಗಳ ಚಿತ್ತಾರವಿರುವ ಜಾಕೆಟ್ ಮತ್ತು ಖಾಕಿ ಕುರ್ತಾ ಧರಿಸಿದ್ದರು.

ಆದರೆ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮತ್ತು ಐಒಎ ಅಧ್ಯಕ್ಷೆ ಪಿ.ಟಿ. ಉಷಾ ಅವರು ಹಾಜರಿರಲಿಲ್ಲ. ಅರುಣಾಚಲ ಪ್ರದೇಶ ಗಡಿ ವಿವಾದದ ಹಿನ್ನೆಲೆಯಲ್ಲಿ ಸಚಿವರು ಚೀನಾ ಭೇಟಿಯನ್ನು ರದ್ದು ಮಾಡಿದ್ದರು.

ಚೀನಾದಲ್ಲಿ ಸಂಕ್ರಾಂತಿ ಸಂಭ್ರಮ

ಸೆಪ್ಟೆಂಬರ್ 23ರ ದಿನವು ಚೀನಾದ ಪಾಲಿಗೆ ಶರತ್ಕಾಲದ ವಿಷುವತ್ ಸಂಕ್ರಾಂತಿಯ ದಿನವಾಗಿದೆ. ಇದು ಚೀನಿಯರ ಪಾಲಿಗೆ ಸುಗ್ಗಿಯ ಸಂಭ್ರಮದ ದಿನ. ಈ ಉತ್ಸವಕ್ಕೆ ದೇಶ, ವಿದೇಶಗಳ ಅತಿಥಿಗಳನ್ನು ಸ್ವಾಗತಿಸಿ ಸತ್ಕರಿಸುವ ಪರಂಪರೆ ಇದೆ. ಈ ಸುಗ್ಗಿಯ ಹಿಗ್ಗು ಕೂಡ ಕಾರ್ಯಕ್ರಮದಲ್ಲಿ ಪ್ರತಿಫಲಿಸಿತು.

ಟೇಬಲ್ ಟೆನಿಸ್: ಭಾರತ ಪುರುಷ, ಮಹಿಳಾ ತಂಡಗಳು 16ರ ಸುತ್ತಿಗೆ

ಹಾಂಗ್‌ಝೌ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳಾ ತಂಡಗಳು, ಏಷ್ಯನ್ ಕ್ರೀಡಾಕೂಟದ ಟೇಬಲ್ ಟೆನಿಸ್ ಸ್ಪರ್ಧೆಯ ಪ್ರಿಕ್ವಾರ್ಟರ್‌ಫೈನಲ್‌ಗೆ ಮುನ್ನಡೆದವು. ಶನಿವಾರ ನಡೆದ ‘ಎಫ್’ ಗುಂಪಿನ ಪಂದ್ಯದಲ್ಲಿ ಭಾರತ ಪುರುಷರ ತಂಡ 3–0 ಯಿಂದ ತಜಿಕಿಸ್ತಾನ ತಂಡವನ್ನು ಸೋಲಿಸಿತು.

ಮೊದಲ ಪಂದ್ಯದಲ್ಲಿ ಸಿಂಗಪುರ ತಂಡವನ್ನು ಸೋಲಿಸಿದ್ದ ಭಾರತ ಮಹಿಳೆಯರು ‘ಎಫ್’ ಗುಂಪಿನ ಎರಡನೇ ಪಂದ್ಯದಲ್ಲಿ ನೇಪಾಳ ತಂಡವನ್ನೂ 3–0 ಯಿಂದ ಸುಲಭವಾಗಿ ಸೋಲಿಸಿದರು. ಈಗ 16ರ ಸುತ್ತಿನಲ್ಲಿ ಥಾಯ್ಲೆಂಡ್ ತಂಡವನ್ನು ಎದುರಿಸಲಿದ್ದಾರೆ.

ದಿಯಾ ಚಿತಳೆ 11–1, 11–6, 11–8 ರಿಂದ ಸಿಕ್ಕಾ ಶ್ರೇಷ್ಠ ಅವರನ್ನು ಮಣಿಸಿದರೆ, ಐಹಿಕಾ ಮುಖರ್ಜಿ 11–3, 11–7, 11–2 ರಿಂದ ನಬಿತಾ ಶ್ರೇಷ್ಠ ಅವರನ್ನು ಸೋಲಿಸಿ ಮುನ್ನಡೆ ಹೆಚ್ಚಿಸಿದರು. ಮೂರನೇ ಸಿಂಗಲ್ಸ್‌ನಲ್ಲಿ ಸುತೀರ್ಥಾ ಮುಖರ್ಜಿ 11–1, 11–5, 11–2 ರಿಂದ ಇವಾನಾ ಥಾಪಾ ಅವರನ್ನು ನಿರಾಯಾಸವಾಗಿ ಮಣಿಸಿ ತಂಡದ ಗೆಲುವನ್ನು ಪೂರ್ಣಗೊಳಿಸಿದರು. ಮಣಿಕಾ ಬಾತ್ರಾ ಮತ್ತು ಶ್ರೀಜಾ ಅಕುಲಾ ಅವರು ವಿಶ್ರಾಂತಿ ಪಡೆದಿದ್ದರು.

ಈ ಮೊದಲು ಯೆಮೆನ್ ಮತ್ತು ಸಿಂಗಪುರ ತಂಡಗಳನ್ನು ಸೋಲಿಸಿದ್ದ ಭಾರತ ತಂಡಕ್ಕೆ ತಜಿಕಿಸ್ತಾನದಿಂದ ಹೆಚ್ಚು ಹೋರಾಟ ಎದುರಾಗಲಿಲ್ಲ. ಅನುಭವಿಗಳಾದ ಜಿ.ಸತ್ಯನ್ ಮತ್ತು ಎ.ಶರತ್ ಕಮಲ್ ಅವರಿಗೆ ವಿಶ್ರಾಂತಿ ನೀಡಿದರೂ ಸಮಸ್ಯೆಯಾಗಲಿಲ್ಲ.

ಮಾನವ್ ಠಕ್ಕರ್ 11–8, 11–5, 11–8 ರಿಂದ ಅಫ್ಜಲ್‌ಖಾನ್ ಮಹ್ಮದೊವ್ ಅವರನ್ನು ಮಣಿಸಿ ಉತ್ತಮ ಆರಂಭ ಒದಗಿಸಿದರು. ಮಾನುಷ್ ಷಾ ಎರಡನೇ ಸಿಂಗಲ್ಸ್‌ನಲ್ಲಿ 11–8, 11–5, 11–8 ರಿಂದ ಉಬೇದೊಲ್ಲಾ ಸುಲ್ತಾನೊವ್ ಅವರನ್ನು ಸೋಲಿಸಿ ತಂಡದ ಮುನ್ನಡೆ 2–0ಗೆ ಹೆಚ್ಚಿಸಿದರು. ಹರ್ಮಿತ್ ದೇಸಾಯಿ ಇನ್ನೂ ಸುಲಭವಾಗಿ 11–1, 11–3, 11–5ರಿಂದ ಇಬ್ರೊಖಿಮ್ ಇಸ್ಮಾಯಿಲ್‌ಝೊದಾ ಅವರನ್ನು ಮಣಿಸಿದರು.



ಮಾನುಷ್ ಶಾ –ಪಿಟಿಐ ಚಿತ್ರ

ಬಾಕ್ಸಿಂಗ್: ಭಾರತ ಪಡೆಯಿಂದ ಪದಕಗಳ ಭರವಸೆ

ನಿಖತ್, ಲವ್ಲಿನಾ ಮೇಲೆ ಕಣ್ಣು

ಹಾಂಗ್‌ಝೌ (ಪಿಟಿಐ): ಎರಡು ಬಾರಿಯ ವಿಶ್ವ ಚಾಂಪಿಯನ್ ನಿಕತ್ ಜರೀನ್ ಮತ್ತು ಒಲಿಂಪಿಕ್ ಪದಕ ಜಯಿಸಿರುವ ಲವ್ಲಿನಾ ಬೊರ್ಗೊಹೈನ್ ಅವರು ಏಷ್ಯನ್ ಗೇಮ್ಸ್ ಬಾಕ್ಸಿಂಗ್‌ನಲ್ಲಿ ಪದಕ ಜಯಿಸಿಕೊಡುವ ಪ್ರಮುಖ ಆಟಗಾರ್ತಿಯರಾಗಿದ್ದಾರೆ.

ಭಾನುವಾರದಿಂದ ಬಾಕ್ಸಿಂಗ್ ಬೌಟ್‌ಗಳು ಆರಂಭವಾಗಲಿವೆ. ಈ ಬಾರಿ ಉತ್ತಮ ತಂಡವನ್ನು ಕಣಕ್ಕಿಳಿಸಲಾಗುತ್ತಿದೆ. ಪುರುಷರ ತಂಡದಲ್ಲಿ ಅನುಭವಿ ಶಿವ ಥಾಪಾ, ದೀಪಕ್ ಬೊರಿಯಾ ಮತ್ತು ನಿಶಾಂತ್ ದೇವ್ ಇದ್ದಾರೆ.

ಬಾಕ್ಸಿಂಗ್‌ನಲ್ಲಿ 13 ತೂಕದ ವಿಭಾಗಗಳು ಇವೆ. ಒಟ್ಟು 34 ಒಲಿಂಪಿಕ್ ಅರ್ಹತಾ ಕೋಟಾಗಳು ಇವೆ.

ಮಹಿಳೆಯರ ವಿಭಾಗದ 50 ಕೆ.ಜಿ, 54ಕೆ.ಜಿ, 57 ಕೆ.ಜಿ ಹಾಗೂ 60 ಕೆ.ಜಿ ಸೆಮಿಫೈನಲ್ ಪ್ರವೇಶಿಸಿದವರು, 66 ಕೆ.ಜಿ 75 ಕೆ.ಜಿ ವಿಭಾಗಗಳಲ್ಲಿ ಫೈನಲ್ ಪ್ರವೇಶಿಸಿದವರು ಮುಂದಿನ ವರ್ಷದ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವರು.

ಪುರುಷರ ತೂಕದ ಏಳು ವಿಭಾಗಗಳಲ್ಲಿ ಚಿನ್ನ ಮತ್ತು ಬೆಳ್ಳಿ ಜಯಿಸಿದವರು ಕೂಡ ಪ್ಯಾರಿಸ್ ಟಿಕೆಟ್ ಗಿಟ್ಟಿಸುವರು.

ಶಿವಾಗೆ ಸುಲಭ ಎದುರಾಳಿ: ಪುರುಷರ ವಿಭಾಗದಲ್ಲಿ ಅನುಭವಿ ಶಿವ



ನಿಖತ್ ಜರೀನ್

ಥಾಪಾ ಅವರಿಗೆ ಸುಲಭ ಎದುರಾಳಿ ದೊರೆತಿದ್ದಾರೆ. ಇದರಿಂದಾಗಿ ಅವರಿಗೆ ಇಲ್ಲಿ ಪದಕ ಗೆದ್ದು ಒಲಿಂಪಿಕ್ ಟಿಕೆಟ್ ಗಳಿಸುವ ಅವಕಾಶ ಹೆಚ್ಚಿದೆ. ಅವರು ಮೊದಲ ಸುತ್ತಿನಲ್ಲಿ ತೈಪೆಯ ಚು ಎನ್ ಲೈ ವಿರುದ್ಧ ಸೆಮಿಫೈನಲ್‌ನಲ್ಲಿ ಸೆಣಸುವರು.

ಆದರೆ ಇನ್ನುಳಿದ ವಿಭಾಗಗಳಲ್ಲಿ ದೀಪಕ್, ಅಮಿತ್ ಪಂಘಲ್ ಹಾಗೂ ನಿಶಾಂತ್ ಅವರಿಗೆ ಕಠಿಣ ಪೈಪೋಟಿ ಎದುರಾಗುವ ನಿರೀಕ್ಷೆ ಇದೆ.

ನಿಖತ್ ಹಾದಿ ಕಠಿಣ

ಮಹಿಳೆಯರ ವಿಭಾಗದಲ್ಲಿ ಈ ಬಾರಿ ನಿಖತ್ (50 ಕೆ.ಜಿ), ಲವ್ಲಿನಾ (75 ಕೆ.ಜಿ), ವಿಶ್ವ ಚಾಂಪಿಯನ್‌ಷಿಪ್ ಕಂಚು ವಿಜೇತರಾದ ಪರವೀನ್ ಹೂಡಾ (57 ಕೆ.ಜಿ), ಕಾಮನ್‌ವೆಲ್ತ್ ಗೇಮ್ಸ್ ಪದಕವಿಜೇತರಾದ ಜಸ್ಮೈನ್ ಲೆಂಬೊರಿಯಾ (60 ಕೆ.ಜಿ) ಹಾಗೂ ಪ್ರೀತಿ ಪವಾರ್ ಅವರು ಪದಕ ಜಯಿಸುವ ಭರವಸೆ ಮೂಡಿಸಿದ್ದಾರೆ.

ಆದರೆ ನಿಖತ್ ಅವರಿಗೆ ಎರಡು ಬಾರಿಯ ಏಷ್ಯನ್ ಚಾಂಪಿಯನ್ ವಿಯೆಟ್ನಾಂ ದೇಶದ ಎನ್‌ಗುಯೆನ್ ಥಿ ಟಾಮ್ ಅವರು ಮೊದಲ ಹಣಾಹಣಿಯಲ್ಲಿ ಎದುರಾಗಲಿದ್ದಾರೆ. ಅವರಿಂದ ನಿಕತ್ ಅವರಿಗೆ ಕಠಿಣ ಪೈಪೋಟಿ ಎದುರಾಗುವ ಸಾಧ್ಯತೆ ಇದೆ. ಒಂದೊಮ್ಮೆ ನಿಕತ್ ಸೆಮಿಫೈನಲ್ ಪ್ರವೇಶಿಸಿದರೂ ಥಾಯ್ಲೆಂಡ್ ದೇಶದ, ಎರಡು ಬಾರಿ ವಿಶ್ವ ಕಂಚು ವಿಜೇತ ಬಾಕ್ಸರ್ ಚುಟಾಮ್ಯಾನ್ ರಕ್ಸತ್ ವಿರುದ್ಧ ಸೆಣಸುವರು.

ವುಶು ಸ್ಪರ್ಧಿ ಲಮ್ಮು ಸುರಕ್ಷಿತ



ಮೇಪುಂಗ್ ಲಮ್ಮು

ನವದೆಹಲಿ (ಪಿಟಿಐ): ಸಂಪರ್ಕಕ್ಕೆ ಸಿಗದೇ ಆತಂಕ ಸೃಷ್ಟಿಸಿದ್ದ ಅರುಣಾಚಲ ಪ್ರದೇಶದ ವುಶು ಸ್ಪರ್ಧಿ ಮೇಪುಂಗ್ ಲಮ್ಮು ಪತ್ತೆಯಾಗಿದ್ದಾರೆ. ತಾವು ಸುರಕ್ಷಿತವಾಗಿದ್ದು, ಸದ್ಯ ಭಾರತ ಕ್ರೀಡಾ ಪ್ರಾಧಿಕಾರದ ಹಾಸ್ಟೆಲ್‌ನಲ್ಲಿರುವುದಾಗಿ ಶನಿವಾರ ತಿಳಿಸಿದ್ದಾರೆ. ಇದರಿಂದ ಅವರ ಕುಟುಂಬವರ್ಗ ನಿಟ್ಟುಸಿರುಬಿಟ್ಟಿದೆ.

ಚೀನಾದಿಂದ ವೀಸಾ ಸಿಗದ ಅರುಣಾಚಲ ಪ್ರದೇಶದ ಮೂವರು ಮಹಿಳಾ ವುಶು ಸ್ಪರ್ಧಿಗಳಲ್ಲಿ ಅವರೂ ಒಬ್ಬರಾಗಿದ್ದರು. ಶುಕ್ರವಾರ ದಿನವಿಡೀ ಸಂಪರ್ಕಕ್ಕೆ ಸಿಗದ ಕಾರಣ ಕುಟುಂಬ ಆತಂಕದಲ್ಲಿದೆ ಎಂದು ಅವರ ಸಹೋದರ ಸುದ್ದಿಸಂಸ್ಥೆಗೆ ತಿಳಿಸಿದ್ದರು.

‘ಕುಟುಂಬದ ಜೊತೆ ಸಂಪರ್ಕದಲ್ಲಿದ್ದೇನೆ. ನಿಮ್ಮೆಲ್ಲರ ಕಾಳಜಿ, ಬೆಂಬಲಕ್ಕೆ ಕೃತಜ್ಞತೆಗಳು’ ಎಂದು ಹೊಸದಾಗಿ ತೆರೆದ ಎಕ್ಸ್ ಖಾತೆಯಲ್ಲಿ ಅವರು ಬರೆದಿದ್ದಾರೆ. ಸಾಯ್ ಅಧಿಕಾರಿಗಳ ಜೊತೆ ಉಪಾಹಾರ ಮಾಡುತ್ತಿರುವ ಚಿತ್ರವನ್ನೂ ಲಗತ್ತಿಸಿದ್ದಾರೆ.

ಶೂಟಿಂಗ್: ಗರಿಗೆದರಿದ ನಿರೀಕ್ಷೆ

ಹಾಂಗ್‌ಝೌ (ಪಿಟಿಐ): ಭಾರತದ ಶೂಟರ್‌ಗಳು ಈ ಹಿಂದಿನ ಏಷ್ಯನ್ ಕ್ರೀಡಾಕೂಟದಲ್ಲಿ ನಿರೀಕ್ಷೆಗೆ ತಕ್ಕ ಪ್ರದರ್ಶನ ನೀಡಿಲ್ಲ. ಆದರೆ ಇತ್ತೀಚೆಗೆ ಅಜರ್‌ಬೈಜಾನ್‌ನ ಬಾಕುವಿನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್ಸ್‌ನಲ್ಲಿ ತೋರಿದ ಉತ್ತಮ ಪ್ರದರ್ಶನ, ಅವರನ್ನು ಏಷ್ಯನ್ ಕ್ರೀಡಾಕೂಟದಲ್ಲಿ ಲಘುವಾಗಿ ಪರಿಗಣಿಸುವಂತಿಲ್ಲ ಎಂಬುದನ್ನು ಸೂಚಿಸಿದೆ.

ಭಾರತ ವಿಶ್ವ ಚಾಂಪಿಯನ್‌ಷಿಪ್ಸ್‌ನಲ್ಲಿ ಒಟ್ಟು 14 (ಆರು ಚಿನ್ನ ಮತ್ತು ಎಂಟು ಕಂಚು) ಪದಕಗಳನ್ನು ಗೆದ್ದುಕೊಂಡಿತ್ತು. ಈಗ ಮತ್ತೊಂದು ಏಷ್ಯನ್ ಗೇಮ್ಸ್ ಎದುರಾಗಿದ್ದು, ಭರವಸೆಯೂ ಗರಿಗೆದರಿದೆ. 2018ರ ಜಕಾರ್ತಾ ಕ್ರೀಡೆಗಳಲ್ಲಿ ಭಾರತದ ಗುರಿಕಾರರು ಎರಡು ಸ್ವರ್ಣ, ನಾಲ್ಕು ರಜತ ಸೇರಿ 9 ಪದಕಗಳನ್ನು ಗೆದ್ದುಕೊಂಡಿದ್ದರು. ಆಗಿನ ತಂಡದಲ್ಲಿದ್ದ ಕೆಲವು ಅನುಭವಿಗಳು ಈಗ ತಂಡದಲ್ಲಿಲ್ಲದಿದ್ದರೂ, ಸುಧಾರಿತ ಪ್ರದರ್ಶನದ ವಿಶ್ವಾಸವಂತೂ ಇದೆ.

ಕಳೆದ ಸಲ ಚಿನ್ನದ ಪದಕಗಳನ್ನು ಗೆದ್ದ ರಾಹಿ ಸರ್ನೊಬತ್ (25 ಮೀ. ಸ್ಪೋರ್ಟ್ಸ್ ಪಿಸ್ತೂಲ್) ಮತ್ತು ಸೌರಭ್ ಚೌಧರಿ (10 ಮೀ. ಏರ್ ಪಿಸ್ತೂಲ್) ಈ ಸಲ ತಂಡದಲ್ಲಿಲ್ಲ. ರೈಫಲ್ ವಿಭಾಗದಲ್ಲಿ ಅನುಭವಿಗಳಾದ ಸಂಜೀವ್ ರಜಪುತ್, ಅಪೂರ್ವಿ ಚಾಂಡೇಲಾ ಮತ್ತು ಹೀನಾ ಸಿಧು ಕೂಡ ಇಲ್ಲ.

ಆದರೆ ಪ್ರತಿಭಾನ್ವಿತರಾದ ರುದ್ರಾಂಕ್ಷ್ ಪಾಟೀಲ್, ಇಶಾ ಸಿಂಗ್ (10 ಮೀ. ಏರ್ ಪಿಸ್ತೂಲ್), ಸಿಫ್ತ್ ಕೌರ್ ಸಮ್ರಾ ಮತ್ತು ಅಶಿಕ ಚೋಕ್ಸಿ (50 ಮೀ. ರೈಫಲ್ 3–ಪೊಷಿಷನ್ಸ್) ಅವರು ಪದಕಕ್ಕೆ ಗುರಿಯಿಡಬಲ್ಲ ಸಮರ್ಥರು. ಇವರಿಗೆ ಆತಿಥೇಯ ಚೀನಾದಿಂದಲೇ ಹೆಚ್ಚು ಪೈಪೋಟಿ ಎದುರಾಗಬಹುದು.

19 ವರ್ಷದ ರುದ್ರಾಂಕ್ಷ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಜೊತೆ ಒಲಿಂಪಿಕ್ಸ್‌ಗೆ ಸ್ಥಾನ ಕಾದಿರಿಸಿದ್ದು, ಅವರ ಮೇಲೆ ನಿರೀಕ್ಷೆಯ ಭಾರ ಇದೆ. 10 ಮೀ. ಏರ್ ರೈಫಲ್‌ನಲ್ಲಿ ಮತ್ತೊಬ್ಬ ಪ್ರಮುಖ ಸ್ಪರ್ಧಿ ಎಂದರೆ ಒಲಿಂಪಿಯನ್ ದಿವ್ಯಾಂಶ್ ಸಿಂಗ್ ಪನ್ವರ್. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ನಿರಾಶೆ ಅನುಭವಿಸಿದ ಐಶ್ವರಿ ಪ್ರತಾಪ್ ಇಲ್ಲಿ ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿದ್ದಾರೆ.

ಹಾಕಿ: ಚಿನ್ನ ಗೆದ್ದು ಒಲಿಂಪಿಕ್ಸ್‌ಗೆ ಅರ್ಹತೆ ಗುರಿ

ಭಾರತಕ್ಕೆ ಉಜ್ಬೇಕಿಸ್ತಾನ ಸವಾಲು

ಹಾಂಗ್‌ಝೌ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಮೇಲೆ ಕಣ್ಣಿಟ್ಟಿರುವ ಭಾರತ ಹಾಕಿ ತಂಡ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆಲ್ಲುವ ನೆಚ್ಚಿನ ತಂಡವಾಗಿದೆ. ಭಾನುವಾರ ನಡೆಯುವ ‘ಎ’ ಗುಂಪಿನ ಪಂದ್ಯದಲ್ಲಿ ಭಾರತ ತಂಡ, ಕೆಳ ಕ್ರಮಾಂಕದ ಉಜ್ಬೇಕಿಸ್ತಾನ ತಂಡದ ವಿರುದ್ಧ ದೊಡ್ಡ ಗೆಲುವಿನ ಮೂಲಕ ಅಭಿಯಾನ ಆರಂಭಿಸುವ ವಿಶ್ವಾಸದಲ್ಲಿದೆ.

ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಭಾರತ, ಏಷ್ಯಾದಲ್ಲಿ ಪ್ರಬಲ ಶಕ್ತಿ. ಕಳೆದ ಬಾರಿ ಕಂಚಿನ ಪದಕ ಗೆದ್ದುಕೊಂಡಿದ್ದ ಭಾರತ ತಂಡ ಇತ್ತೀಚಿನ ಪ್ರದರ್ಶನ ಮತ್ತು ಫಾರ್ಮ್ ಆಧಾರದಲ್ಲಿ ಚಿನ್ನದ ಪದಕಕ್ಕೆ ‘ಫೆವರೀಟ್’ ಎನಿಸಿದೆ.

2021ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದ ಭಾರತ, ಈ ವರ್ಷ ಕೋಚ್ ಆಗಿ ನೇಮಕಗೊಂಡಿರುವ ಕ್ರೆಗ್ ಫುಲ್ಟನ್ ಅವರ ಮಾರ್ಗದರ್ಶನದಲ್ಲಿ ಗಮನಾರ್ಹ ಪ್ರದರ್ಶನ ನೀಡಿದೆ. ಚೆನ್ನೈನಲ್ಲಿ ಕಳೆದ ತಿಂಗಳು ಚಾಂಪಿಯನ್ಸ್ ಟ್ರೋಫಿಯಲ್ಲಿ ಜಯಭೇರಿ ಬಾರಿಸಿದ್ದ ಭಾರತ ವಿಶ್ವ ರ್‍ಯಾಂಕಿಂಗ್‌ನಲ್ಲೂ ಬಡ್ತಿ ಪಡೆದಿತ್ತು. ಏಷ್ಯನ್ ಗೇಮ್ಸ್‌ಗೆ ಪೂರ್ವಭಾವಿಯಾಗಿ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲೂ ಕಿರೀಟ ಧರಿಸಿದೆ. ಹರ್ಮನ್‌ಪ್ರೀತ್ ಸಿಂಗ್ ಬಳಗದ ಮೇಲೆ ನಿರೀಕ್ಷೆ ಸಹಜವಾಗಿ ಹೆಚ್ಚಿದೆ.



ಹರ್ಮನ್‌ಪ್ರೀತ್ ಸಿಂಗ್ (ಮಧ್ಯದಲ್ಲಿ) ನಾಯಕತ್ವದ ಭಾರತ ತಂಡ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದೆ


ವಿಶ್ವದರ್ಜೆಯ ಡ್ರ್ಯಾಗ್ ಫ್ಲಿಕರ್ ಹರ್ಮನ್‌ಪ್ರೀತ್ ಜೊತೆ ಸಂಜಯ್, ವರುಣ್ ಕುಮಾರ್, ಅಮಿತ್ ರೋಹಿದಾಸ್ ಅಂಥ ಅನುಭವಿಗಳು ತಂಡದಲ್ಲಿದ್ದಾರೆ. ಮಿಡ್‌ಫೀಲ್ಡ್‌ನಲ್ಲಿ ಮನ್‌ಪ್ರೀತ್, ಉಪನಾಯಕ ಹಾರ್ದಿಕ್ ಸಿಂಗ್, ಯುವ ಉತ್ಸಾಹಿ ವಿವೇಕ್ ಸಾಗರ್ ಪ್ರಸಾದ್ ಅವರ ಬಲ ಇದೆ.

ಭಾರತ ಪುರುಷರ ತಂಡ ಏಷ್ಯನ್ ಗೇಮ್ಸ್‌ನಲ್ಲಿ ಮೂರು ಬಾರಿ ಚಿನ್ನ ಗೆದ್ದಿದೆ. ಆದರೆ ಈ ವಿಷಯದಲ್ಲಿ ಪಾಕಿಸ್ತಾನ (8) ಮತ್ತು ಕೊರಿಯಾ (4) ಭಾರತಕ್ಕಿಂತ ಹೆಚ್ಚು ಸಾಧನೆ ದಾಖಲಿಸಿದೆ. ‘ಎ’ ಗುಂಪಿನಲ್ಲಿ ಭಾರತ, ಉಜ್ಬೇಕಿಸ್ತಾನದ ಜೊತೆ ಪಾಕಿಸ್ತಾನ, ಸಿಂಗಪುರ, ಜಪಾನ್ ಮತ್ತು ಬಾಂಗ್ಲಾದೇಶ ತಂಡಗಳಿವೆ.

ಭಾರತದ ಉಳಿದ ಪಂದ್ಯಗಳು: ಸೆ. 28: ಜಪಾನ್, ಸೆ. 30: ಪಾಕಿಸ್ತಾನ, ಅ. 2: ಬಾಂಗ್ಲಾದೇಶ.

ಏಷ್ಯನ್ ಗೇಮ್ಸ್‌ನಲ್ಲಿ ಇಂದು...

ಮಹಿಳೆಯರ ಕ್ರಿಕೆಟ್: ಭಾರತ–ಬಾಂಗ್ಲಾದೇಶ ಸೆಮಿಫೈನಲ್ (ಬೆಳಿಗ್ಗೆ 6.30)
ಪುರುಷರ ಹಾಕಿ: ಭಾರತ–ಉಜ್ಬೇಕಿಸ್ತಾನ (ಬೆಳಿಗ್ಗೆ 8.45)
ಶೂಟಿಂಗ್: ಪುರುಷರ 10 ಮೀ. ಏರ್ ರೈಫಲ್: ವೈಯಕ್ತಿಕ ಮತ್ತು ತಂಡ ವಿಭಾಗ (ಬೆಳಿಗ್ಗೆ 6)
ರೋಯಿಂಗ್: ಫೈನಲ್ (ಬೆಳಿಗ್ಗೆ 6.30 ರಿಂದ)
ಟೇಬಲ್ ಟನಿಸ್: ಪುರುಷರ ಮತ್ತು ಮಹಿಳೆಯರ ಪ್ರಿ ಕ್ವಾರ್ಟರ್ ಫೈನಲ್ ಹಾಗೂ ಕ್ವಾರ್ಟರ್ ಫೈನಲ್ (ಬೆಳಿಗ್ಗೆ 7.30 ರಿಂದ)
ಬಾಕ್ಸಿಂಗ್: ಮೊದಲ ಸುತ್ತಿನ ಪೈಪೋಟಿ; ನಿಖತ್ ಜರೀನ್, ಜಾಸ್ಮಿನ್ ಲಂಬೋರಿಯ, ಶಿವ ಥಾಪಾ, ಲಕ್ಷ್ಯ ಚಾಹರ್, ಸಂಜೀತ್ (ಬೆಳಿಗ್ಗೆ 11.30 ರಿಂದ)
ಫುಟ್‌ಬಾಲ್: ಮಹಿಳೆಯರ ವಿಭಾಗ; ಭಾರತ– ಥಾಯ್ಲೆಂಡ್ (ಮಧ್ಯಾಹ್ನ 1.30), ಪುರುಷರ ವಿಭಾಗ: ಭಾರತ– ಮ್ಯಾನ್ಮಾರ್ (ಸಂಜೆ 5)
ಟೆನಿಸ್: ಮೊದಲ ಸುತ್ತಿನ ಪಂದ್ಯಗಳು (ಸುಮಿತ್ ನಗಾಲ್, ಅಂಕಿತಾ ರೈನಾ)



ರೋಹನ್ ಬೋಪಣ್ಣ

ಟೆನಿಸ್: ಭಾರತಕ್ಕೆ ಪದಕ ವಿಶ್ವಾಸ

ಹಾಂಗ್‌ಝೌ(ಪಿಟಿಐ): ಏಷ್ಯನ್ ಕ್ರೀಡಾಕೂಟದ ಕಳೆದ ಮೂರು ಆವೃತ್ತಿಗಳಲ್ಲಿಯೂ ಭಾರತದ ಟೆನಿಸ್ ಆಟಗಾರರು ಪದಕ ಜಯಿಸಿದ್ದಾರೆ. ಅದೇ ಲಯವನ್ನು ಈ ಬಾರಿಯೂ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ.

ಅಗ್ರಶ್ರೇಯಾಂಕಿತ ಆಟಗಾರ, ಕನ್ನಡಿಗ ರೋಹನ್ ಬೋಪಣ್ಣ, ಸುಮಿತ್ ನಗಾಲ್ ಹಾಗೂ ಯೂಕಿ ಬಾಂಬ್ರಿ ಅವರು ಚಿನ್ನದ ಪದಕ ಜಯಿಸಬಲ್ಲ ಸಮರ್ಥರಾಗಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಅಂಕಿತಾ ರೈನಾ ಇದ್ದಾರೆ.

ಗುವಾಂಗ್‌ಝೌ, ಇಂಚೆನ್ ಮತ್ತು ಜಕಾರ್ತ ಏಷ್ಯನ್ ಕೂಟಗಳಲ್ಲಿ ಭಾರತ ತಂಡದವರು ಪದಕ ಜಯಿಸಿದ್ದರು. ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರ 100ರಲ್ಲಿರುವ ಬಹುತೇಕ ಆಟಗಾರರು ಯುರೋಪ್ ದೇಶಗಳವರು. ಆದ್ದರಿಂದ ಅವರು ಯಾರೂ ಈ ಕೂಟದಲ್ಲಿ ಇರುವುದಿಲ್ಲ. ಚೀನಾ, ಕೊರಿಯಾ ಮತ್ತು ಜಪಾನ್ ದೇಶಗಳ ಆಟಗಾರರು ಮಾತ್ರ ಭಾರತದ ಆಟಗಾರರಿಗೆ ದಿಟ್ಟ ಪೈಪೋಟಿಯೊಡ್ಡಬಲ್ಲರು.

159ನೇ ರ್‍ಯಾಂಕ್ ಆಟಗಾರ ನಗಾಲ್ ಅವರಿಗೆ ಮೊದಲ ಸುತ್ತಿನಲ್ಲಿ ಬೈ ಲಭಿಸಿದೆ. ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಅಗ್ರಶ್ರೇಯಾಂಕದ ಆಟಗಾರ ಚೀನಾದ ಝಿಜೆನ್ ಝಾಂಗ್ ಅವರನ್ನು ಎದುರಿಸಬೇಕಿದೆ. ವಿಶ್ವ ರ್‍ಯಾಂಕಿಂಗ್‌ನಲ್ಲಿ 60ನೇ ಸ್ಥಾನದಲ್ಲಿರುವ ಝಿಜೆನ್ ಕಠಿಣ ಪೈಪೋಟಿಯೊಡ್ಡುವ ಸಾಧ್ಯತೆ ಇದೆ.

ಪುರುಷರ ಡಬಲ್ಸ್‌ನಲ್ಲಿ ರೋಹನ್ ಬೋಪಣ್ಣ ಅವರು 2018ರಲ್ಲಿ ದಿವಿಜ್ ಶರಣ್ ಜೊತೆಗೆ ಚಿನ್ನ ಜಯಿಸಿದ್ದರು. 43 ವರ್ಷದ ರೋಹನ್ ಡೇವಿಸ್ ಕಪ್ ಟೆನಿಸ್‌ಗೆ ಈಚೆಗೆ ವಿದಾಯ ಹೇಳಿದ್ದರು. ಈ ಬಾರಿಯೂ ತಮ್ಮ ಜಯದ ಓಟ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ.

ನಿಜ್ಜರ್ ಹತ್ಯೆ ಸತ್ಯಾಂಶಗಳನ್ನು ಹೊರತರಲು ಕೆನಡಾಕ್ಕೆ ಭಾರತ ಸಹಕಾರ ನೀಡಬೇಕು: ಜಸ್ಟಿನ್ ಟ್ರುಡೊ

‘ಭಾರತದ ಜತೆ ಪುರಾವೆ ಹಂಚಿಕೊಳ್ಳಲಾಗಿತ್ತು’

ಟೊರಂಟೊ/ನವದೆಹಲಿ (ಪಿಟಿಐ): ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಹಿಂದೆ ಭಾರತದ ಕೈವಾಡ ಇರಬಹುದು ಎಂಬ ಆರೋಪಕ್ಕೆ ಸಂಬಂಧಿಸಿದ ಪುರಾವೆಗಳನ್ನು ‘ಹಲವು ವಾರಗಳ ಹಿಂದೆಯೇ’ ಆ ದೇಶದ ಜೊತೆ ಹಂಚಿಕೊಳ್ಳಲಾಗಿತ್ತು ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಹೇಳಿದ್ದಾರೆ.

ಈ ಗಂಭೀರ ವಿಷಯದಲ್ಲಿ ಸತ್ಯಾಂಶಗಳನ್ನು ಹೊರತರಲು ಭಾರತವು ಕೆನಡಾಕ್ಕೆ ನೆರವು ನೀಡಲು ಬದ್ಧವಾಗಿರಬೇಕು ಎಂದೂ ಆಗ್ರಹಿಸಿದ್ದಾರೆ.

‘ಸಾಬೀತಾಗಬಹುದಾದ ಆರೋಪಗಳನ್ನು ಭಾರತದೊಂದಿಗೆ ನಾವು ಕೆಲ ವಾರಗಳ ಹಿಂದೆಯೇ ಹಂಚಿಕೊಂಡಿದ್ದೇವೆ’ ಎಂದು ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಬ್ರಿಟಿಷ್ ಕೊಲಂಬಿಯಾದಲ್ಲಿ ಜೂನ್ 18ರಂದು ನಡೆದ ನಿಜ್ಜರ್ ಹತ್ಯೆಯಲ್ಲಿ ಭಾರತದ ಪ್ರಬಲ ಪಾತ್ರವಿರುವುದಾಗಿ ಟ್ರುಡೊ ಆರೋಪಿಸಿದ್ದಾರೆ. ಇದರಿಂದಾಗಿ ಎರಡೂ ದೇಶಗಳ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ಏರ್ಪಟ್ಟಿದೆ.

ಕೆನಡಾಕ್ಕೆ ಪರಾರಿಯಾಗಿದ್ದ: ನಿಜ್ಜರ್ ಒಬ್ಬ ಉಗ್ರ. ಆತ ಉಗ್ರರಿಗೆ ತರಬೇತಿ ಶಿಬಿರ ನಡೆಸುತ್ತಿದ್ದ ಮತ್ತು ಭಯೋತ್ಪಾದನಾ ಚಟುವಟಿಕೆಗಳಿಗೆ ಆರ್ಥಿಕ ನೆರವು ಒದಗಿಸುತ್ತಿದ್ದ ಎಂದು ಮೂಲಗಳು ಹೇಳಿವೆ.

ನಿಜ್ಜರ್ ಧಾರ್ಮಿಕ ನಾಯಕನಲ್ಲ ಅಥವಾ ಸಾಮಾಜಿಕವಾಗಿ ಹೆಸರು ಗಳಿಸಿದ ವ್ಯಕ್ತಿಯಲ್ಲ. 1980ರ ದಶಕದ ಕೊನೆಯಲ್ಲಿ ಮತ್ತು 1990ರ ಆರಂಭದಲ್ಲಿ ಪಂಜಾಬ್‌ನಲ್ಲಿ ನಡೆದಿದ್ದ 200 ಜನರ ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿದ್ದ ಗುರ್ದೀಪ್ ಸಿಂಗ್ ಅಲಿಯಾಸ್ ದೀಪಾ ಹೆರನ್‌ವಾಲಾನ ಆಪ್ತ ಸಹಚರ. ಹೆರನ್‌ವಾಲಾ ನಿಷೇಧಿತ ಖಾಲಿಸ್ತಾನ್ ಕಮಾಂಡೊ ಪಡೆಗೆ ಸೇರಿದ್ದ.

ಭಾರತದಲ್ಲಿ ಪೊಲೀಸರು ಬಂಧಿಸುವರೆಂದು ಹೆದರಿ ನಿಜ್ಜರ್ 1996ರಲ್ಲಿ ಕೆನಡಾಕ್ಕೆ ಪರಾರಿಯಾಗಿದ್ದ. ಉಗ್ರರ ಚಟುವಟಿಕೆಗಳಿಗೆ ಹಣ ಒದಗಿಸಲು ಮಾದಕ ವಸ್ತು ಸಾಗಣೆ, ಸುಲಿಗೆಯಂತಹ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಎಂದು ಮೂಲಗಳು ವಿವರಿಸಿವೆ.

ಭಾರತದಲ್ಲಿ ದಾಳಿಗಳನ್ನು ನಡೆಸಲು ಆತ ಕೆನಡಾದ ಬ್ರಿಟಿಷ್ ಕೊಲಂಬಿಯಾದಲ್ಲಿ ಉಗ್ರರ ತರಬೇತಿ ಶಿಬಿರ ನಡೆಸುತ್ತಿದ್ದ. ವರ್ಷದ ಹಿಂದೆ ನಿಷೇಧಿತ ಖಾಲಿಸ್ತಾನ್ ಟೈಗರ್ ಪಡೆ ಅಥವಾ ಕೆಟಿಎಫ್‌ನ ಕಾರ್ಯಾಚರಣೆ ಮುಖ್ಯಸ್ಥನಾಗಿದ್ದ. ಕೆಟಿಎಫ್ ಸದಸ್ಯರಿಗೆ ತರಬೇತಿ, ಆರ್ಥಿಕ ನೆರವು ನೀಡುವಲ್ಲಿ ಈತನ ಪಾತ್ರವಿದೆ ಎಂದು ಭಾರತ ಸರ್ಕಾರ 2020ರಲ್ಲಿ ಆರೋಪಿಸಿತ್ತು.

2012ರಲ್ಲಿ ಪಾಕಿಸ್ತಾನಕ್ಕೆ ಭೇಟಿ ನೀಡಿ ನಿಷೇಧಿತ ಉಗ್ರರ ಸಂಘಟನೆ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್‌ನ ಮುಖ್ಯಸ್ಥ ಜಗತಾರ್ ಸಿಂಗ್ ತಾರಾನ ಸಂಪರ್ಕಕ್ಕೆ ಬಂದಿದ್ದ. ತಾರಾ ಈತನಿಗೆ ಶಸ್ತ್ರಾಸ್ತ್ರ ಪೂರೈಸಿದ್ದಲ್ಲದೆ 2012 ಮತ್ತು 2013ರಲ್ಲಿ ತರಬೇತಿಯನ್ನೂ ನೀಡಿದ್ದ. ನಿಜ್ಜರ್‌ಗೆ ಜಿಪಿಎಸ್ ಸಾಧನ ಬಳಕೆ ಬಗ್ಗೆ ತರಬೇತಿ ನೀಡಲು ಅಮೆರಿಕ ಮೂಲದ ಹರ್ಜೋತ್ ಸಿಂಗ್‌ನನ್ನು ಕೆನಡಾಕ್ಕೆ ಕಳುಹಿಸಲಾಗಿತ್ತು. ನಿಜ್ಜರ್ ಕೂಡ ತಾರಾನಿಗೆ ₹ 2.90 ಲಕ್ಷ ಹಣ ರವಾನಿಸಿದ್ದ ಎಂದು ಮೂಲಗಳು ತಿಳಿಸಿವೆ.

ಈತನ ಅಣತಿಯಂತೆ ನಿಜ್ಜರ್ 2014ರಲ್ಲಿ ಹರಿಯಾಣದ ಸಿರ್ಸಾದಲ್ಲಿನ ಡೇರಾ ಸಚ್ಚಾ ಸೌದಾದ ಕೇಂದ್ರ ಕಚೇರಿ ಮೇಲೆ ದಾಳಿ ನಡೆಸಲು ಯೋಜಿಸಿದ್ದ. ಆದರೆ ಆತನಿಗೆ ಭಾರತದ ವೀಸಾ ಸಿಗದ ಕಾರಣ ಇದು ಸಾಧ್ಯವಾಗಿರಲಿಲ್ಲ ಎಂದು ಹೇಳಿವೆ.

ಈತನ ವಿರುದ್ಧ ಪ್ರಕರಣ ದಾಖಲಿಸಿದ್ದ ಎನ್‌ಐಎ, ಇಂಟರ್‌ಪೋಲ್ ರೆಡ್ ಕಾರ್ನರ್ ನೋಟಿಸನ್ನೂ ನೀಡಿತ್ತು. ಕೆನಡಾದಲ್ಲಿ ಭಾರತ ವಿರೋಧಿ ಪ್ರತಿಭಟನೆಗಳನ್ನು ಮಾಡಿದ್ದ ಮತ್ತು ಭಾರತದ ರಾಜತಾಂತ್ರಿಕರಿಗೆ ಬೆದರಿಕೆ ಒಡ್ಡಿದ್ದ ಎಂದು ಮೂಲಗಳು ತಿಳಿಸಿವೆ.



ಪಂಜಾಬ್‌ನ ಅಮೃತಸರದಲ್ಲಿ ಶನಿವಾರ ನಡೆದ ರ‍್ಯಾಲಿಯಲ್ಲಿ ಶಿವಸೇನಾ ಟಕಸಾಲಿ ಕಾರ್ಯಕರ್ತರು ಕೆನಡಾ ರಾಷ್ಟ್ರೀಯ ಧ್ವಜ ಮತ್ತು ಪ್ರಧಾನಿ ಜಸ್ಟಿನ್ ಟ್ರುಡೊ ಅವರ ಚಿತ್ರವಿರುವ ಭಿತ್ತಿಪತ್ರಕ್ಕೆ ಬೆಂಕಿ ಹಚ್ಚಿದರು ಎಎಫ್‌ಪಿ ಚಿತ್ರ

‘ಮೊದಲು ಸತ್ಯ ಹೊರ ಬರಲಿ’

‘ಆರೋಪ ಸಾಬೀತಾಗುವವರೆಗೆ ಪ್ರತಿಯೊಬ್ಬರೂ ಅಮಾಯಕರೇ, ಮೊದಲು ಸತ್ಯ ಹೊರ ಬರಲಿ’ ಎಂದು ಕೆನಡಾಕ್ಕೆ ಈ ಹಿಂದೆ ಭಾರತದ ರಾಜತಾಂತ್ರಿಕ ಅಧಿಕಾರಿಯಾಗಿದ್ದ ವಿಕಾಸ್ ಸ್ವರೂಪ್ ಹೇಳಿದ್ದಾರೆ.

ಉಭಯ ರಾಷ್ಟ್ರಗಳ ರಾಜತಾಂತ್ರಿಕ ಬಿಕ್ಕಟ್ಟು ಉಲ್ಬಣಕ್ಕೆ ಕಾರಣರಾದ ಪ್ರಧಾನಿ ಟುಡ್ರೊ ಅವರ ಅಜಾಗರೂಕ ಹೇಳಿಕೆಯನ್ನು ಟೀಕಿಸಿದ ಅವರು, ವಿವಾದವನ್ನು ತಣಿಸಲು ಕೆನಡಾ ಕ್ರಮ ಕೈಗೊಳ್ಳಬೇಕು ಮತ್ತು ಸತ್ಯ ಹೊರಬರಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಸ್ವರೂಪ್ ಅವರು 2017ರಿಂದ 2019ರವರೆಗೆ ಕೆನಡಾದಲ್ಲಿ ಭಾರತದ ಹೈಕಮಿಷನರ್ ಆಗಿ ಸೇವೆ ಸಲ್ಲಿದ್ದರು. ಖಾಲಿಸ್ತಾನಿ ಪ್ರತ್ಯೇಕತಾವಾದಿಗಳಿಗೆ ಸುರಕ್ಷಿತ ತಾಣ ಒದಗಿಸುವುದಕ್ಕೆ ಕೆನಡಾ ಮುಂಬರುವ ದಿನಗಳಲ್ಲಿ ವಿಷಾದಿಸಬೇಕಾಗುತ್ತದೆ ಎಂದರು.

> **ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡವಿದೆ ಎಂದು ಟ್ರುಡೊ ಆರೋಪಿಸಲು ‘ಫೈವ್ ಐಸ್ ಇಂಟೆಲಿಜೆನ್ಸ್ ನೆಟ್‌ವರ್ಕ್’ ಸಂಸ್ಥೆ ನೀಡಿದ್ದ ಗುಪ್ತಚರ ಮಾಹಿತಿ ಕಾರಣ**
>
> **ಡೇವಿಡ್ ಕೋಹೆನ್,** ಕೆನಡಾದ ಅಮೆರಿಕ ರಾಯಭಾರಿ

ವಿವಾದ ಇಲ್ಲಿಗೇ ಕೈಬಿಡಿ: ಡೆಲ್ಗಾಡೊ

ವಾಷಿಂಗ್ಟನ್ (ಪಿಟಿಐ): ಭಾರತ ಮತ್ತು ಕೆನಡಾ ನಡುವಣ ವ್ಯಾಪಾರ ಸಂಬಂಧ ಹದಗೆಡದಂತೆ ಕಾಪಾಡುವ ನಿಟ್ಟಿನಲ್ಲಿ ಉಭಯ ದೇಶಗಳು ಈ ವಿವಾದವನ್ನು ಇಲ್ಲಿಗೇ ಕೈಬಿಡಬೇಕು ಎಂದು ತಜ್ಞ, ಕೆನಡಾ ಇನ್‌ಸ್ಟಿಟ್ಯೂಟ್‌ನ ವಿಶ್ಲೇಷಕ ಝುವೇರ್ ಡೆಲ್ಗಾಡೊ ಅವರು ಸಲಹೆ ನೀಡಿದ್ದಾರೆ.

ಈ ಕುರಿತ ಇವರ ಬರಹವನ್ನು ವಿಲ್ಸನ್ ಇನ್‌ಸ್ಟಿಟ್ಯೂಟ್ ಶುಕ್ರವಾರ ಪೋಸ್ಟ್ ಮಾಡಿದೆ. ಈ ದ್ವಿಪಕ್ಷೀಯ ಕಲಹದಿಂದ ಬಹುವಾಗಿ ಹೊಡೆತ ಬೀಳುವುದು ವ್ಯಾಪಾರ ವ್ಯವಹಾರಕ್ಕೆ. ಉಭಯ ದೇಶಗಳ ನಡುವಿನ ಅರ್ಲಿ ಪ್ರೋಗ್ರೆಸ್ ಟ್ರೇಡ್ ಅಗ್ರೀಮೆಂಟ್‌ಗೆ (ಎರಡು ದೇಶಗಳ ನಡುವೆ ನಡೆಯುವ ಸರಕು ವಹಿವಾಟಿನ ಮೇಲಿನ ಸುಂಕ ಕಡಿತಗೊಳಿಸುವ ಅಥವಾ ರದ್ದುಪಡಿಸುವ ಒಪ್ಪಂದ) ಈಗಾಗಲೇ ತಡೆ ನೀಡಲಾಗಿದೆ. ವಾಣಿಜ್ಯ ಮಾತುಕತೆಗಳು ಮುರಿದುಬಿದ್ದಿರುವುದರಿಂದ ಸುಮಾರು ₹ 141 ಕೋಟಿ ಮೊತ್ತದ ವಾಣಿಜ್ಯ ವಹಿವಾಟು ಸಂಕಷ್ಟದಲ್ಲಿದೆ ಎಂದು ಅವರು ಹೇಳಿದ್ದಾರೆ.

ವಾಣಿಜ್ಯ ಸಂಬಂಧ ಹದಗೆಟ್ಟರೆ ಭಾರತದಿಂದ ಕೆನಡಾಕ್ಕೆ ವಲಸೆ ಬರುವವರ ಸಂಖ್ಯೆಯೂ ಕಡಿಮೆಯಾಗಲಿದೆ. ಇದಲ್ಲದೇ ಭಾರತದ ಪ್ರಭಾವ ಹೆಚ್ಚಿರುವ ಇಂಡೋ–ಪೆಸಿಫಿಕ್ ಕಾರ್ಯತಂತ್ರದ ಭಾಗವಾಗುವ ಅವಕಾಶವೂ ಕೆನಡಾದ ಕೈತಪ್ಪಿ ಹೋಗಬಹುದು ಎಂದು ಹೇಳಿದ್ದಾರೆ.

ಈಗಿನ ರಾಜತಾಂತ್ರಿಕ ಬಿಕ್ಕಟ್ಟಿನಿಂದ ಕೆನಡಾಕ್ಕೆ ಮಾತ್ರ ನಷ್ಟವಾಗುವುದಿಲ್ಲ. ‘ಪ್ರಜಾಪ್ರಭುತ್ವವಾದಿ ರಾಷ್ಟ್ರ’ ಎಂಬ ಭಾರತದ ಹೆಗ್ಗಳಿಕೆಗೆ ಈ ವಿವಾದದಿಂದ ಹಾನಿಯಾಗಬಹುದು. ಅಲ್ಲದೇ, ಚೀನಾ ವಿರುದ್ಧದ ಸ್ಪರ್ಧೆಯಲ್ಲಿ ಭಾರತವು ‘ನಂಬಿಕಸ್ಥ ಮಿತ್ರರಾಷ್ಟ್ರ’ ಎಂಬ ವಿಶ್ವಾಸ ಗಳಿಸಿದೆ. ಈ ವಿಶ್ವಾಸಕ್ಕೆ ಧಕ್ಕೆ ಆಗಬಹುದು ಎಂದು ಡೆಲ್ಗಾಡೊ ಹೇಳಿದ್ದಾರೆ.

‘ಆನ್‌ಲೈನ್ ದ್ವೇಷಪೂರಿತ ವಿಡಿಯೊ’ ಖಂಡಿಸಿದ ಕೆನಡಾ ಅಧಿಕಾರಿಗಳು

ಕೆನಡಾದ ಸಾರ್ವಜನಿಕ ಭದ್ರತೆ ಇಲಾಖೆಯ ಉನ್ನತಾಧಿಕಾರಿಗಳು ಮತ್ತು ರಾಜಕಾರಣಿಗಳು ‘ಆನ್‌ಲೈನ್ ದ್ವೇಷಪೂರಿತ ವಿಡಿಯೊ’ವನ್ನು ಖಂಡಿಸಿರುವುದಾಗಿ ಹೇಳಿದ್ದಾರೆ.

‘ಕೆನಡಾದಲ್ಲಿ ನೆಲೆಸಿರುವ ಭಾರತೀಯ ಹಿಂದೂಗಳು ಸ್ವದೇಶಕ್ಕೆ ಮರಳಿ’ ಎಂದು ಬೆದರಿಕೆಯೊಡ್ಡಿ ಖಾಲಿಸ್ತಾನಿ ಪರ ಸಂಘಟನೆಯೊಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ವಿಡಿಯೊ ಭಾರಿ ಸದ್ದುಮಾಡಿದ ಬಳಿಕ ಈ ಬೆಳವಣಿಗೆ ನಡೆದಿದೆ. ಆದರೆ, ಅಧಿಕಾರಿಗಳಾಗಲೀ ಅಥವಾ ರಾಜಕಾರಣಿಗಳಾಗಲೀ ತಾವು ಖಂಡಿಸಿರುವ ವಿಡಿಯೊ ಯಾವುದು ಎಂಬುದನ್ನು ಎಲ್ಲಿಯೂ ಉಲ್ಲೇಖಿಸಿಲ್ಲ ಎಂದು ಕೆನಡಾದ ಕೆನಡಿಯನ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ನ ವರದಿಯಲ್ಲಿ ಹೇಳಲಾಗಿದೆ.

ಯಾರು ಏನೆಂದರು?

- ಟ್ರುಡೊ ಹೇಳಿಕೆಯು ಅಮೆರಿಕವನ್ನು ತೀವ್ರ ಕಳವಳಕ್ಕೀಡು ಮಾಡಿದೆ: ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್
- ದೇಶಗಳ ನಡುವಿನ ದಮನಕಾರಿ ಕೃತ್ಯದಂಥ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು : ಅಮೆರಿಕ
- ಭಾರತ– ಕೆನಡಾ ಬಿಕ್ಕಟ್ಟು ಕೇವಲ ರಾಜಕೀಯ ಗಿಮಿಕ್: ಕಾಶ್ಮೀರ ಮೂಲದ ಸರ್ವ ಪಕ್ಷಗಳ ಸಿಖ್ ಸಹಯೋಗ ಸಮಿತಿ

ಬಿಧೂಡಿ ವಿರುದ್ಧ ಕ್ರಮ: ಸ್ಪೀಕರ್‌ಗೆ ವಿಪಕ್ಷಗಳ ಒತ್ತಡ

ನವದೆಹಲಿ (ಪಿಟಿಐ): ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ಕುರಿತು ಸದನದಲ್ಲಿ ಆಕ್ಷೇಪಾರ್ಹ ಹೇಳಿಕೆ ನೀಡಿದ ಬಿಜೆಪಿಯ ರಮೇಶ್ ಬಿಧೂಡಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ವಿರೋಧ ಪಕ್ಷದ ನಾಯಕರು ಶನಿವಾರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ಮೇಲೆ ಒತ್ತಡ ಹೇರಿದ್ದಾರೆ.

ಬಿಧೂಡಿ ಹೇಳಿಕೆಯಿಂದ ಬಿಜೆಪಿ ಟೀಕೆಗೆ ಗುರಿಯಾಗುತ್ತಿದ್ದಂತೆ, ಪಕ್ಷದ ಸಂಸದ ನಿಶಿಕಾಂತ್ ದುಬೆ ಅವರು ಸದನದಲ್ಲಿ ಅಲಿ ಅವರ ವರ್ತನೆಯನ್ನು ಪ್ರಶ್ನಿಸಿದ್ದಾರೆ. ಟಿಎಂಸಿ ಮತ್ತು ಡಿಎಂಕೆ ಪಕ್ಷಗಳ ಸದಸ್ಯರು ನೀಡಿದ ಹೇಳಿಕೆಗಳನ್ನು ಪರಿಶೀಲಿಸಲು ವಿಚಾರಣಾ ಸಮಿತಿ ರಚಿಸುವಂತೆ ಸ್ಪೀಕರ್ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಬಿಧೂಡಿ ಹೇಳಿಕೆಗಳನ್ನು ಖಂಡಿಸಲಾಗುವುದು. ಯಾವುದೇ ನಾಗರಿಕ ಸಮಾಜವು ಅಂತಹ ಹೇಳಿಕೆಗಳನ್ನು ಸಮರ್ಥಿಸಲು ಸಾಧ್ಯವಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಅಲಿ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅತ್ಯಂತ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದಾರೆ. ಇದು ಆಡಳಿತ ಪಕ್ಷದ ಸದಸ್ಯರನ್ನು ಕೆರಳಿಸಿದೆ ಎಂದು ದುಬೆ ಆರೋಪಿಸಿದ್ದಾರೆ.

ಅಲಿ ಅವರ ಅಸಭ್ಯ ವರ್ತನೆ ಮತ್ತು ಹೇಳಿಕೆಗಳ ಬಗ್ಗೆಯೂ ಸ್ಪೀಕರ್ ತನಿಖೆ ನಡೆಸಬೇಕು. ನಿಯಮಗಳ ಪ್ರಕಾರ, ಇನ್ನೊಬ್ಬ ಸಂಸದರಿಗೆ ನಿಗದಿಪಡಿಸಿದ ಸಮಯದಲ್ಲಿ ಅಡ್ಡಿಪಡಿಸುವುದು, ಕುಳಿತು ಮಾತನಾಡುವುದು ಮತ್ತು ರನ್ನಿಂಗ್ ಕಾಮೆಂಟರಿ ನೀಡುವುದು ಸಹ ಶಿಕ್ಷೆಗೆ ಅರ್ಹ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಿಧೂಡಿ ವಿರುದ್ಧ ಕ್ರಮಕೈಗೊಳ್ಳುವಂತೆ ಬಿಆರ್‌ಎಸ್‌ನ ವಿಧಾನ ಪರಿಷತ್ ಸದಸ್ಯೆ ಕೆ.ಕವಿತಾ ಹಾಗೂ ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಸಹ ಸ್ಪೀಕರ್ ಅವರನ್ನು ಆಗ್ರಹಿಸಿದರೆ, ಶಿವಸೇನಾ ರಾಜ್ಯಸಭಾ ಸಂಸದೆ ಪ್ರಿಯಾಂಕಾ ಚತುರ್ವೇದಿ ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಹರಿಯಾಣ ಕಾಂಗ್ರೆಸ್ ಮುಖ್ಯಸ್ಥ ಉದಯ್ ಭಾನ್ ಅವರು ಪ್ರಧಾನಿ ಮೋದಿ ಮತ್ತು ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎನ್ನಲಾದ ವಿಡಿಯೊ ತುಣುಕನ್ನು ತ್ರಿಪುರಾದ ಮಾಜಿ ಮುಖ್ಯಮಂತ್ರಿ ಬಿಪ್ಲಬ್ ಕುಮಾರ್ ದೇಬ್ ಅವರು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ. ಯಾವುದೇ ವಿರೋಧ ಪಕ್ಷದ ನಾಯಕರು ಇದನ್ನು ಖಂಡಿಸಿದ್ದಾರೆಯೇ ಎಂದು ಅವರು ಪ್ರಶ್ನಿಸಿದ್ದಾರೆ.

ಬಿಧೂಡಿ ಹೇಳಿಕೆಗಳ ಬಗ್ಗೆ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್, ಈ ವಿಷಯದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಮೌನವನ್ನು ಪ್ರಶ್ನಿಸಿದ್ದಾರೆ.

‘ಏಳು ಸ್ಟಾರ್ ಕಟ್ಟಡ’ದ ಸಂಸತ್ತಿನಲ್ಲಿ ‘ದ್ವೇಷ’ದ ಹೊಸ ಸಂಸ್ಕೃತಿ ಉದ್ಘಾಟಿಸಲಾಗಿದೆ ಎಂದಿದ್ದಾರೆ.

‘ಸ್ಪೀಕರ್ ಜವಾಬ್ದಾರಿ’

ನವದೆಹಲಿ: ಡ್ಯಾನಿಶ್ ಅಲಿ ಬಗ್ಗೆ ರಮೇಶ್ ಬಿಧೂಡಿ ನೀಡಿರುವ ಹೇಳಿಕೆಯನ್ನು ಶನಿವಾರ ಖಂಡಿಸಿರುವ ಪ್ರಮುಖ ಮುಸ್ಲಿಂ ಸಂಘಟನೆ ಜಮೈತ್ ಉಲೇಮ–ಇ–ಹಿಂದ್, ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳುವುದು ಸ್ಪೀಕರ್ ಓಂ ಬಿರ್ಲಾ ಅವರ ಸಾಂವಿಧಾನಿಕ ಮತ್ತು ನೈತಿಕ ಜವಾಬ್ದಾರಿಯಾಗಿದೆ ಎಂದು ಹೇಳಿದೆ.

ಈ ಕುರಿತು ಹೇಳಿಕೆ ನೀಡಿರುವ ಜಮೈತ್ ಮುಖ್ಯಸ್ಥ ಮೌಲಾನ ಅರ್ಷದ್ ಮದನಿ, ಆಡಳಿತ ಪಕ್ಷದ ಸಂಸದರೊಬ್ಬರು ಸಂಸತ್ತಿನಲ್ಲಿ ಮುಸ್ಲಿಂ ಸಂಸದರೊಬ್ಬರಿಗೆ ಅಸಂಸದೀಯ ಭಾಷೆ ಬಳಸಿದ ರೀತಿ ದೇಶದ ಪ್ರಜಾಪ್ರಭುತ್ವ ಇತಿಹಾಸದಲ್ಲಿ ನಾಚಿಕೆಗೇಡಿನ ಘಟನೆಯಾಗಿದೆ ಎಂದು ಹೇಳಿದ್ದಾರೆ.

ಅವಕಾಶವಾದಿತನ ಉಲ್ಲೇಖಿಸಿ ಹೇಳಿಕೆ ನೀಡಿದ್ದೆ: ಹರಿಪ್ರಸಾದ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪರೋಕ್ಷವಾಗ್ದಾಳಿ ನಡೆಸಿದ ಕಾರಣಕ್ಕೆ ಎಐಸಿಸಿ ಶಿಸ್ತು ಸಮಿತಿಯಿಂದ ಷೋಕಾಸ್ ನೋಟಿಸ್ ಪಡೆದಿದ್ದ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅದಕ್ಕೆ ಉತ್ತರ ನೀಡಿದ್ದಾರೆ.



ಹರಿಪ್ರಸಾದ್

ಬೆಂಗಳೂರಿನ ಅರಮನೆ ಮೈದಾನದಲ್ಲಿ ಸೆಪ್ಟೆಂಬರ್ 9ರಂದು ನಡೆದಿದ್ದ ಈಡಿಗ ಮತ್ತು ಅತಿ ಹಿಂದುಳಿದ ವರ್ಗಗಳ ಸಮಾನ ಮನಸ್ಕರ ಪೂರ್ವಭಾವಿ ಸಭೆಯಲ್ಲಿ ಹರಿಪ್ರಸಾದ್ ಅವರು ಸಿದ್ದರಾಮಯ್ಯರ ಹೆಸರು ಹೇಳದೆಯೇ ಭಾಷಣದುದ್ದಕ್ಕೂ ಟೀಕಾಪ್ರಹಾರ ನಡೆಸಿದ್ದರು. ‘ಹ್ಯೂಬ್ಲೋ ವಾಚ್ ಕಟ್ಟಿಕೊಂಡು, ಪಂಚೆ ಉಟ್ಟುಕೊಂಡು ಒಳಗೆ ಖಾಕಿ ಚಡ್ಡಿ ಧರಿಸುವುದು ಸಮಾಜವಾದವಲ್ಲ’ ಎಂದು ವ್ಯಂಗ್ಯವಾಗಿ ಹೇಳಿದ್ದರು. ಹರಿಪ್ರಸಾದ್ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಹೈಕಮಾಂಡ್‌ಗೆ ಸಿದ್ದರಾಮಯ್ಯ ದೂರು ನೀಡಿದ್ದರು.

ಸೆಪ್ಟೆಂಬರ್ 12ರಂದು ಷೋಕಾಸ್ ನೋಟಿಸ್ ನೀಡಿದ್ದ ಶಿಸ್ತುಸಮಿತಿ, 10 ದಿನಗಳಲ್ಲಿ ಉತ್ತರ ನೀಡುವಂತೆ ಸೂಚಿಸಿತ್ತು.

ಉತ್ತರದಲ್ಲಿ ಏನಿದೆ?: ಇದೀಗ ಉತ್ತರ ನೀಡಿರುವ ಹರಿಪ್ರಸಾದ್, ‘ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತ. ರಾಷ್ಟ್ರೀಯ ಮಟ್ಟದಲ್ಲಿ ಅನೇಕ ಹುದ್ದೆಗಳನ್ನು ನಿಭಾಯಿಸಿದ ಅನುಭವಿ. ಯಾರನ್ನೂ ಉದ್ದೇಶಿಸಿ ಈ ಹೇಳಿಕೆ ನೀಡಿರಲಿಲ್ಲ. ರಾಜಕಾರಣದಲ್ಲಿ ಅವಕಾಶವಾದಿಗಳಿಗೆ ಹೇರಳ ಅವಕಾಶ ಸಿಗುತ್ತಿದೆ. ತತ್ವ ಸಿದ್ಧಾಂತಗಳಿಗೆ ಬೆಲೆ ಇಲ್ಲ ಎಂಬುದನ್ನು ಪ್ರಾಸಂಗಿಕವಾಗಿ ಹೇಳಿದ್ದೆ. ಪಕ್ಷದ ವರ್ಚಸ್ಸಿಗೆ ಹಾನಿ ಉಂಟು ಮಾಡುವಂತಹ ಕೆಲಸಗಳನ್ನು ಯಾವತ್ತೂ ಮಾಡಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಕೆಲವು ನಾಯಕರು ತಮ್ಮನ್ನು ನಡೆಸಿಕೊಂಡ ರೀತಿಯ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಕರ್ನಾಟಕ ವಿಧಾನಸಭಾ ಚುನಾವಣೆಗೆ ಕಾರ್ಯತಂತ್ರ ಹೆಣೆಯುವಾಗ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ, ಪ್ರಚಾರ ಸಮಿತಿಯ ಅಧ್ಯಕ್ಷರಾಗಿದ್ದ ಎಂ.ಬಿ.ಪಾಟೀಲ ಹಾಗೂ ಪ್ರಣಾಳಿಕೆಯ ಸಮಿತಿಯ ಅಧ್ಯಕ್ಷರಾಗಿದ್ದ ಜಿ.ಪರಮೇಶ್ವರ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕನಾಗಿದ್ದ ನಾನು ಜತೆಗೂಡಿ ಕೆಲಸ ಮಾಡಿದ್ದೆವು. ಬಿಜೆಪಿ ಸರ್ಕಾರದ ವಿರುದ್ಧ ಜತೆಗೂಡಿ ಹೋರಾಟ ಮಾಡಿದ್ದೆವು. ಆದರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ನಡೆದಿದ್ದೇ ಬೇರೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾದರು. ಶಿವಕುಮಾರ್ ಉಪಮುಖ್ಯಮಂತ್ರಿಯಾದರು. ಉಳಿದ ಇಬ್ಬರು ಸಚಿವರಾದರು. ಆದರೆ, ಸಮಾನವಾಗಿ ದುಡಿದಿದ್ದ ನನಗೆ ಅವಕಾಶ ಸಿಗಲಿಲ್ಲ. ಯಾಕೆ ಈ ರೀತಿ ಆಯಿತು ಎಂಬ ಬಗ್ಗೆ ಈವರೆಗೂ ಯಾರೂ ನನ್ನೊಂದಿಗೆ ಚರ್ಚಿಸಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ನಾನು ಈ ಹಿಂದೆ ರಾಜ್ಯಸಭಾ ಸದಸ್ಯನಾಗಿದ್ದೆ. ಅವಧಿ ಮುಗಿದ ಬಳಿಕ ಕಾಂಗ್ರೆಸ್ ವರಿಷ್ಠೆ ಸೋನಿಯಾ ಗಾಂಧಿ ಕರೆ ಮಾಡಿದ್ದರು. ಮಲ್ಲಿಕಾರ್ಜುನ ಖರ್ಗೆ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಬೇಕಿದೆ. ಹೀಗಾಗಿ, ಈ ಸಲ ನಿಮಗೆ ಅವಕಾಶ ನೀಡಲು ಆಗುವುದಿಲ್ಲ ಎಂದೂ ಹೇಳಿದ್ದರು. ಪಕ್ಷದ ಅಧಿನಾಯಕಿ ಅವರಿಗೆ ಇರುವ ಸೌಜನ್ಯ ರಾಜ್ಯ ನಾಯಕರಲ್ಲಿ ಕಾಣಲಿಲ್ಲ’ ಎಂದು ಅವರು ಉತ್ತರದಲ್ಲಿ ಹೇಳಿದ್ದಾರೆ.

ಜತೆಗೆ, ಶಿಸ್ತುಸಮಿತಿಯ ಅಧ್ಯಕ್ಷ ಎ.ಕೆ. ಆ್ಯಂಟನಿ, ಸದಸ್ಯರಾದ ಅಂಬಿಕಾ ಸೋನಿ ಹಾಗೂ ತಾರಿಕ್ ಅನ್ವರ್ ಅವರನ್ನು ಭೇಟಿ ಮಾಡಿ ವಿವರಣೆ ನೀಡಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆಯೂ ವರಿಷ್ಠರಿಗೆ ಮಾಹಿತಿ ನೀಡಿದ್ದಾರೆ ಎಂದು ಹೈಕಮಾಂಡ್ ಮೂಲಗಳು ತಿಳಿಸಿವೆ.

ತಾವು ನೀಡಿರುವ ಉತ್ತರ ಸಿಕ್ಕಿದೆ ಎಂದು ಶಿಸ್ತುಸಮಿತಿಯ ಸದಸ್ಯರು ಹರಿಪ್ರಸಾದ್ ಅವರಿಗೆ ತಿಳಿಸಿದ್ದಾರೆ. ಜತೆಗೆ, ಈ ಉತ್ತರವನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕಳುಹಿಸಿಕೊಟ್ಟಿದ್ದಾರೆ.

‘ಜಾತಿ ಗಣತಿ: ಮೋದಿಗೆ ಭಯ ಏಕೆ?’

ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಸೈದ್ಧಾಂತಿಕ ಹೋರಾಟ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ

ಜೈಪುರ (ಪಿಟಿಐ): ದೇಶದಲ್ಲಿ ಜಾತಿ ಗಣತಿ ನಡೆಸಲು ಪ್ರಧಾನಿ ನರೇಂದ್ರ ಮೋದಿ ಅವರು ಏಕೆ ಹೆದರುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಪ್ರಶ್ನಿಸಿದ್ದಾರೆ.

ಪಕ್ಷದ ಕಾರ್ಯಕರ್ತರ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, ‘ಇಂಡಿಯಾ ಹೆಸರನ್ನು ಭಾರತ ಎಂದು ಬದಲಾಯಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯಲಾಯಿತು. ಆದರೆ, ಸದನದಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡಿಸಲಾಯಿತು’ ಎಂದು ಹೇಳಿದ್ದಾರೆ.

ಮಹಿಳಾ ಮೀಸಲಾತಿಯನ್ನು ಸಂಸತ್ ಮತ್ತು ವಿಧಾನಸಭೆಗಳಲ್ಲಿ ಇಂದೇ ಜಾರಿಗೆ ತರಬಹುದು. ಆದರೆ, ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಮತ್ತು ಹೊಸ ಜನಗಣತಿಯ ನೆಪದಲ್ಲಿ ಕೇಂದ್ರ ಸರ್ಕಾರ ಅದನ್ನು 10 ವರ್ಷಗಳವರೆಗೆ ಮುಂದೂಡಲು ಬಯಸಿದೆ ಎಂದು ಟೀಕಿಸಿದರು.

‘ಒಬಿಸಿ ಮಹಿಳೆಯರಿಗೆ ಮೀಸಲಾತಿ ನೀಡುವ ಬಗ್ಗೆ ಮಾತನಾಡಿದರೆ, ಜಾತಿ ಗಣತಿ ಇಲ್ಲದೆ ಅದನ್ನು ಮಾಡಲು ಸಾಧ್ಯವಿಲ್ಲ. ಪ್ರಧಾನಿ ಅವರು ದಿನದ 24 ತಾಸು ಒಬಿಸಿಗಳ ಬಗ್ಗೆ ಮಾತನಾಡುತ್ತಾರೆ. ಒಬಿಸಿ ವರ್ಗದವರನ್ನು ಗೌರವಿಸುವ ಬಗ್ಗೆ ಅವರು ಮಾತನಾಡುತ್ತಾರೆ. ಹಾಗಾದರೆ ಜಾತಿ ಗಣತಿಗೆ ಏಕೆ ಹೆದರುತ್ತಾರೆ’ ಎಂದು ರಾಹುಲ್ ಪ್ರಶ್ನಿಸಿದ್ದಾರೆ.

‘ಕಾಂಗ್ರೆಸ್ ಜಾತಿ ಗಣತಿ ನಡೆಸಿದೆ ಎಂಬುದನ್ನು ದಯವಿಟ್ಟು ನಿಮ್ಮ ಮುಂದಿನ ಭಾಷಣದಲ್ಲಿ ಭಾರತಕ್ಕೆ ತಿಳಿಸಿ. ನಿಮ್ಮ ಬಳಿಯಿರುವ ಅಂಕಿ ಅಂಶಗಳನ್ನು ದೇಶದ ಜನರಿಗೆ ಹೇಳಿ. ಮುಂದಿನ ಜನಗಣತಿಯನ್ನು ಜಾತಿ ಆಧಾರದ ಮೇಲೆ ನಡೆಸಬೇಕು. ಒಬಿಸಿ ವರ್ಗದವರನ್ನು ಅವಮಾನಿಸಬೇಡಿ. ಅವರಿಗೆ ಮೋಸ ಮಾಡಬೇಡಿ’ ಎಂದು ಅವರು ಪ್ರಧಾನಿಗೆ ಮನವಿ ಮಾಡಿದರು.

‘ನಾನು ಸಂಸತ್ತಿನಲ್ಲಿ ಜಾತಿ ಗಣತಿ ವಿಷಯ ಪ್ರಸ್ತಾಪಿಸಿದ ಕೂಡಲೇ, ಬಿಜೆಪಿ ಸಂಸದರು ನನ್ನ ಧ್ವನಿ ಅಡಗಿಸಲು ಪ್ರಯತ್ನಿಸಿದರು’ ಎಂದು ದೂರಿದರು.

ದೇಶದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಸೈದ್ಧಾಂತಿಕ ಹೋರಾಟ ನಡೆಯುತ್ತಿದೆ. ಅದಾನಿ ಮತ್ತು ಮೋದಿ ನಡುವಿನ ಸಂಬಂಧದ ಬಗ್ಗೆ ಬಿಜೆಪಿ ಕಾರ್ಯಕರ್ತರನ್ನು ಕೇಳಿದರೆ, ಅವರು ಓಡಿಹೋಗುತ್ತಾರೆ ಎಂದು ರಾಹುಲ್ ವ್ಯಂಗ್ಯವಾಡಿದರು.



ಜೈಪುರದಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಮಾವೇಶದಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಸಂಸದ ರಾಹುಲ್ ಗಾಂಧಿ ಪಾಲ್ಗೊಂಡಿದ್ದರು ಪಿಟಿಐ ಚಿತ್ರ

ಅಧಿಕಾರಕ್ಕೆ ಬಂದರೆ ಮಹಿಳಾ ಮೀಸಲು ಮಸೂದೆಗೆ ತಿದ್ದುಪಡಿ: ಖರ್ಗೆ

2024ರಲ್ಲಿ ಕೇಂದ್ರದಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ಮಹಿಳಾ ಮೀಸಲಾತಿ ಮಸೂದೆಗೆ ತಿದ್ದುಪಡಿ ತರಲಾಗುವುದು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಪಕ್ಷದ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ‘ಕೇಂದ್ರದಲ್ಲಿ ನಮ್ಮ ಸರ್ಕಾರ ಬಂದರೆ ಮಾಡುವ ಮೊದಲ ಕೆಲಸವೆಂದರೆ ಮಸೂದೆಗೆ ತಿದ್ದುಪಡಿ ಮಾಡುವುದು. ಈಗ ಮಸೂದೆ ಜಾರಿಗೆ ತರುವಲ್ಲಿ ಯಾವುದೇ ಪ್ರಮುಖ ಕಾನೂನು ತೊಡಕುಗಳಿಲ್ಲ ಎಂದು ತಿಳಿಸಿದ್ದಾರೆ.

‘ಮಹಿಳಾ ಮಸೂದೆ ಮಂಡನೆಯ ಹಿಂದಿನ ಉದ್ದೇಶವೇನು? ಮಹಿಳೆಯರಿಗೆ ಮೀಸಲಾತಿ ನೀಡಲು ಬಿಜೆಪಿ ಬಯಸುವುದಿಲ್ಲ’ ಎಂದರು.

‘ಸರೋಜಿನಿ ನಾಯ್ಡು ಅವರು ಕಾಂಗ್ರೆಸ್‌ನ ಪ್ರಥಮ ಮಹಿಳಾ ಅಧ್ಯಕ್ಷರಾಗಿದ್ದರು. ನೂರು ವರ್ಷಗಳಲ್ಲಿ ಯಾವುದೇ ಮಹಿಳೆ, ಬಿಜೆಪಿ ಅಥವಾ ಆರ್‌ಎಸ್‌ಎಸ್ ಅಧ್ಯಕ್ಷರಾಗಿದ್ದಾರೆಯೇ?’ ಎಂದು ಪ್ರಶ್ನಿಸಿದರು.

ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸದಿದ್ದರೆ ಜನರು ಗುಲಾಮರಾಗುತ್ತಾರೆ ಎಂದು ಖರ್ಗೆ ಎಚ್ಚರಿಕೆ ನೀಡಿದರು.

‘ಅಸ್ಪೃಶ್ಯರೆಂಬ ಕಾರಣಕ್ಕೆ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಹೊಸ ಸಂಸತ್ ಭವನದ ಶಂಕುಸ್ಥಾಪನೆಗೆ ಆಹ್ವಾನಿಸಿರಲಿಲ್ಲ. ಅಸ್ಪೃಶ್ಯರು ಶಂಕುಸ್ಥಾಪನೆ ನೆರವೇರಿಸಿದರೆ, ಸಹಜವಾಗಿ ಅದನ್ನು ಗಂಗಾ ನೀರಿನಿಂದ ತೊಳೆಯಬೇಕಾಗುತ್ತದೆ’ ಎಂದು ಅವರು ಮಾಜಿ ರಾಷ್ಟ್ರಪತಿಯ ಜಾತಿ ಉಲ್ಲೇಖಿಸಿ ಹೇಳಿದ್ದಾರೆ.

ಹೊಸ ಸಂಸತ್ ಕಟ್ಟಡದ ಉದ್ಘಾಟನೆಗೂ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಆಹ್ವಾನಿಸಿರಲಿಲ್ಲ. ಹಲವು ಗಣ್ಯರು ಮತ್ತು ಸಿನಿಮಾ ತಾರೆಯರನ್ನು ಆಹ್ವಾನಿಸಲಾಗಿತ್ತು. ಇದು ರಾಷ್ಟ್ರಪತಿಗೆ ಮಾಡಿದ ಅವಮಾನ ಎಂದರು.

ಹೊಸ ಕಟ್ಟಡದ ವಿನ್ಯಾಸ: ಕಾಂಗ್ರೆಸ್ ಅಸಮಾಧಾನ

ನವದೆಹಲಿ: ನೂತನ ಸಂಸತ್ ಭವನಕ್ಕೆ ‘ಮೋದಿ ಮಲ್ಟಿಪ್ಲೆಕ್ಸ್’ ಅಥವಾ ‘ಮೋದಿ ಮ್ಯಾರಿಯಟ್’ ಎಂದು ಹೆಸರಿಡಬೇಕಿತ್ತು ಎಂದು ರಾಜ್ಯಸಭೆ ಸದಸ್ಯ, ಕಾಂಗ್ರೆಸ್‌ನ ಜೈರಾಮ್ ರಮೇಶ್ ಶನಿವಾರ ವ್ಯಂಗ್ಯವಾಡಿದ್ದಾರೆ. ಈ ಕಟ್ಟಡದ ವಾಸ್ತುಶಿಲ್ಪವು ಸಂಸತ್ತಿನ ಕಾರ್ಯನಿರ್ವಹಣೆಗೆ ಯೋಗ್ಯವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹಳೆ ಸಂಸತ್ ಭವನದ (ಸಂವಿಧಾನ ಸದನ) ಕಟ್ಟಡದ ಜೊತೆ ಹೊಸ ಕಟ್ಟಡದ ವಿನ್ಯಾಸವನ್ನು ‘ಕಾರ್ಯಶೀಲತೆ’ ಆಧಾರದಲ್ಲಿ ಅವರು ಹೋಲಿಸಿದ್ದಾರೆ. ಪ್ರಜಾಪ್ರಭುತ್ವವನ್ನು ವಾಸ್ತುಶಿಲ್ಪದ ಮೂಲಕವೂ ಕೊಲ್ಲಬಹುದು ಎಂದಾದರೆ, ಸಂವಿಧಾನವನ್ನು ಪುನರ್‌ರಚಿಸುವ ಕಾರ್ಯಕ್ಕೆ ಕೈಹಾಕದೆಯೇ ಪ್ರಧಾನಿ ನರೇಂದ್ರ ಮೋದಿ ಅವರು ಆ ಕೆಲಸದಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಿದ್ದಾರೆ.

‘ಎಕ್ಸ್’ ವೇದಿಕೆ ಮೂಲಕ ಅಸಮಾಧಾನ ವ್ಯಕ್ತಪಡಿಸಿರುವ ಅವರು, ‘ಈ ಕಟ್ಟಡದಲ್ಲಿ ಕಲಾಪ ನಡೆದ ವೇಳೆ ನಾನು ನೋಡಿದ್ದೇನೆಂದರೆ, ಸದನದ ಒಳಗೆ ಮತ್ತು ಮೊಗಸಾಲೆಯಲ್ಲಿ ಸಂಸದರ ನಡುವಿನ ಚರ್ಚೆ ಮತ್ತು ಗೊಂದಲ ಪರಿಹಾರದಂಥ ಪ್ರಕ್ರಿಯೆಗಳು ಇಲ್ಲಿ ಸತ್ತಿವೆ. ಸದನದ ಒಳಗೆ ಒಬ್ಬರ ಮುಖ ಒಬ್ಬರು ನೋಡಬೇಕೆಂದರೂ ದುರ್ಬೀನಿನ ಅವಶ್ಯಕತೆ ಇದೆ’ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ತಿರುಗೇಟು: ‘ದೇಶದಾದ್ಯಂತ ಇರುವ ವಂಶಪಾರಂಪರ್ಯ ಕಟ್ಟಡಗಳನ್ನು ಗುರುತು ಮಾಡಬೇಕು ಮತ್ತು ಕಾನೂನುಬದ್ಧಗೊಳಿಸಬೇಕು. ಸಫ್ದರ್‌ಜಂಗ್ ರಸ್ತೆಯಲ್ಲಿರುವ ಇಂದಿರಾ ಗಾಂಧಿ ಸ್ಮಾರಕವನ್ನು ಭಾರತ ಸರ್ಕಾರಕ್ಕೆ ಕೂಡಲೇ ಮರಳಿಸುವ ಮೂಲಕವೇ ಈ ಕೆಲಸ ಆರಂಭವಾಗಲಿ’ ಎಂದು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ತಿರುಗೇಟು ನೀಡಿದ್ದಾರೆ.

ತಿದ್ದುಪಡಿ

ಭಾರತದಲ್ಲಿ ತುರ್ತುಪರಿಸ್ಥಿತಿ ಹೇರಿಕೆ ಆಗಿದ್ದು 1975ರ ಜೂನ್ 25ರಂದು. ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಜಾರ್ಜ್ ಫರ್ನಾಂಡಿಸ್ ಅವರನ್ನು ಆ ಸಂದರ್ಭದಲ್ಲಿ ಬಂಧಿಸಲಾಗಿರಲಿಲ್ಲ. ಶಾಸ್ತ್ರಿ ಅವರು ಆ ಹೊತ್ತಿಗಾಗಲೇ ನಿಧನರಾಗಿದ್ದರು; ಜಾರ್ಜ್ ಅವರ ಬಂಧನ 1976ರಲ್ಲಿ ಆಗಿತ್ತು. ಶನಿವಾರದ ಸಂಚಿಕೆಯ ‘ಪ್ರಜಾವಾಣಿ ಚರ್ಚೆ’ ಲೇಖನದಲ್ಲಿ ಈ ಮಾಹಿತಿ ತಪ್ಪಾಗಿ ಪ್ರಕಟವಾಗಿತ್ತು.

ಸಂಕ್ಷಿಪ್ತ ಸುದ್ದಿ

9 ವಂದೇ ಭಾರತ ರೈಲಿಗೆ ಚಾಲನೆ ಇಂದು

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಒಂಬತ್ತು ವಂದೇ ಭಾರತ ಎಕ್ಸ್‌ಪ್ರೆಸ್ ರೈಲುಗಳಿಗೆ ಭಾನುವಾರ (ಸೆ.24) ವಿಡಿಯೊ ಕಾನ್ಫರೆನ್ಸ್ ಮೂಲಕ ದೆಹಲಿಯಿಂದ ಚಾಲನೆ ನೀಡಲಿದ್ದಾರೆ.

ರೈಲುಗಳು ಹೈದರಾಬಾದ್ (ಕಾಚಿಗುಡ)– ಬೆಂಗಳೂರು (ಯಶವಂತಪುರ), ಚೆನ್ನೈ–ತಿರುನಲ್ವೇಲಿ, ವಿಜಯವಾಡ–ಚೆನ್ನೈ, ಪಟ್ನಾ–ಹೌರಾ, ರೌರ್‌ಕೇಲಾ–ಪುರಿ, ಕಾಸರಗೋಡು–ಅಲಪ್ಪುಳ–ತಿರುವನಂತಪುರ, ಜೈಪುರ–ಉದಯಪುರ, ರಾಂಚಿ–ಟಾಟಾನಗರ–ಕೋಲ್ಕತ್ತ ಮತ್ತು ಜಾಮ್ನಗರ್–ರಾಜ್‌ಕೋಟ್ ಅಹ್ಮದಾಬಾದ್ ಮಾರ್ಗದಲ್ಲಿ ಸಂಚರಿಸಲಿವೆ.

ಶಂಕಿತ ಉಗ್ರನ ಬಂಧನ

ನವದೆಹಲಿ (ಪಿಟಿಐ): ಮ್ಯಾನ್ಮಾರ್‌ನ ಬಂಡುಕೋರ ಗುಂಪಿನೊಂದಿಗೆ ಸಂಪರ್ಕ ಹೊಂದಿದ್ದ ಶಂಕಿತ ಭಯೋತ್ಪಾದಕನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ.

ಮಣಿಪುರದ ಮೋಇರಂಗಥೆಮ್ ಆನಂದ್ ಸಿಂಗ್ ಬಂಧಿತ. ಈತ ಇಲ್ಲಿನ ಜನಾಂಗೀಯ ಹಿಂಸಾಚಾರವನ್ನು ದುರ್ಬಳಕೆ ಮಾಡಿಕೊಂಡು ಭಾರತದ ವಿರುದ್ಧ ಯುದ್ಧ ನಡೆಸಲು ಸಂಚು ರೂಪಿಸಿದ್ದ. ವಿಚಾರಣೆಗಾಗಿ ನವದೆಹಲಿಗೆ ಕರೆತರಲಾಗಿದೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

ಮಣಿಪುರದಲ್ಲಿ ಇಂಟರ್‌ನೆಟ್ ಸೇವೆ

ಇಂಫಾಲ್ (ಪಿಟಿಐ): ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯದ ನಡುವಿನ ಹಿಂಸಾಚಾರದಿಂದಾಗಿ ಮಣಿಪುರದಲ್ಲಿ ಮೇ 3ರಿಂದ ನಿರ್ಬಂಧ ಹೇರಿದ್ದ ಮೊಬೈಲ್ ಇಂಟರ್‌ನೆಟ್ ಸೇವೆಯು ಶನಿವಾರ ಪುನರಾರಂಭಗೊಂಡಿದೆ.

‘ಸುಳ್ಳುಸುದ್ದಿ, ಅಪಪ್ರಚಾರ ಹಾಗೂ ದ್ವೇಷ ಭಾಷಣಕ್ಕೆ ಕಡಿವಾಣ ಹಾಕಲು ಮೊಬೈಲ್ ಇಂಟರ್‌ನೆಟ್ ಸೇವೆಯ ಬಳಕೆ ಮೇಲೆ ನಿರ್ಬಂಧ ವಿಧಿಸಲಾಗಿತ್ತು. ಸದ್ಯ ರಾಜ್ಯದಲ್ಲಿ ಪರಿಸ್ಥಿತಿ ಸುಧಾರಿಸಿದೆ. ಹಾಗಾಗಿ, ಈ ನಿರ್ಧಾರ ಕೈಗೊಳ್ಳ ಲಾಗಿದೆ’ ಎಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಚುನಾವಣೆ: ಎಬಿವಿಪಿ ಮೇಲುಗೈ

ನವದೆಹಲಿ (ಪಿಟಿಐ): ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಒಕ್ಕೂಟದ (ಡಿಯುಎಸ್‌ಯು) ಕೇಂದ್ರ ಸಮಿತಿಯ ನಾಲ್ಕು ಸ್ಥಾನಗಳಿಗೆ ಶನಿವಾರ ನಡೆದ ಚುನಾವಣೆಯಲ್ಲಿ ಎಬಿವಿಪಿ ಮೂರು ಸ್ಥಾನಗಳನ್ನು ಮತ್ತು ಕಾಂಗ್ರೆಸ್‌ನ ವಿದ್ಯಾರ್ಥಿ ಘಟಕವಾದ ಎನ್‌ಎಸ್‌ಯುಐ ಒಂದು ಸ್ಥಾನವನ್ನು ಗೆದ್ದುಕೊಂಡಿವೆ.

ಎಬಿವಿಪಿಯ ತುಷಾರ್ ದೆಢಾ ಅವರು ಎನ್‌ಎಸ್‌ಯುಐನ ಹಿತೇಶ್ ಗುಲಿಯಾ ಅವರನ್ನು ಸೋಲಿಸಿ ಡಿಯುಎಸ್‌ಯು ಅಧ್ಯಕ್ಷರಾಗಿ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಎನ್‌ಎಸ್‌ಯುಐನ ಅಭಿ ದಾಹಿಯಾ, ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿಯಾಗಿ ಎಬಿವಿಪಿಯ ಅಪರಾಜಿತ ಮತ್ತು ಸಚಿನ್ ಬೈಸ್ಲಾ ಅವರು ಆಯ್ಕೆಯಾದರು.

ಚಂದ್ರಬಾಬು ನಾಯ್ಡು ಸುಪ್ರೀಂಗೆ ಮೊರೆ

ನವದೆಹಲಿ (ಪಿಟಿಐ): ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರು ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿದ್ದ ಅರ್ಜಿಯನ್ನು ವಜಾಗೊಳಿಸಿರುವ ಆಂಧ್ರ ಪ್ರದೇಶ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಶನಿವಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಕೌಶಲ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಗರಣದಲ್ಲಿ ನಾಯ್ಡು ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಇದನ್ನು ರದ್ದು ಮಾಡುವಂತೆ ಕೋರಿದ್ದ ಅರ್ಜಿಯನ್ನು ಹೈಕೋರ್ಟ್ ಶುಕ್ರವಾರ ವಜಾಗೊಳಿಸಿತ್ತು.

ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಕಾನೂನಿರಬೇಕು: ಮೋದಿ

‘ಸರಳ ಭಾಷೆಯಲ್ಲಿ ಕಾನೂನು ರಚನೆಗೆ ಯತ್ನ’

ನವದೆಹಲಿ (ಪಿಟಿಐ): ಕಾನೂನುಗಳನ್ನು ಆದಷ್ಟು ಸರಳವಾಗಿ ಹಾಗೂ ಭಾರತೀಯ ಭಾಷೆಗಳಲ್ಲಿ ರೂಪಿಸಲು ಕೇಂದ್ರ ಸರ್ಕಾರ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ಅಂತರರಾಷ್ಟ್ರೀಯ ವಕೀಲರ ಸಮಾವೇಶದಲ್ಲಿ ಮಾತನಾಡಿದ ಅವರು, ‘ಕಾನೂನುಗಳನ್ನು ಉಲ್ಲೇಖಿಸುವ ಸಂದರ್ಭದಲ್ಲಿ ಹಾಗೂ ನ್ಯಾಯಾಂಗ ವ್ಯವಸ್ಥೆಯಲ್ಲಿ ಭಾಷೆ ಪ್ರಮುಖ ಪಾತ್ರ ವಹಿಸುತ್ತದೆ’ ಎಂದು ಹೇಳಿದರು.

‘ಎಲ್ಲರಿಗೂ ಅರ್ಥವಾಗುವಂತೆ ಕಾನೂನು ಇರಬೇಕು. ಹೀಗಾಗಿ, ಕಾನೂನುಗಳನ್ನು ಎರಡು ರೀತಿಯಲ್ಲಿ ರೂಪಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ. ವಕೀಲ ವೃತ್ತಿಯಲ್ಲಿ ತೊಡಗಿದವರಿಗೆ ಅನುವಾಗುವಂತೆ ರಚಿಸುವುದು ಒಂದು ಭಾಗವಾದರೆ, ದೇಶದ ಜನಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಕಾನೂನುಗಳನ್ನು ರಚಿಸುವುದು ಮತ್ತೊಂದು ವಿಧಾನವಾಗಿರಲಿದೆ’ ಎಂದು ವಿವರಿಸಿದರು.

‘ಕಾನೂನುಗಳನ್ನು ಸಂಕೀರ್ಣವಾದ ಭಾಷೆಯಲ್ಲಿ ರೂಪಿಸುವ ರೂಢಿ ಇದೆ. ಇದರ ಬದಲಾಗಿ, ಸಾಮಾನ್ಯ ವ್ಯಕ್ತಿಗೂ ಅರ್ಥವಾಗುವ ರೀತಿಯಲ್ಲಿ ಅವುಗಳ ರಚನೆ ಇರಬೇಕು’ ಎಂದರು.

‘ನ್ಯಾಯದಾನ ವ್ಯವಸ್ಥೆ ಕುರಿತು ಮಾತನಾಡುವ ಸಂದರ್ಭಗಳಲ್ಲಿ, ಕಾನೂನು ರಚನೆಗೆ ಬಳಸುವ ಭಾಷೆ ಮತ್ತು ಅದು ಎಷ್ಟು ಸರಳವಾಗಿರಬೇಕು ಎಂಬುದರ ಬಗ್ಗೆ ಬಹಳ ಕಡಿಮೆ ಚರ್ಚೆ ನಡೆಯುತ್ತಿದೆ’ ಎಂದೂ ಹೇಳಿದರು.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ಕೇಂದ್ರ ಕಾನೂನು ಸಚಿವ ಅರ್ಜುನ್‌ರಾಮ್ ಮೇಘವಾಲ್, ಬ್ರಿಟನ್‌ನ ನ್ಯಾಯಾಂಗ ಇಲಾಖೆಯ ಕಾರ್ಯದರ್ಶಿ ಅಲೆಕಸ್ ಚಾಕ್ ಕೆಸಿ, ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಭಾರತೀಯ ವಕೀಲರ ಸಂಘದ ಅಧ್ಯಕ್ಷ ಮನನ್‌ಕುಮಾರ್ ಮಿಶ್ರಾ ಮತ್ತಿತರರು ಇದ್ದರು.



ನವದೆಹಲಿಯ ವಿಜ್ಞಾನಭವನದಲ್ಲಿ ಶನಿವಾರ ನಡೆದ ಅಂತರರಾಷ್ಟ್ರೀಯ ವಕೀಲರ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಸಿಜೆಐ ಡಿ.ವೈ.ಚಂದ್ರಚೂಡ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಮಾತುಕತೆಯಲ್ಲಿ ತೊಡಗಿದ್ದರು —ಪಿಟಿಐ ಚಿತ್ರ

ಸೈಬರ್ ಭಯೋತ್ಪಾದನೆ: ಕಳವಳ

ಸೈಬರ್ ಭಯೋತ್ಪಾದನೆ ಮತ್ತು ಹಣ ಅಕ್ರಮ ವರ್ಗಾವಣೆಯಂತಹ ಅಪರಾಧಗಳು ಜಗತ್ತಿಗೆ ಬೆದರಿಕೆ ಒಡ್ಡಿವೆ. ಜೊತೆಗೆ, ಕೃತಕ ಬುದ್ಧಿಮತ್ತೆಯನ್ನು ಕೂಡ ವಿನಾಶಕಾರಿ ಉದ್ದೇಶಗಳಿಗೆ ಬಳಸಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಕಳವಳ ವ್ಯಕ್ತಪಡಿಸಿದ್ದಾರೆ.

‘ಸೈಬರ್ ಭಯತ್ಪಾದನೆ, ಹಣ ಅಕ್ರಮ ವರ್ಗಾವಣೆಯಂತಹ ಅಪಾಯಗಳಿಗೆ ದೇಶಗಳ ಗಡಿ ಮತ್ತು ವ್ಯಾಪ್ತಿ ಎಂಬುದಿಲ್ಲ. ಈ ಬೆದರಿಕೆಗಳನ್ನು ಎದುರಿಸಲು ಬೇರೆ ಬೇರೆ ದೇಶಗಳು ಒಟ್ಟಾಗಿ ಕಾರ್ಯನಿರ್ವಹಿಸುವುದು ಅಗತ್ಯ ಎಂದು ಹೇಳಿದರು.

‘ಯಾವಾಗ ಅಪಾಯವು ಜಾಗತಿಕ ಮಟ್ಟದ್ದಾಗಿರುತ್ತದೆಯೋ, ಅವುಗಳನ್ನು ಎದುರಿಸಿ, ನಿಗ್ರಹಿಸುವ ಕಾರ್ಯತಂತ್ರಗಳು ಕೂಡ ಜಾಗತಿಕ ಮಟ್ಟದ್ದಾಗಿರಬೇಕು’ ಎಂದು ಮೋದಿ ಪ್ರತಿಪಾದಿಸಿದರು.

ಈ ಸಂದರ್ಭದಲ್ಲಿ ಅವರು ಏರ್ ಟ್ರಾಫಿಕ್ ಕಂಟ್ರೋಲ್ ವ್ಯವಸ್ಥೆಯ ಉದಾಹರಣೆ ನೀಡಿದರು.

‘ವಿವಿಧ ದೇಶಗಳ ನಡುವಿನ ಸಹಕಾರದಿಂದಾಗಿ ವಿಮಾನಗಳ ಹಾರಾಟ ಸಾಧ್ಯವಾಗಿರುವ ರೀತಿಯಲ್ಲಿಯೇ , ಸೈಬರ್ ಭಯೋತ್ಪಾದನೆಯಂತಹ ಅಪಾಯಗಳನ್ನು ಎದುರಿಸುವುದು ಯಾವುದೇ ಒಂದು ದೇಶ ಅಥವಾ ಒಂದು ಸರ್ಕಾರಕ್ಕೆ ಸಂಬಂಧಿಸಿದ ವಿಷಯವಲ್ಲ. ಅದಕ್ಕಾಗಿ ಜಾಗತಿಕ ಮಟ್ಟದಲ್ಲಿ ಚೌಕಟ್ಟನ್ನು ರೂಪಿಸುವುದು ಅಗತ್ಯ’ ಎಂದು ಮೋದಿ ಪ್ರತಿಪಾದಿಸಿದರು.

ಅಖಿಲ ಭಾರತ ಅನುಭವ ಮಂಟಪ ಪ್ರತಿನಿಧಿಗಳ ಅಧಿವೇಶನದಲ್ಲಿ ಚಿಂತಕ ರಾಜೇಂದ್ರ ಚೆನ್ನಿ

ದೇಶ ಹಿಂದಕ್ಕೊಯ್ಯುತ್ತಿರುವ 'ತ್ರಿಮೂರ್ತಿ'ಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮ, ಕೋಮುವಾದ ಆಡಳಿತ ಮತ್ತು ಬಂಡವಾಳ ಶಾಹಿಗಳೆಂಬ ಕೆಡುಕಿನ ತ್ರಿಮೂರ್ತಿಗಳು ದೇಶವನ್ನು ಹಿಂದಕ್ಕೆ ಕೊಂಡೊಯ್ಯುತ್ತಿದ್ದಾರೆ' ಎಂದು ಚಿಂತಕ ಪ್ರೊ. ರಾಜೇಂದ್ರ ಚೆನ್ನಿ ಆತಂಕ ವ್ಯಕ್ತಪಡಿಸಿದರು.

ಸಿಟಿಜನ್ ಫಾರ್ ಡೆಮಾಕ್ರಸಿ, ಜನಾಂದೋಲನಗಳ ಮಹಾಮೈತ್ರಿ ಕರ್ನಾಟಕ-ಮಹಾರಾಷ್ಟ್ರ ಜಂಟಿ ಕ್ರಿಯಾ ಸಮಿತಿಯು ಲೋಕ ಸಭೆ ಚುನಾವಣೆಯಲ್ಲಿ ಬಿಜೆಪಿ ಸೋಲಿಸುವುದು ಹಾಗೂ ಕೋಮು ಸಾಮರಸ್ಯ ಕಾಪಾಡುವ ಬಗ್ಗೆ ಹಮ್ಮಿಕೊಂಡಿರುವ ಅಖಿಲ ಭಾರತ ಅನುಭವ ಮಂಟಪ ಪ್ರತಿನಿಧಿಗಳ ಮೊದಲ ದಿನದ ಅಧಿವೇಶನದಲ್ಲಿ ಅವರು ಮಾತನಾಡಿದರು.

'ಮೂರು ಕೆಡುಕುಗಳಿಗೆ ದೇಶ ಮುಂದಕ್ಕೆ ಹೋಗುವುದು ಬೇಕಾಗಿಲ್ಲ. ಅದಾನಿ, ಅಂಬಾನಿ ಯಾವುದೋ ಒಂದು ಯೋಜನೆಗೆ ಬಂಡವಾಳ ಹೂಡುತ್ತಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಾಣುತ್ತಿದ್ದರೂ ಅದು ಅಷ್ಟು ಸರಳವಾಗಿಲ್ಲ. ಎಲ್ಲರೂ ಅಭಿವೃದ್ಧಿಯಾಗುವುದು ಅವರಿಗೆ ಬೇಕಿಲ್ಲ. ಅದಕ್ಕಾಗಿ 21ನೇ ಶತಮಾನ ಎಂದು ನಾವು ಹೇಳಿದರೆ, ಅವರು ಕ್ರಿಸ್ತಪೂರ್ವ 21ನೇ ಶತಮಾನಕ್ಕೆ ಹೋಗಬೇಕು ಎಂದು ಹೇಳುತ್ತಾರೆ' ಎಂದರು.



ನಗರದಲ್ಲಿ ಶನಿವಾರ ಆಯೋಜಿಸಿದ್ದ ಅಖಿಲ ಭಾರತ ಅನುಭವ ಮಂಟಪ ಸಮಾವೇಶದಲ್ಲಿ ಜೆಎನ್‌ಯು ನಿವೃತ್ತ ಉಪನ್ಯಾಸಕ ಆನಂದ್ ಕುಮಾರ್, ಮಾಜಿ ಶಾಸಕ ಮೈಕಲ್ ಫರ್ನಾಂಡಿಸ್, ಚಿಂತಕ ರಾಜೇಂದ್ರ ಚೆನ್ನಿ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್, ಹೋರಾಟಗಾರ್ತಿ ವಿಮಲ್ ಥೋರಟ್, ಸಿಟಿಜನ್ಸ್ ಫಾರ್ ಡೆಮಾಕ್ರಸಿ ಅಧ್ಯಕ್ಷ ಎಸ್.ಆರ್ ಹಿರೇಮಠ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

'ಬುದ್ಧನಲ್ಲಿ, ಬುದ್ಧಪೂರ್ವದ ಬುಡಕಟ್ಟುಗಳಲ್ಲಿ ಪ್ರಜಾಪ್ರಭುತ್ವವಾದಿ ಸಿದ್ಧಾಂತದ ಮೂಲ ಕಾಣಬಹುದು. ಅದಕ್ಕಾಗಿಯೇ ನಮ್ಮ ಸಂಸ್ಕೃತಿಯ ಬೇರುಗಳನ್ನು ಯುರೋಪಿನಲ್ಲಿ ಹುಡುಕಬೇಕಿಲ್ಲ. ನಮ್ಮಲ್ಲೇ ಇದೆ ಎಂದು ಅಂಬೇಡ್ಕರ್ ಹೇಳಿದ್ದರು. 12ನೇ ಶತಮಾನದಲ್ಲಿ ಬಸವಾದಿ ಶರಣರು ಕಟ್ಟಿದ ಅನುಭವ ಮಂಟಪ ಜಾತಿ ನೋಡದೇ ಎಲ್ಲರನ್ನು ಒಳಗೊಂಡ ಮೊದಲ ಸಂಸತ್ತಾಗಿತ್ತು. ಶ್ರಮಿಕ ವರ್ಗದವರೇ ಅಲ್ಲಿ ಪ್ರತಿನಿಧಿಗಳಾಗಿದ್ದರು. ಅದೇ ಆದರ್ಶದಲ್ಲಿ ಪ್ರಜಾಪ್ರಭುತ್ವವನ್ನು ಕಟ್ಟಬೇಕು' ಎಂದರು.

'ವೈಯಕ್ತಿಕ ಹಿಂಸೆಗಿಂತ ಸೈದ್ಧಾಂತಿಕ ಹಿಂಸೆ ಹೆಚ್ಚು ಅಪಾಯಕಾರಿ. ಇದನ್ನು ನಾವು ಪ್ರಶ್ನಿಸದೇ ಇದ್ದರೆ ಇದೇ ನಿಸರ್ಗ ಸಹಜ ಸಿದ್ಧಾಂತ ಎಂದು ಜನ ಭಾವಿಸುವ ಸಾಧ್ಯತೆ ಇರುತ್ತದೆ' ಎಂದು ಎಚ್ಚರಿಸಿದರು.

> **ಧರ್ಮದ ಹೆಸರಲ್ಲಿ ವಿಷಬೀಜ ಬಿತ್ತುತ್ತಿರುವ ಆರ್‌ಎಸ್‌ಎಸ್, ಮನುವಾದಿಗಳ ಸರ್ವಾಧಿಕಾರವನ್ನು ಮುಂದಿನ ಚುನಾವಣೆಯಲ್ಲಿ ಸೋಲಿಸಬೇಕು**
> **ಎಸ್.ಆರ್. ಹಿರೇಮಠ**
> ಅಧ್ಯಕ್ಷ, ಸಿಟಿಜನ್ಸ್ ಫಾರ್ ಡೆಮಾಕ್ರಸಿ

> **ಮನುವಾದಿಗಳಿಗೆ, ಜಾತಿವಾದಿಗಳಿಗೆ, ಬಂಡವಾಳಶಾಹಿಗಳಿಗೆ ಮಾತ್ರ ಆಜಾದಿ ಬಂದಿದೆ. ಕೆಲವರಿಗಷ್ಟೇ ಅಮೃತಕಾಲವಾಗಿದೆ**
> **ವಿಮಲ್ ಥೋರಟ್**
> ಹೋರಾಟಗಾರ್ತಿ, ಮಹಾರಾಷ್ಟ್ರ

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಮಾತನಾಡಿ, 'ವಿಶ್ವದ ವಿವಿಧ ದೇಶಗಳಲ್ಲಿ ಪ್ರಜಾಪ್ರಭುತ್ವ ಬಿರುಕು ಬಿಟ್ಟಿದೆ. ಆದರೆ, ಪ್ರಜಾಪ್ರಭುತ್ವಕ್ಕೆ ಪರ್ಯಾಯ ಕಾಣುತ್ತಿಲ್ಲ. ಹಾಗಾಗಿ ಪ್ರಜಾಪ್ರಭುತ್ವದೊಳಗಿನ ನ್ಯೂನತೆಗಳನ್ನು ಸರಿಪಡಿಸಿಕೊಂಡು ಮುಂದುವರಿಸಬೇಕಿದೆ' ಎಂದು ಹೇಳಿದರು.

ಭಾರತದಲ್ಲಿ ಮಾತ್ರವಲ್ಲ, ಅಮೆರಿಕ, ಆಸ್ಟ್ರೇಲಿಯಾ, ಫ್ರಾನ್ಸ್ ಸಹಿತ ಎಲ್ಲ ಪ್ರಜಾಪ್ರಭುತ್ವ ದೇಶಗಳಲ್ಲಿ ಈ ಸಮಸ್ಯೆ ಉಂಟಾಗಿದೆ. ಭಾರತದಲ್ಲಿ ಚುನಾವಣಾ ಪದ್ಧತಿಯು ಧರ್ಮ, ಜಾತಿ, ಹಣ ಮತ್ತು ತೋಳ್ಬಲದ ಪ್ರಭಾವಕ್ಕೆ ಸಿಲುಕಿ ನಲುಗಿದೆ. ಚುನಾವಣಾ ವ್ಯವಸ್ಥೆಯನ್ನು ಸರಿಪಡಿಸಬೇಕು. ಸಂವಿಧಾನವನ್ನು ಅಪವ್ಯಾಖ್ಯಾನ, ಅಪ್ರಸ್ತುತಗೊಳಿಸುವುದನ್ನು ತಡೆಯಬೇಕು. ಆಹಾರ, ಶಿಕ್ಷಣ, ಆರೋಗ್ಯವನ್ನು ಮೂಲಭೂತ ಹಕ್ಕುಗಳನ್ನಾಗಿ ಮಾಡಬೇಕು ಎಂದು ಸಲಹೆ ನೀಡಿದರು.

'ಪ್ರತಿಗಾಮಿ ಸಾಂಸ್ಕೃತಿಕ ರಾಜಕಾರಣಕ್ಕೆ ಜನಸಾಂಸ್ಕೃತಿ ಪ್ರತಿರೋಧ ಸಾಧ್ಯತೆಗಳ ಹುಡುಕಾಟ' ಬಗ್ಗೆ ಹೋರಾಟಗಾರ್ತಿ ದು. ಸರಸ್ವತಿ ಅಧ್ಯಕ್ಷತೆಯಲ್ಲಿ ಮೊದಲ ಗೋಷ್ಠಿ ನಡೆಯಿತು. ಸಾಹಿತಿಗಳಾದ ದತ್ತ ದೇಸಾಯಿ, ರಹಮತ್ ತರೀಕೆರೆ, ಧಾನಾಜಿ ಗುರವ್ ವಿಷಯ ಮಂಡಿಸಿದರು.

'ನಿಸರ್ಗ ಮತ್ತು ಅಭಿವೃದ್ಧಿ' ಕುರಿತು ಟಿ.ಆರ್. ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಎರಡನೇ ಗೋಷ್ಠಿಯಲ್ಲಿ ಪರಿಸರ ಹೋರಾಟಗಾರರಾದ ಕೆ.ಜೆ. ಜಾಯ್, ಉಲ್ಕಾ ಮಹಾಜನ್, ದಿಲೀಪ್ ಕಾಮತ್ ವಿಷಯ ಮಂಡಿಸಿದರು.

ಸುದ್ದಿ 2 ನಿಮಿಷ

19 ಪೊಲೀಸರ ವಿರುದ್ಧ ವಿಚಾರಣೆ


ಬೆಂಗಳೂರು: ನಗರ ಸಂಚಾರ ವಿಭಾಗದ 19 ಪೊಲೀಸರು ಅಶಿಸ್ತು ತೋರಿರುವ ಆರೋಪ ಕೇಳಿಬಂದಿದ್ದು, ಈ ಬಗ್ಗೆ ವಿಚಾರಣೆಗೆ ಆದೇಶಿಸಲಾಗಿದೆ.

'ಕಾಮಾಕ್ಷಿಪಾಳ್ಯ ಸಂಚಾರ ಠಾಣೆಯ 14 ಹಾಗೂ ಮಾಗಡಿ ರಸ್ತೆ ಸಂಚಾರ ಠಾಣೆಯ 5 ಪೊಲೀಸರು ಅಶಿಸ್ತು ತೋರಿರುವ ಆರೋಪವಿದೆ. ಈ ಬಗ್ಗೆ ವಿಚಾರಣೆ ಆರಂಭಿಸಲಾಗಿದ್ದು, ತಪ್ಪು ಕಂಡುಬಂದರೆ ಕ್ರಮ ಜರುಗಿಸಲಾಗುವುದು' ಎಂದು ಸಂಚಾರ ವಿಭಾಗದ ಅಧಿಕಾರಿಯೊಬ್ಬರು ಹೇಳಿದರು.

'ಪಾರ್ಟಿಯೊಂದರಲ್ಲಿ ಖಾಸಗಿಯಾಗಿ ಪಾಲ್ಗೊಂಡಿದ್ದ 19 ಪೊಲೀಸರು, ನೃತ್ಯ ಮಾಡಿ ಅಶಿಸ್ತಿನಿಂದ ವರ್ತಿಸಿದ್ದರೆಂದು ಹೇಳಲಾಗುತ್ತಿದೆ. ನೃತ್ಯದ ವಿಡಿಯೊ ಚಿತ್ರೀಕರಿಸಿದ್ದ ಕೆಲವರು, ಅದನ್ನು ಹಲವೆಡೆ ಹಂಚಿಕೊಂಡಿದ್ದಾರೆ. ಇದೇ ವಿಡಿಯೊ ಆಧರಿಸಿ ವಿಚಾರಣೆ ನಡೆಸಲಾಗುತ್ತಿದೆ' ಎಂದರು.

ಗೊಂದಲಕ್ಕೆ ಕಾರಣವಾಗಿದ್ದ ಪ್ರಕರಣ: 'ವಿಡಿಯೊ ಆಧರಿಸಿ 19 ಪೊಲೀಸರನ್ನು ಏಕಕಾಲದಲ್ಲಿ ಅಮಾನತು ಮಾಡಲಾಗಿದೆ' ಎಂಬ ಸುದ್ದಿ ಹರಿದಾಡಿತ್ತು. ಇದು ಪೊಲೀಸರಲ್ಲಿ ಗೊಂದಲಕ್ಕೆ ಕಾರಣವಾಗಿತ್ತು. ಈ ಬಗ್ಗೆ ಸ್ಪಷ್ಟನೆ ನೀಡಿರುವ ಪೊಲೀಸ್ ಅಧಿಕಾರಿ, 'ಯಾವುದೇ ಅಮಾನತು ಆಗಿಲ್ಲ. ವಿಚಾರಣೆ ಮಾತ್ರ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

ಪಾರ್ಸೆಲ್‌ನಲ್ಲಿ ಡ್ರಗ್ಸ್: ಗೋದಾಮುಗಳಲ್ಲಿ ಶೋಧ



ಬೆಂಗಳೂರು: ಪಾರ್ಸೆಲ್ ಮೂಲಕ ಡ್ರಗ್ಸ್ ಪೂರೈಕೆ ಬಗ್ಗೆ ಮಾಹಿತಿ ಬಂದಿದ್ದರಿಂದ ವೈಟ್‌ಫೀಲ್ಡ್ ವಿಭಾಗದ ಪೊಲೀಸರು, ಹಲವು ಕಂಪನಿಗಳ ಗೋದಾಮುಗಳಲ್ಲಿ ಶನಿವಾರ ಶೋಧ ನಡೆಸಿದರು.

'ಕೊರಿಯರ್ ಹಾಗೂ ಪಾರ್ಸೆಲ್‌ನಲ್ಲಿ ಡ್ರಗ್ಸ್ ಸರಬರಾಜು ಮಾಡುತ್ತಿದ್ದ ಬಗ್ಗೆ ಮಾಹಿತಿ ಇತ್ತು. ಹೀಗಾಗಿ, ಹಲವು ಕಂಪನಿಗಳಿಗೆ ಸೇರಿದ್ದ 10 ಗೋದಾಮುಗಳಲ್ಲಿ ಪರಿಶೀಲನೆ ನಡೆಸಲಾಯಿತು' ಎಂದು ಡಿಸಿಪಿ ಸಂಜೀವ್ ಪಾಟೀಲ ತಿಳಿಸಿದರು.

'ಇ-ಕಾಮರ್ಸ್, ಕೊರಿಯರ್ ಹಾಗೂ ಇತರೆ ಕಂಪನಿಗಳ ಗೋದಾಮಿನಲ್ಲಿ ಶ್ವಾನದಳದ ಸಮೇತ ಶೋಧ ನಡೆಯಿತು. ಹೊರ ದೇಶ ಹಾಗೂ ಹೊರ ರಾಜ್ಯಗಳಿಂದ ಬಂದಿದ್ದ ಪಾರ್ಸೆಲ್– ಕೊರಿಯರ್ ಬಾಕ್ಸ್‌ಗಳಲ್ಲಿ ಪರಿಶೀಲಿಸಲಾಯಿತು. ಯಾವುದೇ ಅನುಮಾನಾಸ್ಪದ ವಸ್ತು ಸಿಗಲಿಲ್ಲ' ಎಂದರು.

'ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ನಿರಂತರವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಅವರು ಹೇಳಿದರು.

'ಮಹಿಳಾ ಮೀಸಲಾತಿ' ವಿಚಾರ ಸಂಕಿರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

'ಮಹಿಳೆಯರಿಗೆ ಟೋಪಿ ಹಾಕಿದ ದೇವಮಾನವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆಯರಿಗೆ ಮೀಸಲಾತಿ ನೀಡಲು ದೇವರೇ ನನ್ನನ್ನು ಕಳುಹಿಸಿದ್ದಾನೆ ಎಂದು ಹೇಳಿಕೊಂಡಿರುವ ದೇವಮಾನವ, ಮಸೂದೆಯಲ್ಲಿ ಮಾತ್ರ ಹಲವು ಷರತ್ತುಗಳನ್ನು ಹಾಕಿ ಮಹಿಳೆಯರಿಗೆ ಟೋಪಿ ಹಾಕಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ವಿರುದ್ಧ ಕಿಡಿಕಾರಿದರು.

ರಾಮ ಮನೋಹರ ಲೋಹಿಯಾ ಸಮತಾ ವಿದ್ಯಾಲಯ, ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಮತ್ತು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಶನಿವಾರ ಹಮ್ಮಿಕೊಂಡಿದ್ದ 'ಮಹಿಳಾ ಮೀಸಲಾತಿ' ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರಿಗೆ ಮೀಸಲಾತಿ ನೀಡಬೇಕು ಎಂಬ ಪ್ರಾಮಾಣಿಕತೆ ಬಿಜೆಪಿಯಲ್ಲಿ ಕಾಣುತ್ತಿಲ್ಲ. ವೋಟಿಗಾಗಿ ತರಾತುರಿಯಲ್ಲಿ ಮಸೂದೆ ಮಂಡನೆ ಮಾಡಿದ್ದಾರೆ. ಮಸೂದೆಗೆ ರಾಷ್ಟ್ರಪತಿಯವರ ಅಂಕಿತ ಬಿದ್ದರೂ ಜಾರಿಯಾಗದಂತೆ ಷರತ್ತುಗಳಿವೆ ಎಂದು ಹೇಳಿದರು.



ನಗರದಲ್ಲಿ ಶನಿವಾರ ನಡೆದ 'ಮಹಿಳಾ ಮೀಸಲಾತಿ' ವಿಚಾರ ಸಂಕಿರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸಸಿಗೆ ನೀರೆರೆಯುವುದರ ಮೂಲಕ ಉದ್ಘಾಟಿಸಿದರು. (ಎಡದಿಂದ) ಶಾಸಕಿ ನಯನಾ ಮೋಟಮ್ಮ, ವಕೀಲ ರವಿವರ್ಮ ಕುಮಾರ್, ರಾಜಕೀಯ ವಿಶ್ಲೇಷಕ ಮುಜಾಫರ್ ಅಸಾದಿ, ರಾಮ ಮನೋಹರ ಲೋಹಿಯಾ ಸಮತಾ ವಿದ್ಯಾಲಯದ ಎಚ್.ವಿ. ಮಂಜುನಾಥ್ ಮತ್ತು ಡಿಎಸ್‌ಎಸ್ ಮುಖಂಡ ಮಾವಳ್ಳಿ ಶಂಕರ್ ಇದ್ದರು –ಪ್ರಜಾವಾಣಿ ಚಿತ್ರ

ಮಹಿಳಾ ಮೀಸಲಾತಿಗೆ 15 ವರ್ಷಗಳ ಕಾಲಮಿತಿ ನಿಗದಿ ಮಾಡಿರುವುದು ಯಾಕೆ? ಮಸೂದೆ ಅಂಗೀಕಾರ ಆದ ಮೇಲೆ ಜಾರಿಯಾಗಬೇಕು. ಆದರೆ, ಕ್ಷೇತ್ರ ಪುನರ್‌ವಿಂಗಡಣೆಯಾದ ಮೇಲೆ, ಜನಗಣತಿ ನಡೆದ ಮೇಲೆ, ಕೇಂದ್ರ ಸರ್ಕಾರ ಸೂಚಿಸಿದ ದಿನಾಂಕದ ಬಳಿಕ ಜಾರಿಯಾಗಬೇಕು ಎಂದು ಕೊಕ್ಕೆಗಳನ್ನು ಇಟ್ಟಿರುವುದು ಯಾಕೆ? ಇದು ಜಾರಿಯಾಗುವ ಹೊತ್ತಿಗೆ 15 ವರ್ಷ ಮುಗಿದಿರುತ್ತದೆ ಎಂದರು.

'ಮಹಿಳಾ ಮೀಸಲಾತಿ ತರುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದ್ದಿದ್ದರೆ ಇಷ್ಟೊತ್ತಿಗೆ ಜಾರಿಗೆ ತಂದು ಬಿಡುತ್ತಿದ್ದೆ.

ಪಿಐಎಲ್ ಮೂಲಕ ಹೋರಾಟ

ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ಪಡೆಯಲು ನಾನು ಬಹಳ ಕಷ್ಟಪಟ್ಟೆ. ಮಸೂದೆ ಜಾರಿಯಾದರೆ ಕಷ್ಟ ತಪ್ಪಬಹುದು. ಅದಕ್ಕಾಗಿ ಮಸೂದೆಯನ್ನು ಸ್ವಾಗತಿಸುತ್ತೇನೆ. ಈಗ ಹಾಕಿರುವ ಷರತ್ತುಗಳನ್ನು ಮುಂದೆ ಕಾಂಗ್ರೆಸ್ ನೇತೃತ್ವದ 'ಇಂಡಿಯಾ' ತೆಗೆದು ಹಾಕಿ ಜಾರಿ ಮಾಡುತ್ತದೆ ಎಂಬ ವಿಶ್ವಾಸ ಇದೆ. ಒಂದು ವೇಳೆ ಇವರೇ ಅಧಿಕಾರಕ್ಕೆ ಬಂದು ಜಾರಿ ಮಾಡದೇ ಇದ್ದರೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ ಹೋರಾಟ ಮಾಡುತ್ತೇನೆ ಎಂದು ಶಾಸಕಿ ನಯನಾ ಮೋಟಮ್ಮ ಪ್ರತಿಕ್ರಿಯಿಸಿದರು.

ಮಸೂದೆಗೆ 'ನಾರಿಶಕ್ತಿ ವಂದನ್ ಅಧಿನಿಯಮ್' ಎಂಬ ಹೆಸರೇ ಸರಿ ಇಲ್ಲ. ಮಹಿಳೆಯರನ್ನು ವಂದಿಸಿ ದೇವಿಯರಂತೆ ಕೂರಿಸಲು ಇದು ಜಾರಿಗೆ ತರುತ್ತಿರುವುದೇ? ಮಹಿಳೆಯರಿಗೆ ನೀಡುವ ಪ್ರಾತಿನಿಧ್ಯವೇ ಮಹಿಳಾ ಮೀಸಲಾತಿ ಎಂದು ವಕೀಲರಾದ ಅಶ್ವಿನಿ ಓಬಲೇಶ್ ಹೇಳಿದರು.

ಇವತ್ತಿಗೂ ಮಹಿಳೆಯರಿಗೆ ಟಿಕೆಟ್ ಹಂಚುವ ವಿಚಾರ ಬಂದಾಗ ಟಿಕೆಟ್ ನೀಡುವ ಮನಸ್ಸಿದ್ದರೂ ನೀಡಲಾಗುತ್ತಿಲ್ಲ. ಕ್ಷೇತ್ರಗಳಿಂದ ತರಿಸುವ ವರದಿಗಳು ಮಹಿಳಾ ಆಕಾಂಕ್ಷಿ ಪರ ಇರುವುದಿಲ್ಲ. ಅದಕ್ಕೆ ಮಹಿಳಾ ಮೀಸಲಾತಿ ಜಾರಿಯಾದರೆ ಪ್ರಾತಿನಿಧ್ಯ ನೀಡಲೇ ಬೇಕಾಗುತ್ತದೆ' ಎಂದು ತಿಳಿಸಿದರು.

ವಕೀಲ ರವಿವರ್ಮ ಕುಮಾರ್ ವಿಷಯ ಮಂಡನೆ ಮಾಡಿ, 'ನಾಡಿನ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂವಾದ ನಡೆಸಿ ಬಳಿಕ ಯಾವುದೇ ಕಾಯ್ದೆಯನ್ನು ಜಾರಿಗೆ ತರುವುದು ಪ್ರಜಾಪ್ರಭುತ್ವ. ಆದರೆ, ಇತ್ತೀಚೆಗೆ ಎಲ್ಲವನ್ನು ರಹಸ್ಯವಾಗಿಟ್ಟು, ಕೊನೇ ಕ್ಷಣದಲ್ಲಿ ಒಂದು ಅಥವಾ ಎರಡೇ ದಿನಗಳಲ್ಲಿ ಲೋಕಸಭೆ, ರಾಜ್ಯಸಭೆಗಳಲ್ಲಿ ಅಂಗೀಕರಿಸುವುದು ಈಗಿನ ಮಾದರಿಯಾಗಿಬಿಟ್ಟಿದೆ' ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ರಾಜಕೀಯ ವಿಶ್ಲೇಷಕ ಮುಜಾಫರ್ ಅಸಾದಿ ಮಾತನಾಡಿ, 'ಸಂವಿಧಾನದ ಪೀಠಿಕೆಯಿಂದ ಜಾತ್ಯತೀತ, ಸಮಾಜವಾದವನ್ನು ತೆಗೆದು ಹಾಕಿದ್ದಾರೆ. ಸಮಾಜದಲ್ಲಿಯೂ ಇದು ಕಾಣೆಯಾಗುತ್ತಿದೆ. ಅದೇ ರೀತಿ ಮುಂದೆ ಪ್ರಜಾಪ್ರಭುತ್ವವೂ ಇವರ ಕೈಯಲ್ಲಿ ಕಾಣೆಯಾಗಬಹುದು' ಎಂದು ಎಚ್ಚರಿಸಿದರು.

ನಕಲಿ ಹೆಸರಿನಲ್ಲಿ ಪಾಸ್‌ಪೋರ್ಟ್: ಸಿಕ್ಕಿಬಿದ್ದ ನೇಪಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಸಲಿ ಹೆಸರು ಮುಚ್ಚಿಟ್ಟು ನಕಲಿ ಹೆಸರಿನಲ್ಲಿ ಪಾಸ್‌ಪೋರ್ಟ್ ಪಡೆದಿದ್ದ ಆರೋಪಿ ಉತ್ತಮ್ ಉಪಾಧ್ಯ (ಹಮಾಲ್) ಎಂಬಾತ, ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ವಲಸೆ ಅಧಿಕಾರಿಗಳಿಗೆ ಸಿಕ್ಕಿಬಿದ್ದಿದ್ದಾರೆ.

'ನೇಪಾಳದ ಉತ್ತಮ್, ಹರಿಪ್ರಸಾದ್ ಹೆಸರಿನಲ್ಲಿ ಪಾಸ್‌ಪೋರ್ಟ್ ಪಡೆದುಕೊಂಡಿದ್ದ. ಬ್ಯಾಂಕಾಕ್‌ಗೆ ತೆರಳಲು ವಿಮಾನ ನಿಲ್ದಾಣಕ್ಕೆ ಬಂದಿದ್ದ ವೇಳೆ ವಲಸೆ ಅಧಿಕಾರಿಗಳು ಈತನನ್ನು ವಶಕ್ಕೆ ಪಡೆದಿದ್ದರು. ನಂತರ, ಠಾಣೆಯ ಸುಪರ್ದಿಗೆ ವಹಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಲಸೆ ಅಧಿಕಾರಿಗಳು ನೀಡಿರುವ ದೂರು ಆಧರಿಸಿ, ಉತ್ತಮ್ ಉಪಾಧ್ಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ತಿಳಿಸಿವೆ.

ಕೆಲಸದ ಆಮಿಷವೊಡ್ಡಿ ₹ 9.5 ಲಕ್ಷ ವಂಚನೆ: 'ನೇಪಾಳದ ಉತ್ತಮ್ ಹಾಗೂ ಈತನ ಸ್ನೇಹಿತೆಯೊಬ್ಬರು, ಹೊರದೇಶದಲ್ಲಿ ಕೆಲಸ ಮಾಡಲು ಮುಂದಾಗಿದ್ದರು. ಇಬ್ಬರನ್ನೂ ಸಂಪರ್ಕಿಸಿದ್ದ ವ್ಯಕ್ತಿಯೊಬ್ಬ, ಕೆಲಸ ಕೊಡಿಸುವುದಾಗಿ ಹೇಳಿದ್ದ. ಪಾಸ್‌ಪೋರ್ಟ್ ಹಾಗೂ ಇತರೆ ಖರ್ಚಿಗೆಂದು ಇಬ್ಬರಿಂದಲೂ ₹ 9.50 ಲಕ್ಷ ಪಡೆದಿದ್ದನೆಂದು ಆರೋಪಿ ಹೇಳಿಕೆ ನೀಡಿದ್ದಾನೆ' ಎಂದು ಮೂಲಗಳು ಹೇಳಿವೆ.

'ನೇಪಾಳ ದೇಶದ ಉತ್ತಮ್‌ಗೆ ಪಾಸ್‌ಪೋರ್ಟ್ ಮಾಡಿಕೊಟ್ಟವರು ಯಾರು? ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ತಿಳಿಸಿವೆ.

'ಆಂಟಿ' ಎಂದಿದ್ದಕ್ಕೆ ಕಪಾಳಕ್ಕೆ ಹೊಡೆದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಂಟಿ' ಎಂದು ಕರೆದಿದ್ದರಿಂದ ಕೋಪಗೊಂಡ ಮಹಿಳೆಯೊಬ್ಬರು ಎಟಿಎಂ ಘಟಕದ ಭದ್ರತಾ ಸಿಬ್ಬಂದಿ ಕಪಾಳಕ್ಕೆ ಹೊಡೆದು ಜೀವ ಬೆದರಿಕೆಯೊಡ್ಡಿದ್ದು, ಈ ಸಂಬಂಧ ಮಲ್ಲೇಶ್ವರ ಠಾಣೆಗೆ ದೂರು ಸಲ್ಲಿಕೆಯಾಗಿದೆ.

'ಎಟಿಎಂ ಘಟಕದ ಭದ್ರತಾ ಸಿಬ್ಬಂದಿಯಾಗಿರುವ 60 ವರ್ಷದ ವೃದ್ಧ, ಹಲ್ಲೆ ಹಾಗೂ ಜೀವ ಬೆದರಿಕೆ ಬಗ್ಗೆ ಇತ್ತೀಚೆಗೆ ದೂರು ನೀಡಿದ್ದಾರೆ. ಅಪರಿಚಿತ ಮಹಿಳೆ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಲ್ಲೇಶ್ವರ ಠಾಣೆ ವ್ಯಾಪ್ತಿಯ ಎಟಿಎಂ ಘಟಕದಲ್ಲಿ ದೂರುದಾರರು ಕೆಲಸ ಮಾಡುತ್ತಿದ್ದಾರೆ. ಘಟಕದಲ್ಲಿರುವ ಯಂತ್ರಕ್ಕೆ ಹಣ ತುಂಬಲು ಕಸ್ಟೋಡಿಯನ್‌ಗಳು ಇತ್ತೀಚೆಗೆ ಬಂದಿದ್ದರು. ಎಟಿಎಂ ಘಟಕದೊಳಗೆ ಹೋಗುವ ಜಾಗದಲ್ಲಿ ಮಹಿಳೆ ನಿಂತುಕೊಂಡಿದ್ದರು. ಇದೇ ಸಂದರ್ಭದಲ್ಲಿ ದೂರುದಾರ, 'ಆಂಟಿ ಸ್ವಲ್ಪ ಪಕ್ಕಕ್ಕೆ ಸರಿದು ನಿಲ್ಲಿ' ಎಂದಿದ್ದರು. ಅಷ್ಟಕ್ಕೆ ಕೋಪಗೊಂಡ ಮಹಿಳೆ ಜಗಳ ತೆಗೆದಿದ್ದರು' ಎಂದು ಮೂಲಗಳು ತಿಳಿಸಿವೆ.

'ದೂರುದಾರರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ ಮಹಿಳೆ, ಕಪಾಳಕ್ಕೆ ಹೊಡೆದಿದ್ದರು. ಜೀವ ಬೆದರಿಕೆಯೊಡ್ಡಿದ್ದರು. 'ನನ್ನನ್ನು ಆಂಟಿ ಎನ್ನುತ್ತಿಯಾ?' ಎಂಬುದಾಗಿ ಹೇಳಿ ಚಪ್ಪಲಿಯಿಂದ ಹೊಡೆದಿದ್ದರು. ಸ್ಥಳದಲ್ಲಿ ಜನರು ಹೆಚ್ಚು ಸೇರುತ್ತಿದ್ದಂತೆ ಮಹಿಳೆ ಹೊರಟು ಹೋಗಿರುವುದಾಗಿ ದೂರುದಾರರು ತಿಳಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

'ಕೆಪಿಎಸ್‌ಸಿಯತ್ತಲೂ ಚಿತ್ತ ಹರಿಸಿ'

ಲಿಂಗಾಯತ ಸಮುದಾಯದ ನಾಯಕರಿಗೆ ಸಚಿವ ಎಂ.ಬಿ.ಪಾಟೀಲ ಕಿವಿಮಾತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಶೈವ-ಲಿಂಗಾಯತ ನಾಯಕರು ನಾಲ್ಕು ದಶಕಗಳಿಂದ ಕರ್ನಾಟಕ ಲೋಕಸೇವಾ ಆಯೋಗದ ಕಡೆಗೆ ಚಿತ್ತಹರಿಸದ ಕಾರಣ ಸಮುದಾಯ ದುರ್ಬಲವಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಕರ್ನಾಟಕ ವೀರಶೈವ ಲಿಂಗಾಯತ ಎಂಪ್ಲಾಯೀಸ್ ಕ್ರೆಡಿಟ್ ಕೋ-ಆಪ್‌ರೇಟಿವ್ ಸೊಸೈಟಿ (ಕೆವಿಎಲ್) ಶನಿವಾರ ಹಮ್ಮಿಕೊಂಡಿದ್ದ ಮೂರನೇ ವಾರ್ಷಿಕ ಸಾಮಾನ್ಯಸಭೆ ಹಾಗೂ ಸಮಾಜದ ಸಾಧಕ ಅಧಿಕಾರಿಗಳ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಉತ್ತರ ಕರ್ನಾಟಕದಲ್ಲಿ ಹಲವು ಹಿರಿಯರ ಶ್ರಮದಿಂದ ಶೈಕ್ಷಣಿಕ ಕ್ರಾಂತಿಯಾಗಿದೆ. ಇದೇ ತರಹದ ಸಾಧನೆ ಉಳಿದ ರಂಗಗಳಲ್ಲಿ ಇಲ್ಲ. ಕೆಪಿಎಸ್‌ಸಿಯತ್ತ ಚಿತ್ತಹರಿಸಿದ್ದರೆ ಸಮುದಾಯದ ಹೆಚ್ಚಿನ ಪ್ರತಿಭಾವಂತರು ಉನ್ನತ ಹುದ್ದೆ ಅಲಂಕರಿಸುತ್ತಿದ್ದರು. ಇದರಲ್ಲಿ ನಾನೂ ಸೇರಿದಂತೆ ಸಮುದಾಯದ ಎಲ್ಲ ನಾಯಕರ ತಪ್ಪಿದೆ' ಎಂದರು.



ಬೆಂಗಳೂರಿನಲ್ಲಿ ಶನಿವಾರ ಕರ್ನಾಟಕ ವೀರಶೈವ ಲಿಂಗಾಯಿತ ಎಂಪ್ಲಾಯೀಸ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಆಯೋಜಿಸಿದ್ದ ಸಮಾರಂಭದಲ್ಲಿ ಕುಲಪತಿಗಳಾದ ಕೆ.ಬಿ. ಗುಡಸಿ (ಕರ್ನಾಟಕ ವಿವಿ) ಅಶೋಕ್ ಸಂಗಪ್ಪ ಆಲೂರ (ಕೊಡಗು ವಿವಿ), ಸುರೇಶ ಎಚ್. ಜಂಗಮಶೆಟ್ಟಿ (ಹಾವೇರಿ ವಿವಿ), ತರೀಕೆರೆ ಸಿ. ಚಂದ್ರಶೇಖರಪ್ಪ (ಹಾಸನ ವಿವಿ), ಆರ್.ಸಿ. ಜಗದೀಶ್ (ಶಿವಮೊಗ್ಗ ಕೃಷಿ ವಿವಿ) ಅವರನ್ನು ಸನ್ಮಾನಿಸಲಾಯಿತು. ಎಂ.ಬಿ.ಪಾಟೀಲ, ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಈಶ್ವರ ಖಂಡ್ರೆ, ಶರಣಪ್ರಕಾಶ ಪಾಟೀಲ, ಸುರೇಶ್ ಗೌಡ ಇದ್ದಾರೆ –ಪ್ರಜಾವಾಣಿ ಚಿತ್ರ

ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ, 'ರಾಜ್ಯ ಆಡಳಿತ ಸೇವೆಯ ಅಧಿಕಾರಿಗಳು ನಂಬಿಕೆಗೆ ಅರ್ಹರು. ನಾನು ಮುಖ್ಯಮಂತ್ರಿಯಾದಾಗಲೂ ಇದು ಅನುಭವಕ್ಕೆ ಬಂದಿದೆ. ಹಾಗಾಗಿ, ಅವರನ್ನೇ ಹೆಚ್ಚು ನಂಬುತ್ತಿದ್ದೆ. ನಂಬಿಕೆಗೆ ತಕ್ಕಂತೆ ಅವರೂ ಕೆಲಸ ಮಾಡಿದ್ದಾರೆ' ಎಂದು ಶ್ಲಾಘಿಸಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಕೆಲಸದ ಒತ್ತಡದ ಮಧ್ಯೆಯೂ ಕೆಎಎಸ್ ಅಧಿಕಾರಿಗಳು ಸಮಾಜದ ಪ್ರಗತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದು ಮೆಚ್ಚುಗೆಯ ಸಂಗತಿ ಎಂದರು.

ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಸಿರಿಗೆರೆ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸಚಿವರಾದ ಶರಣಪ್ರಕಾಶ ಪಾಟೀಲ, ಈಶ್ವರ ಖಂಡ್ರೆ, ಸೊಸೈಟಿ ಅಧ್ಯಕ್ಷ ಸುರೇಶ್ ಗೌಡ ಉಪಸ್ಥಿತರಿದ್ದರು.

ರೈಲ್ವೆ ನಿಲ್ದಾಣದಲ್ಲಿ ಗಾಂಜಾ ಮಾರಾಟ: ಆರೋಪಿ ಬಂಧನ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಟೋನ್ಮೆಂಟ್ ರೈಲು ನಿಲ್ದಾಣದ ವಾಹನ ನಿಲುಗಡೆ ಜಾಗದಲ್ಲಿ ಗಾಂಜಾ ಮಾರುತ್ತಿದ್ದ ಆರೋಪಿ ಶಾಬಾಜ್ ಖಾನ್‌ನನ್ನು (26) ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಜೆ.ಸಿ.ನಗರ ಮುನಿರೆಡ್ಡಿ ಪಾಳ್ಯದ ನಿವಾಸಿ ಶಬಾಜ್ ಖಾನ್, ಹಲವು ತಿಂಗಳಿನಿಂದ ಗಾಂಜಾ ಮಾರುತ್ತಿದ್ದ. ಸೆ. 22ರಂದು ಬೆಳಿಗ್ಗೆ ಗಸ್ತಿನಲ್ಲಿದ್ದ ಸಿಬ್ಬಂದಿ, ಆರೋಪಿ ಹಿಡಿದಿದ್ದಾರೆ. ಈತ ನಿಂದ 1,130 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಿಲ್ದಾಣದ ವಾಹನ ನಿಲುಗಡೆ ಜಾಗದಲ್ಲಿ ನಿಂತಿದ್ದ ಆರೋಪಿ, ಪರಿಚಯಸ್ಥ ಗ್ರಾಹಕರಿಗೆ ಗಾಂಜಾ ಮಾರುತ್ತಿದ್ದ. ಈತನನ್ನು ನೋಡಿದ್ದ ಸಿಬ್ಬಂದಿ, ಸ್ಥಳಕ್ಕೆ ಹೋಗಿದ್ದರು. ಆರೋಪಿ ಸ್ಥಳದಿಂದ ಓಡಲಾರಂಭಿಸಿದ್ದ. ಸಿಬ್ಬಂದಿ ಈತನನ್ನು ಬೆನ್ನಟ್ಟಿ ಹಿಡಿದಿದ್ದಾರೆ.'

'ಗಾಂಜಾವನ್ನು ಚಿಕ್ಕ ಪೊಟ್ಟಣಗಳಲ್ಲಿ ತುಂಬುತ್ತಿದ್ದ ಆರೋಪಿ, ಕೆಲ ಯುವಕ–ಯುವತಿಯರಿಗೆ ಹಾಗೂ ಕಾರ್ಮಿಕರಿಗೆ ಮಾರುತ್ತಿದ್ದ. ಗಾಂಜಾ ಎಲೆ, ಬೀಜ ಹಾಗೂ ಕಾಂಡವನ್ನೂ ಈತ ಮಾರಾಟ ಮಾಡುತ್ತಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿವೆ.

ಆರೋಪಿಗಳು ನ್ಯಾಯಾಂಗ ಬಂಧನಕ್ಕೆ

ಚೈತ್ರಾ ಕುಂದಾಪುರ ಕಸ್ಟಡಿಗೆ ಕೇಳಿದ ಕೋಟ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಟಿಕೆಟ್ ವಂಚನೆ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಏಳು ಆರೋಪಿಗಳನ್ನು ಶನಿವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಬಂಡೇಪಾಳ್ಯ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಚೈತ್ರಾ ಕುಂದಾಪುರ, ಶ್ರೀಕಾಂತ್ ನಾಯ್ಕ್, ಗಗನ್ ಕಡೂರು, ರಮೇಶ್ ನಾಯ್ಕ್, ಧನರಾಜ್, ಪ್ರಜ್ವಲ್ ಹಾಗೂ ಚನ್ನಾ ನಾಯ್ಕ್ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು.

ಏಳು ಮಂದಿಯನ್ನು 10 ದಿನ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ್ದರು. ಕಸ್ಟಡಿ ಅವಧಿ ಮುಗಿದಿದ್ದರಿಂದ ಎಲ್ಲರನ್ನೂ 3ನೇ ಎಸಿಎಂಎಂ ನ್ಯಾಯಾಲಯಕ್ಕೆ ಶನಿವಾರ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ನ್ಯಾಯಾಧೀಶರು, ಏಳು ಆರೋಪಿಗಳನ್ನು ಮುಂದಿನ 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. ಬಳಿಕ, ಎಲ್ಲ ಆರೋಪಿಗಳನ್ನು ಪೊಲೀಸರು ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಬಿಟ್ಟಿದ್ದಾರೆ.

ಹೇಳಿಕೆ ಪ್ರಕ್ರಿಯೆ ಪೂರ್ಣ: 'ಚೈತ್ರಾ ಕುಂದಾಪುರ ಸೇರಿದಂತೆ ಏಳು ಆರೋಪಿಗಳ ಮಹಜರು ಹಾಗೂ ಹೇಳಿಕೆ ದಾಖಲು ಪ್ರಕ್ರಿಯೆ ಮುಗಿದಿದೆ. ಇವರ ವಿರುದ್ಧ ದೋಷಾರೋಪ ಪಟ್ಟಿ ಸಿದ್ಧಪಡಿಸಲಾಗುತ್ತಿದೆ. ಆರೋಪಿಗಳ ವಿಚಾರಣೆ ಮುಗಿದಿದ್ದರಿಂದ, ಮತ್ತಷ್ಟು ದಿನ ಕಸ್ಟಡಿಗೆ ಪಡೆಯುವ ಅಗತ್ಯವಿರಲಿಲ್ಲ. ಹೀಗಾಗಿ, ಕಸ್ಟಡಿಗೆ ಕೋರಿಕೆ ಸಲ್ಲಿಸಲಿಲ್ಲ' ಎಂದು ಸಿಸಿಬಿ ಮೂಲಗಳು ಹೇಳಿವೆ.

ಸ್ವಾಮೀಜಿ ವಿಚಾರಣೆ ಮುಂದುವರಿಕೆ: 'ಪ್ರಕರಣದ ಮತ್ತೊಬ್ಬ ಆರೋಪಿಯಾಗಿರುವ ಹಿರೇಹಡಗಲಿ ಹಾಲಸ್ವಾಮಿ ಮಠದ ಹಾಲವೀರಪ್ಪ ಸ್ವಾಮೀಜಿ ವಿಚಾರಣೆ ಮುಂದುವರಿದಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಗೋವಿಂದ ಬಾಬು ಪೂಜಾರಿ ಮಾತ್ರವಲ್ಲದೇ ಮತ್ತಷ್ಟು ಮಂದಿಯಿಂದ ಹಣ ಪಡೆದು ಸ್ವಾಮೀಜಿ ವಂಚಿಸಿರುವ ಮಾಹಿತಿ ಇದೆ. ಸದ್ಯ ಗೋವಿಂದ ಪೂಜಾರಿ ವಂಚನೆ ಬಗ್ಗೆ ಸ್ವಾಮೀಜಿಯಿಂದ ಮಾಹಿತಿ ಕಲೆಹಾಕಲಾಗುತ್ತಿದೆ. ಉಳಿದವರು ದೂರು ನೀಡಿದರೆ, ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿವೆ.

ಕಸ್ಟಡಿಗೆ ಕೇಳಿದ ಕೋಟ ಪೊಲೀಸರು: ಬಟ್ಟೆ ಅಂಗಡಿ ಹಾಕಿಕೊಡುವುದಾಗಿ ಆಮಿಷವೊಡ್ಡಿ ₹5 ಲಕ್ಷ ವಂಚಿಸಿದ ಆರೋಪದಡಿ ಚೈತ್ರಾ ಕುಂದಾಪುರ ವಿರುದ್ಧ ಬ್ರಹ್ಮಾವರ ತಾಲ್ಲೂಕಿನ ಕೋಟ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ.

ಪ್ರಕರಣದ ವಿಚಾರಣೆಗಾಗಿ ಚೈತ್ರಾ ಕುಂದಾಪುರ ಅವರನ್ನು ಕಸ್ಟಡಿಗೆ ನೀಡುವಂತೆ ಕೋರಿ ಕೋಟ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಜಾಮೀನು ಸಲ್ಲಿಕೆ: ಚೈತ್ರಾ ಕುಂದಾಪುರ ಹಾಗೂ ಇತರೆ ಆರೋಪಿಗಳಿಗೆ ಜಾಮೀನು ನೀಡುವಂತೆ ಅವರ ಪರ ವಕೀಲರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಪುರಸ್ಕರಿಸಿರುವ ನ್ಯಾಯಾಲಯ, ಆಕ್ಷೇಪಣೆ ಸಲ್ಲಿಸಲು ಸಿಸಿಬಿ ಪರ ವಕೀಲರಿಗೆ ಸೆ. 26ರವರೆಗೆ ಅವಕಾಶ ನೀಡಿದೆ.

ಪಥಸಂಚಲನ

ಪ್ರಜಾವಾಣಿ ವಾರ್ತೆ

ಯಲಹಂಕ: ಭಾರತೀಯ ಗಡಿಭದ್ರತಾ ಪಡೆಯ ಅಧೀನ ತರಬೇತಿ ಕೇಂದ್ರದಲ್ಲಿ ಕಾನ್‌ಸ್ಟೆಬಲ್‌ಗಳ ನಿರ್ಗಮನ ಪಥ ಸಂಚಲನ ಶನಿವಾರ ನಡೆಯಿತು.

ಬೆಂಗಳೂರಿನ ಬಿಎಸ್‌ಎಫ್ ಕೇಂದ್ರದ ಐಜಿ ಈಪನ್ ಪಿ.ವಿ. ಮಾತನಾಡಿ, ಈ ಕೇಂದ್ರದಲ್ಲಿ 165 ಮಂದಿ ಕಾನ್‌ಸ್ಟೆಬಲ್‌ಗಳಿಗೆ 40 ವಾರಗಳ ಅವಧಿಯಲ್ಲಿ ದೈಹಿಕ, ಡ್ರಿಲ್, ಶಸ್ತ್ರಾಸ್ತ್ರ ಸೇರಿದಂತೆ ಗಡಿಭದ್ರತಾ ಸೇವೆಗೆ ಅಗತ್ಯವಿರುವ ಎಲ್ಲ ರೀತಿಯ ಕಠಿಣ ತರಬೇತಿ ನೀಡಲಾಗಿದೆ. ತರಬೇತಿ ಪಡೆದವರನ್ನು ಗುಜರಾತ್, ಜಮ್ಮು- ಕಾಶ್ಮೀರ, ಬಾಂಗ್ಲಾದೇಶ, ಪಶ್ಚಿಮ ಬಂಗಾಳ, ಅಸ್ಸಾಂನಲ್ಲಿ ಸೇವೆಗೆ ನಿಯೋಜಿಸಲಾಗುವುದು ಎಂದು ತಿಳಿಸಿದರು.

ತರಬೇತಿ ಅವಧಿಯಲ್ಲಿ ಒಳಾಂಗಣ, ಹೊರಾಂಗಣ, ಫೈರಿಂಗ್, ಡ್ರಿಲ್ ಸೇರಿ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಪ್ರದರ್ಶನ ತೋರಿದ ಪ್ರಶಿಕ್ಷಣಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣ ವಿತರಿಸಲಾಯಿತು.

ಅನ್ನಪೂರ್ಣೇಶ್ವರಿನಗರ ಠಾಣೆಯಲ್ಲಿ ಪ್ರಕರಣ

ಆಮಿಷ: ₹ 1.80 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- **ಮೆಶೊ ಇ-ಕಾಮರ್ಸ್ ಕಂಪನಿ ಹೆಸರಿನಲ್ಲಿ ವಂಚನೆ**
- **ದೂರು ದಾಖಲು**

ಬೆಂಗಳೂರು: ಮೆಶೊ ಇ-ಕಾಮರ್ಸ್ ಕಂಪನಿಯಿಂದ ₹ 15.51 ಲಕ್ಷ ಬಹುಮಾನ ಬಂದಿರುವುದಾಗಿ ಹೇಳಿ ಶುಲ್ಕದ ನೆಪದಲ್ಲಿ ₹ 1.80 ಲಕ್ಷ ಪಡೆದು ವಂಚಿಸಲಾಗಿದೆ.

ಈ ಸಂಬಂಧ ಅನ್ನಪೂರ್ಣೇಶ್ವರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಶ್ರೀಗಂಧಕಾವಲು ನಿವಾಸಿಯಾಗಿರುವ 38 ವರ್ಷದ ಮಹಿಳೆ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸೆ. 16ರಂದು ಮಹಿಳೆಯ ಮನೆಗೆ ಅಂಚೆ ಮೂಲಕ ಪತ್ರ ಬಂದಿತ್ತು. ಅದರನ್ನು ತೆರದು ನೋಡಿದಾಗ, 'ಮೆಶೊ ಕಂಪನಿಯಿಂದ ನಿಮಗೆ ₹ 15.51 ಲಕ್ಷ ಬಹುಮಾನ ಬಂದಿದೆ. ಇದನ್ನು ಪಡೆಯಲು 8240****66 ನಂಬರ್‌ಗೆ ಕರೆ ಮಾಡಿ' ಎಂಬುದಾಗಿ ಬರೆದಿತ್ತು.'

'ಪತ್ರದಲ್ಲಿರುವ ಸಂಗತಿ ನಿಜವೆಂದು ನಂಬಿದ್ದ ಮಹಿಳೆ, ಮೊಬೈಲ್ ಸಂಖ್ಯೆಗೆ ಕರೆ ಮಾಡಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ್ದ ಆರೋಪಿ, 'ಬಹುಮಾನದ ಹಣವನ್ನು ನಿಮ್ಮ ಖಾತೆಗೆ ಜಮೆ ಮಾಡಲಾಗುವುದು. ಅದಕ್ಕೂ ಮುನ್ನ ಜಿಎಸ್‌ಟಿ ಪಾವತಿಸಬೇಕು' ಎಂದಿದ್ದ. ಅದನ್ನೂ ನಂಬಿದ್ದ ಮಹಿಳೆ, ಫೋನ್ ಪೇ ಮೂಲಕ ಆರಂಭದಲ್ಲಿ ₹15,510 ಪಾವತಿಸಿದ್ದರು. ಇದಾದ ನಂತರವೂ ಆರೋಪಿ ಶುಲ್ಕವೆಂದು ಹಣ ಕೇಳಿದ್ದ. ಮಹಿಳೆ, ಹಂತ ಹಂತವಾಗಿ ಒಟ್ಟು ₹1.80 ಲಕ್ಷ ನೀಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಹಲವು ದಿನವಾದರೂ ಆರೋಪಿ ಹಣ ನೀಡಿರಲಿಲ್ಲ. ಮಹಿಳೆ ಸೆ. 21ರಂದು ಪುನಃ ಕರೆ ಮಾಡಿದ್ದರು. ಮತ್ತೆ ₹ 1.53 ಲಕ್ಷ ನೀಡುವಂತೆ ಆರೋಪಿ ಕೇಳಿದ್ದ. ಇದರಿಂದ ಅನುಮಾನಗೊಂಡ ಮಹಿಳೆ, ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ' ಎಂದು ಹೇಳಿವೆ.

'ಇ-ಕಾಮರ್ಸ್ ಹಾಗೂ ಇತರೆ ಕಂಪನಿಗಳ ಹೆಸರಿನಲ್ಲಿ ಬಹುಮಾನ ಬಂದಿರುವುದಾಗಿ ಪತ್ರ ಕಳುಹಿಸಿ ವಂಚಿಸುವ ಜಾಲ ಸಕ್ರಿಯವಾಗಿದೆ. ಜನರು ಈ ಬಗ್ಗೆ ಎಚ್ಚರಿಕೆ ವಹಿಸಬೇಕು' ಎಂದು ಪೊಲೀಸರು ಹೇಳಿದ್ದಾರೆ.

ಮಹಿಳೆ ಸಾವು

ಬೆಂಗಳೂರು: ಮುನ್ನೇಕೊಳಲು ಬಳಿಯ ವಸಂತನಗರದ ಮನೆಯೊಂದರಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ ಸಂಭವಿಸಿ ಗಾಯಗೊಂಡಿದ್ದ ಸುಧಾಬಾಯಿ (32) ಅವರು ಆಸ್ಪತ್ರೆಯಲ್ಲಿ ಶನಿವಾರ ಮೃತಪಟ್ಟಿದ್ದಾರೆ.

'ಸೆ. 17ರಂದು ಸಂಭವಿಸಿದ್ದ ಸ್ಫೋಟದಲ್ಲಿ ಸುಧಾಬಾಯಿ, ಅವರ ಪತಿ ಸೆಲ್ವಕುಮಾರ್ (54), ಮಕ್ಕಳಾದ ನಂದಿತಾ (15) ಹಾಗೂ ಮನೋಜ್ (12) ಗಾಯಗೊಂಡಿದ್ದರು. ಈ ಪೈಕಿ ತೀವ್ರವಾಗಿ ಗಾಯಗೊಂಡಿದ್ದ ಸುಧಾಬಾಯಿ ಅಸುನೀಗಿದ್ದಾರೆ' ಎಂದು ಪೊಲೀಸರು ಹೇಳಿದರು.

'ಪಾದರಕ್ಷೆ ವ್ಯಾಪಾರಿ ಸೆಲ್ವಕುಮಾರ್ ಹಾಗೂ ಮಕ್ಕಳಿಬ್ಬರು ಚೇತರಿಸಿಕೊಳ್ಳುತ್ತಿದ್ದಾರೆ' ಎಂದರು.

ಕಾರು ಡಿಕ್ಕಿ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಕಾರು ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಸವಾರ ಅಜಯ್‌ಕುಮಾರ್ (40) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಚಿಕ್ಕೇಗೌಡನಪಾಳ್ಯ ಹಾಗೂ ಉತ್ತರಹಳ್ಳಿ ನಡುವಿನ ಗಾಣಕಲ್ ರಸ್ತೆಯಲ್ಲಿ ಶನಿವಾರ ಬೆಳಿಗ್ಗೆ 7 ಗಂಟೆ ಸುಮಾರಿಗೆ ಈ ಅಪಘಾತ ಸಂಭವಿಸಿದೆ.

'ಅಜಯ್‌ಕುಮಾರ್ ಅವರು ಗಾಣಕಲ್ ರಸ್ತೆಯಲ್ಲಿ ಬೈಕ್‌ನಲ್ಲಿ ಹೊರಟಿದ್ದರು. ಇದೇ ಮಾರ್ಗದಲ್ಲಿ ಕಾರು (ಕೆಎ 53 ಎಂ.ಎಚ್ 9090) ತೆರಳುತ್ತಿತ್ತು. ಚಾಲಕ, ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಕಾರು ಚಲಾಯಿಸಿದ್ದ. ಬೈಕ್‌ಗೆ ಕಾರು ಡಿಕ್ಕಿ ಹೊಡೆದಿತ್ತು' ಎಂದು ಪೊಲೀಸರು ತಿಳಿಸಿದರು.

'ಬೈಕ್ ಸಮೇತ ಉರುಳಿಬಿದ್ದ ಅಜಯ್‌ಕುಮಾರ್ ಅವರ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬೈಕ್ ಸಹ ಭಾಗಶಃ ಜಖಂಗೊಂಡಿದೆ. ಅಪಘಾತದ ಬಳಿಕ ಕಾರು ಸಮೇತ ಚಾಲಕ ಪರಾರಿಯಾಗಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ಚಾಲಕನ ಸುಳಿವು ಸಿಕ್ಕಿದೆ. ಶೀಘ್ರದಲ್ಲೇ ವಶಕ್ಕೆ ಪಡೆದು, ವಿಚಾರಣೆಯನ್ನು ನಡೆಸಿ ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದರು.

'₹ 2,000ಕ್ಕೆ ಹೆಚ್ಚಿಸಿ'

ಬೆಂಗಳೂರು: 'ಕೋಟ್ಪಾ ಕಾಯ್ದೆ ಉಲ್ಲಂಘಿಸಿ ತಂಬಾಕು ಉತ್ಪನ್ನ ಮಾರಾಟ ಮಾಡುತ್ತಿರುವವರು ಹಾಗೂ ಸೇವಿಸುತ್ತಿರುವವರಿಗೆ ಕಡಿವಾಣ ಹಾಕಲು ದಂಡದ ಮೊತ್ತವನ್ನು ₹2 ಸಾವಿರಕ್ಕೆ ಹೆಚ್ಚಿಸಬೇಕು' ಎಂದು ತಂಬಾಕು ಮುಕ್ತ ಕರ್ನಾಟಕ ಒಕ್ಕೂಟ ಆಗ್ರಹಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ರಮೇಶ್ ಎಸ್. ಬಿಳಿಮಗ್ಗ, 'ಸದ್ಯ ದಂಡದ ಮೊತ್ತವು ₹ 200 ಇದ್ದು, ಇದನ್ನು ಹೆಚ್ಚಿಸಬೇಕು. ಬಿಡಿಯಾಗಿ ಸಿಗರೇಟುಗಳು ಹಾಗೂ ತಂಬಾಕು ಉತ್ಪನ್ನಗಳ ಮಾರಾಟವನ್ನು ನಿಷೇಧಿಸಬೇಕು. ಸಾರ್ವಜನಿಕ ಸ್ಥಳಗಳು ಶೇ 100ರಷ್ಟು ಧೂಮಪಾನ ಮುಕ್ತವಾಗಬೇಕು' ಎಂದು ಹೇಳಿದರು.

ಮುಂಬೈ ಧಾರಣೆ

ಶೇಂಗಾ

23-09-2023

ಜಾವಾ 70/80(ಹೊಸ)	12250-12350
ಜಾವಾ 80/90(ಹೊಸ)	11950-12050
ದಪ್ಪ ಮಧ್ಯಪ್ರದೇಶ(ಹೊಸ)	10850-10950
ದಪ್ಪ ಗುಜರಾತ್(ಹೊಸ)	11750-11850

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1780 (1800)
ಒಂದು ವಾರದ ಡೆಲಿವರಿ	1775 (1795)
ಸೋಯಾ ಕಚ್ಚಾ	822 (822)
ಪಾಮ್ ವಾರದ ಡೆಲಿವರಿ	808(798)
ಸೂರ್ಯಕಾಂತಿ ಎಣ್ಣೆ ಕಚ್ಚಾ	780 (780)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,900 (58,950)
ಬೆಳ್ಳಿ ಕೆ.ಜಿ 72,800 (73,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1770 (1790)
ಸೋಯಾ (ರಿಫೈನ್ಡ್)	₹870 (870)
ಸೂರ್ಯಕಾಂತಿ (ರಿಫೈನ್ಡ್)	₹870 (870)
ಪಾಮೋಲಿನ್	₹810 (800)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹535
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹537

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹296-520
ದ್ವಿತಳಿ (ಬಿ.ವಿ)
₹330-605

ಎನ್.ಆರ್.ಪುರ ರಬ್ಬರ್




ಆರ್‌ಎಸ್‌ಎಸ್-4
₹142.50
ಆರ್‌ಎಸ್‌ಎಸ್-5
₹136.50
ಗುಡ್ ಲಾಟ್
₹125
(ಪ್ರತಿ ಕೆ.ಜಿಗೆ)

ಹೆಚ್ಚಿದ ಮಾರುಕಟ್ಟೆ ಮೌಲ್ಯ: ಲಾಭ ಮಾಡಿಕೊಳ್ಳಲು ಗಮನ

ನಿಲ್ಲದ ಎಫ್‌ಪಿಐ ಹೊರಹರಿವು

ಪ್ರಜಾವಾಣಿ ವಾರ್ತೆ

ವಿದೇಶಿ ಸಾಂಸ್ಥಿಕ ಬಂಡವಾಳ ಹೊರಹರಿವು (ಕೋಟಿಗಳಲ್ಲಿ)



* ಸೆಪ್ಟೆಂಬರ್ 19ರಂದು ಷೇರುಪೇಟೆಗೆ ರಜೆ ಇತ್ತು. ಮಾಹಿತಿ: ಪಿಟಿಐ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಗಳಲ್ಲಿ ಬಂಡವಾಳ ಹಿಂದಕ್ಕೆ ಪಡೆಯುವ ಪ್ರಕ್ರಿಯೆ ಸೆಪ್ಟೆಂಬರ್‌ನಲ್ಲಿಯೂ ಮುಂದುವರಿದಿದೆ.

‘ಸೆಪ್ಟೆಂಬರ್ 22ರವರೆಗೆ ನಡೆದಿರುವ 15 ದಿನಗಳ ವಹಿವಾಟಿನಲ್ಲಿ 11 ದಿನ ವಿದೇಶಿ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡಿದ್ದಾರೆ. ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಸೆಪ್ಟೆಂಬರ್ 22ರವರೆಗೆ ನಡೆದಿರುವ ವಹಿವಾಟಿನಲ್ಲಿ ₹10,164 ಕೋಟಿ ಮೌಲ್ಯದ ಷೇರುಗಳನ್ನು ವಿದೇಶಿ ಹೂಡಿಕೆದಾರರು ಮಾರಾಟ ಮಾಡಿದ್ದಾರೆ. ಇದೇ ಅವಧಿಯಲ್ಲಿ ಬಂಡವಾಳ ಮಾರುಕಟ್ಟೆಯಿಂದ ಒಟ್ಟು ₹18,260 ಕೋಟಿ ಹಿಂದಕ್ಕೆ ಪಡೆದಿದ್ದಾರೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

‘ಕೆಲವು ದಿನಗಳಿಂದ ವಹಿವಾಟು ಇಳಿಕೆ ಕಾಣುತ್ತಿದೆಯಾದರೂ ಒಟ್ಟಾರೆಯಾಗಿ ಮಾರುಕಟ್ಟೆ ಮೌಲ್ಯವು ಗರಿಷ್ಠ ಮಟ್ಟದಲ್ಲಿಯೇ ಇದೆ. ಅಲ್ಲದೆ, ಅಮೆರಿಕದ 10 ವರ್ಷಗಳ ಬಾಂಡ್ ಗಳಿಕೆಯು ಶೇ 4.49ರ ಮಟ್ಟದಲ್ಲಿ ಇರುವುದರಿಂದ ವಿದೇಶಿ ಹೂಡಿಕೆದಾರರು ಅದರತ್ತ ಹೆಚ್ಚು ಗಮನ ನೀಡಿದ್ದಾರೆ. ಹೀಗಾಗಿ ಭಾರತದಲ್ಲಿ ಷೇರುಗಳನ್ನು ಮಾರಾಟ ಮಾಡಿ ಲಾಭ ಮಾಡಿಕೊಳ್ಳುವುದು ಮುಂದುವರಿಯಲಿದೆ.

‘ಜಗತ್ತಿನ ದೊಡ್ಡ ಆರ್ಥಿಕತೆಗಳಲ್ಲಿ ಭಾರತದ ಆರ್ಥಿಕ ಬೆಳವಣಿಗೆ ಮತ್ತು ಕಾರ್ಪೊರೇಟ್ ಗಳಿಕೆಯು ಉತ್ತಮವಾಗಿ ಇರುವ ನಿರೀಕ್ಷೆ ಇದೆ. ಮಾರುಕಟ್ಟೆಯು ಇನ್ನೂ ಶೇ 3ರಿಂದ ಶೇ 4ರವರೆಗೆ ಇಳಿಕೆ ಕಂಡಲ್ಲಿ ಆಗ ಅಮೆರಿಕದ ಬಾಂಡ್ ಗಳಿಕೆಯು ಗರಿಷ್ಠ ಮಟ್ಟದಲ್ಲಿ ಇದ್ದರೂ ವಿದೇಶಿ ಹೂಡಿಕೆದಾರರು ಮತ್ತೆ ಖರೀದಿಗೆ ಮುಂದಾಗಬಹುದು’ ಎಂದು ವಿಜಯಕುಮಾರ್ ಹೇಳಿದ್ದಾರೆ.

ಈ ವಾರದುದ್ದಕ್ಕೂ ನಿಫ್ಟಿಯಲ್ಲಿ ಮಾರಾಟದ ಒತ್ತಡ ಕಂಡುಬಂದಿತು. ಹೀಗಾಗಿ, ನಿಫ್ಟಿ ಶೇ 2.80ರಷ್ಟು ಇಳಿಕೆ ಕಂಡು, ಸಾರ್ವಕಾಲಿಕ ಗರಿಷ್ಠ ಮಟ್ಟದಿಂದ ಇಳಿಕೆ ಕಾಣುವಂತಾಯಿತು. ನಿಫ್ಟಿಯು 19,600ಕ್ಕಿಂತಲೂ ಕೆಳಕ್ಕೆ ಇಳಿಕೆ ಆದಲ್ಲಿ ಹೆಚ್ಚಿನ ಕುಸಿತ ಕಾಣುವ ಸಾಧ್ಯತೆ ಇದೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಹಿರಿಯ ತಾಂತ್ರಿಕ ವಿಶ್ಲೇಷಕ ರೂಪಕ್ ದೇ ತಿಳಿಸಿದ್ದಾರೆ.

ಟಾಟಾದಿಂದ ವಾಹನಗಳ ಗುಜರಿ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಮೋಟರ್ಸ್ ಕಂಪನಿ ಹಳೆಯ ವಾಹನಗಳನ್ನು ಗುಜರಿಗೆ ಹಾಕುವ ‘ನೋಂದಾಯಿತ ವಾಹನಗಳ ಗುಜರಿ ಸೌಲಭ್ಯ ಕೇಂದ್ರ’ವನ್ನು (ಆರ್‌ವಿಎಸ್‌ಎಫ್) ಗುಜರಾತ್‌ನ ಸೂರತ್‌ನಲ್ಲಿ ಆರಂಭಿಸಿದೆ.

ಪ್ರತಿ ವರ್ಷವೂ 15 ಸಾವಿರ ವಾಹನಗಳನ್ನು ಬೇರ್ಪಡಿಸುವ ಸಾಮರ್ಥ್ಯವನ್ನು ಈ ಕೇಂದ್ರ ಹೊಂದಿದೆ. ಟಾಟಾ ಮೋಟರ್ಸ್‌ನ ಪಾಲುದಾರ ಶ್ರೀ ಅಂಬಿಕಾ ಆಟೊ ಕಂಪನಿಯು ಇದನ್ನು ನಿರ್ವಹಣೆ ಮಾಡಲಿದೆ. ಎಲ್ಲಾ ಬ್ರ್ಯಾಂಡ್‌ಗಳ ಪ್ರಯಾಣಿಕ ಮತ್ತು ವಾಣಿಜ್ಯ ವಾಹನಗಳನ್ನು ಇಲ್ಲಿ ಗುಜರಿಗೆ ಹಾಕಬಹುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕಾಮತ್ ರೆಸ್ಟೋರೆಂಟ್ಸ್ ಒಪ್ಪಂದ

ಮುಂಬೈ (ಪಿಟಿಐ): ಮಹಾರಾಷ್ಟ್ರ ಮತ್ತು ಗುಜರಾತ್ ಹೆದ್ದಾರಿಗಳ ಬಳಿ ಇರುವ ಕಾಮತ್ಸ್ ರೆಸ್ಟೋರೆಂಟ್‌ಗಳಲ್ಲಿ ಫಾಸ್ಟ್ಯಾಗ್ ನೋಂದಣಿ ಮತ್ತು ರಿಚಾರ್ಜ್ ಸುಲಭಗೊಳಿಸುವ ಉದ್ದೇಶದಿಂದ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಜೊತೆ ಒಪ್ಪಂದ ಮಾಡಿಕೊಂಡಿದೆ.

ಫಾಸ್ಟ್ಯಾಗ್ ನೋಂದಣಿ ಮತ್ತು ರಿಚಾರ್ಜ್ ವ್ಯವಸ್ಥೆ ಕಲ್ಪಿಸುವ ಮೂಲಕ ಡಿಜಿಟಲ್ ಪರಿವರ್ತನೆಗೂ ಕೊಡುಗೆ ನೀಡುತ್ತಿದ್ದೇವೆ ಎಂದು ವಿಟ್ಸ್‌ಕಾಮತ್ಸ್ ಸಮೂಹದ ಸ್ಥಾಪಕ ಮತ್ತು ಅಧ್ಯಕ್ಷ ವಿಕ್ರಮ್ ಕಾಮತ್ ತಿಳಿಸಿದ್ದಾರೆ.

ಮಹಾ ರಾಷ್ಟ್ರ ಮತ್ತು ಗುಜರಾತ್‌ನಲ್ಲಿ ಒಟ್ಟು 137 ಕಾಮತ್ಸ್ ರೆಸ್ಟೋರೆಂಟ್‌ಗಳಿವೆ.

ಕಾಶ್ಮೀರ: ಪಾಕಿಸ್ತಾನಕ್ಕೆ ತಿರುಗೇಟು

ವಿಶ್ವಸಂಸ್ಥೆ (ಪಿಟಿಐ): ‘ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು ಮತ್ತು ಕಾಶ್ಮೀರ, ಲಡಾಕ್ ಭಾರತದ ಅವಿಭಾಜ್ಯ ಅಂಗಗಳಾಗಿವೆ. ಇಲ್ಲಿ ಸಮಸ್ಯೆಗಳೇನಾದರೂ ಇದ್ದರೆ ಅದು ದೇಶದ ಆಂತರಿಕ ವಿಷಯವಾಗಿದ್ದು ಪಾಕಿಸ್ತಾನವು ಮೂಗು ತೂರಿಸುವ ಅಗತ್ಯವಿಲ್ಲ’ ಎಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ (ಯುಎನ್‌ಜಿಎ) ಕಾಶ್ಮೀರ ವಿಷಯ ಪ್ರಸ್ತಾಪಿಸಿದ ಪಾಕಿಸ್ತಾನಕ್ಕೆ, ಭಾರತವು ತಿರುಗೇಟು ನೀಡಿದೆ.

ಶುಕ್ರವಾರ ನಡೆದ ಉನ್ನತ ಮಟ್ಟದ 78ನೇ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಪಾಕ್‌ನ ಹಂಗಾಮಿ ಪ್ರಧಾನಿ ಅನ್ವರ್ ಉಲ್ ಹಕ್ ಕಾಕರ್ ಅವರು, ಕಾಶ್ಮೀರ ಸಮಸ್ಯೆ ಕುರಿತು ಪ್ರಸ್ತಾಪಿಸಿದರು.

‘ಭಾರತ ಸೇರಿದಂತೆ ನೆರೆಯ ರಾಷ್ಟ್ರಗಳ ಜೊತೆಗೆ ಶಾಂತಿಯುತ ಹಾಗೂ ಫಲಪ್ರದಕಾರಿಯಾದ ಬಾಂಧವ್ಯ ಹೊಂದುವುದು ನಮ್ಮ ಆಸೆಯಾಗಿದೆ. ಎರಡೂ ದೇಶಗಳ ನಡುವೆ ಶಾಂತಿ ಸ್ಥಾಪನೆಗೆ ಕಾಶ್ಮೀರ ವಿಷಯವು ಕೀಲಿಕೈ ಆಗಿದೆ’ ಎಂದರು. ವಿಶ್ವಸಂಸ್ಥೆಯಲ್ಲಿನ ಭಾರತದ ಕಾರ್ಯದರ್ಶಿ ಪೆಟಲ್ ಗಹಲೋಟ್ ಅವರು ಪ್ರಧಾನಿ ಕಾಕರ್‌ಗೆ ಹೇಳಿಕೆಗೆ ಸಭೆಯಲ್ಲಿಯೇ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

‘ಪಾಕಿಸ್ತಾನವು ಇಡೀ ವಿಶ್ವದಲ್ಲಿಯೇ ಭಯೋತ್ಪಾದಕರು ನೆಲೆಯೂರಿರುವ ಅತಿದೊಡ್ಡ ದೇಶವಾಗಿದೆ. ಅಲ್ಲದೇ, ಭಯೋತ್ಪಾದನೆಯ ಪೋಷಕ ರಾಷ್ಟ್ರವೂ ಆಗಿದೆ. 26/11ರ ಮುಂಬೈ ದಾಳಿ ನಡೆದು 15 ವರ್ಷಗಳಾಗಿವೆ. ಇಂದಿಗೂ ಸಂತ್ರಸ್ತರು ನ್ಯಾಯಕ್ಕಾಗಿ ಎದುರು ನೋಡುತ್ತಿದ್ದಾರೆ. ಈ ದಾಳಿಯಲ್ಲಿ ಭಾಗಿಯಾದವರ ಮೇಲೆ ಕಠಿಣ ಕ್ರಮ ಜರುಗಿಸದೆ ಕುತರ್ಕ ವಾದದಲ್ಲಿ ಮುಳುಗಿದೆ’ ಎಂದು ಆರೋಪಿಸಿದರು.

‘ವಿಶ್ವದ ಇತರೆ ದೇಶಗಳಿಗೆ ಹೋಲಿಸಿದರೆ ಪಾಕ್‌ನಲ್ಲಿ ಅತಿಹೆಚ್ಚು ಮಾನವ ಹಕ್ಕುಗಳನ್ನು ಉಲ್ಲಂಘನೆಯಾಗುತ್ತಿದೆ. ಅಲ್ಪಸಂಖ್ಯಾತರು ಹಾಗೂ ಮಹಿಳೆಯರ ಹಕ್ಕುಗಳಿಗೆ ಅಲ್ಲಿ ಬೆಲೆ ಇಲ್ಲದಂತಾಗಿದೆ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶದತ್ತ (ಭಾರತ) ಬೆರಳು ತೋರಿಸುವ ಮೊದಲು ತನ್ನ ಮನೆಯಲ್ಲಿನ (ಪಾಕ್) ಸಮಸ್ಯೆ ಬಗ್ಗೆ ಗಮನಹರಿಸುವುದು ಒಳಿತು’ ಎಂದು ಹೇಳಿದರು.

ವೇದಿಕೆ ದುರ್ಬಳಕೆ: ಭಾರತದ ವಿರುದ್ಧ ಆಧಾರರಹಿತ ಮತ್ತು ದುರುದ್ದೇಶಪೂರಿತವಾಗಿ ಅಪಪ್ರಚಾರ ಮಾಡುವುದು ಪಾಕ್‌ನ ಚಾಳಿಯಾಗಿದೆ. ವಿಶ್ವಸಂಸ್ಥೆಯ ವೇದಿಕೆಯನ್ನು ಇದಕ್ಕೆ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಭಾರತ ಟೀಕಿಸಿದೆ.

‘ಪಾಕ್‌ನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಅವ್ಯಾಹತವಾಗಿದೆ. ಈ ವಿಷಯದಿಂದ ಅಂತರರಾಷ್ಟ್ರೀಯ ಸಮುದಾಯದ ಗಮನವನ್ನು ಬೇರೆಡೆ ತಿರುಗಿಸಲು ಯತ್ನಿಸುತ್ತಿದೆ. ಈ ತಂತ್ರಗಾರಿಕೆಯು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಹಾಗೂ ಬಹುಪಕ್ಷೀಯ ಸಂಸ್ಥೆಗಳಿಗೂ ಗೊತ್ತಿದೆ’ ಎಂದು ಪೆಟಲ್ ಹೇಳಿದರು.

ಶಾಂತಿ ಕಾಪಾಡಲು ಭಾರತ ತಾಕೀತು

- ಭಯೋತ್ಪಾದನೆಗೆ ಕುಮ್ಮಕ್ಕು ನೀಡುವುದನ್ನು ಕೈಬಿಡಬೇಕು ಹಾಗೂ ಗಡಿಯಾಚೆಗಿನ ಭಯೋತ್ಪಾದನೆಯನ್ನು ನಿಲ್ಲಿಸಬೇಕು
- ಅನಧಿಕೃತ ಹಾಗೂ ಬಲವಂತದಿಂದ ಆಕ್ರಮಿಸಿಕೊಂಡಿರುವ ಭಾರತದ ಭೂಪ್ರದೇಶವನ್ನು ತೊರೆಯಬೇಕು
- ಪಾಕ್‌ನಲ್ಲಿರುವ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸುವುದನ್ನು ನಿಲ್ಲಿಸುವ ಮೂಲಕ ಮಾನವ ಹಕ್ಕುಗಳನ್ನು ಉಲ್ಲಂಘನೆ ಸ್ಥಗಿತಗೊಳಿಸಬೇಕು

ಸಾವಿರ ಮಹಿಳೆಯರ ಮತಾಂತರ

ಪ್ರತಿವರ್ಷವು ಪಾಕ್‌ನಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಅಂದಾಜು ಒಂದು ಸಾವಿರ ಮಹಿಳೆಯರ ಅಪಹರಣ, ಬಲವಂತದ ಮತಾಂತರ ಹಾಗೂ ಮದುವೆ ಮಾಡಲಾಗುತ್ತಿದೆ ಎಂಬುದನ್ನು ಅಲ್ಲಿನ ಸರ್ಕಾರಿ ನಿಯಂತ್ರಣದ ಮಾನವ ಹಕ್ಕುಗಳ ಆಯೋಗದ ವರದಿ ಬಹಿರಂಗಪಡಿಸಿದೆ.

ಸಭೆಯಲ್ಲಿ ಪೆಟಲ್ ಅವರು ಈ ವರದಿಯನ್ನು ಪ್ರಸ್ತಾಪಿಸಿದರು. ಆಗಸ್ಟ್‌ನಲ್ಲಿ ಫೈಸಲಾಬಾದ್‌ನ ಜರನ್ವಾಲಾದಲ್ಲಿ ಕ್ರಿಶ್ಚಿಯನ್ನರ ಮೇಲೆ ನಡೆದ ಪಾಶವೀ ಕೃತ್ಯವನ್ನೂ ಉಲ್ಲೇಖಿಸಿದರು. ಒಟ್ಟು 19 ಚರ್ಚ್‌ಗಳು ಹಾಗೂ 89 ಕ್ರಿಶ್ಚಿಯನ್ ಮನೆಗಳಿಗೆ ಬೆಂಕಿ ಹಚ್ಚಲಾಗಿದೆ ಎಂದರು. ಅಹ್ಮದೀಯರ ಪ್ರಾರ್ಥನಾ ಸ್ಥಳಗಳನ್ನು ನೆಲಸಮಗೊಳಿಸಿರುವುದನ್ನು ಪ್ರಸ್ತಾಪಿಸಿದರು.

‘ಅಲ್ಲಿ ಹಿಂದೂ, ಸಿಖ್ ಹಾಗೂ ಕ್ರಿಶ್ಚಿಯನ್ ಸಮುದಾಯದ ಮಹಿಳೆಯರ ಬದುಕು ತೀರಾ ಶೋಚನೀಯವಾಗಿದೆ’ ಎಂದರು.

ಫೋನ್‌ಪೆನಿಂದ ‘ಇಂಡಸ್ ಆ್ಯಪ್‌ಸ್ಟೋರ್’ ಆರಂಭ



ನವದೆಹಲಿ (ಪಿಟಿಐ): ಫೋನ್‌ಪೆ ಕಂಪನಿಯು ಆ್ಯಪ್‌ಗಳನ್ನು ಅಭಿವೃದ್ಧಿಪಡಿಸುವ ವೇದಿಕೆ ‘ಇಂಡಸ್ ಆ್ಯಪ್‌ಸ್ಟೋರ್’ ಆರಂಭಿಸಿರುವುದಾಗಿ ಶನಿವಾರ ಹೇಳಿದೆ. ಆಂಡ್ರಾಯ್ಡ್ ಆ್ಯಪ್ ಅಭಿವೃದ್ಧಿಪಡಿಸುವವರು (ಡೆವಲಪರ್) ತಮ್ಮ ಅಪ್ಲಿಕೇಷನ್‌ಗಳನ್ನು ಈ ವೇದಿಕೆಗೆ ಸೇರಿಸುವಂತೆ ಆಹ್ವಾನವನ್ನೂ ನೀಡಿದೆ.

ಆ್ಯಪ್ ಅಭಿವೃದ್ಧಿಪಡಿಸುವವರು www.indusappstore.comನಲ್ಲಿ ನೋಂದಣಿ ಆಗಿ ತಮ್ಮ ಆ್ಯಪ್‌ಗಳನ್ನು ಅಪ್‌ಲೋಡ್ ಮಾಡುವಂತೆ ಫೋನ್‌ಪೇ ಆಹ್ವಾನಿಸಿದೆ. ಈ ವೇದಿಕೆಯಲ್ಲಿ ಮೊದಲ ಒಂದು ವರ್ಷದವರೆಗೆ ಆ್ಯಪ್‌ಗಳನ್ನು ಉಚಿತವಾಗಿ ಅಪ್‌ಲೋಡ್ ಮಾಡಬಹುದು. ಆ ಬಳಿಕ ಕನಿಷ್ಠ ವಾರ್ಷಿಕ ಶುಲ್ಕ ಅನ್ವಯಿಸಲಿದೆ ಎಂದು ಹೇಳಿದೆ.

ಈ ಆ್ಯಪ್‌ಸ್ಟೋರ್ ಶೀಘ್ರವೇ ಬಿಡುಗಡೆ ಆಗಲಿದ್ದು, ಭಾರತದ ಬಳಕೆದಾರರನ್ನು ಗಮನದಲ್ಲಿ ಇಟ್ಟುಕೊಂಡು ರೂಪಿಸಲಾಗಿದೆ. 12 ಸ್ಥಳೀಯ ಭಾಷೆಗಳಿಗೆ ಇದು ಬೆಂಬಲಿಸಲಿದೆ ಎಂದು ಇಂಡಸ್ ಆ್ಯಪ್‌ಸ್ಟೋರ್‌ನ ಸಹ ಸ್ಥಾಪಕ ಆಕಾಶ್ ಡೊಂಗ್ರೆ ತಿಳಿಸಿದ್ದಾರೆ.

ಆ್ಯಪ್‌ಸ್ಟೋರ್‌ನಲ್ಲಿ ‘ಲಾಂಚ್ ಪ್ಯಾಡ್’ ಸಹ ಇರಲಿದ್ದು, ಹೊಸದಾಗಿ ಆ್ಯಪ್ ಅಭಿವೃದ್ಧಿಪಡಿಸುವವರು ತಮ್ಮ ಆ್ಯಪ್‌ಗಳನ್ನು ಸೇರಿಸಲು ಮತ್ತು ಬಳಕೆದಾರರಿಗೆ ಸುಲಭವಾಗಿ ಕಾಣುವಂತೆ ಮಾಡಲು ಇದು ಅನುಕೂಲ ಆಗಲಿದೆ ಎಂದು ಹೇಳಿದ್ದಾರೆ.

‘ಚೀನಾ ಯುದ್ಧಕ್ಕೆ ಸಿದ್ಧವಾಗುತ್ತಿದೆ’

ವಾಷಿಂಗ್ಟನ್ (ಪಿಟಿಐ): ಚೀನಾ ಯುದ್ಧಕ್ಕೆ ಸಿದ್ಧವಾಗುತ್ತಿದೆ. ಆ ದೇಶವು ಅಮೆರಿಕ ಮತ್ತು ಇಡೀ ಜಗತ್ತಿಗೆ ಬೆದರಿಕೆಯಾಗಿದೆ ಎಂದು ಅಮೆರಿಕದ ರಿಪಬ್ಲಿಕ್ ಪಕ್ಷದ ಅಧ್ಯಕ್ಷ ಸ್ಥಾನದ ಆಕಾಂಕ್ಷಿ, ಭಾರತ ಮೂಲದ ನಿಕ್ಕಿ ಹ್ಯಾಲೆ ಆರೋಪಿಸಿದ್ದಾರೆ.

ಆರ್ಥಿಕ ನೀತಿ ಕುರಿತು ಮಾತನಾಡಿದ ಅವರು, ಅಮೆರಿಕವನ್ನು ಸೋಲಿಸುವ ಪಿತೂರಿ ನಡೆಸುತ್ತಲೇ ಚೀನಾ ಅರ್ಧ ಶತಮಾನವನ್ನು ಕಳೆದಿದೆ . ತನ್ನ ಸೇನಾ ಸಾಮರ್ಥ್ಯದಲ್ಲಿ ಅಮೆರಿಕದೊಂದಿಗೆ ಬಹುತೇಕ ಸಮಾನತೆ ಸಾಧಿಸಿದೆ. ಅಮೆರಿಕದ ತಯಾರಿಕಾ ವಲಯದ ಉದ್ಯೋಗಕ್ಕೆ ಚೀನಾ ಕನ್ನ ಹಾಕುತ್ತಿದೆ ಎಂದು ಹ್ಯಾಲೆ ಆರೋಪಿಸಿದರು.

‘ನಮ್ಮ ವ್ಯಾಪಾರ ರಹಸ್ಯಗಳನ್ನು ಚೀನಾ ಕದಿಯುತ್ತಿದೆ. ಔಷಧಗಳಿಂದ ಹಿಡಿದು ಅತ್ಯಾಧುನಿಕ ತಂತ್ರಜ್ಞಾನ ಕ್ಷೇತ್ರದವರೆಗೆ ಎಲ್ಲ ಕೈಗಾರಿಕೆಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತಿದೆ. ಆರ್ಥಿಕವಾಗಿ ಹಿಂದುಳಿದ ಸ್ಥಿತಿಯಿಂದ ಜಗತ್ತಿನ ಎರಡನೇ ಅತಿ ದೊಡ್ಡ ಆರ್ಥಿಕತೆ ಹೊಂದಿರುವ ರಾಷ್ಟ್ರವಾಗಿ ಮಾರ್ಪಾಡಾಗಿದೆ’ ಎಂದರು.

‘ತಾನೇ ಮೊದಲಿರಬೇಕು ಎಂಬ ಉದ್ದೇಶ ಆ ದೇಶಕ್ಕಿದೆ. ಅಮೆರಿಕವನ್ನು ಬೆದರಿಸುವಷ್ಟು ಮತ್ತು ಏಷ್ಯಾ, ಅದರಾಚೆಗಿನ ಜಗತ್ತಿನಲ್ಲಿ ಪ್ರಾಬಲ್ಯ ಸಾಧಿಸುವಷ್ಟು ಸಾಮರ್ಥ್ಯ ಹೊಂದಬೇಕು, ಸೇನೆಯನ್ನು ಬೆಳೆಸಬೇಕು ಎಂಬುದೇ ಕಮ್ಯುನಿಸ್ಟ್ ಪಕ್ಷದ ಉದ್ದೇಶ’ ಎಂದು ತಿಳಿಸಿದರು.


ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಸುಧಾ, ಮಯೂರ ಓದಿರಿ

WEEKEND CORNER ಕ್ಲಾಸಿಫೈಡ್ಸ್

Divine Euphoria
AGRICULTURAL
Farmland FOR Sale
@ KANAKAPURA
600+ CUSTOMERS 65+ COTTAGES BUILT
•Fully Developed •Swimming Pool •Clubhouse
•Children Play area •Temple •Meditation Center
•Birds & Animals •Adventure Sports
78921 54461-77605 74999
Rs. 14.5 Lakhs
www.divineeuphoria.co.in





SITES FOR SALE
ಮಾಗಡಿ ರೋಡ್, ಕಿತ್ತನಹಳ್ಳಿ ಹತ್ತಿರ
20x30 ರೂ. 7 ಲಕ್ಷಕ್ಕೆ
ನೆಲಮಂಗಲ ಹತ್ತಿರ DC CONVERSION
Rs. 1349/- Per Sqft.
Contact: 8880660099

COMMERCIAL RENT
HRBR 4th Block
EF 50x80 (4,000 sq.ft)
with 1,000sqft House
(in as is where is condition) - highly suitable for a upmarket outdoor Café/ Restaurant/ Bar cum Restaurant/ mini function Hall/ etc.
Very near to Altius Hospital.
Rent ₹3.0L x Advance ₹45L.
Brokers kindly excuse.
Kamal 9845496364

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331





REAL ESTATE SELLING

Sites

Bidadi

SITE FOR SALE 30x50 North Facing, auction site KHB Nethaji layout Bidadi, Contact : 9845152808

Basaweshwaranagar

BASAVESHWARANAGAR BEAUTIFUL Location South Facing 40x60 BDA SITE FOR SALE. Contact: 9945079777

Arkavathi Layout

***40X60 WEST** Facing BDA* allottee Site sale Arkavathy Layout 7th Block good location. 9844171085/ 9449007777

Banashankari

TWO 30X40 Corner Site Sale. Varahasandra, Conversion "A" Khatha, Hemigepura ward, Near Banashankari 6th -9731652042

BSK-6TH STAGE 7th Block 50x80 Site For Sale in Good Location Near Proposal BDA Complex (Agents Excuse) Call:9845555666

40X60, 30X40 Available Sale, Both Sites East Face in Banashankari 6th Stage. Call: MANOJ: 9731410616

BANASHANKARI 6TH STAGE- ANJANAPURA BDA- Available/ Wanted 20x30 30x40 40x60 50x80 Sites 'BRINDAVAN ASSOCIATES'- 9980863245

BANASHANKARI 6TH Stage 5th Block North East Corner 850 Square feet BDA Action Site For Sale Price, 60 Lakhs Slightly Negotiable. Contact: 9845298419

SALE BSK 6th stage 9th Block 30x40 East Facing 9th Block 65 and 20x30 48 lakh & 4th Block 40x60 west 1.85Cr negotiable 9945373839, 9620041313

BANASHANKARI 6TH Stage, 40x60, 60' Road. 20x30,30x40,North Near 100' Road .RV College :9916817739

Electronic City

"ELECTRONIC-CITY 30X40 DC.conversion Gated Community 38sites Sale-total 1.5acres with-Basic Amenities,Bank Loan Available,near VIBGYOR School, 1.75kms from Hosa Road, Metro Station. 9108283841/ 9448670671"

30X40, 30X50 Residential Converted Site in Bettadaspur 2 Kilometers From Electronic City Wipro. Contact: 9341238064

Girinagar

SITE FOR SALE 42X60, West Facing, Girinagar 2nd phase, BBMP A Khata. Contact: 9449239789.

General

EAGLETON RESORTS, BIDADI SITE 80X120, ES CORNER CLOSE GOLF GROUND CLEAR DOCUMENTS RS. 2.70Cr: 9845065084

J P Nagar

JPNAGAR 2NDPHASE,BDA30X50,RS. 3.50CR,40X60,RS. 21000/- Residential OldHome Nr_WoodiesHotel_3rd Phase60x90,Commercial 80'Road_30000/- 9845600007

SALE BDA JP Nagar 8th phase 2nd Block West facing 60 feet 40x60 also 9th phase 3rd Block East 40x60 good location 9945373839/ 9620041313

Kanakapura Road

KANAKAPURA ROAD Attached to Narayananagar 1st Block,Bagegowda Layout,30x50,North, S/E, Corner BBMP A'Khata Rs.12600/- 9845704509

40X60 EAST Facing Site Sale, Nitesh Rio (Adjacent to Vakil Garden City). Kanakapura Road. 9901244511.

SITES FOR Sale 750/1500Sft,W/F, GatedCommunity BDAKhata Swimming Pool,Gym PartyHall GamesRoom 3Parks Basketball Court: 8296559590

Kempegowda Layout

KEMPEGOWDA LAYOUT, BDA COMMERCIAL/ RESIDENTIAL SITE FOR SALE 30X40, 40X60, 50X80 CONTACT KUMAR: 9945119449

"KEMPEGOWDA LAYOUT 7th Block D-Sector 30x40 East, Immediate Registration 80% White, Genuine Buyers Contact: 9448432633"

Lalbagh

PRIME SITE For Sale in Lalbagh Fort Road next to Mantri Apartment 35x70 Interested Contact: 9341248702 Chandrashekar.

Magadi Road

MAGADI ROAD- 600+480 sqft Kadabagere Cross, DC Conversion, E-Katha, Shivani Greens. Contact: 9845044335

Bangalore North

50'X50' DC Converted Panchayat Khata Gated Community W/F Plot Sathanur Bangalore 3300/- PSft Call: 8050492849



Nagarabhavi

"NAGARABHAVI 'D'GROUP Layout 30x40 West facing Semi-commercial Site 40 feet Road. 9164089633/ 9663226688"

SITE FOR SALE NAGARABHAVI D Group Layout, BDA Khatha 30x50 West Facing. Good Location. 8105688602.

Sadashiva Nagar

WANTED 50X80 UPTO 5 ACRE LAND FOR 'JOINT VENTURE' FOR CONSTRUCTING HIGHEND APPARTMENTS IN SADASHIVANAGAR DOLLARS COLONY MALLESHWARAM M.G.ROAD INDIRANAGAR KORAMANGALA JAYANAGAR/ HEBBAL WHITEFIELD SARJAPUR ROAD AND CENTRAL BANGALORE SOURROUNDINGS. OWNERS CONTACT:9900001973

CLEAR TITLE Site for sale at Sadashivanagar/ Rajmahal VilasExtension 3120 sq ft. Contact. 9844005550

Tumkur Road

30X40 SITE sale (2 side road) Kirloskar layout, Hesaraghata main road, opposite Sapthagiri college. 9620480363.

Vishweshwariah Layout

"VISVESHWARAIAH LAYOUT 4th Block 50x80 North facing, near upcoming BDA Complex, 40 feet Road. 9731615921/ 9164089633"

AVAILABLE BDA SITE 30X40 Visveswaraiah Layout 2nd Block 7500/- Psft AND 6th Block 8500/- 9844603127

"27X40 SOUTH/ West Corner Residential Society Site Sale [BDA Khata] 1st Block Vishveshwaraiah Layout. 7338328879"

VISHVESWARAIAH LAYOUT 6th Block BDA 30x30 Corner Site and BHARATHNAGAR 30x50 NF 40ft Road: 9964971895

VISHWESHWARAIAH LAYOUT BDA 6th Block 60 feet Road Commercial Site 50x80 East Facing Near 100 feet Road 80% White.Call: 6360050356

***30X40 N/F** Site for Sale* VISHVESHWARAIAH LAYOUT 8th Block Rs.10500/Sqt Negotiable, Direct Owner meeting. Call:9591013777

SALE 30X40 VISHVESWARAIAH LAYOUT 4th Block South Facing Owner 80 lakh Negotiable 9945373839, 9620041313

***30X45 NORTH** Facing*, *40x60 E/F* opp 40 feet-Road behind 100 Feet Road Vishveswaraiah Layout. 7411994069

"VISHVESHWARAIAH LAYOUT 4th Block 50x80 North 80 feet Road, 2crore White remaining Cash. 9448432633"

BDA VISHWESHWARAYA Layout, 6th Block 30x40 WF, 9000/- Sft, Negotiable, 30x40 N/F 7500/- Sft. 9108507222

Vidyaranyapura

NTI SOCIETY Vidyaranyapura North East Corner 40X60 Site Top Location For Sale Contact: 9738111222 9341260828

Yelahanka

PRIME PLOTS DC Conversion Ekatha Ready Construction Bank Loan Available Rajankunte-To Hesaraghatta Mainroad: 9036207777 9611146463

Anjanapura

SITE FOR SALE ANJANAPURA 30X40 N/F 7TH BLOCK NEAR BDA COMPLEX, CENTRALPARK GENUINE BUYERS :9880776950

SALE BDA Anjanapura 8th Block 40x60 west Facing Near BDA complex 40 Feet Road. 9620041313/ 9945373839

Intl Airport Road

FOR SALE Near International Airport, Kannur 40x60, BDA, North, opposite Park, Next to upcoming Manyata Tech Park 2, Kanaka Shree Layout, Price. 10,250/- Per. Sqft Contact: 7019661699. Brokers excuse.

Mysore

MUDA NORTH East Corner 240 Sqft Semi Commercial Site For Sale Vijaynagar For 18.5 Lakhs Owner: 9606866368

Sahakarnagar

SAHAKARANAGAR 1620 sft Site North West Corner Top Location For Sale Contact: 9738111222 9341260828

Flat

Banashankari

"POORNAPRAGNA LAYOUT, 3BHK Luxury Flat, Ready to occupy 2100 Sq.ft Teakwood, Italian-marble, 'A' katha, 1.50 crore. Call: 9845286505"

TWO BEDROOM flat with all fittings, near vidyapeeta circle... Clear titles, going cheap. Phone 8660514834.

Basavanagudi

BASAVANAGUDI TATA Silk Farm 3-BHK N/F Flat, 1470/Sq.cm A Khat. 1.2 Cr. Gururaj- 9738643338

Isro Layout

3/4 BHK New Luxurious Flats Sale, Fully Furnished, Italian Marble, Cauvery, Security, Car parking. 70L/90L. 9945224058, 6360501159.

Jayanagar

SALE 4-BHK FLAT East Facing as per Vastu Near 4th Block Telephone Exchange 2 Car-Parking Call:9611844667 8123515830

Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Kanakapura Road

3-BHK-FLAT SALE 1575-Sqft N/F Full Interiors 70Lakhs Off KANAKAPURA ROAD KONANKUNTE Near Junior Delhi Public School- 9343722162

Malleshwaram

MALLESWARAM 2BHK Flat, North Facing, 988sft, first floor, Lift, Carpark. 1.25CR. (Negotiable) 9845243757

Mysore Road

AVAILABLE SALE lease rent 3 BHK residential flat at Mysore road Bangalore City Call: 8105273951.

Rajajinagar

DNR HIGHLINE @ Okalipuram near LULU Mall Rajajinagar 3 & 4 Bedroom FLATS with 7 Star Luxurious Amenities for Sale. for details Contact: 9844027560.

PURVA BLUEBELLE Adjacent to Magadi road Metro station (purple lane) Rajajinagar 3 bedroom Jodi units 5 bedroom + servant room with all luxurious Amenities for Sale Contact: 9844027560.

FOR SALE:- 3 BHK PENTHOUSE @ Esteem Classic Apt, with open terrace, Rajajinagar, (Opposite Iskon, behind Temple bells apt), Size- 3340 sq ft, Vaastu compliant Location : 2- 3 mins from orion mall and sandal soap factory metro station,With 2 covered car parks. Phone 9886795010

Vijayanagar

3-BHK FLAT: Area 1400 sqft; Price Rs.8000 per sqft (negotiable) at Saraswathinagar, Vijayanagar, Bengaluru. (Broker excuse)- 9900144793

READY FLAT Sale 2BHK 922 Sqft Rs. 46 Lakh Negotiable Pipeline Road Vijayanagar Bangalore 23rd Contact: 9110432149

West

3BHK, FLAT for sale, west, 4th floor, gated community beside MVJ Engg college, Channa Sandra main road, Kadugodi 9393023536.

Farm House/ Land/ Resorts

Hassan

SALE 25 Kms from Sakleshpura 5 Acres Agricultural Land with running Homestay generating 2 Lakhs per month Sale 2.5 Cr Bharadwaj 9845019934.



MORE Classifieds Ads on Subsequent Pages

ಕಸಾಪದ 'ಕನ್ನಡದ ಧ್ರುವತಾರೆ' ಸಾಧಕರೊಂದಿಗೆ ಮಾತು–ಕತೆಯಲ್ಲಿ ಕ್ಯಾಪ್ಟನ್ ಗೋಪಿನಾಥ್ ಬೇಸರ

'ವಿಮಾನಗಳ ಖರೀದಿ ನೀತಿ ಸದೃಢವಾಗಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುದ್ಧ ವಿಮಾನಗಳ ತಯಾರಿಕೆ ಅವಕಾಶವನ್ನು ಖಾಸಗಿ ಕ್ಷೇತ್ರಕ್ಕೆ ನೀಡುವುದು ಅಪರಾಧವೆಂಬ ಮನೋಭಾವ ನಮ್ಮಲಿದೆ. ಆದರೆ, ವಿದೇಶಿ ಖಾಸಗಿ ಕಂಪನಿಗಳಿಂದ ಯುದ್ಧ ವಿಮಾನಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಯುದ್ಧ ವಿಮಾನಗಳ ಖರೀದಿ ನೀತಿ ಸದೃಢವಾಗಿಲ್ಲ' ಎಂದು ಏರ್ ಡೆಕ್ಕನ್ ಸಂಸ್ಥಾಪಕ ಕ್ಯಾಪ್ಟನ್ ಗೋಪಿನಾಥ್ ಬೇಸರ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಶನಿವಾರ ಹಮ್ಮಿಕೊಂಡ 'ಕನ್ನಡದ ಧ್ರುವತಾರೆ' ಸಾಧಕರೊಂದಿಗೆ ಮಾತು–ಕತೆ ಕಾರ್ಯಕ್ರಮದಲ್ಲಿ ಮನದಾಳದ ಮಾತುಗಳನ್ನು ಹಂಚಿಕೊಂಡರು.

'ರಷ್ಯಾ, ಫ್ರಾನ್ಸ್, ಇಂಗ್ಲೆಂಡ್ ಹಾಗೂ ಅಮೆರಿಕದಲ್ಲಿ ಖಾಸಗಿ ಕಂಪನಿಗಳು ಯುದ್ಧ ವಿಮಾನಗಳನ್ನು ಸಿದ್ಧಪಡಿಸುತ್ತಿವೆ. ದೇಶದಲ್ಲಿ ಖಾಸಗಿ ಸಂಸ್ಥೆಗೆ ಈ ಅವಕಾಶ ನೀಡದೆ, ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಇದರಿಂದಾಗಿ ಯಾವುದೇ ಯುದ್ಧ ವಿಮಾನ ಖರೀದಿಸಲು 15 ವರ್ಷಗಳು ಬೇಕಾಗುತ್ತಿದ್ದವು. ರಫೆಲ್ ಯುದ್ಧ ವಿಮಾನ ಖರೀದಿ ಪ್ರಕ್ರಿಯೆ ಯುಪಿಎ ಸರ್ಕಾರದ ಮೊದಲ ಅವಧಿಯಲ್ಲಿ ಪ್ರಾರಂಭವಾಗಿ, ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಪೂರ್ಣಗೊಂಡಿತು. ಖರೀದಿ ನೀತಿಯೇ ಇದಕ್ಕೆ ಕಾರಣ. ಇತ್ತೀಚಿನ ವರ್ಷಗಳಲ್ಲಿ ಈ ನೀತಿಯನ್ನು ಸಡಿಲಿಸಿ, ಖರೀದಿಗೆ ವೇಗ ನೀಡಲಾಗುತ್ತಿದೆ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಕ್ಯಾಪ್ಟನ್ ಗೋಪಿನಾಥ್ ಮಾತನಾಡಿದರು. ಮಹೇಶ ಜೋಶಿ ಇದ್ದಾರೆ –ಪ್ರಜಾವಾಣಿ ಚಿತ್ರ

'ದೇಶದ ಜೆಟ್ ವಿಮಾನಗಳು ಹಳೆಯದಾಗಿವೆ. ತಾಂತ್ರಿಕ ಕಾರಣ, ಪೈಲಟ್ ಮಾಡುವ ತಪ್ಪುಗಳು ಸೇರಿ ವಿವಿಧ ಕಾರಣಗಳಿಂದ ಕೆಲ ಯುದ್ಧ ವಿಮಾನಗಳು ಪತನವಾಗುತ್ತಿವೆ. ಪಾಶ್ಚಿಮಾತ್ಯ ದೇಶಕ್ಕೆ ಹೋಲಿಸಿದರೆ ನಮ್ಮಲ್ಲಿ ಅಷ್ಟೊಂದು ಪತನವಾಗಿಲ್ಲ' ಎಂದರು.

'ಕರ್ನಾಟಕದಿಂದ ಸೈನ್ಯಕ್ಕೆ ಸೇರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಇಲ್ಲಿನ ವಾತಾವರಣ ಬದಲಾಗಿದ್ದು, ಯುವಜನರು ಎಂಜಿನಿಯರಿಂಗ್ ಕಡೆಗೆ ವಾಲಿದ್ದಾರೆ. ಅಧಿಕ ವೇತನ ಸಿಗುತ್ತದೆ ಎನ್ನುವುದೇ ಇದಕ್ಕೆ ಮುಖ್ಯ ಕಾರಣ. ಇಲ್ಲಿಯವರು ತಮ್ಮ ಊರನ್ನು ಬಿಟ್ಟು, ಹೊರಗಡೆ ಕೆಲಸ ಮಾಡುವ ಸಾಹಸ ಪ್ರವೃತ್ತಿಯಿಲ್ಲ. ಬೆಂಗಳೂರಿನಲ್ಲಿ ವಿವಿಧ ಕಚೇರಿಗಳು, ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಇರುವ ಭದ್ರತಾ ಸಿಬ್ಬಂದಿ ಅನ್ಯರಾಜ್ಯದವರೇ ಆಗಿದ್ದಾರೆ. ಸೈನ್ಯದತ್ತ ಯುವಜನರನ್ನು ಆಕರ್ಷಿಸಲು ರಾಜ್ಯ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಬೇಕು' ಎಂದು ಹೇಳಿದರು.

ಪ್ರಯಾಣ ದುಬಾರಿ: 'ನಮ್ಮ ದೇಶದಲ್ಲಿ ಕೇವಲ 4 ರಷ್ಟು ಜನರು ಮಾತ್ರ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಶೇ 96 ರಷ್ಟು ಮಂದಿಗೆ ವಿಮಾನದಲ್ಲಿ ಪ್ರಯಾಣ ಮಾಡುವಷ್ಟು ಆದಾಯವಿಲ್ಲ. ಅಮೆರಿಕದಲ್ಲಿ ಬಹುತೇಕರು ವರ್ಷಕ್ಕೆ ಎರಡು ಮೂರು ಬಾರಿ ಪ್ರಯಾಣ ಮಾಡುತ್ತಾರೆ' ಎಂದರು.

'ದೇಶದಲ್ಲಿ ಅತ್ಯಂತ ದೊಡ್ಡ ದಾನ ಕೆಲಸ ಸೃಷ್ಟಿ ಮಾಡುವುದು. ಇತ್ತೀಚೆಗೆ ಸಂಚಾರ ದೀಪಗಳ ಬಳಿಯೂ ಭಿಕ್ಷೆ ಬೇಡುವವರಿಗಿಂತ ಮಾರಾಟ ಮಾಡುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಒಮ್ಮೆ ಸಂಚಾರ ಸಿಗ್ನಲ್‌ನಲ್ಲಿ ಒಬ್ಬರು ನನ್ನ ಪುಸ್ತಕವನ್ನೇ ನನಗೆ ಮಾರಾಟ ಮಾಡಿದರು. ಕೆಲಸವನ್ನು ಒದಗಿಸುವುದು, ಉದ್ಯಮ ಸ್ಥಾಪಿಸುವುದು ದೊಡ್ಡಕಾರ್ಯ' ಎಂದು ಹೇಳಿದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ ಸಂವಾದ ನಡೆಸಿಕೊಟ್ಟರು.

ಪ್ರಕೃತಿ ಆಧಾರಿತ ಪರಿಹಾರಕ್ಕೆ ಸುಧಾರಿತ ತಂತ್ರಜ್ಞಾನ

ಬೆಂಗಳೂರು: ಕೃತಕ ಬುದ್ಧಿಮತ್ತೆ ಸೇರಿದಂತೆ ಸುಧಾರಿತ ತಂತ್ರಜ್ಞಾನ ಬಳಸಿಕೊಂಡು ಪ್ರಕೃತಿ ಆಧಾರಿತ ಪರಿಹಾರಗಳನ್ನು ಕಂಡುಕೊಳ್ಳಬೇಕು ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ದಕ್ಷಿಣ ವಿಭಾಗದ ಪ್ರಧಾನ ವ್ಯವಸ್ಥಾಪಕ ರಾಮಚಂದ್ರ ಹೆಬ್ಬಾರ್ ಹೇಳಿದರು.

ದಯಾನಂದ ಸಾಗರ್ ಕಾಲೇಜು ಸಿವಿಲ್ ಎಂಜಿನಿಯರಿಂಗ್ ವಿಭಾಗ, ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆ, ಬೆಂಗಳೂರು ಜಲಮಂಡಳಿ, ಕೇಂದ್ರ ಭೂ ವಿಜ್ಞಾನ ಸಚಿವಾಲಯ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಎಂಜಿನಿಯರ್‌ಗಳ ದಿನಾಚರಣೆ ಹಾಗೂ 'ಸಂಪನ್ಮೂಲ ಎಂಜಿನಿಯರಿಂಗ್‌ನಲ್ಲಿ ಉದಯೋನ್ಮುಖ ಗಡಿಗಳು, ಆವಿಷ್ಕಾರಗಳು ಮತ್ತು ತಂತ್ರಜ್ಞಾನಗಳು' ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಐಐಎಸ್ಸಿ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಡಿ.ನಾಗೇಶ್ ಕುಮಾರ್, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಮಾಜಿ ಪ್ರಧಾನ ವ್ಯವಸ್ಥಾಪಕ ಕೆ. ಗಣೇಶ್ ರಾಜ್, ಬಿಎಂಎಸ್ ಕಾಲೇಜಿನ ಸಹ ಪ್ರಾಧ್ಯಾಪಕಿ ಟಿ.ವಿ. ರೇಶ್ಮಿದೇವಿ, ವಿದ್ಯಾವರ್ಧಕ ಕಾಲೇಜಿನ ಸಹ ಪ್ರಾಧ್ಯಾಪಕಿ ಬಿ.ಎಸ್.ಶಿಲ್ಪಾ, ಕೃಷಿ ಹವಾಮಾನ ವಿಭಾಗ ಮುಖ್ಯಸ್ಥ ಎಂ.ಎನ್. ತಿಮ್ಮೇಗೌಡ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಜಗದೀಶ್ ಗೋಡಿಹಾಳ್, ನಿವೃತ್ತ ಅಧಿಕಾರಿ ಬಿ.ನಾಗಪ್ಪ, ಬೆಂಗಳೂರು ಜಲ ಮಂಡಳಿ ಎಂಜಿನಿಯರ್ ರಾಜೀವ್, ಗ್ರಾಮೀಣ ಕುಡಿಯುವ ನೀರು, ನೈರ್ಮಲ್ಯ ಇಲಾಖೆ ಎಂಜಿನಿಯರ್ ಐಜಾಜ್ ಹುಸೇನ್, ಪ್ರಾಂಶುಪಾಲ ಬಿ.ಜಿ. ಪ್ರಸಾದ್, ಕಾರ್ಯಕ್ರಮದ ಸಂಚಾಲಕ ಎಚ್.ಕೆ. ರಾಮರಾಜು ಇದ್ದರು. ಡಿಎಸ್‌ಐ ಕಾರ್ಯದರ್ಶಿ ಗಾಲಿಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.



ವಾರಾಣಸಿಯಲ್ಲಿ ಕ್ರಿಕೆಟ್ ಕ್ರೀಡಾಂಗಣಕ್ಕೆ ಶಿಲಾನ್ಯಾಸ ನೆರವೇರಿಸಿದ ಪ್ರಧಾನಿ ನರೇಂದ್ರ ಮೋದಿಗೆ ಸಚಿನ್ ತೆಂಡೂಲ್ಕರ್ ಭಾರತ ತಂಡದ ಜರ್ಸಿ ನೀಡಿದರು. ಜಯ್ ಶಾ, ಯೋಗಿ ಆದಿತ್ಯನಾಥ, ರೋಜರ್ ಬಿನ್ನಿ ಹಾಜರಿದ್ದರು –ಪಿಟಿಐ ಚಿತ್ರ

ಪಿಂಚಣಿ ಹೆಚ್ಚಳಕ್ಕೆ ಸಂಪುಟ ಸಮ್ಮತಿ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷರು, ಸದಸ್ಯರ ಪಿಂಚಣಿಯನ್ನು ಎರಡು ಪಟ್ಟಿಗಿಂತಲೂ ಹೆಚ್ಚು ಮೊತ್ತದಷ್ಟು ಏರಿಕೆ ಮಾಡುವ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

'ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಷರತ್ತುಗಳು) (ತಿದ್ದುಪಡಿ) ನಿಯಮಗಳು-2023'ಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ. ಆಯೋಗದ ಅಧ್ಯಕ್ಷರು, ಸದಸ್ಯರಾಗಿ ಆರು ವರ್ಷಗಳ ವರೆಗೆ ಕಾರ್ಯನಿರ್ವಹಿಸಿದವರಿಗೆ ಪಿಂಚಣಿ ಹೆಚ್ಚಳಕ್ಕೆ ಅವಕಾಶ ಕಲ್ಪಿಸಲಾಗಿದೆ.

ಕೆಪಿಎಸ್‌ಸಿ ಅಧ್ಯಕ್ಷರಾಗಿ ನಿವೃತ್ತರಾದವರಿಗೆ ಈಗ ತಿಂಗಳಿಗೆ ₹ 29,640 ಪಿಂಚಣಿ ಇದ್ದು, ಅದನ್ನು ₹ 67,500ಕ್ಕೆ ಹೆಚ್ಚಿಸಲಾಗಿದೆ. ಸದಸ್ಯರಾಗಿ ನಿವೃತ್ತರಾದವರಿಗೆ ತಿಂಗಳಿಗೆ ₹ 24,960 ಪಿಂಚಣಿ ಇದ್ದು, ಅದನ್ನು ₹ 61,500ಕ್ಕೆ ಹೆಚ್ಚಳ ಮಾಡಲು ನಿಯಮಗಳಿಗೆ ತಿದ್ದುಪಡಿ ತರಲು ಒಪ್ಪಿಗೆ ನೀಡಲಾಗಿದೆ.

ಅಭ್ಯರ್ಥಿಗಳ ಆಯ್ಕೆಗಾಗಿ ವೀಕ್ಷಕರಾಗಿ ಸಚಿವರ ನೇಮಕ

ಬೆಂಗಳೂರು: ಲೋಕಸಭಾ ಚುನಾವಣೆಗೆ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆಗೆ ಚಾಲನೆ ನೀಡಿರುವ ಕಾಂಗ್ರೆಸ್, 28 ಕ್ಷೇತ್ರಗಳಿಗೂ ತಲಾ ಒಬ್ಬ ಸಚಿವರನ್ನು ವೀಕ್ಷಕರನ್ನಾಗಿ ನೇಮಿಸಿದೆ.

ಕ್ಷೇತ್ರವಾರು ಉಸ್ತುವಾರಿಗಳನ್ನು ನೇಮಿಸಿರುವ ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕ್ಷೇತ್ರಗಳಲ್ಲಿ ಪ್ರವಾಸ ಕೈಗೊಂಡು ಅಭ್ಯರ್ಥಿಗಳ ಕುರಿತು ವರದಿ ನೀಡುವಂತೆ ಸೂಚಿಸಿದ್ದಾರೆ.

ಉಸ್ತುವಾರಿಗಳ ವಿವರ: ಬಾಗಲಕೋಟೆ– ಪ್ರಿಯಾಂಕ್ ಖರ್ಗೆ; ಬೆಂಗಳೂರು ಕೇಂದ್ರ– ಬೋಸರಾಜ್; ಬೆಂ. ಉತ್ತರ– ಜಿ. ಪರಮೇಶ್ವರ; ಬೆಂ. ದಕ್ಷಿಣ– ಶರಣ ಪ್ರಕಾಶ ಪಾಟೀಲ; ಬೆಂ. ಗ್ರಾಮಾಂತರ– ಕೆ. ವೆಂಕಟೇಶ್; ಬೆಳಗಾವಿ– ಶಿವರಾಜ ತಂಗಡಿ; ಕಲಬುರಗಿ– ಬಿ. ನಾಗೇಂದ್ರ; ಬೀದರ್– ಸಂತೋಷ್ ಲಾಡ್; ವಿಜಯಪುರ– ಸತೀಶ ಜಾರಕಿಹೊಳಿ; ಚಾಮರಾಜನಗರ– ದಿನೇಶ್ ಗುಂಡೂರಾವ್; ಚಿಕ್ಕಬಳ್ಳಾಪುರ– ಜಮೀರ್ ಅಹಮದ್ ಖಾನ್; ಚಿಕ್ಕೋಡಿ– ಡಿ. ಸುಧಾಕರ್; ಚಿತ್ರದುರ್ಗ– ಡಾ.ಎಚ್.ಸಿ. ಮಹದೇವಪ್ಪ; ದಕ್ಷಿಣ ಕನ್ನಡ– ಮಧು ಬಂಗಾರಪ್ಪ. ದಾವಣಗೆರೆ– ಈಶ್ವರ ಖಂಡ್ರೆ; ಧಾರವಾಡ– ಲಕ್ಷ್ಮಿ ಹೆಬ್ಬಾಳ್ಕರ್; ಬಳ್ಳಾರಿ– ಶಿವಾನಂದ ಪಾಟೀಲ; ಹಾಸನ– ಎನ್. ಚಲುವರಾಯಸ್ವಾಮಿ; ಹಾವೇರಿ– ಎಸ್.ಎಸ್. ಮಲ್ಲಿಕಾರ್ಜುನ; ಕೋಲಾರ– ರಾಮಲಿಂಗಾ ರೆಡ್ಡಿ; ಕೊಪ್ಪಳ– ಆರ್.ಬಿ. ತಿಮ್ಮಾಪುರ; ಮಂಡ್ಯ– ಎಂ.ಸಿ. ಸುಧಾಕರ್; ಮೈಸೂರು– ಬಿ.ಎಸ್. ಸುರೇಶ್; ರಾಯಚೂರು– ಕೆ.ಎಚ್. ಮುನಿಯಪ್ಪ; ಶಿವಮೊಗ್ಗ– ಕೆ.ಎನ್. ರಾಜಣ್ಣ; ತುಮಕೂರು– ಕೃಷ್ಣ ಬೈರೇಗೌಡ; ಉಡುಪಿ–ಚಿಕ್ಕಮಗಳೂರು– ಮಂಕಾಳ ವೈದ್ಯ; ಉತ್ತರ ಕನ್ನಡ– ಎಚ್.ಕೆ. ಪಾಟೀಲ.

ಮಹಿಳೆಯರಿಗೆ ಮೀಸಲಾತಿ: ಸಂಭ್ರಮ

ಪೀಣ್ಯ ದಾಸರಹಳ್ಳಿ: ಸ್ವಾತಂತ್ರ್ಯ ಬಂದು 76 ವರ್ಷಗಳಾದರೂ ಮಹಿಳೆಯರಿಗೆ ಸಮಾನ ಅವಕಾಶ ನೀಡಬೇಕು ಎಂದು ಯಾವ ಪ್ರಧಾನಿಯೂ ಚಿಂತನೆಯನ್ನು ನಡೆಸಿರಲಿಲ್ಲ. ಪ್ರಧಾನಿ ಮೋದಿ ಅವರು ಚಿಂತನೆಯಿಂದ ಶೇ 33ರಷ್ಟು ಮೀಸಲಾತಿ ಲಭಿಸಿದೆ ಎಂದು ಶಾಸಕ ಎಸ್.ಮುನಿರಾಜು ತಿಳಿಸಿದರು.

ಶನಿವಾರ ನಡೆದ ಸಂಭ್ರಮಾಚರಣೆಯಲ್ಲಿ ಅವರು ಮಾತನಾಡಿರು.

'ಮುಂಬರುವ ಲೋಕಸಭೆ ಚುನಾವಣೆಯಲ್ಲಿ 180ಕ್ಕೂ ಹೆಚ್ಚು ಮಹಿಳೆಯರು ಸಂಸದರು ಆಗಲಿದ್ದಾರೆ. 2028ಕ್ಕೆ ವಿಧಾನಸಭೆಯಲ್ಲಿ 74 ಮಹಿಳೆಯರು ಚುನಾಯಿತರಾಗುವಲ್ಲಿ ಸಂಶಯ ಇಲ್ಲ' ಎಂದರು.

ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಸೂರಜ್ ಫೌಂಡೇಷನ್ ಅಧ್ಯಕ್ಷೆ ಸುಜಾತ ಎಸ್. ಮುನಿರಾಜು ಮಾತನಾಡಿ, 'ಮೋದಿಯವರು ಒಂದಲ್ಲ ಒಂದು ರೀತಿಯಲ್ಲಿ ಮಹಿಳೆಯರಿಗೆ ಸೌಲಭ್ಯಗಳನ್ನು ನೀಡುತ್ತಾ ಬಂದಿದ್ದಾರೆ' ಎಂದು ಹೇಳಿದರು.



8ನೇ ಮೈಲಿಯಿಂದ ಬಾಗಲಗುಂಟೆ ಸಾಯಿ ಕಲ್ಯಾಣ ಮಂಟಪದ ತನಕ ಸಂಭ್ರಮಾಚರಣೆಯ ಮೆರವಣಿಗೆ ನಡೆಯಿತು.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 24 ಸೆಪ್ಟೆಂಬರ್ 2023

ವರ್ಕ್ ಫ್ರಮ್ ಹೋಮ್ ಕರೆದರೂ ಕೇಳದೆ...



'ವರ್ಕ್ ಫ್ರಮ್ ಹೋಮ್' ಅವಕಾಶವೀಗ ನಿಧನಿಧಾನವಾಗಿ ಕರಗಿ, ಹೈಬ್ರಿಡ್ ಮಾದರಿಯನ್ನು ಒಪ್ಪಿಕೊಳ್ಳುವವರ ಸಂಖ್ಯೆ ಏರುತ್ತಿದೆ. ಕಾರ್ಪೊರೇಟ್ ವಲಯದ ಉದ್ಯೋಗಿಗಳನ್ನೇ ನೆಚ್ಚಿಕೊಂಡಿರುವ ಸಣ್ಣ ಪುಟ್ಟ ವ್ಯಾಪಾರಿಗಳಿಗೂ ಇದು ನೆಮ್ಮದಿ ತರುವ ಬೆಳವಣಿಗೆಯಾಗಿದೆ. ರಿಯಲ್ ಎಸ್ಟೇಟ್‌ನವರ ಲೆಕ್ಕಾಚಾರದ ಪಾಲೂ ಇದರಲ್ಲಿ ಇದೆ.

ಇ.ಎಸ್. ಸುಧೀಂದ್ರ ಪ್ರಸಾದ್

ನಾನು ನಂದಿನಿ,
ಬೆಂಗಳೂರಿಗೆ ಬಂದೀನಿ
ಪಿಜಿಲಿ ಇರ್ತೀನಿ
ಐಟಿ ಕೆಲಸ ಮಾಡ್ತೀನಿ
ಊಟ ಸರಿಯಿಲ್ಲ ಅಂದ್ರೂನೂ ತಿಂತೀನಿ
ಬಂದಿದ್ ದುಡ್ಡೆಲ್ಲಾ, ಮನೆಗ್ ಕಳಿಸ್ತೀನಿ...

'ಆಕ್ವಾ' ಆಲ್ಬಂನ 'ಆಮ್ ಎ ಬಾರ್ಬಿ ಗರ್ಲ್' ಗೀತೆಯ ಸಂಗೀತಕ್ಕೆ ಕನ್ನಡದ ಸಾಹಿತ್ಯ ಹಾಕಿದ ಈ ಹಾಡು ಸದ್ಯ ಟ್ರೆಂಡ್‌ನಲ್ಲಿದೆ. ಆದರೆ ಇದು ಬರೀ ಮನರಂಜನೆಯಷ್ಟೇ ಅಲ್ಲದೆ, ಐಟಿ ನಗರಿ ಬೆಂಗಳೂರು ಮತ್ತು ಸಾಫ್ಟ್‌ವೇರ್ ಉದ್ಯೋಗ ಕಂಡುಕೊಳ್ಳಲು ಸಿಲಿಕಾನ್ ಸಿಟಿಗೆ ಬಂದವರ ಕಥೆಯನ್ನು ಹೊಸತೇ ಆದ ಧ್ವನಿಯಲ್ಲಿ ಹೇಳುತ್ತದೆ.

ಬೆಂಗಳೂರು ಸಿಲಿಕಾನ್ ಸಿಟಿ ಆಗುವ ಹೊಸ್ತಿಲಲ್ಲಿ ಎಲ್ಲವೂ ಝಗಮಗ. ಐಟಿ ಕಂಪನಿ ಉದ್ಯೋಗ ಪಡೆಯುವ ಮಹದಾಸೆಯೊಂದಿಗೆ 'ನಂದಿನಿ'ಯಂತೆಯೇ ಬೆಂಗಳೂರಿಗೆ ಬಂದು ನೆಲೆಸಿದವರು ಲಕ್ಷಗಟ್ಟಲೆ ಮಂದಿ. ಹೀಗೆ ಬಂದವರನ್ನೇ ನಂಬಿಕೊಂಡು ಉದ್ಯಮ ಸ್ಥಾಪಿಸಿಕೊಂಡು ಬದುಕು ಕಟ್ಟಿಕೊಂಡವರು ಇನ್ನಷ್ಟು ಮಂದಿ. ಟ್ರಾಫಿಕ್ ಕಿರಿಕಿರಿ, ಕೆಲಸದ ಒತ್ತಡ ಇದ್ದರೂ ನುಂಗಿಕೊಂಡು ಊರನ್ನು ಮರೆತಿದ್ದವರೇ ಹೆಚ್ಚು.

ಆದರೆ ಕೋವಿಡ್–19 ಎಲ್ಲವನ್ನೂ ಬದಲಿಸಿಬಿಟ್ಟಿತು. ಬದುಕುಳಿದರೆ ನೂರು ವರ್ಷ ಆಯಸ್ಸು ಎಂದು ನಂಬಿದವರೇ ಹೆಚ್ಚು. ಅದಕ್ಕೆ ಪೂರಕವೆಂಬಂತೆ ಜಾರಿಗೆ ಬಂದಿದ್ದೇ 'ವರ್ಕ್ ಫ್ರಮ್ ಹೋಮ್' ಎಂಬ ಮನೆಯಿಂದಲೇ ಕೆಲಸ ಮಾಡುವ ಅವಕಾಶ. ಅಂತರ್ಜಾಲದಿಂದಾಗಿ ವಿಶ್ವವೇ ಒಂದು ಹಳ್ಳಿಯಾಗಿರುವ ಸಂದರ್ಭದಲ್ಲಿ, ಹಳ್ಳಿಯಲ್ಲೇ ಕುಟುಂಬದವರೊಂದಿಗೆ ಕುಳಿತು ವಿಶ್ವದ ವಿವಿಧ ರಾಷ್ಟ್ರಗಳೊಂದಿಗೆ ಕೆಲಸ ಮಾಡುವ ಎಂಜಿನಿಯರ್‌ಗಳು ಈಗ ಮನೆ ವಾತಾವರಣಕ್ಕೆ ಒಗ್ಗಿಕೊಂಡಿದ್ದಾರೆ.

ಕೋವಿಡ್ ಸಾಂಕ್ರಾಮಿಕದ ತೀವ್ರತೆ ಕ್ಷೀಣಿಸಿದ್ದು, ಮರಳಿ ಕಚೇರಿಗೆ ಬನ್ನಿ ಎಂಬ ಕಂಪನಿಗಳ ಆಹ್ವಾನವನ್ನು ಬಹಳಷ್ಟು ನೌಕರರು ನಿರಾಕರಿಸುತ್ತಿದ್ದಾರೆ. ಇವರಲ್ಲಿ ಊರು ಸೇರಿದವರು ಮಾತ್ರವಲ್ಲ ಬೆಂಗಳೂರಿನಲ್ಲಿ ಇರುವವರೂ ಕಚೇರಿಗೆ ಹೋಗಲು ಮನಸ್ಸು ಮಾಡುತ್ತಿಲ್ಲ. ಕೋವಿಡ್ ನಂತರದಲ್ಲಿ ಬೆಂಗಳೂರಿನಲ್ಲಿ ಹೆಚ್ಚಾಗಿರುವ ಮನೆ ಬಾಡಿಗೆ, ಇಂಧನ ಬೆಲೆ, ಮಕ್ಕಳ ಶಾಲೆ ಶುಲ್ಕದ ಹೊರೆ ಬೆಂಗಳೂರು ಬಿಟ್ಟವರಿಗೆ ಕಾರಣಗಳಾಗಿವೆ. ಬೆಂಗಳೂರಿನಲ್ಲೇ ನೆಲೆಸಿರುವವರಿಗೆ ಟ್ರಾಫಿಕ್ ಕಿರಿಕಿರಿ ದೊಡ್ಡ ತಲೆನೋವಾಗಿದೆ. ಮತ್ತೊಂದೆಡೆ, ಈ ನೌಕರರನ್ನೇ ನಂಬಿಕೊಂಡಿರುವ ಇತರ ಉದ್ಯಮಗಳು ಕಚೇರಿ ಮರಳಿ ಆರಂಭವಾಗುವ ನಿರೀಕ್ಷೆಯಲ್ಲಿದ್ದಾರೆ.

ಐಟಿ ಕಂಪನಿ ಒಳಗಿನ ಸ್ವಚ್ಛತೆಯ ಗುತ್ತಿಗೆ ಪಡೆದ ಸಂಸ್ಥೆ, ಸಾರಿಗೆ ವ್ಯವಸ್ಥೆ ಕಲ್ಪಿಸುವ ಏಜೆಂಟರು, ಕಾಫಿ ಮತ್ತು ಊಟೋಪಚಾರ ಸೌಲಭ್ಯ ಒದಗಿಸುವ ಕೇಟರಿಂಗ್‌ನವರು, ಕಂಪನಿ ಸುತ್ತಲಿನ ಹೋಟೆಲ್‌ಗಳು, ವಸ್ತ್ರ ಮಳಿಗೆಗಳು, ಗೂಡಂಗಡಿ, ಎಳನೀರು, ಹಣ್ಣಿನ ರಸ ನೀಡುವ ಅಂಗಡಿಗಳು ನೌಕರರ ಬರುವಿಕೆಯ ಹಾದಿ ಕಾಯುತ್ತಿವೆ.

ಹೈಬ್ರಿಡ್ ಮಾದರಿಗೆ ಸೈ ಎಂದ ನೌಕರರು

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ, ಸರ್ಜಾಪುರ, ವೈಟ್‌ಫೀಲ್ಡ್, ಬೆಂಗಳೂರು ಪೂರ್ವದ ಭಾಗಗಳು ಸೇರಿ 60ಕ್ಕೂ ಹೆಚ್ಚು ವಿಶೇಷ ಆರ್ಥಿಕ ವಲಯವನ್ನು ರಾಜ್ಯ ಸರ್ಕಾರ ಸೃಷ್ಟಿಸಿದೆ. ಆ ಮೂಲಕ ಸಿಲಿಕಾನ್ ಸಿಟಿ ಬಯಸಿ ಬರುತ್ತಿರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಭೂಮಿ ಖರೀದಿ, ವಿದ್ಯುತ್ ಶುಲ್ಕದಲ್ಲಿ ರಿಯಾಯಿತಿ ಸೇರಿ ಹಲವು ಸೌಲಭ್ಯಗಳನ್ನು ಒದಗಿಸಿದೆ. ಇದರ ಮೂಲ ಉದ್ದೇಶವೇ ಹೆಚ್ಚಿನ ಉದ್ಯೋಗ ಸೃಷ್ಟಿ ಮತ್ತು ಸ್ಥಳೀಯ ಆರ್ಥಿಕ ಬೆಳವಣಿಗೆ. ಆದರೆ ನೌಕರರೇ ಬಾರದೆ ಬಿಕೋ ಎನ್ನುತ್ತಿರುವ ಐಟಿ ಕಂಪನಿಗಳು ಹಿಂದಿನಂತೆಯೇ ಕಾರ್ಯನಿರ್ವಹಿಸಲಿ ಎಂಬ ಒತ್ತಡ ಸರ್ಕಾರದಿಂದಲೂ ಕಂಪನಿಗಳ ಮೇಲಿವೆ. ಜತೆಗೆ ಮೂಲಸೌಕರ್ಯಕ್ಕಾಗಿ ಸಾಕಷ್ಟು ಹಣ ಹೂಡಿರುವ ಕಂಪನಿಗಳು ಇದೀಗ ಅವುಗಳ ಸದ್ಬಳಕೆ ಹೇಗೆ ಎಂದು ಚಿಂತಿಸುತ್ತಿರುವುದರಿಂದ ನೌಕರರನ್ನು ಮರಳಿ ಕಚೇರಿಗೆ ಕರೆಯುತ್ತಿವೆ. ಆದರೆ, ಇದಕ್ಕೆ ಒಲ್ಲೆ ಎನ್ನುತ್ತಿರುವ ನೌಕರರು, ಸದ್ಯ ವಾರದಲ್ಲಿ ಎರಡು ದಿನ ಕಚೇರಿ ಹಾಗೂ ಮೂರು ದಿನ ಮನೆಯಿಂದಲೇ ಕೆಲಸ ಮಾಡಲು ಒಪ್ಪಿಕೊಂಡಿದ್ದಾರೆ. ಹೀಗಾಗಿ ನೌಕರರು ಒಪ್ಪಿಕೊಂಡಿರುವ ಹೈಬ್ರಿಡ್ ಮಾದರಿಯಲ್ಲಿ ಸದ್ಯ ಸಿಲಿಕಾನ್ ಸಿಟಿ ತುಸುವಾದರೂ ಝಗಮಗಿಸುತ್ತಿದೆ.

ಮತ್ತೊಂದೆಡೆ ಕಚೇರಿಗೆ ಬರಲು ಒತ್ತಾಯಿಸಿದರೆ ಕೆಲಸಕ್ಕೆ ರಾಜೀನಾಮೆ ನೀಡುವ ಬೆದರಿಕೆಯೂ ನೌಕರರಿಂದ ವ್ಯಾಪಕವಾಗಿ ಬರುತ್ತಿದೆ. ಅದರಲ್ಲೂ ಬಹಳಷ್ಟು ಮಹಿಳೆಯರು ಸಂಪೂರ್ಣವಾಗಿ ಮನೆಯ ವಾತಾವರಣಕ್ಕೆ ಒಗ್ಗಿಕೊಂಡಿದ್ದಾರೆ. ಅದರೊಂದಿಗೆ ಮಕ್ಕಳು, ಪಾಲಕರನ್ನು ನೋಡಿಕೊಳ್ಳುವ ಹೊಣೆಗಾರಿಕೆಯಿಂದಾಗಿ ಕಚೇರಿಗೆ ಬರಲು ಸಾಧ್ಯವಾಗದಿರುವ ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ. ಹೆಚ್ಚು ಒತ್ತಾಯಿಸಿದರೆ ರಾಜೀನಾಮೆ ನೀಡಿ, ಮನೆಯಿಂದಲೇ ಕೆಲಸ ಮಾಡಲು ಅವಕಾಶ ನೀಡುವ ಕಂಪನಿಗಳನ್ನು ಸೇರುವ ಯೋಜನೆ ಅವರದ್ದು ಎನ್ನುವುದು ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿಯಲ್ಲಿ ವ್ಯವಸ್ಥಾಪಕರಾಗಿರುವ ಪ್ರವೀಣ್ ಅವರ ಅನುಭವದ ಮಾತು.




ನೌಕರರಿಗೆ ಮನೆಯ ಸೆಳೆತ; ಮ್ಯಾನೇಜರ್‌ಗಳಿಗೆ ಒತ್ತಡ

ಕೋವಿಡ್ ಸಂದರ್ಭದಲ್ಲಿ ಅನಿವಾರ್ಯವಾಗಿ 'ವರ್ಕ್ ಫ್ರಮ್ ಹೋಮ್' ಸಂಸ್ಕೃತಿಗೆ ಒಗ್ಗಿಕೊಂಡಿರುವ ನೌಕರರು ಮನೆಯ ವಾತಾವರಣಕ್ಕೆ ಹೊಂದಿಕೊಂಡಿದ್ದಾರೆ. 'ಮನೆಯಲ್ಲೇ ಹೆಚ್ಚಿನ ಕೆಲಸ ಮಾಡುತ್ತಿರುವುದರಿಂದ ಕಚೇರಿಗೆ ಬರುವ ಅಗತ್ಯವಾದರೂ ಏನಿದೆ?' ಎನ್ನುವುದು ಅವರ ವಾದ.

ನೌಕರರ ಈ ಪ್ರಶ್ನೆಯನ್ನು ಮ್ಯಾನೇಜರ್‌ಗಳ ಮುಂದಿಟ್ಟರೆ, 'ಕಾವೇರಿ ವಿವಾದ ಬಗೆಹರಿಸಿ ಎಂದು ರಾಜ್ಯದ ಮುಖ್ಯಮಂತ್ರಿ ಪ್ರಧಾನಿ ಭೇಟಿಗಾಗಿ ಕಾಯುತ್ತಿರುವುದೇಕೆ?, ಅದನ್ನೂ ವಿಡಿಯೊ ಕಾನ್ಫರೆನ್ಸ್ ಮೂಲಕ ಮುಗಿಸಬಹುದಲ್ಲವೇ' ಎಂಬ ಪ್ರಶ್ನೆಯನ್ನು ವೈಟ್‌ಫೀಲ್ಡ್ ಬಳಿ ಇರುವ ಬಹುರಾಷ್ಟ್ರೀಯ ಕಂಪನಿಯ ವ್ಯವಸ್ಥಾಪಕ ಕಾರ್ತಿಕ್ ಮುಂದಿಡುತ್ತಾರೆ.

'ಮನೆಯಿಂದಲೇ ಕೆಲಸ ಮಾಡುವ ಸಂಸ್ಕೃತಿಯಿಂದ ಕಂಪನಿಯ ಸಂಸ್ಕೃತಿ ಮರೆಯಾಗುತ್ತಿದೆ. ತಂಡವಾಗಿ ದುಡಿಯಬೇಕಾದವರು ಪ್ರತ್ಯೇಕವಾಗಿ ಕೆಲಸ ಮಾಡಿದರೆ, ಉತ್ಪನ್ನದಲ್ಲಿ ಹೊಸತನ ತರುವುದು ಕಷ್ಟ. ಕಂಪನಿ ಹಾಗೂ ಉದ್ಯೋಗಿ ಬೆಳೆಯಬೇಕೆಂದರೆ ಹೊಸ ಆಲೋಚನೆಯ ಜತೆಗೆ ಎಲ್ಲರೊಂದಿಗೂ ಕೆಲಸ ಮಾಡಬೇಕಾದದ್ದು ಅನಿವಾರ್ಯ. ಆದರೆ ವರ್ಕ್ ಫ್ರಮ್ ಹೋಮ್‌ನಿಂದ ಸಂವಹನವೇ ಇಲ್ಲವಾಗಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಹೊಸತನವಿಲ್ಲವಾದಲ್ಲಿ ಕಂಪನಿ ಬೆಳೆಯದು. ಇದರಿಂದಾಗಿ ಸಿಬ್ಬಂದಿಯನ್ನು ಕಚೇರಿಗೆ ಬರಲು ಹೇಳಲಾಗುತ್ತಿದೆ' ಎಂದರು ಅವರು.

13ನೇ ಪುಟಕ್ಕೆ...



ಕಿತ್ತೂರು ಗ್ರಾಮದ ಬಾಣಸಿಗರು ಚಿತ್ರಗಳು: ಸತೀಶ್ ಬಡಿಗೇರ

ಕಿತ್ತೂರಿನ ನಳ ಮಹಾರಾಜರು

ಸಿದ್ದಯ್ಯ ಹಿರೇಮಠ

ದಾವಣಗೆರೆ ಜಿಲ್ಲೆಯ ಕಿತ್ತೂರು ಗ್ರಾಮದಲ್ಲಿ ಮುಕ್ಕಾಲು ಭಾಗದಷ್ಟು ಜನರು ಬಾಣಸಿಗರಾಗಿ ಬದುಕು ಕಟ್ಟಿಕೊಂಡಿದ್ದಾರೆ. ಕಾಮತ್ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ವ್ಯಕ್ತಿಯಿಂದಾಗಿ ಮೂರು ದಶಕಗಳಲ್ಲಿ ಇಲ್ಲಿ ಅಡುಗೆ ಕೆಲಸ ಈ ಮಟ್ಟಿಗೆ ವ್ಯಾಪಕವಾಗಿದೆ.

ದಾವಣಗೆರೆ ತಾಲ್ಲೂಕಿನ ಕಿತ್ತೂರು ಅಂದಾಜು 2,500 ಜನಸಂಖ್ಯೆ ಹೊಂದಿರುವ ಪುಟ್ಟ ಗ್ರಾಮ. 'ಬರಪೀಡಿತ' ಎಂಬ ಹಣೆಪಟ್ಟಿ ಅಂಟಿಸಿಕೊಂಡೇ ಇರುವ ಜಗಳೂರು ತಾಲ್ಲೂಕಿನ ಗಡಿಗೆ ಹೊಂದಿಕೊಂಡಿರುವ ಈ ಗ್ರಾಮದಲ್ಲಿ ಜಿಲ್ಲೆಯ ಇತರೆಡೆ ಇರುವಂತೆ ನೀರಾವರಿ ಸೌಲಭ್ಯವಿಲ್ಲ. ಅಡಿಕೆ, ಭತ್ತದ ಬೆಳೆಯ ನೆರವಿಲ್ಲ. 10 ವರ್ಷಗಳಲ್ಲಿ ಸರಾಸರಿ ನಾಲ್ಕು ವರ್ಷ ಇಲ್ಲಿ ಬರ. ಮಳೆ ಸುರಿದರೆ ಮೆಕ್ಕೆಜೋಳ, ರಾಗಿ, ಜೋಳ ಬೆಳೆಯುವ ಗ್ರಾಮದ ಕೆಲವೇ ಕೆಲವು ಹಿಡುವಳಿದಾರರು, ಊರಿನ ನೂರಾರು ದುಡಿಯುವ ಕೈಗಳಲ್ಲಿ ಯಾವ ಕೈಗೆ ಕೆಲಸ ಕೊಡುವುದು? ಎಂದು ಆಲೋಚಿಸಿದ್ದುಂಟು.

ದಶಕಗಳ ಹಿಂದೆ ಈ ಊರು ನಿರುದ್ಯೋಗದ ಸಮಸ್ಯೆಯಿಂದ ಬಳಲಿದ್ದಕ್ಕೆ ಇದು ನಿದರ್ಶನ.

ಇಂತಿಪ್ಪ ಈ ಊರಿನ ನಿರುದ್ಯೋಗದ ಸಮಸ್ಯೆ ಬಗೆಹರಿದಿದ್ದು ದಾವಣಗೆರೆಯ ಕಾಮತ್ ಹೋಟೆಲ್‌ನಲ್ಲಿ ಕೆಲಸಕ್ಕಿದ್ದ ಮುದೆಪ್ಪರ ನಾಗರಾಜ ಅವರಿಂದ.

ಹತ್ತಾರು ವರ್ಷ ಕಾಮತ್ ಹೋಟೆಲ್‌ನಲ್ಲಿ ಎಲ್ಲ ಬಗೆಯ ಕೆಲಸಗಳನ್ನೂ ಮಾಡಿ ಪಳಗಿದ್ದ ನಾಗರಾಜ, ಊರಿನ ಕೆಲವರಿಗೆ ತಾವು ಕೆಲಸ ಮಾಡುತ್ತಿದ್ದ ಹೋಟೆಲ್‌ನಲ್ಲಿಯೂ, ಬೇರೆಡೆಯೂ ಕೆಲಸ ಕೊಡಿಸಿದ್ದರು. ನಂತರದ ದಿನಗಳಲ್ಲಿ ಸ್ವಂತ ಹೋಟೆಲ್ ತೆರೆದಿದ್ದರು. ಬರಬರುತ್ತಾ ಅಡುಗೆ ಕಾಂಟ್ರಾಕ್ಟ್ ತೆಗೆದುಕೊಳ್ಳುತ್ತಲೇ ಊರಿನ ಹತ್ತಾರು ಜನರೊಂದಿಗೆ ಊರೂರು ಸುತ್ತಲಾರಂಭಿಸಿದ ಅವರು, ಆಸಕ್ತರಿಗೆ ಅಡುಗೆ ಕೆಲಸದ ರುಚಿ ಹತ್ತಿಸಿದರು. ಜೀವನದ ಸಂಧ್ಯಾಕಾಲದಲ್ಲಿರುವ ಇವರನ್ನು ಊರವರು ಇಂದಿಗೂ ಗುರುತಿಸುವುದು, ಕರೆಯುವುದು 'ಕಾಮತ್' ನಾಗರಾಜ ಎಂಬ ಹೆಸರಿನಲ್ಲೇ.

ಭಾರಿ ಬಂಡವಾಳ ಬಯಸದ ಈ ಕೆಲಸ ಈ ಊರಿನ ಅದೆಷ್ಟೋ ಯುವಕರಿಗೆ 'ಬಯಸದೇ ಬಂದ ಭಾಗ್ಯ'ವಾಗಿ ಕಂಡಿತು. ನಿಶ್ಚಿತಾರ್ಥ, ಮದುವೆ, ಮುಂಜಿ, ಸೀಮಂತ, ನಾಮಕರಣ, ಜನ್ಮದಿನ, ರಾಜಕೀಯ ಸಮಾವೇಶಗಳು, ಜಾತ್ರೆ, ಉತ್ಸವ, ಶ್ರಾದ್ಧ... ಹೀಗೆ ಏನೇ ಕಾರ್ಯಕ್ರಮಗಳಿರಲಿ, ಅಲ್ಲೆಲ್ಲ ಇಷ್ಟದ ಅಡುಗೆ ಮಾಡಿ ಬಡಿಸುವ ಕಾಯಕಕ್ಕೆ ಅಂಟಿಕೊಂಡರು.

ಒಬ್ಬರಿಂದ ಇನ್ನೊಬ್ಬರಿಗೆ, ಇನ್ನೊಬ್ಬರಿಂದ ಮತ್ತೊಬ್ಬರಿಗೆ, ಮತ್ತೊಬ್ಬರಿಂದ ಮಗದೊಬ್ಬರಿಗೆ ಈ ಅಡುಗೆ ಕೆಲಸದ ಹುಚ್ಚು ಹಬ್ಬುತ್ತಾ ಹೋಯಿತು. ಅದರ ಫಲವೇ ಈಗ ಊರಲ್ಲಿ 500ಕ್ಕೂ ಹೆಚ್ಚು ಬಾಣಸಿಗರಿದ್ದಾರೆ. ತರಕಾರಿ ಹೆಚ್ಚುವುದರಿಂದ ಹಿಡಿದು, ರೊಟ್ಟಿ, ಅನ್ನ, ಭಾತ್, ಹುಗ್ಗಿ, ಹೋಳಿಗೆ, ಚಪಾತಿ, ಪಲ್ಯ, ಉಪ್ಪಿನಕಾಯಿ, ಹಪ್ಪಳ, ಸಂಡಿಗೆ ಸಿದ್ಧಪಡಿಸುವುದೂ ಇವರಿಗೆ ಗೊತ್ತು. ಮಾಡಿದ ಖಾದ್ಯಗಳನ್ನೆಲ್ಲ ಅತಿಥಿಗಳ ತಟ್ಟೆಗೆ ಬಡಿಸುವವರೂ ಇವರೇ. ಅಗತ್ಯ ಬಿದ್ದರೆ ಪಾತ್ರೆ-ಪಡಗ ತೊಳೆಯುವ ಕೆಲಸಕ್ಕೂ ಬೆನ್ನುಮಾಡುವುದಿಲ್ಲ.

'ಹಸಿದು ಬಂದವರಿಗೆ ಊಟಕ್ಕೆ ನೀಡುವುದು ಪುಣ್ಯದ ಕೆಲಸ. ಅದರಲ್ಲೂ ಅಡುಗೆ ಮಾಡಿ ಬಡಿಸುವ ಕೆಲಸವಂತೂ ಮತ್ತಷ್ಟು ಖುಷಿ ಕೊಡುವಂಥದ್ದು' ಎಂದೇ ನಂಬಿರುವ ಕಿತ್ತೂರಿನ ಈ ಉತ್ಸಾಹಿಗಳು ಅಡುಗೆ ಕಾಂಟ್ರಾಕ್ಟ್ ಕೆಲಸದಲ್ಲಿ ತೊಡಗಿ ಲಾಭ ಕಂಡುಕೊಂಡಿದ್ದಾರೆ. ಒಬ್ಬೊಬ್ಬರೂ ಹತ್ತಾರು ಜನರಿಗೆ ಉದ್ಯೋಗ ಕೊಡಿಸಿ ಇತರರಿಗೂ ಮಾದರಿಯಾಗಿದ್ದಾರೆ.

ಇವರು ಅಡುಗೆ ಕೆಲಸಕ್ಕೆ ಹೋದರೆ ತರಕಾರಿ ಹೆಚ್ಚುವವರು, ರೊಟ್ಟಿ ಬಡಿಯುವವರು, ಚಪಾತಿ ಉದ್ದುವವರು, ಅನ್ನ ಬಸಿಯುವವರು, ಇಡ್ಲಿ, ಉಪ್ಪಿಟ್ಟು, ಚಿತ್ರಾನ್ನ, ಸಾಂಬಾರು, ಚಟ್ನಿ, ಮಂಡಕ್ಕಿ, ಮೆಣಸಿನಕಾಯಿ ಬಜ್ಜಿ ತಯಾರಿಸುವವರು, ಬಡಿಸುವವರು, ಪಾತ್ರೆ ತೊಳೆಯುವವರು, ಶಾಮಿಯಾನ ಸಿದ್ಧಪಡಿಸುವವರು, ಕುರ್ಚಿ–ಟೇಬಲ್ ಹಾಕುವವರು, ಓಲಗದವರು, ನೀರು ಸರಬರಾಜು ಮಾಡುವವರು, ಹೂವು, ಹೂವಿನ ಮಾಲೆ, ತಳಿರು-ತೋರಣ ಪೂರೈಸುವವರು, ವೇದಿಕೆ ಅಲಂಕರಿಸುವವರು.... ಹೀಗೆ ಅನೇಕರಿಗೆ ಉದ್ಯೋಗ ದೊರೆಯುತ್ತದೆ. ಅದೆಲ್ಲ ಇವರ ಪರಿಚಯಸ್ಥರಿಗೇ ಸಿಗುವಂತೆ ಆಗಿರುವುದೂ ವಿಶೇಷ. ತಾವು ಮಾತ್ರ ಸ್ವಯಂ ಉದ್ಯೋಗ ಕಂಡುಕೊಂಡಿದ್ದಲ್ಲದೆ, ತಮ್ಮವರಿಗೂ ಕೆಲಸ ಕೊಡಿಸಿರುವುದೂ ಇವರ ಹೆಚ್ಚುಗಾರಿಕೆ.

'ಕಾಮತ್' ನಾಗರಾಜ ಅವರಿಂದ ಆರಂಭವಾದ ಈ ಕೆಲಸದಲ್ಲಿ ಈಗ ಊರಿನ ಶೇ 75ರಷ್ಟು ಜನ ತೊಡಗಿಕೊಂಡಿದ್ದಾರೆ. ಕರ್ನಾಟಕದ ಮೂಲೆಮೂಲೆಗೆ ಹೋಗಿ ಅಡುಗೆ ಮಾಡುತ್ತಾರೆ. ಅಷ್ಟೇ ಅಲ್ಲ ದೂರದ ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶದಲ್ಲಿ ನಡೆಯುವ ಕೆಲವು ವಿಶೇಷ ಸಮಾರಂಭಗಳಲ್ಲೂ ಇವರ ಅಡುಗೆಯ ರುಚಿ ಉಂಡವರಿದ್ದಾರೆ. ಅಡುಗೆಯ ಕೆಲಸ ಹೀಗೆ ವ್ಯಾಪಿಸಿರುವುದರಿಂದಲೇ ಈ ಊರಿನ ಹೆಣ್ಣುಮಕ್ಕಳಿಗೂ ಕೈತುಂಬ ಕೆಲಸ ದೊರೆಯುತ್ತಿದೆ. ಮನೆ ಖರ್ಚು, ಮಕ್ಕಳ ಓದು–ಬರಹಕ್ಕೂ ಇದು ಅನುಕೂಲ ಕಲ್ಪಿಸಿದೆ.

ಊರಿನ ಬಹುತೇಕರು ಈ ಕೆಲಸದಿಂದ ಬದುಕು ಕಟ್ಟಿಕೊಂಡಿದ್ದರೆ, ಇತರ ಅನೇಕರಿಗೆ ಉದ್ಯೋಗ ನೀಡಿ ಅವರ ಜೀವನಕ್ಕೂ ದಾರಿ ತೋರಿದ್ದಾರೆ. ಮದುವೆ, ಶುಭ ಸಮಾರಂಭದ ಸೀಸನ್‌ಗಳಲ್ಲಿ ಊರೂರಿಗೆ ತೆರಳಿ ಅಡುಗೆ ಕಾಯಕದಲ್ಲಿ ತೊಡಗುವ ಈ ಊರಿನ ಜನ ಒಂದರ್ಥದಲ್ಲಿ ಅಲೆಮಾರಿಗಳು. ಕೆಲವರು ದಕ್ಷಿಣ ಭಾರತ, ಉತ್ತರ ಭಾರತದ ಪ್ಯಾಕೇಜ್ ಪ್ರವಾಸಕ್ಕೆ ಬಸ್, ರೈಲುಗಳಲ್ಲಿ ತೆರಳುವ ಪ್ರವಾಸಿಗರ ಹೊಟ್ಟೆ-ನೆತ್ತಿಯ ಹೊಣೆಗಾರಿಕೆ ವಹಿಸಿಕೊಳ್ಳುವ ಸಂಚಾರಿ ಅಡುಗೆಯವರಾಗುತ್ತಾರೆ.

11ನೇ ಪುಟಕ್ಕೆ...

ಬಂಡೆಗೂ ಹಸಿರು ಹೊದಿಸಿದ ಶೇಖಮ್ಮ

ಕೊಪ್ಪಳ ಸಮೀಪದ ಕಲ್ಲು ತಾವರಗೇರಾ ಗ್ರಾಮ ಹೆಸರಿಗೆ ತಕ್ಕಂಥ ಹಳ್ಳಿ. ಎಲ್ಲೆಲ್ಲಿಯೂ ಕಲ್ಲಿನ ಬಂಡೆಗಳೇ. ಅವುಗಳ ಮೇಲೆ ಮಣ್ಣು ಹಾಕಿ ಕೃಷಿ ಚಟುವಟಿಕೆ ಮಾಡಿರುವ ಶೇಖಮ್ಮ ವಾಣಿ ಹಾಗೂ ಹುಚ್ಚಪ್ಪ ದಂಪತಿಯ ಯಶೋಗಾಥೆ ಅನುಕರಣೀಯ



ಕಲ್ಲು ತಾವರಗೇರಾ ಗ್ರಾಮದಲ್ಲಿ ಬಂಡೆಗಳ ಮೇಲೆ ಶೇಖಮ್ಮ ವಾಣಿ ಅರಳಿಸಿದ ಹಸಿರ ಸಿರಿ ಚಿತ್ರ: ಭರತ್ ಕಂದಕೂರ

ಪ್ರಮೋದ

ಕಣ್ಣು ಹಾಯಿಸಿದಷ್ಟೂ ದೂರ ಕಲ್ಲಿನ ಬಂಡೆಗಳು. ಆ ಬಂಡೆಗಳ ಮೇಲೆ ಬುನಾದಿಯಿಲ್ಲದೆ ಗೋಡೆಗಳಿಂದ ಮಾತ್ರ ನಿರ್ಮಿತವಾದ ಮನೆಗಳು ಹಲವು ಬಣ್ಣಗಳಿಂದ ನಳನಳಿಸುತ್ತಿದ್ದವು. ಊರು ಕೂಡ ಹೆಸರಿಗೆ ತಕ್ಕಂತೆಯೇ ಇದೆ; ಕಲ್ಲ ತಾವರಗೇರಾ.

ಕೊಪ್ಪಳದಿಂದ 20 ಕಿ.ಮೀ. ದೂರದಲ್ಲಿರುವ ಪುಟ್ಟ ಗ್ರಾಮವಿದು. ಎಲ್ಲಿ ನೋಡಿದರೂ ಕಲ್ಲುಗಳೇ. ಈ ಕಲ್ಲುಗಳ ಮೇಲೆ ಸಾಹಸ ಮಾಡಿ ಮನೆಗಳನ್ನೇನೊ ಕಟ್ಟಲಾಗಿದೆ. ಊರಿನ ಜನರ ಹೊಲಗಳ ಪರಿಸ್ಥಿತಿಯೇನು? ಕೃಷಿಯನ್ನೇ ನೆಚ್ಚಿಕೊಂಡ ರೈತರ ಗತಿಯೇನು? ಎಂದು ನೋಡಿದಾಗ ಒಂದೆಡೆ ಕಣ್ಣಿಗೆ ಬಿದ್ದದ್ದು ಸಮೃದ್ಧ ಹಸಿರು. ತರಹೇವಾರಿ ಮರಗಳು ಎತ್ತರೆತ್ತರ ಬೆಳೆದು ನಿಂತಿದ್ದವು. ಮಾವಿನ ಮರಗಳಲ್ಲಿ ತುಂಬಿದ್ದ ಕಾಯಿಗಳು. ಸೀತಾಫಲಗಳೂ ಸಮೃದ್ಧ. ಲಿಂಬೆಯ ಪರಿಮಳ ಆಘ್ರಾಣಿಸಿಕೊಂಡು ಮುಂದಡಿ ಇಟ್ಟರೆ ಸ್ವಲ್ಪ ದೂರದಲ್ಲೇ ಪೇರಲ ಹಣ್ಣಿನ ಬಾಯಿ ಚಪ್ಪರಿಸುವಂಥ ಸಿಹಿ.

ಬಹುತೇಕ ಕಲ್ಲುಗಳೇ ತುಂಬಿರುವ ಕಲ್ಲ ತಾವರಗೇರಾ ಗ್ರಾಮದಲ್ಲಿ ಕೃಷಿ ಚಟುವಟಿಕೆ ಮಾಡುವುದಾದರೂ ಹೇಗೆ ಸಾಧ್ಯ? ಎನ್ನುವ ಕುತೂಹಲ ತಾಳಲಾಗದೆ ಒಂದಷ್ಟು ಹೊಲಗಳಲ್ಲಿ ಓಡಾಡಿದರೆ ಪರಿಚಯವಾಗಿದ್ದು ರೈತ ಮಹಿಳೆ ಶೇಖಮ್ಮ ವಾಣಿ ಹಾಗೂ ಹುಚ್ಚಪ್ಪ ದಂಪತಿಯ ಸಾಹಸ, ಛಲದ ಕಥನ. ಫಲವತ್ತಾದ, ಸಹಜ ಕೃಷಿಗೆ ಅನುಕೂಲವಿಲ್ಲದ ಹೊಲಗಳಲ್ಲಿ ಕೃಷಿ ಮಾಡಲಾಗದೆ ಆತ್ಮಹತ್ಯೆಯ ದಾರಿ ಹುಡುಕುವ ಅನೇಕ ರೈತರ ನಡುವೆ ಈ ದಂಪತಿಯ ಸ್ಫೂರ್ತಿ ತುಂಬುವ ಕಾಯಕ ಎಲ್ಲರಿಗೂ ಮಾದರಿಯಾಗುವಂಥದ್ದು.

ಬೇರೆಯವರಾಗಿದ್ದರೆ ಕಲ್ಲುಗಳೇ ತುಂಬಿರುವ ಈ ಹೊಲದಲ್ಲಿ ಕೃಷಿಯ ಗೊಡವೆ ಯಾಕೆಂದು ಬೇರೆ ಕೆಲಸ ಮಾಡುತ್ತಿದ್ದರೊ ಏನೋ? ಶೇಖಮ್ಮ ಅವರಿಗೆ ಒಟ್ಟು 16 ಎಕರೆ ಹೊಲವಿದೆ. ಇದರಲ್ಲಿ ಐದು ಎಕರೆಯಲ್ಲಿ ಕಲ್ಲು ಬಂಡೆಗಳೇ ತುಂಬಿವೆ. ಎರಡೂವರೆ ದಶಕಗಳ ಹಿಂದೆ ಸಮೀಪದ ಕೆರೆಯಿಂದ ಮಣ್ಣು ತಂದು ಹಾಕಿ ಹೊಲ ಸಿದ್ಧಪಡಿಸಿಕೊಂಡಿದ್ದಾರೆ. ಪತಿ ಹುಚ್ಚಪ್ಪ ಜೊತೆಗೂಡಿ ಹೊಸ ಪ್ರಯೋಗಗಳಿಗೆ ಮುಂದಡಿ ಇಟ್ಟಿದ್ದಾರೆ. ಅದರ ಪರಿಣಾಮವೇ ಈಗ ಅಲ್ಲಿ ಹಸಿರಿನ ಮಾತು.

ಶೇಖಮ್ಮ ಅವರ ಸ್ವಂತ ಊರು ಕೂಡಲಸಂಗಮದ ಬಳಿಯ ಹಳ್ಳಿ. ನದಿಯ ಹಿನ್ನೀರಿನಲ್ಲಿ ಹಳ್ಳಿ ಮುಳುಗಿದಾಗ ಕಲ್ಲು ತಾವರಗೇರಾ ಗ್ರಾಮಕ್ಕೆ ಬಂದರು. ಹುಚ್ಚಪ್ಪ ಮೊದಲಿನಿಂದಲೂ ಕೃಷಿಕರು. ಒಣಭೂಮಿಯಲ್ಲಿ ಜೋಳ, ಸಜ್ಜೆ ಬೆಳೆಯುತ್ತಿದ್ದರು. ಕಲ್ಲುಗಳ ಮೇಲೆ ಏನು ಬೆಳೆದೀತು ಎಂದು ಪ್ರಶ್ನಿಸುವವರಿಗೆ ಅವರ ಹೊಲದಲ್ಲಿ ಬೆಳೆದಿದ್ದ ಪಡವಲ ಬಳ್ಳಿ ಸಾಕ್ಷಿಯಂತಿತ್ತು. ಊರಿನ ಹಲವು ರೈತರು ಹೊಲದ ಸಮೀಪದಲ್ಲಿನ ಕೆರೆಯಿಂದ ಮಣ್ಣು ತಂದು ಹೊಲಕ್ಕೆ ಹಾಕಿಸುತ್ತಿದ್ದರು.

ಇದನ್ನು ನೋಡಿದ ದಂಪತಿ ತಾವೂ ಹೊಲಕ್ಕೆ ಮಣ್ಣು ಹಾಕಿಸುವ ಸಾಹಸ ಮಾಡಿದರು. ಐದು ಎಕರೆಯಷ್ಟು ಹೊಲಕ್ಕೆ ಮಣ್ಣು ಹಾಕಿಸುವ ಕಾಯಕ ಮುಗಿಯಲು ಬೇಕಾಗಿದ್ದು ಬರೋಬ್ಬರಿ ಮೂರು ವರ್ಷ. ಮಳೆಯ ಅಬ್ಬರದಿಂದ ಆ ಮಣ್ಣು ಕೊಚ್ಚಿಹೋಗದಂತೆ ಎತ್ತರದಲ್ಲಿ ಬದುಗಳನ್ನು ನಿರ್ಮಿಸಿ 'ರಕ್ಷಣಾ ಗೋಡೆ' ಕಟ್ಟಿದರು. ಕೆಳಗಡೆ ಬಂಡೆ; ಮೇಲೆ ಮಣ್ಣು ಹಾಕಿ ಕೃಷಿ ಚಟುವಟಿಕೆ ಆರಂಭಿಸಿದರು.

ಮುಕ್ಕಾಲು ಅಡಿಯಷ್ಟು ಹಾಕಿದ ಮಣ್ಣಿನ ಮೇಲೆ ಮೊದಲು ಕನಕಾಂಬರ ಅರಳಿಸಿದರು. ಒಂದು ದಿನಕ್ಕೆ ಎರಡು ಕೆ.ಜಿ.ಯಷ್ಟು ಬೆಳೆಯುತ್ತಿದ್ದ ಕನಕಾಂಬರ ಈ ದಂಪತಿಗೆ ಬಂಪರ್ ಲಾಭವನ್ನೇ ತಂದುಕೊಟ್ಟಿತು. ಆಗಿನ ಮಾರುಕಟ್ಟೆಯಲ್ಲಿ ಒಂದು ಕೆ.ಜಿ.ಗೆ ಗರಿಷ್ಠ ₹20ರಿಂದ ₹30 ಸಿಗುತ್ತಿತ್ತು. ಜೊತೆಗೆ ಹೈನುಗಾರಿಕೆಯಿಂದ ಬರುತ್ತಿದ್ದ ಆದಾಯವೂ ಕುಟುಂಬಕ್ಕೆ ಆಸರೆಯಾಗಿತ್ತು. ಈ ಹಣವನ್ನು ಕೂಡಿಸಿಟ್ಟು ಹಂತಹಂತವಾಗಿ ಹೊಲಕ್ಕೆ ಮಣ್ಣು ತುಂಬಿಸಿದರು. ಬಂಡೆಯ ಮೇಲೆಯೂ ಕೃಷಿ ಮಾಡಿ ಸಮೃದ್ಧ ಲಾಭ ಗಳಿಸಬಹುದು ಎನ್ನುವ ಭರವಸೆಯನ್ನು ಕನಕಾಂಬರ ತುಂಬಿತು.

ಹಂತಹಂತವಾಗಿ ಟೊಮೆಟೊ, ಬದನೇಕಾಯಿ, ಲಿಂಬೆ, ಸೀತಾಫಲ, ಹಲಸು, ಪೇರಲ, ಮಾವು, ಸಜ್ಜೆ, ಭತ್ತ, ಚೆಂಡು ಹೂ, ಸೌತೇಕಾಯಿ, ಬೆಂಡೆಕಾಯಿ, ಬೀಟ್‌ರೂಟ್, ಅವರೆ, ಸಜ್ಜೆ, ಮೆಕ್ಕೆಜೋಳ ಬೆಳೆದು ಬಂಪರ್ ಫಸಲು ಪಡೆದರು. ಎರಡು ದಶಕಗಳ ಅವಧಿಯಲ್ಲಿ ಒಂಬತ್ತು ಬೋರ್‌ವೆಲ್‌ಗಳನ್ನು ಕೊರೆಯಿಸಿದರು. ಏಳು ಬಾವಿಗಳಲ್ಲಿ ನೀರೇ ಚಿಮ್ಮಲಿಲ್ಲ. ಇನ್ನುಳಿದ ಎರಡು ಬೋರ್‌ವೆಲ್‌ಗಳು ಸುರಿಸಿದ ನೀರು ಕೃಷಿ ಚಟುವಟಿಕೆಗೆ ಆಸರೆಯಾಗಿದೆ.



ಜಮೀನಿನ ಎತ್ತರದ ಭಾಗದಲ್ಲಿ ದೊಡ್ಡದಾಗಿ ಕಲ್ಲುಗಳ ನಡುವೆಯೇ ಬೆಳೆದ ಬೇವಿನ ಮರಗಳಿವೆ. ಕಲ್ಲಿನ ನಡುವೆಯೇ ಮರಗಳು ಬೆಳೆದು ನಿಂತಾಗ ಅವರಿಗೆ ಹೊಳೆದಿದ್ದು ತೋಟಗಾರಿಕಾ ಬೆಳೆಗಳು.

12ನೇ ಪುಟಕ್ಕೆ...

ಕ್ವಿಯರ್ ಕನಸೂ ತಲ್ಕಿ ತಿನಿಸಿನ ತುಂಡೂ

ದಾದಾಪೀರ್ ಜೈಮನ್

ರಂಗಭೂಮಿ

ಕ್ವಿಯರ್, ಟ್ರಾನ್ಸ್ ಮುಂತಾದ ಅಲ್ಪಸಂಖ್ಯಾತ ತಳಸಮುದಾಯಗಳು ತಮ್ಮ ಕಥೆಗಳನ್ನು ತಾವೆ ರಂಗದ ಮೇಲೆ ಅಭಿನಯಿಸಿ ಪ್ರಸ್ತುತಪಡಿಸುವ ರಂಗಪ್ರಯೋಗಗಳಿಗೆ ಹೊಸಸೇರ್ಪಡೆ 'ತಲ್ಕಿ'. ಈ ಹಿಂದೆ ಪ್ರದರ್ಶನಗೊಂಡ 'ಬದುಕು ಬಯಲು', 'ನೂರಮ್ಮ', 'ಶಹರ್ ಇನ್ ದಿ ಖಾಕಿ ರೂಂ' ನನ್ನ ಮಿತಿಯಲ್ಲಿ ಸದ್ಯಕ್ಕೆ ನೆನಪಾಗುತ್ತಿರುವ ಕೆಲವು ನಾಟಕಗಳು. ತಳಸಮುದಾಯದ ಕಲಾಭಿವ್ಯಕ್ತಿಯನ್ನು ಪರಿಚಯಾತ್ಮಕ ಮಾಹಿತಿಯ ಮಟ್ಟಕ್ಕಷ್ಟೆ ಇಳಿಸಿನೋಡುವ ವಿಮರ್ಶಾಜಗತ್ತಿಗೆ ತನ್ನ ನಿಲುವನ್ನು ಬದಲಾಯಿಸಿಕೊಳ್ಳಬಹುದಾದ ಪ್ರಯತ್ನವಾಗಿ 'ತಲ್ಕಿ' ಸೇರಿ ಇತ್ತೀಚಿನ ಕ್ವಿಯರ್ ನಾಟಕಗಳು ನನಗೆ ಗೋಚರಿಸಿವೆ. ಇಲ್ಲಿ ಶ್ರೀಜಿತ್ ಸುಂದರಂ ಅವರ ಶ್ರಮ ಎದ್ದು ಕಾಣುತ್ತದೆ. ಸಮುದಾಯದ ಜನರನ್ನೇ, ಅವರ ಜೀವನವನ್ನೇ ಪಾತ್ರವಾಗಿಸಿ ರಂಗದ ಮೇಲೆ ತರುವುದು ಸುಲಭವೇನಲ್ಲ. ಅಭಿನಂದನಾರ್ಹವಾದ ಮತ್ತೊಂದು ಅಂಶವೆಂದರೆ, 'ಕ್ವಿಯರ್ ಅಸ್ಥೆಟಿಕ್ಸ್' ಅನ್ನು ಶೋಧಿಸುವ, ಅದನ್ನು ರಂಗದ ಮೇಲೆ ತರುವ ಪ್ರಯತ್ನವನ್ನೂ ಶ್ರೀಜಿತ್ ಮಾಡಿರುವುದು.

ವಯಸ್ಸಾದ ಹಿರಿಯ ನಾನಿ ಮನೆಗೆ ಬರುವುದರ ಮೂಲಕ ಕಥೆ ಆರಂಭವಾಗುತ್ತದೆ. ಚಾಂದಿನಿ ಪಾತ್ರ ನಾನಿಗೆ 'ನಿನ್ನ ವಯಸ್ಸೆಷ್ಟು?' ಎಂದು ಕೇಳಿದಾಗ ಮನೆಯಲ್ಲಿರುವ ದಾದಿ, ಬಾಯಿ, ಗುರುಬಾಯಿ, ಕಾಲಾ ಎಲ್ಲರಿಗೂ ಅರವತ್ತು ತುಂಬಿರುವುದರ ಬಗ್ಗೆ ಹೇಳಿ, ಚಾಂದಿನಿಗೂ ನಿನಗೂ ಇನ್ನೇನು ಐವತ್ತು ತುಂಬುತ್ತದೆಯಲ್ಲ ಎಂದು ನೆನಪಿಸಿ ನಾನಿ ಕಿಚಾಯಿಸುತ್ತಾರೆ. ನಡುವಯಸ್ಸಿನಲ್ಲಿ ಆರಂಭವಾಗುವ ಮುಪ್ಪಿನ ಗೆರೆಗಳ ವಾಸ್ತವ ಚಾಂದಿನಿಯನ್ನು ನಡುಗಿಸುತ್ತದೆ. ಬದುಕು, ಅಸ್ಮಿತೆ ಹಾಗೂ ಘನತೆಗಾಗಿನ ಹೋರಾಟದಲ್ಲಿ ಒಳಗೆ ಜತನ ಮಾಡಿಕೊಳ್ಳುತ್ತಲೇ ಬಂದಿರುವ ನನಸೇ ಆಗದಿರುವ ಕನಸಿನ ಬಗ್ಗೆ ಹಳಹಳಿಸುತ್ತಾರೆ. ಒಬ್ಬರಿಗೆ ತಾನು ಶಕುಂತಲೆಯಾಗಬೇಕು, ಮತ್ತೊಬ್ಬರಿಗೆ ತಾನು ಅರ್ಧನಾರೀಶ್ವರ, ಇನ್ನು ಕೆಲವರಿಗೆ ಜಯಮಾಲಾ, ಅರಮನೆಯಲ್ಲಿರುವ ಮಹಾರಾಣಿ, ಆಂಡಾಳ್, ಹಿರಿಯ ನಾನಿಗೆ ಗೃಹಿಣಿಯಾಗುವ ಕನಸು. ನನಸಾಗದೆ ಉಳಿವ ಕನಸುಗಳನ್ನು ಒಂದು ದಿನದ ಮಟ್ಟಿಗಾದರೂ ಸಂಭ್ರಮಿಸುವ ಯೋಜನೆ ಸಿದ್ಧವಾಗುತ್ತದೆ. ನಾನಿಗೆ ಇಷ್ಟ ಎಂದು ಟ್ರಾನ್ಸ್ ಸಮುದಾಯದ ಮನೆಗಳಲ್ಲಿ ಮಾಡುವ ಸುಪ್ರಸಿದ್ಧ ತಿನಿಸಾದ ತಲ್ಕಿ ತಯಾರಿಸುತ್ತಾರೆ. ಈ ನಡುವೆಯೆ ಟ್ರಾನ್ಸ್ ಮಹಿಳೆಯರ ಬದುಕು, ಕನಸು, ನೋವು, ನಲಿವು, ಸಂಭ್ರಮಗಳನ್ನೆಲ್ಲ ನಾಟಕ ತೆರೆದಿಡುತ್ತಾ ಹೋಗುತ್ತದೆ.

ರಂಗದ ಮೇಲೆ ಅಡುಗೆ ಮನೆ, ಹಾಲ್, ನಾನಿಯ ಕೋಣೆ ಎಲ್ಲವೂ ಪ್ರೇಕ್ಷಕರಿಗೆ ಕಾಣಿಸುತ್ತವೆ. ಅಲ್ಲಿ ಯಾವುದಕ್ಕೂ ಗೋಡೆಗಳಿಲ್ಲ. ಪಾತ್ರಗಳು ಒಂದರಿಂದ ಮತ್ತೊಂದಕ್ಕೆ ಲೀಲಾಜಾಲವಾಗಿ ಓಡಾಡುತ್ತವೆ. ಈ ಹೊಳಹು ಕ್ವಿಯರ್ ಹಾಗೂ ಟ್ರಾನ್ಸ್ ವಿಷಯದ ಸಂಕೇತವಾಗಿ ನಮಗೆ ಕಾಣಿಸುತ್ತದೆ. ಈ ರಂಗಪ್ರಸ್ತುತಿಯಲ್ಲಿ ಪಾತ್ರಗಳು ತಮ್ಮಷ್ಟಕ್ಕೆ ತಾವು ಮಾತನಾಡಿಕೊಳ್ಳುವುದು ಹಾಗೂ ಪ್ರೇಕ್ಷಕರಿಗೆ ಕಥೆ ಹೇಳುವುದು ಎರಡೂ ಒಟ್ಟೊಟ್ಟಿಗೆ ನಡೆಯುತ್ತಿರುತ್ತದೆ. ಟ್ರಾನ್ಸ್ ಸಮುದಾಯದ ಭಾಷೆ, ಉಡುಗೆ, ಆಚರಣೆ, ಕಾಲನ ಅಸಹ್ಯ ಭಾರಗಳನ್ನು ತಾಳಿಕೊಳ್ಳಲು ಅವರೆ ಬದುಕಿನಿಂದ ಹಕ್ಕಿನಂತೆ ಪಡೆದುಕೊಂಡರೇನೋ ಎಂಬಂತಿರುವ ಹಾಸ್ಯಪ್ರಜ್ಞೆ ಎಲ್ಲವೂ ಸಹಜವಾಗಿ ತಟ್ಟುತ್ತವೆ. ನಗಿಸುತ್ತವೆ. ಕಣ್ಣುತುಂಬಿಸುತ್ತವೆ. ಸೀಟಿನ ಮುಂಭಾಗದಲ್ಲಿ ಕೂರಿಸುತ್ತವೆ. ಆದರೆ 'ನಿಮಗೆ ಗೊತ್ತಾ?' ಎಂದು ಶುರುವಾಗುವ ಪ್ರೇಕ್ಷಕರಿಗೆ ಕಥೆ ಹೇಳುವ ಭಾಗಗಳಲ್ಲಿ ನಾವೆಷ್ಟೆ ಬೇಡವೆಂದರೂ ಇಣುಕಿಬಿಡುವ 'ವಿಕ್ಟಿಮ್‌ಹುಡ್' ಕಥೆಗಳು ಮುನ್ನೆಲೆಗೆ ಬಂದುಬಿಟ್ಟಿವೆ. ಇದು ನಾಟಕದ ಕಟ್ಟೋಣಕ್ಕೆ ಅಲ್ಲಲ್ಲಿ ಅಡ್ಡಿ ಉಂಟುಮಾಡಿದೆ.

ಇಡೀ ನಾಟಕದಲ್ಲಿ ನಮ್ಮನ್ನು ಸೆಳೆಯುವ ಅಂಶವೆಂದರೆ ಅದರ ಬಣ್ಣ ಸಂಯೋಜನೆ, ಬೆಳಕಿನ ವಿನ್ಯಾಸ ಮತ್ತು ವಸ್ತ್ರವಿನ್ಯಾಸ. ನಾಟಕದಲ್ಲಿ ಅಭಿನಯಿಸಿರುವ ಎಲ್ಲರೂ ತಮ್ಮ ನಿಜ ಜೀವನದ ಪಾತ್ರಗಳನ್ನೆ ರಂಗದಮೇಲೂ ನಿಭಾಯಿಸುತ್ತಿರುವುದರಿಂದ ಒಂದು ಸಹಜತೆ ನಾಟಕಕ್ಕೆ ದಕ್ಕಿದೆ. ಸರವಣ, ಶೋಭನ, ಚಾಂದಿನಿ ಸೇರಿ ಎಲ್ಲರೂ ನಮ್ಮನ್ನು ಇನ್ನಿಲ್ಲದಂತೆ ಆವರಿಸುತ್ತಾರೆ. ಸಹಜತೆಗೊಂದು ಉದಾಹರಣೆ ನೀಡುವುದಾದರೆ, ರೇವತಿ ಒಂದು ದೃಶ್ಯದಲ್ಲಿ ಕ್ವಿಯರ್ ಜೀವಗಳ ಆತ್ಮಹತ್ಯೆಯ ಕುರಿತು ಹೇಳುವಾಗ ನಾವು ಇಪ್ಪತ್ನಾಲ್ಕು ವರ್ಷ ವಯಸ್ಸಿನಲ್ಲೇ ಫೆಮಿಲಾ, ಪ್ರವೀಣನನ್ನು ಕಳೆದುಕೊಂಡುಬಿಟ್ಟೆವು ಎಂದು ಹೇಳುವಾಗ ರೇವತಿ ಕಣ್ಣಲ್ಲಿ ಜಿನುಗುವ ಕಣ್ಣೀರು ಪ್ರೇಕ್ಷಕರ ಕಣ್ಣಲ್ಲಿ ನೀರು ನಿಲ್ಲಿಸುತ್ತವೆ. ಮತ್ತೊಂದು ದೃಶ್ಯದಲ್ಲಿ ದೇಹದ ಮೇಲಾಗುವ ಶೋಷಣೆಯನ್ನು ಹೇಳುವಾಗ ನಾನಿಯನ್ನು ಸ್ನಾನ ಮಾಡಿಸುವ ಸರವಣ 'ಅಯ್ಯೋ ನಾನಿ, ಇಡೀ ಬೆಂಗಳೂರೆ ನಿನ್ನ ದೇಹದ ಮೇಲೆ ಗಾಯದ ನಿಶಾನಿಯಾಗಿ ಕಾಣ್ತಾ ಇವೆಯಲ್ಲ!' ಎನ್ನುವ ಮಾತೊಂದನ್ನು ಹೇಳುತ್ತಾರೆ. ಇಡೀ ದೃಶ್ಯವನ್ನು ಶ್ರೀಜಿತ್ ಸುಂದರಂ ಒಂದು ಮಲ್ಟಿಮೀಡಿಯಾ ಸಹಾಯದಿಂದ ಬೆಂಗಳೂರು ಮ್ಯಾಪ್ ಲೊಕೇಟ್ ಮಾಡುವ ಮೂಲಕ ಕಟ್ಟಿದ್ದಾರೆ. ಅದು ನಮ್ಮಲ್ಲಿ ಹುಟ್ಟಿಸುವ ದಿಗಿಲು ಬೇರೆಯದೆ ನೆಲೆಯದ್ದು! ನಾಟಕದ ಕೊನೆಯಲ್ಲಿ ಎಲ್ಲ ನೋವುಗಳನ್ನು ನುಂಗಿಕೊಂಡು ಹಾಲಾಹಲ ಕುಡಿದರೂ ಈ ಗೋಳಿನ ನಡುವೆ ನನ್ನೊಳಗಿನ ಕನಸು ನನಸು ಮಾಡಿಕೊಂಡೆ ತೀರುತ್ತೇನೆನ್ನುವ ಹಂಬಲದ ಪ್ರತೀಕವಾಗಿ ಬಣ್ಣಬಣ್ಣದ ವಿನ್ಯಾಸದಲ್ಲಿ ಹಾಡುಗಳ ಹಿನ್ನೆಲೆಯಲ್ಲಿ ಎಲ್ಲ ಜೀವನ್ಮುಖಿ ಪಾತ್ರಗಳು ನಮ್ಮನ್ನು ಆವರಿಸಿಕೊಳ್ಳುತ್ತವೆ. ನಾಟಕ ಅಂತ್ಯವಾಗುವುದು ಎಲ್ಲಾ ಪಾತ್ರಗಳು ತಲ್ಕಿಯ ತುಂಡನ್ನು ಪ್ರೇಕ್ಷಕರ ಮುಂದೆ ತಿನ್ನುವಂತೆ ಹಿಡಿಯುವ ಮೂಲಕ. ಇದೊಂದು ಶುಭಾಂತ್ಯದಂತೆ ಕಂಡರೂ ಇಡೀ ತಲ್ಕಿ ತಿನಿಸು ಕ್ವಿಯರ್ ಮತ್ತು ಟ್ರಾನ್ಸ್ ಸಮುದಾಯದ ರೂಪಕವಾಗಿಯೆ ಕಂಡು, ಈ ಜೀವನಗಳು ಹೀಗೆಯೆ ಎನ್ನುವ ಸಣ್ಣ ವಿಷಾದವೊಂದನ್ನು ನಮಗೆ ದಾಟಿಸುತ್ತದೆ.

ನಾಟಕದಲ್ಲಿ ಎರಡು ಮುಖ್ಯ ಧಾರೆಗಳಿವೆ. ಒಂದು, ಎಲ್ಲರೂ ಸೇರಿ ತಲ್ಕಿ ತಯಾರಿಸುವುದು. ಮತ್ತೊಂದು, ಅವರ ಜೀವನದ ನನಸಾಗದ ಕನಸನ್ನು ಒಂದು ದಿನದ ಮಟ್ಟಿಗಾದರೂ ನನಸು ಮಾಡಿಕೊಳ್ಳುವುದು. ಈ ಎರಡೂ ಧಾರೆಗಳನ್ನು ಒಟ್ಟೊಟ್ಟಿಗೆ ನಿಭಾಯಿಸುವಲ್ಲಿ ನಿರ್ದೇಶಕರು ಸಂಪೂರ್ಣ ಯಶಸ್ಸು ಕಂಡಿಲ್ಲ. ಇನ್ನಷ್ಟು ಪ್ರಯತ್ನ ಹಾಕಿದ್ದರೆ ಇಡೀ ನಾಟಕವನ್ನು ತಲ್ಕಿ ತಿನಿಸಿಗೆ ಪರ್ಯಾಯ ರೂಪಕವಾಗಿ ಕಟೆದು ನಿಲ್ಲಿಸಬಹುದಿತ್ತು. ಕನಸು ನನಸು ಮಾಡಿಕೊಳ್ಳುವ ಯೋಜನೆ ಕೂಡ ಒಂದು ಮಾಯಾವಾಸ್ತವದಂತೆ ನಡೆಯುತ್ತದೆ. ಆ ಧಾರೆಯನ್ನೂ ಮತ್ತಷ್ಟು ಲಾಜಿಕಲ್ ಆಗಿ ಕಟ್ಟಬಹುದಿತ್ತು.

ಇಷ್ಟೆಲ್ಲಾ ಸಣ್ಣ ಪುಟ್ಟ ಚಕಾರಗಳ ಹೊರತಾಗಿ ತಲ್ಕಿ ಒಂದು ಅತ್ಯುತ್ತಮ ನಾಟಕ ಎನ್ನುವುದರಲ್ಲಿ ಎರಡು ಮಾತಿಲ್ಲ. ತಳಸಮುದಾಯದ ಪ್ರತಿಭಾವಂತ ಕಲಾವಿದರು ಕಲೆಯ ಮೂಲಕ ತಮ್ಮನ್ನು ಶೋಧಿಸಿಕೊಳ್ಳುವುದು ಬರಿ ಕಲಾವಿದರ ಮಟ್ಟಿಗಷ್ಟೆ ಅಲ್ಲದೆ ಕನ್ನಡ ಲೋಕಕ್ಕೆ ಮತ್ತೊಂದಿಷ್ಟು ಮನುಷ್ಯ ಜಗತ್ತು ಅರಿವಿನ ಜಗತ್ತು ಸೇರ್ಪಡೆಯಾಗುವ ಒಂದು ಮಹತ್ತಾದ ಕಾರ್ಯವೂ ಆಗಿದೆ.



ಕನಸನ್ನು ನನಸಾಗಿಸಿಕೊಳ್ಳುವ ಪರಿಕಲ್ಪನೆಯ 'ತಲ್ಕಿ' ನಾಟಕದ ದೃಶ್ಯ

ಕೃಷ್ಣ ಜನ್ಮಾಷ್ಟಮಿ ಸಂದರ್ಭದಲ್ಲಿಯಷ್ಟೆ ವೇಷ ಹಾಕುವ ರವಿ ಕಟಪಾಡಿ ಮಕ್ಕಳ ಬಾಯಲ್ಲಿ 'ರವಿ ಮಾಮ'. ಇದುವರೆಗೆ ಒಂದು ಕೋಟಿ ರೂಪಾಯಿಗೂ ಹೆಚ್ಚು ದೇಣಿಗೆಯನ್ನು ಬಡ ಮಕ್ಕಳಿಗಾಗಿ ನೀಡಿರುವ ಕೊಡುಗೈ ಕಲಾವಿದ ಇವರು.





ಕೃಷ್ಣ ಜನ್ಮಾಷ್ಟಮಿ ಸಂದರ್ಭದಲ್ಲಿ ವಿವಿಧ ವಿಚಿತ್ರ ವೇಷದಲ್ಲಿ ರವಿ ಕಟಪಾಡಿ

ಚಿತ್ರಗಳು:ಫಕ್ರುದ್ದೀನ್ ಎಚ್.

ಕೋಟಿ ಕೊಡುಗೈ 'ರವಿ ಮಾಮ'

ಗಣೇಶ ಚಂದನಶಿವ

ವೇಷ

ಇವರು ಹಾಕುವ 'ವೇಷ' ಮನರಂಜನೆಯಷ್ಟೆ ಅಲ್ಲ; ಮಾನವೀಯತೆಯ ತುಡಿತ. ಈ ವೇಷಗಾರನ ಜೋಳಿಗೆಗೆ ದೇಣಿಗೆ ನೀಡುವ ಅದೆಷ್ಟೋ ಕೈಗಳು, ಬಡ ಮಕ್ಕಳ ಕಣ್ಣೀರು ಒರೆಸಿ ಅವರ ಮೊಗದಲ್ಲಿ ಮಂದಹಾಸ ಮೂಡಿಸುತ್ತಿವೆ.

ಮಕ್ಕಳ ಅಚ್ಚುಮೆಚ್ಚಿನ ಈ ರವಿ ಮಾಮ, ಎಂಟು ವರ್ಷಗಳ ಅವಧಿಯಲ್ಲಿ ಒಟ್ಟು 16 ದಿನ ವೇಷ ಹಾಕಿ ಸಂಗ್ರಹಿಸಿರುವ ದೇಣಿಗೆ ಕೋಟಿ ದಾಟಿದೆ (₹1.13 ಕೋಟಿ). ಉಡುಪಿ, ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಸುತ್ತಲಿನ 113 ಬಡ ಮಕ್ಕಳ ಚಿಕಿತ್ಸಾ ವೆಚ್ಚಕ್ಕೆ ಈ ಹಣ ವಿನಿಯೋಗಿಸಿದ್ದಾರೆ.

'ಕೋಟ್ಯಧೀಶ ವೇಷಗಾರ' ರವಿ ಕಟಪಾಡಿ ಶ್ರೀಮಂತರೇನಲ್ಲ. ಅವರದ್ದು ಕಟ್ಟಡ ನಿರ್ಮಾಣದ ಸೆಂಟ್ರಿಂಗ್ ಕಾರ್ಮಿಕ ವೃತ್ತಿ. ಉಡುಪಿ ಜಿಲ್ಲೆಯ ಕಟಪಾಡಿ ಹುಟ್ಟೂರು. ವಯಸ್ಸಾದ ತಾಯಿ ದೇಯಿ, ಅಣ್ಣ ಶಂಕರ–ಅತ್ತಿಗೆ, ತಮ್ಮ ಚಂದ್ರಶೇಖರ ಅವರೊಟ್ಟಿಗೆ ವಾಸ. ಸಹೋದರರಿಬ್ಬರೂ ಸೆಂಟ್ರಿಂಗ್ ಕಾರ್ಮಿಕರು. ತಂದೆ ಬಿ.ಗೋವಿಂದ ಏಳು ವರ್ಷಗಳ ಹಿಂದೆ ಹೃದಯಾಘಾತದಿಂದ ತೀರಿಕೊಂಡಿದ್ದಾರೆ.

ಕೃಷ್ಣ ಜನ್ಮಾಷ್ಟಮಿ ಮತ್ತು ಉಡುಪಿ ಕೃಷ್ಣ ಮಠದಲ್ಲಿ ಮರುದಿನ ನಡೆಯುವ ವಿಟ್ಲಪಿಂಡಿ ಉತ್ಸವದ ವೇಳೆ ಹಲವರು ವೇಷ ಹಾಕಿಕೊಂಡು ಮನರಂಜನೆ ನೀಡುತ್ತಾರೆ. ಕೆಲವರು ಈ ವೇಳೆ ದೇಣಿಗೆ ಸಂಗ್ರಹಿಸಿ ಅದನ್ನು ಅಗತ್ಯ ಇರುವವರಿಗೆ ನೀಡುವುದನ್ನು ರೂಢಿಸಿಕೊಂಡಿದ್ದಾರೆ. ಆರಂಭದಲ್ಲಿ ಮನರಂಜನೆಗಾಗಿ ರವಿ ಸಹ ವೇಷ ಹಾಕಲಾರಂಭಿಸಿದರು. 2014ರಿಂದ ದೇಣಿಗೆ ಸಂಗ್ರಹ ಆರಂಭಿಸಿದರು. ಇವರು ವರ್ಷಕ್ಕೆ ಒಂದು ಬಾರಿ ಮಾತ್ರ ವೇಷ ಹಾಕುವುದು. ಒಮ್ಮೆ ಹಾಕಿದ ವೇಷ ಕೃಷ್ಣ ಜನ್ಮಾಷ್ಟಮಿ ಮತ್ತು ಅದರ ಮರುದಿನವಷ್ಟೆ ಇರುತ್ತದೆ. ಎರಡು ದಿನ ಕಟಪಾಡಿ, ಉಡುಪಿ, ಶಿರ್ವ, ಮಲ್ಪೆ, ಕಾಪು ಭಾಗಗಳಲ್ಲಿ ಸಂಚರಿಸಿ ದೇಣಿಗೆ ಸಂಗ್ರಹಿಸುತ್ತಾರೆ. ಸಂಗ್ರಹವಾದ ಒಟ್ಟು ಹಣವನ್ನು, ಪ್ರತಿ ವರ್ಷ ಕಟಪಾಡಿಯ ಬಬ್ಬುಸ್ವಾಮಿ ದೇವಸ್ಥಾನದಲ್ಲಿ ಕಾರ್ಯಕ್ರಮ ಆಯೋಜಿಸಿ ಫಲಾನುಭವಿ ಮಕ್ಕಳ ಪೋಷಕರಿಗೆ ಹಸ್ತಾಂತರಿಸುತ್ತಾರೆ. ರವಿಯ ಸಮಾಜಮುಖಿ ಕಾರ್ಯಕ್ಕೆ 'ರವಿ ಕಟಪಾಡಿ ಫ್ರೆಂಡ್ಸ್' ಸಂಘಟನೆ ಬೆನ್ನೆಲುಬಾಗಿ ನಿಂತಿದೆ.

"ಪ್ರತಿ ವರ್ಷ ಹಾಕುವ ವೇಷದಲ್ಲೂ ಹೊಸತನ ಇರುತ್ತದೆ. ಮಿತ್ರರು ಯುಟ್ಯೂಬ್‌ಗಳಲ್ಲಿ ಹುಡುಕಿ, ಹಾಲಿವುಡ್ ಸಿನಿಮಾಗಳಲ್ಲಿಯ 10–15 ಪಾತ್ರಗಳನ್ನು ಕಳಿಸುತ್ತಾರೆ. ಅವುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುತ್ತೇನೆ. ಆ ಪಾತ್ರದ ಅಲಂಕಾರದ ಬಗ್ಗೆ ಕಲಾವಿದರೊಂದಿಗೆ ಚರ್ಚಿಸುತ್ತೇನೆ. ಮಂಗಳೂರು, ಹೈದರಾಬಾದ್ ಮತ್ತಿತರೆಡೆಯ ಕಲಾವಿದರು ಈ ಪಾತ್ರಕ್ಕೆ ಅಗತ್ಯ ಸಿದ್ಧತೆ ಮಾಡಿಕೊಂಡು, ನನಗೆ ಸಿಂಗಾರ ಮಾಡುತ್ತಾರೆ. ನನ್ನ ವೇಷದ ಆಯ್ಕೆ ಗೋಪ್ಯವಾಗಿರುತ್ತದೆ. ನನಗೆ ವೇಷ ತೊಡಿಸುತ್ತಿದ್ದಂತೆಯೇ ಫೋಟೊಗಳು ವೈರಲ್ ಆಗಲಾರಂಭಿಸುತ್ತವೆ. ಕಳೆದ ವರ್ಷ ಮಾಡಿದ 'ಡಾರ್ಕ್ ಒನ್ ಎಲೈಟ್' ಎಂಬ ಹಾಲಿವುಡ್ ವೇಷಕ್ಕೆ ಹೊರದೇಶಗಳಿಂದ ವಸ್ತುಗಳನ್ನು ತರಿಸಬೇಕಾಯಿತು. ಅದಕ್ಕಾಗಿ ₹2.12 ಲಕ್ಷ ವೆಚ್ಚ ಮಾಡಿದೆವು. ಪ್ರತಿ ವರ್ಷವೂ ನನ್ನ ವೇಷಕ್ಕೆ ತಗಲುವ ಹಣವನ್ನು ನನ್ನ ದುಡಿಮೆಯಲ್ಲಿ ಕೂಡಿಟ್ಟದ್ದರಲ್ಲಿ ಹಾಗೂ ಮಿತ್ರರು ಸೇರಿ ಭರಿಸುತ್ತೇವೆ" ಎಂದು ರವಿ ತಮ್ಮ ವೇಷದ ಜನಪ್ರಿಯತೆಯ ಮರ್ಮವನ್ನು ತೆರೆದಿಟ್ಟರು.

'ಕೃಷ್ಣ ಜನ್ಮಾಷ್ಟಮಿಗೆ ತಿಂಗಳು ಇರುವಾಗಲೇ ಮಿತ ಆಹಾರ ಸೇವಿಸಲು ಆರಂಭಿಸುತ್ತೇನೆ. ನಾನು ಹಾಕುವ ಪಾತ್ರದ ಅಭಿನಯ ಕಲಿತುಕೊಳ್ಳುತ್ತೇನೆ. ಜನ್ಮಾಷ್ಟಮಿ ಹಿಂದಿನ ರಾತ್ರಿ 9 ಗಂಟೆಗೆ ವೇಷ ಹಾಕುವ ಕೆಲಸವನ್ನು ಕಲಾವಿದರು ಆರಂಭಿಸಿದರೆ, ಅದು ಮುಗಿಯುವುದು ಮರುದಿನ ಬೆಳಿಗ್ಗೆಯೇ. ದೇಹಕ್ಕೆ ಪೇಂಟ್ ಹಾಕುತ್ತಾರೆ. ಗಮ್ ಹಚ್ಚುತ್ತಾರೆ. ಇಡೀ ರಾತ್ರಿ ನಿಂತೇ ವೇಷ ಹಾಕಿಸಿಕೊಂಡು ಅಲಂಕಾರ ಮಾಡಿಸಿಕೊಳ್ಳಬೇಕು. ಎರಡು ದಿನ ಹಗಲು–ರಾತ್ರಿ ವೇಷದಲ್ಲಿ ಕಳೆಯಬೇಕು. ನಿದ್ರಿಸುವ ಹಾಗಿಲ್ಲ. ದಿನಕ್ಕೆ ಒಂದು–ಎರಡು ಬಾರಿ ಮಾತ್ರ ನೀರು– ಎಳನೀರು ಕುಡಿಯುವೆ. ಯಾಕೆಂದರೆ, ಶೌಚಕ್ಕೆ ಹೋಗಲೂ ಸಾಧ್ಯವಿರುವುದಿಲ್ಲ. ಹಾಗೆ ಎರಡು ದಿನ ಕಳೆಯುವುದೇ ಕಷ್ಟ. ನಾನು ಸಂಚರಿಸುವೆಡೆ ಕಿಕ್ಕಿರಿದು ಸೇರುವ ಮಕ್ಕಳು, ರವಿ ಮಾಮ.. ರವಿ ಮಾಮ... ಎಂದು ಕೂಗುತ್ತಾರೆ. ಅದೇ ನನ್ನ ನೋವು ಮರೆಸುತ್ತದೆ. ವೇಷ ಕಳಚುವಾಗಲೂ ಕೆಲವೊಮ್ಮೆ ಚರ್ಮ ಕಿತ್ತು ಬರುವ ವೇದನೆ. ಆರೋಗ್ಯ ಸಮಸ್ಯೆಗಳೂ ಎದುರಾಗುತ್ತವೆ. ಮತ್ತೆ ಒಂದೆರಡು ವಾರ ಚಿಕಿತ್ಸೆ ಪಡೆಯಬೇಕಾಗುತ್ತದೆ' ಎಂದು ವೇಷ ಹಾಕುವ ಕಷ್ಟವನ್ನು ಕಣ್ಣಿಗೆ ಕಟ್ಟುವಂತೆ ಹೇಳಿದರು.

ಅನಾರೋಗ್ಯ ಪೀಡಿತ ಮಗನನ್ನು ಉಳಿಸಿಕೊಳ್ಳಲು ಹಣ ಇಲ್ಲದೇ ತಾಯಂದಿರು ಕಣ್ಣೀರಿಡುವ ದೃಶ್ಯಗಳನ್ನು ಮಾಧ್ಯಮದಲ್ಲಿ ನೋಡಿದ್ದು ರವಿ ಅವರ ಮನ ಕಲಕಿತು. ಸಂಕಷ್ಟದಲ್ಲಿರುವವರಿಗೆ ನೆರವಾಗಿ ಜನರ ಪ್ರೀತಿ ಗಳಿಸುವುದೇ ನಿಜವಾದ ಶ್ರೀಮಂತಿಕೆ ಎಂಬ ತಂದೆಯ ಮಾತು ಕಿವಿಯಲ್ಲಿ ರಿಂಗಣಿಸಿತು. ಇದೇ ಅವರಿಗೆ ದೇಣಿಗೆ ಸಂಗ್ರಹಕ್ಕೆ ಪ್ರೇರಣೆ.

ಆರೋಗ್ಯ ಸಮಸ್ಯೆಯಿಂದ ಬಳಲುವ ಕಡುಬಡ ಮಕ್ಕಳಿಗೆ ಮಾತ್ರ ಇವರು ನೆರವು ನೀಡುತ್ತಾರೆ. ನೆರವಿನ ಅಗತ್ಯವಿರುವ ಕೆಲ ಪಾಲಕರು ನೇರವಾಗಿ ಸಂಪರ್ಕಿಸಿದರೆ, ಇನ್ನು ಕೆಲ ವೈದ್ಯರು ಮಕ್ಕಳ ಪಾಲಕರಿಗೆ ನಮ್ಮ ಸಂಪರ್ಕ ಸಂಖ್ಯೆ ಕೊಡುತ್ತಾರೆ. ಮಿತ್ರರೊಂದಿಗೆ ಆ ಮಕ್ಕಳ ಮನೆಗೆ ಭೇಟಿ ನೀಡಿ, ಅವರ ಸ್ಥಿತಿ ಅರಿತುಗೊಂಡ ನಂತರವೇ ಅವರಿಗೆ ನೆರವು ನೀಡುತ್ತಾರೆ.

'ಕೆಲವರ ಕೊಂಕು ಮಾತಿನಿಂದ ಬಹಳ ನೊಂದಿದ್ದು, ವೇಷ ಹಾಕುವುದನ್ನೇ ಬಿಡಬೇಕೆಂದು ನಿರ್ಧರಿಸಿದ್ದೆ. ನೆರವು ಕೋರಿ ಕರೆಗಳು ಬಂದಾಗ ಮನಸ್ಸು ಮೆತ್ತಗಾಯಿತು. ವೇಷ ಕಟ್ಟುವ ಮುನ್ನವೇ ಚರ್ಚಿಸಿ, ಮಿತ್ರರೆಲ್ಲ ಸೇರಿ 10 ಡಬ್ಬಗಳನ್ನು ಹಿಡಿದು ಹಣ ಸಂಗ್ರಹಿಸುವ ಕ್ರಮವನ್ನು ಬಿಟ್ಟು, ವಾಹನಕ್ಕೆ ಒಂದು ಡಬ್ಬವನ್ನು ಮಾತ್ರ ಕಟ್ಟಿದ್ದೆವು. ನೆರವು ನೀಡುವವರು ಬಂದು ಅದಕ್ಕೆ ಹಾಕಿ ಎಂದು ಕೋರಿದ್ದೆವು. ಈ ವರ್ಷ ಇನ್ನೂ ದೇಣಿಗೆಯ ಡಬ್ಬ ತೆರೆದಿಲ್ಲ. ಗಣೇಶೋತ್ಸವದ ನಂತರ ಡಬ್ಬ ತೆರೆದು, ಅಗತ್ಯ ಇರುವವರಿಗೆ ನೆರವು ನೀಡುತ್ತೇವೆ' ಎನ್ನುವ ರವಿ ಕಟಪಾಡಿ ಅವರ ಮಾನವೀಯ ಸೇವೆಗೆ ನಟ ಅಮಿತಾಬ್ ಬಚ್ಚನ್ ಸಹ ಬೆರಗಾಗಿದ್ದರು. 'ಕೌನ್ ಬನೇಗಾ ಕರೋಡ್‌ಪತಿ' ಕಾರ್ಯಕ್ರಮದ 'ಕರ್ಮವೀರ' ಸರಣಿಗೆ ಆಹ್ವಾನಿಸಿದ್ದರು. ಬಾಬಿ ಬೆಹನ್ ಎಂಬ ಸಹ ಸ್ಪರ್ಧಿಯ ಜತೆಗೂಡಿ ರವಿ ₹ 25 ಲಕ್ಷ ಬಹುಮಾನ ಗೆದ್ದಿದ್ದರು. ತಮ್ಮ ಪಾಲಿಗೆ ಬಂದಿದ್ದ ₹ 12.5 ಲಕ್ಷ ಬಹುಮಾನವನ್ನೂ ಬಡಮಕ್ಕಳಿಗಾಗಿ ವಿನಿಯೋಗಿಸಿದರು. ತಮ್ಮ ಅಭಿನಂದನಾ ಸಮಾರಂಭಗಳಲ್ಲಿ ಸನ್ಮಾನಕ್ಕಾಗಿ ಹಣ ಖರ್ಚು ಮಾಡಿಸದೆ, ಅದನ್ನೂ ದೇಣಿಗೆಯಾಗಿ ಪಡೆದು, ಬಡಮಕ್ಕಳ ವೈದ್ಯಕೀಯ ಚಿಕಿತ್ಸೆಗೆ ನೀಡಿದ್ದಾರೆ ರವಿ.

ರವಿ ಕಟಪಾಡಿ ಅವಿವಾಹಿತ. ಮದುವೆ ಬಗ್ಗೆ ಕೇಳಿದರೆ ಅವರು ಹೇಳುವುದು ಹೀಗೆ: 'ಮದುವೆಯಾದರೆ ಕುಟುಂಬದೊಳಗೆ ಬಂದಿಯಾಗಬೇಕಾಗುತ್ತದೆ. ಬಡ ಮಕ್ಕಳಿಗಾಗಿ ನನ್ನ ಜೀವನ ಮೀಸಲು. ದೇಹದಲ್ಲಿ ಕಸುವು ಇರುವವರೆಗೂ ಅವರಿಗೆ ನೆರವಾಗುವ ಹಂಬಲ. ತುಳುನಾಡು ಆಚರಣೆಯಲ್ಲಿ ಸತ್ತ ನಂತರವೂ ಮದುವೆ ಮಾಡುತ್ತಾರೆ. ಮದುವೆ ಆಗಲೇಬೇಕು ಎಂದಾದರೆ ನನಗೂ ಹಾಗೆಯೇ ಮದುವೆ ಮಾಡಬಹುದು'.



ರವಿ ಕಟಪಾಡಿ

ನಳ ಮಹಾರಾಜರು

10ನೇ ಪುಟದಿಂದ...

ಈ ಊರಲ್ಲಿ ಯಾರನ್ನೇ ಮಾತಾಡಿಸಿದರೂ ಅವರಲ್ಲೊಬ್ಬ ರುಚಿರುಚಿಯಾಗಿ ಅಡುಗೆ ಮಾಡಿ ಬಡಿಸುವ ನಳ ಮಹಾರಾಜನೋ, ಭೀಮಸೇನನೋ ಇರುವುದು ಕಂಡುಬರುತ್ತದೆ.

ಕಿತ್ತೂರಿನ ಗ್ರಾಮ ಪಂಚಾಯಿತಿಯ ಹಾಲಿ ಅಧ್ಯಕ್ಷ ಎಲ್.ಕರಿಯಪ್ಪ, ಎರಡು ತಿಂಗಳ ಹಿಂದೆ ಅವರಿಗೆ ಅಧ್ಯಕ್ಷ ಸ್ಥಾನ ಬಿಟ್ಟುಕೊಟ್ಟ ಕೆ.ಜಿ. ನಾಗರಾಜ ಇಬ್ಬರೂ ಅಡುಗೆ ಕೆಲಸದ ಸಾರಥ್ಯ ವಹಿಸುವವರೇ. ಇವರೊಂದಿಗೆ ಪಂಚಾಯಿತಿಯ ಅನೇಕ ಸದಸ್ಯರೂ ಅಡುಗೆ ಕಂಟ್‌ಟ್ರಾಕ್ಟರ್‌ಗಳೇ.

"ನಮ್ಮೂರಲ್ಲಿ ಬಹುತೇಕರು ಚಿಕ್ಕ ಹಿಡುವಳಿದಾರರು. ನೀರಾವರಿ ಸೌಲಭ್ಯವೂ ಇಲ್ಲ. ಒಣ ಬೇಸಾಯ ಪದ್ಧತಿಯಲ್ಲಿ ಬೆಳೆಯುವವರು ಕೃಷಿಯನ್ನೇ ನೆಚ್ಚಿಕೊಂಡು ಇರಲು ಆಗದು. ಈಗ್ಗೆ 25–30 ವರ್ಷಗಳಿಂದ ಇಲ್ಲಿನವರೆಲ್ಲ ಅಡುಗೆ ಕೆಲಸದತ್ತ ವಾಲಿದ್ದರಿಂದ ನಮ್ಮೂರು 'ಅಡುಗೆ ಕಂಟ್ರಾಕ್ಟರ್‌ಗಳ ಕಿತ್ತೂರು' ಎಂದೇ ಹೆಸರಾಗಿದೆ' ಎಂದು ಹೇಳಿದವರು ಅಡುಗೆ ಕೆಲಸದಲ್ಲಿ ತೊಡಗಿಕೊಂಡಿರುವ ಕೆ.ಆರ್. ಸಿದ್ದಲಿಂಗಪ್ಪ, ಡಿ.ವಿ. ಮಲ್ಲಿಕಾರ್ಜುನ, ಎಂ.ಮಹಾಂತೇಶ, ಬಿ.ಕೆ. ಅಜ್ಜಯ್ಯ, ಕರಿಬಸಪ್ಪ, ಚಿತ್ರಶೇಖರ, ಎಚ್.ಓಬಳೇಶ.

ಅಕ್ಷರಸ್ಥರಿಗೂ ಇದೇ ಸ್ವ–ಉದ್ಯೋಗ

ಬಡತನದ ಹಿನ್ನೆಲೆಯ ಕೆಲವು ಯುವಕರು ಎಸ್ಸೆಸ್ಸೆಲ್ಸಿ, ಪಿಯುಸಿ ಮುಗಿಯುತ್ತಿದ್ದಂತೆಯೇ ಸೌಟು ಹಿಡಿದು ಅಡುಗೆ ಕೆಲಸ ಅರಸಿ ಹೋಗುವುದು ಇಲ್ಲಿ ಸಹಜ ಎನ್ನುವಂತಾಗಿದೆ. ಇನ್ನು ಕೆಲವು ಪದವೀಧರರೂ ಬೇರೆ ಕೆಲಸದ ಉಸಾಬರಿಗೆ ಜೋತುಬೀಳದೇ ಇದೇ ಕೆಲಸದತ್ತ ಆಕರ್ಷಿತರಾಗಿದ್ದುಂಟು. ಅಂಥವರ ಪೈಕಿ ದಾವಣಗೆರೆಯ ಮಾಗನೂರು ಸರ್ವಮಂಗಳಮ್ಮ ಬಸಪ್ಪ ಪದವಿ ಕಾಲೇಜಲ್ಲಿ ಬಿ.ಎ. ಪದವಿ ಪಡೆದಿರುವ ವಿ.ಪುನೀತ್‌ಕುಮಾರ್ ಪ್ರಮುಖರು. ಇವರೀಗ ಎಂ.ಎ. ಪ್ರವೇಶ ಕೋರಿ ದಾವಣಗೆರೆ ವಿ.ವಿ.ಯಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಕೆಲವು ವರ್ಷಗಳಿಂದ ಅಡುಗೆ ಕಂಟ್ರಾಕ್ಟರ್ ಕೆಲಸ ಮಾಡುತ್ತಿರುವ ಈ ಯುವಕನಿಗೆ ಇನ್ನೂ 22ರ ಪ್ರಾಯ. ಪಿಯುನಿಂದಲೇ ತಮ್ಮ ಅನೇಕ ಸಹಪಾಠಿಗಳಿಗೆ ವಾರಕ್ಕೆರಡೋ ಮೂರೋ ದಿನ ಉದ್ಯೋಗ ನೀಡುತ್ತ ಅವರ ಕಲಿಕೆಯ ಖರ್ಚಿಗೆ ಆಸರೆಯಾಗಿದ್ದ ಇವರು, ದುಡಿದು ಚಿಕ್ಕ ವಯಸ್ಸಿನಲ್ಲೇ ವಾಸಕ್ಕೆ ಹೊಸ ಆರ್‌ಸಿಸಿ ಮನೆ ಕಟ್ಟಿಕೊಳ್ಳುತ್ತಿದ್ದಾರೆ. ಆರು ತಿಂಗಳಲ್ಲಿ ಗೃಹಪ್ರವೇಶ ನಿಗದಿಯಾಗಿದೆ. ಆ ಸಮಾರಂಭಕ್ಕೆ ಊರಿನ ಅನೇಕ ಬಾಣಸಿಗರು ಉಚಿತವಾಗಿ ಅಡುಗೆ ಮಾಡುವವರಿದ್ದಾರೆ.

ಅಡುಗೆ ಕೆಲಸ ಎಂದ ಕೂಡಲೇ ಹೆಣ್ಣುಮಕ್ಕಳೇ ನೆನಪಾಗುತ್ತಾರೆ. ಮನೆಗಳಲ್ಲಿ ನಿತ್ಯವೂ ಕುಟುಂಬದ ನಾಲ್ಕಾರು ಜನರ ಹೊಟ್ಟೆ ತುಂಬಿಸಲು ಒಲೆ ಹೊತ್ತಿಸುವವರು ಮಹಿಳೆಯರೇ. ಆದರೂ ದೊಡ್ಡ ದೊಡ್ಡ ಸಮಾರಂಭಗಳ ಅಡುಗೆ ಜವಾಬ್ದಾರಿ ಮೊದಲಿನಿಂದಲೂ ಪುರುಷರದ್ದೇ. ಕಿತ್ತೂರಿನ ಅನೇಕ ಪುರುಷರು ಒಬ್ಬರಿಂದ ಒಬ್ಬರು ಅಡುಗೆ ಕೆಲಸ ಕಲಿತು ಕಂಟ್ರಾಕ್ಟರ್‌ಗಳಾಗಿ, ತಮ್ಮೂರಿನ ಕೆಲವು ಹೆಣ್ಣು ಮಕ್ಕಳನ್ನು ಅಡುಗೆ ಸಹಾಯಕರನ್ನಾಗಿ ಕರೆದುಕೊಂಡು ಹೋಗಿ ಅವರಿಗೂ ಆದಾಯ ಬರುವಂತೆ ನೋಡಿಕೊಂಡಿದ್ದಾರೆ.

'ಹೊಲ–ಮನೆ ಕೆಲಸ ಇದ್ದರೆ ನಮ್ಮೂರ ಹೆಣ್ಣುಮಕ್ಕಳು ಬರುವುದಿಲ್ಲ. ಹಾಗಾಗಿ ದಾವಣಗೆರೆ, ಹರಿಹರ ನಗರ ಅಥವಾ ಜಗಳೂರು ಮತ್ತಿತರ ಪಟ್ಟಣಗಳಲ್ಲಿ ಇರುವ ಹೆಣ್ಣುಮಕ್ಕಳನ್ನು ಕೆಲಸಕ್ಕೆ ಕರೆದೊಯ್ಯುತ್ತೇವೆ. ಸಹಾಯಕರಾಗಿ ಕೆಲಸ ಮಾಡುವವರಿಗೂ ದಿನವೊಂದಕ್ಕೆ ಊಟ–ತಿಂಡಿ ಕೊಟ್ಟು ಕನಿಷ್ಠ ₹ 1,000 ಸಂಬಳ ಕೊಡುತ್ತೇವೆ. ಕಾಲೇಜು ಕಲಿಯುವ ಯುವಕರಿಗಂತೂ ಈ ಮೊತ್ತ ದೊಡ್ಡದೇ ಆಗಿದ್ದು, ಸಾಕಷ್ಟು ಸಹಾಯಕ್ಕೆ ಬರುತ್ತದೆ' ಎಂದು ಹೇಳಿದವರು ಕೆ.ಜಿ. ನಾಗರಾಜ್.

'ತರಕಾರಿ ಹೆಚ್ಚುವುದು, ರೊಟ್ಟಿ, ಚಪಾತಿ ಮಾಡುವುದು, ಪಾತ್ರೆ–ಪಡಗ ಸ್ವಚ್ಛಗೊಳಿಸುವುದು, ಊಟ ಬಡಿಸುವ ಕೆಲಸ ಮಾಡುತ್ತೇವೆ' ಎಂದು ಅಡುಗೆ ಸಹಾಯಕರಾಗಿ ಕೆಲಸ ಮಾಡುವ ದಾವಣಗೆರೆಯ ಮಹಾದೇವಿ ಹೆಮ್ಮೆಯಿಂದ ಹೇಳಿದರು.



ಕೆ.ಜಿ. ನಾಗರಾಜ

> "ನಮ್ಮ ಸ್ನೇಹಿತರಿಗೆ ಮದುವೆ ವೇದಿಕೆ ಅಲಂಕಾರ ಮತ್ತು ಊಟ ಬಡಿಸುವ ಕೆಲಸ ಕೊಡುತ್ತೇನೆ. ಅವರೆಲ್ಲ ಪದವಿ ಓದುತ್ತಿದ್ದು, ವಾರಾಂತ್ಯಕ್ಕೆ ದೊರೆಯುವ ಕೆಲಸದಿಂದ ಖರ್ಚು– ವೆಚ್ಚ ನೀಗಿಸಿಕೊಂಡು ಪಾಲಕರಿಗೆ ಹೊರೆಯಾಗದಂತಿದ್ದಾರೆ."
>
> **ಪಿ.ಎ. ನಾಗರಾಜ,** ಶಾಮಿಯಾನ ಗುತ್ತಿಗೆದಾರ



ಊರಿನ ಎ.ಸಿ. ರೇವಣಸಿದ್ದಪ್ಪ, ಕೆ.ಎಂ. ಮಂಜುನಾಥ, ಎಂ.ಎಸ್. ಸೋಮಶೇಖರ ಅವರೂ ಪದವಿವರೆಗೆ ಓದಿದ್ದರೂ ಅಡುಗೆ ಕೆಲಸ ಮಾಡುತ್ತ ಜೀವನ ರೂಪಿಸಿಕೊಂಡಿದ್ದಾರೆ. ಕೆಲವರು ಮನೆ ಕಟ್ಟಿಕೊಂಡಿದ್ದಾರೆ. ಮಕ್ಕಳ ಮದುವೆ ಮಾಡಿದ್ದಾರೆ. ಇದೇ ಕೆಲಸ ಮಾಡುತ್ತಿರುವ ಇನ್ನು ಕೆಲವರು ತಮ್ಮ ಮಕ್ಕಳಿಗೆ ಎಂಜಿನಿಯರಿಂಗ್ ಶಿಕ್ಷಣ ಕೊಡಿಸುವಷ್ಟು ಶಕ್ತರಾಗಿದ್ದಾರೆ.

ಶಾಮಿಯಾನದ ಹೊಣೆ: ಬಿ.ಎ. ಪದವೀಧರರಾದ ಪಿ.ಎ. ನಾಗರಾಜ ಅಡುಗೆ ಕೆಲಸಕ್ಕೆ ಹೋಗುವುದಷ್ಟೇ ಅಲ್ಲದೆ ಶಾಮಿಯಾನ ಗುತ್ತಿಗೆದಾರರೂ ಆಗಿದ್ದಾರೆ. ಓದುತ್ತಲೇ ಸಂಪಾದಿಸಬೇಕೆಂಬ ಅನಿವಾರ್ಯಕ್ಕೆ ಒಳಗಾಗಿರುವ ತನ್ನ ಸಹಪಾಠಿಗಳೂ ಒಳಗೊಂಡಂತೆ ಹತ್ತಿಪ್ಪತ್ತು ಯುವಕರಿಗೆ ನಿಯಮಿತವಾಗಿ ಕೆಲಸ ಕೊಡುತ್ತಾರೆ.

ಅಡುಗೆ ಕೆಲಸಕ್ಕೆ ಬಿಡುವು ಇದ್ದಾಗ ಜೀವನ ಸರಾಗವಾಗಿ ನಡೆಯಲಿ ಎಂದುಕೊಂಡೇ ಈ ಗ್ರಾಮದ ಅನೇಕರು ಆಕಳು–ಎಮ್ಮೆ ಸಾಕಿಕೊಂಡಿದ್ದು, ಈ ಗ್ರಾಮದ ಹಾಲಿನ ಡೇರಿಗೆ ನಿತ್ಯ 600ರಿಂದ 650 ಲೀಟರ್ ಹಾಲು ಮಾರಾಟ ಮಾಡುತ್ತಾರೆ. ಈ ಊರಿನ ಕೆಲವು ಬಡವರ ಮಕ್ಕಳು ಅಡುಗೆ ಕೆಲಸ ಮಾಡುತ್ತಲೇ ಉನ್ನತ ಶಿಕ್ಷಣ ಪಡೆದು ಸರ್ಕಾರಿ, ಖಾಸಗಿ ಉದ್ಯೋಗವನ್ನೂ ಪಡೆದಿದ್ದಾರೆ. ಅಧಿಕಾರಿಗಳೂ ಆಗಿದ್ದಾರೆ.

ಮುನ್ನೋಟ 24-09-2023 ರಿಂದ -30-09-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ವಿದ್ಯಾಭ್ಯಾಸಕ್ಕಾಗಿ ದೂರ ಪ್ರಯಾಣ ಮಾಡುವ ಯೋಗವಿದೆ. ಗಣಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರು ಕೆಲಸದ ಮೇಲೆ ದೂರದೂರಿಗೆ ಹೋಗಬೇಕಾಗಬಹುದು. ಪಾಲುದಾರರೊಂದಿಗೆ ಮಾಡಿಕೊಂಡಿದ್ದ ವ್ಯವಹಾರ ಒಪ್ಪಂದಗಳನ್ನು ಈಗ ನವೀಕರಿಸಿಕೊಳ್ಳಿರಿ. ನೃತ್ಯಗಾರರಿಗೆ ಹೆಚ್ಚಿನ ಅವಕಾಶ ಮತ್ತು ಸಂಪಾದನೆ ಇರುತ್ತದೆ. ಬೇರೆಯವರೊಂದಿಗೆ ಮಾತನಾಡುವಾಗ ಎಚ್ಚರಿಕೆಯಿಂದಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸಾಕು ಪ್ರಾಣಿ ಮಾರಾಟಗಾರರಿಗೆ ಆದಾಯ ಹೆಚ್ಚಾಗುತ್ತದೆ. ಕಟ್ಟಡ ಕಾರ್ಮಿಕರಿಗೆ ಹೆಚ್ಚು ಕೆಲಸ ದೊರೆತು, ಸಂಪಾದನೆ ಹೆಚ್ಚುತ್ತದೆ. ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಮಾಲೀಕರೊಂದಿಗೆ ಸೌಹಾರ್ದಯುತವಾಗಿ ಇರುವುದು ಒಳ್ಳೆಯದು. ಮನೆಯ ನಿರ್ಮಾಣಕಾರ್ಯವನ್ನು ಈಗ ಮಾಡಬಹುದು. ಹಿರಿಯರಿಗೆ ಪುಣ್ಯಕ್ಷೇತ್ರದ ದರ್ಶನದ ಯೋಗವಿದೆ. ಸಂಗಾತಿಯ ಕೃಷಿಭೂಮಿ ದೊರೆಯುವ ಯೋಗವಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ಸ್ವಾಭಿಮಾನ ಮತ್ತು ಗುರಿಯನ್ನು ಬಿಟ್ಟುಕೊಡದೆ ಮುನ್ನಡೆಯುವುದು ಉತ್ತಮ. ಸ್ನೇಹಿತರು ನಿಮ್ಮ ಹಣಕ್ಕಾಗಿ ನಿಮ್ಮ ಸಹವಾಸ ಮಾಡಲು ಕಾತುರರಾಗಿ ಕಾಯುತ್ತಿರುತ್ತಾರೆ, ಅವರಿಂದ ದೂರವಿರಿ. ವೃತ್ತಿಯಲ್ಲಿ ಹಿರಿಯ ಅಧಿಕಾರಿಗಳ ಜೊತೆ ಧೈರ್ಯದಿಂದ ಮಾತನಾಡಿ ನಿಮ್ಮ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದು. ಸಾಕಷ್ಟು ದಿನಗಳಿಂದ ಆಗದೆ ಉಳಿದಿದ್ದ ಕೆಲವು ಕೆಲಸಗಳು ಈಗ ಆಗುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಸಮಾಜದಲ್ಲಿ ನಿಮಗೆ ಗೌರವವು ಹೆಚ್ಚುತ್ತದೆ. ರೈತರಿಗೆ ಕಳ್ಳರ ಕಾಟ ಹೆಚ್ಚಾಗುವ ಸಾಧ್ಯತೆಯಿದೆ. ನಿಮ್ಮ ಕುಟುಂಬದ ಜೊತೆ ದೇವರದರ್ಶನ ಪಡೆಯಲು ತೆರಳುವಿರಿ. ವಿದೇಶದಲ್ಲಿ ದುಡಿಯುತ್ತಿರುವವರ ಆದಾಯ ಹೆಚ್ಚಾಗುತ್ತದೆ. ಹಿರಿಯ ಶ್ರೇಣಿಯ ಕೆಲವು ಅಧಿಕಾರಿ ವರ್ಗದವರಿಗೆ ಮುಜುಗರದ ಸನ್ನಿವೇಶಗಳು ಎದುರಾಗಬಹುದು. ವೃತ್ತಿ ಜೀವನಕ್ಕೆ ಪ್ರವೇಶಿಸುವ ಅವಕಾಶ ಕೆಲವರಿಗೆ ದೊರೆಯುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಹಿರಿಯರ ಆಸ್ತಿಯನ್ನು ಕೊಳ್ಳುವ ಮುಂಚೆ ಬಂಧುಗಳ ಬಗ್ಗೆ ಎಚ್ಚರ ವಹಿಸಿ, ಅವರು ಈ ಬಗ್ಗೆ ತಕರಾರು ತೆಗೆಯಬಹುದು. ಹಳೆಯದನ್ನು ಮರೆತು ಹೊಸ ಜೀವನದೊಂದಿಗೆ ಹೊಂದಿಕೊಳ್ಳುವುದು ಉತ್ತಮ. ಇದ್ದಿದ್ದರಲ್ಲಿ ಸಂತಸ ಕಾಣುವುದು ನಿಮಗೆ ಒಳಿತು. ಆಕಸ್ಮಿಕವಾಗಿ ಪರಿಚಯವಾದ ವ್ಯಕ್ತಿಯಿಂದ ನಿಮಗೆ ಸೂಕ್ತ ಸಹಾಯ ದೊರೆಯುತ್ತದೆ. ಕೀಲುನೋವು ಹೆಚ್ಚಾಗುವ ಸಾಧ್ಯತೆಯಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿರುದ್ಯೋಗಿಗಳು ಸಿಕ್ಕ ಕೆಲಸವನ್ನು ಸೇರಿಕೊಳ್ಳುವುದು ಉತ್ತಮ,ಕಾಯುತ್ತಾ ಕೂರುವುದು ಅಷ್ಟು ಒಳಿತಲ್ಲ. ಸಭೆ ಸಮಾರಂಭಗಳಲ್ಲಿ ಭಾಗವಹಿಸುವಾಗ ನಿಮ್ಮ ಮಾತಿನ ಮೇಲೆ ಬಗ್ಗೆ ಎಚ್ಚರವಿರಲಿ. ನಿಮ್ಮ ಹರಿತವಾದ ಮಾತುಗಳು ಬೇರೆಯವರಿಗೆ ಬೇಸರ ತರಿಸಬಹುದು. ಸತತ ಪ್ರಯತ್ನದಿಂದ ಮಾಡುತ್ತಿದ್ದ ಕೆಲಸಗಳಲ್ಲಿ ಜಯವಿರುತ್ತದೆ. ಎಲ್ಲರ ಜೊತೆಯಲ್ಲಿ ಹೊಂದಿಕೊಳ್ಳುವುದು ಬಹಳ ಉತ್ತಮ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವೃತ್ತಿಯಲ್ಲಿ ನಿಷ್ಠೆಯಿಂದ ಕೆಲಸ ಮಾಡುತ್ತಿರುವವರಿಗೆ ಹೆಚ್ಚಿನ ಅನುಕೂಲ ಈಗ ದೊರೆಯುತ್ತದೆ. ಮಕ್ಕಳ ನಡವಳಿಕೆಯಲ್ಲಿ ಆಗುತ್ತಿರುವ ವ್ಯತ್ಯಾಸವನ್ನು ಪತ್ತೆಹಚ್ಚಿ ಸರಿ ದಾರಿಗೆ ತನ್ನಿರಿ. ಶುಭ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶಗಳು ದೊರೆಯುತ್ತವೆ.ತೀರ್ಥ ಯಾತ್ರೆಗಳನ್ನು ಮಾಡುವ ಅವಕಾಶ ದೊರೆಯುತ್ತವೆ. ಅಧಿಕಾರಿಗಳು ಮಾಡುವ ತಪ್ಪಿನಿಂದ ತಾವೇ ಸಿಕ್ಕಿ ಬೀಳುವ ಸಾಧ್ಯತೆಗಳಿವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿಮ್ಮ ಕುಟುಂಬದಲ್ಲಿ ನಡೆಯುವ ಕೆಲವು ಘಟನೆಗಳು ನಿಮಗೆ ಬೇಸರ ತರಿಸುತ್ತವೆ. ಹಠ ಹಿಡಿದು ಮಾಡಿದ ಕೆಲಸಗಳಲ್ಲಿ ಉತ್ತಮ ಫಲಿತಾಂಶ ಇರುತ್ತದೆ. ಗುರು ಹಿರಿಯರನ್ನು ಗೌರವಿಸುವುದು ಒಳ್ಳೆಯದು. ನಿಮ್ಮ ಸಂಪ್ರದಾಯಗಳನ್ನು ತಿಳಿದುಕೊಳ್ಳುವುದು ಒಳ್ಳೆಯದು. ಒಡವೆ, ವಸ್ತುಗಳನ್ನು ಕೊಳ್ಳುವ ಅವಕಾಶವಿದೆ. ಹಣದ ಒಳಹರಿವು ನಿರೀಕ್ಷೆಯಷ್ಟಿದ್ದರೂ ಅಷ್ಟೇ ಖರ್ಚು ಬರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಎಲ್ಲ ಸೌಕರ್ಯ ಹೊಂದಿದ ವಾಹನ ಕೊಳ್ಳಲು ಆಲೋಚನೆ ಮಾಡುವಿರಿ. ಆಹಾರ ಅಥವಾ ನೀರಿನಿಂದ ಆರೋಗ್ಯ ವ್ಯತ್ಯಾಸವಾಗಬಹುದು. ನೀವು ಮಾಡುವ ನಿಸ್ವಾರ್ಥ ಸೇವೆಗಳು ಉತ್ತಮ ಪ್ರತಿಕ್ರಿಯೆಯನ್ನು ಪಡೆಯುತ್ತವೆ. ರಕ್ಷಣಾ ಸೇವೆಯಲ್ಲಿರುವ ಕೆಲವರಿಗೆ ಶಿಸ್ತು ಬದ್ಧ ಜೀವನಕ್ಕೆ ಹೊಂದಿಕೊಳ್ಳಲು ಕಷ್ಟವಾಗಬಹುದು. ಗಣ್ಯರ ಪರಿಚಯದಿಂದ ನಿಮ್ಮ ಕೆಲಸ ಕಾರ್ಯಗಳು ಬಹಳ ಸುಲಭವಾಗಿ ಆಗುವುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಭಾಷಣಕಾರರಿಗೆ ಭಾಗವಹಿಸುವ ಸಭೆ ಸಮಾರಂಭಗಳಲ್ಲಿ ಉತ್ತಮ ಗೌರವ ದೊರೆಯುತ್ತದೆ. ನಿಮ್ಮ ಆಸೆಯಂತೆ ಖರೀದಿಸಿದ ಆಸ್ತಿಯ ಮೌಲ್ಯ ಈಗ ಸಾಕಷ್ಟು ಹೆಚ್ಚಾಗುತ್ತದೆ. ಕಷ್ಟವಾದರೂ ನಿಮ್ಮ ಕೆಲಸಗಳನ್ನು ಬಹಳ ಶ್ರದ್ಧೆಯಿಂದ ಮಾಡುವಿರಿ. ಸುಗಂಧ ದ್ರವ್ಯಗಳನ್ನು ತಯಾರು ಮಾಡುವವರ ವ್ಯವಹಾರ ಈಗ ಸಾಕಷ್ಟು ಹೆಚ್ಚಾಗುತ್ತದೆ. ಮಕ್ಕಳ ಆಟಿಕೆ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ಲಾಭವಿರುತ್ತದೆ. ಭಾಷಾ ಅನುವಾದಕರಿಗೆ ಬೇಡಿಕೆ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಸಾಹಸ ಕಲಾವಿದರಿಗೆ ಉತ್ತಮ ಕಾರ್ಯಕ್ರಮದಲ್ಲಿ ಭಾಗವಹಿಸುವ ಆಕಾಶವಿದೆ. ಕುಟುಂಬದ ಗೌರವಕ್ಕಾಗಿ ಹಿರಿಯರು ಸಾಕಷ್ಟು ಶ್ರಮಪಡುವರು. ಹೊಸ ವಾಹನ ಕೊಳ್ಳುವುದಕ್ಕೆ ಮುಂಚೆ ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಳ್ಳಿ. ಧಾರ್ಮಿಕ ವಿಚಾರಗಳನ್ನು ತಿಳಿಯಲು ಹೆಚ್ಚು ಉತ್ಸುಕರಾಗುವಿರಿ. ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಮೊದಲು ಪೂರ್ವ ತಯಾರಿ ಸರಿಯಾಗಿರಲಿ. ನಿಮ್ಮ ಧನ ಆದಾಯವು ಮಧ್ಯಮಗತಿಯಲ್ಲಿ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಲೋಹದ ಕುಸರಿ ಕೆಲಸಗಳನ್ನು ಮಾಡುವವರಿಗೆ ಮಾರುಕಟ್ಟೆ ವಿಸ್ತರಿಸುತ್ತದೆ. ಸರಕು ಸಾಗಣೆ ಮಾಡುವವರಿಗೆ ಹೆಚ್ಚು ಸಾಗಾಣಿಕೆ ಆದೇಶಗಳು ದೊರೆಯುತ್ತವೆ. ನಿಮ್ಮ ಸಂಬಂಧಿಕರೊಡನೆ ಉತ್ತಮ ಸಂಬಂಧ ಇಟ್ಟುಕೊಳ್ಳುವುದು ಒಳ್ಳೆಯದು. ಉದ್ಯೋಗ ಸ್ಥಳದಲ್ಲಿ ಕೆಲಸದ ಒತ್ತಡ ಹೆಚ್ಚಾಗಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಉತ್ತಮ ಯಶಸ್ಸು ಸಿಗಲಿದೆ. ಮಹಿಳೆಯರು ನಡೆಸುವ ವ್ಯಾಪಾರ ವ್ಯವಹಾರಗಳಲ್ಲಿ ಅಭಿವೃದ್ಧಿಯು ಉತ್ತಮವಾಗಿರುತ್ತದೆ.

ಪದಬಂಧ 2808



ಮೇಲಿನಿಂದ ಕೆಳಕ್ಕೆ

1. ಸೀತೆಯ ಸಾರ್ವತ್ರಿಕ ತಂದೆ 3
2. ಕುಶಲಿಗಳು ಅನುಸರಿಸುವ ಮೂರು ಬಗೆ, ತ್ರಿಪರಿ 5
3. ಮೊಸಳೆಗಳ ಗುಂಪು ಇಲ್ಲಿದೆ 5
4. ಕರಿಯಲ್ಲಿ ಮರಿ ಮೂಡಿದಾಗ ಉಂಟಾಗುವ ಹಳ್ಳ 3
6. ಕರ್ನಾಟಕದ ಕಡಲ ತೀರದಲ್ಲಿ ಸಪ್ತಾಹದ ಜಿಲ್ಲೆ 4
8. ತನ್ನದಲ್ಲದ ಅನ್ಯರ ಹೆಣ್ಣು 5
9. ನೀರಿನಿಂದ ಹುಟ್ಟಿದ ರಾಸಾಯನಿಕ ತಂದೆ 5
10. ದನಕಟ್ಟುವ ಗೂಟ ವರ್ಷವೊಂದರ ಹೆಸರು ಪಡೆದಿದೆ 3
11. ಆಗಬೇಕಾದ ಕೆಲಸಕ್ಕೆ ನೀಡುವ ಅಹವಾಲು 3
12. ಎಲ್ಲರೂ ಬಯಸುವ ಏರುಪೇರಿಲ್ಲದ ನ್ಯಾಯಾಧಿಕಾರ 5
13. ಎಳ್ಳಷ್ಟೂ ಸಂದೇಹಕ್ಕೀಡುಮಾಡದ ಪದದಲ್ಲಿ ರಾಮಸುತನ ಪ್ರವೇಶ 4
14. ಹಳ್ಳಿಯ ಮುಗ್ಧ ಭಕ್ತಿಯಿಂದ ಕಟ್ಟಿಸಿದ ಭಗವಂತನ ಕೋಣೆ 5
16. ದ್ರಾವಿಡ ರಾಜ್ಯದ ಜನರಿಗೆ ಸಂಕ್ರಾಂತಿಯಂದು ಬೆಳಗುವ ಜ್ಯೋತಿ 3
17. ತಮಿಳುನಾಡಿನ ಮೀನಾಕ್ಷಿಯ ನಗರಿ 3

ಎಡದಿಂದ ಬಲಕ್ಕೆ

1. ಹುಟ್ಟಿದ್ದಕ್ಕೊಂದು ದಾಖಲೆ 4
3. ಪುಸ್ತಕದ ಅರ್ಧ ಭಾಗವನ್ನು ಹೊತ್ತ ತಲೆ 3
5. ಶ್ರಮಪಟ್ಟು ಮಾಡುವ ಕೆಲಸಕ್ಕೆ ಪ್ರೇರಣೆಯನ್ನು ನೀಡುವವ 5
7. ದ್ರವವನ್ನು ಅರಸಿ ಹೋಗುವವ 4
9. ಉಘೇ ಸೀತಾ ಪತಿ ಎಂದು ಹೊಗಳಿ ಹಾಡುವ ಮೊದಲ ಸಾಲು 8
12. ಎಲ್ಲಾ ಕಲಿಕೆಗಳ ಆರಾಧ್ಯ ಮೂರ್ತಿ ಶಾರದೆ 8
15. ಕಾವ್ಯಬ್ರಹ್ಮನ ಮಿಡಿಯುವ ಅಂತರಂಗ 4
18. ಸರ್ಕಾರದ ಯಾವ ಸವಲತ್ತುಗಳೂ ಸಿಗದೆ ಆಸೆ ಬಿಟ್ಟಿರುವ ಹಳ್ಳಿ 5
19. ಮಾಡುವ ಕೆಲಸಕ್ಕೆ ನೀಡುವ ಒತ್ತಾಸೆ ಬೆಂಬಲ 3
20. ಪ್ರವಾಹದಂತೆ ಭಾರವಾಗುವ ಅಕ್ಕ ಪಕ್ಕದ ಮಂದಿ 4

ಪದಬಂಧ ಉತ್ತರ -2807

ಮೇಲಿಂದ ಕೆಳಕ್ಕೆ


1.ಅಲುಕು 2.ವಸಂತಕ 3.ಮಲೆನಾಡು 4.ದವಡೆ 9.ನರಕವಾಸ 11.ನಿಕಟ 12.ದವನ 16.ಗಜಗೌರಿ 17.ರವಿಶನಿ 18.ಅಮರಾ 20.ದಶಕ

ಎಡದಿಂದ ಬಲಕ್ಕೆ

1.ಅಸಂಭವ 3.ಮನುವಾದ 5.ಸಂಬಂಧಮಾಲೆ 6.ಕುತಕುತ 7.ನಾಯಿಕೊಡೆ 8.ಕದನವೀಡು 10.ಜನನಿ 12.ದಶಾಂಗ 13.ಕರ್ನಾಟಕವೈಭವ 14.ಲಲಾಟ 15.ನರ್ಸರಿ 16.ಗದಾಸಮರ 18.ಅಯೋನಿಜ 19.ವಿಶಾರದ 21.ಗೌರೀಗಣೇಶ 22.ರಾಯಭಾರಿ 23.ನಿವಾರಕ

ರಾಜೀವ್ ಜೊತೆ ಕೆಲಸ ಮಾಡಿದ್ದು

ಖ್ಯಾತ ಅರ್ಥಶಾಸ್ತ್ರಜ್ಞ **ಮೊಂಟೆಕ್ ಸಿಂಗ್ ಅಹ್ಲೂವಾಲಿಯಾ** ಅವರ 'ಬ್ಯಾಕ್‌ಸ್ಟೇಜ್' ಪುಸ್ತಕದ ಒಂದು ಪುಟ್ಟ ಭಾಗದ ಕನ್ನಡ ಅನುವಾದ ಇದು. ಕಂಪ್ಯೂಟರೀಕರಣಕ್ಕೆ ಮುಂಚಿನ ದಿನಗಳ ಒಂದು ರಸಪ್ರಸಂಗ ಇಲ್ಲಿದೆ. **ರಾಜಾರಾಂ ತಲ್ಲೂರು** ಅನುವಾದಿಸಿರುವ ಪುಸ್ತಕವು ಇಂದು(ಸೆ.24) ಉಡುಪಿಯಲ್ಲಿ ಮೂಲ ಲೇಖಕ ಮೊಂಟೆಕ್ ಸಿಂಗ್ ಅಹ್ಲೂವಾಲಿಯಾ ಅವರಿಂದ ಬಿಡುಗಡೆಗೊಳ್ಳಲಿದೆ.



ಪು: 592 ₹625

M ಡಾಕ್ಯುಮೆಂಟ್
ಲೇ:ಮೊಂಟೆಕ್ ಸಿಂಗ್ ಅಹ್ಲೂವಾಲಿಯಾ
ಅನು: ರಾಜಾರಾಂ ತಲ್ಲೂರು
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ಸಂ: 9449174662

ಪ್ರಧಾನಮಂತ್ರಿ ನನ್ನದೇ ಪ್ರಾಯ ವರ್ಗದವರಾಗಿದ್ದುದರಿಂದ, ನನಗೆ ನಮ್ಮ ತಲೆಮಾರಿನ ದಿನಗಳು ಆರಂಭಗೊಂಡಿವೆ ಮತ್ತು ನಿಜಕ್ಕೂ ಹೊಸದು ಮಾಡಿ ತೋರಿಸಬಹುದು ಅನ್ನಿಸತೊಡಗಿತ್ತು. ರಾಜೀವ್ ಸಂಪುಟದ ಹೆಚ್ಚಿನ ಹಿರಿಯ ಸದಸ್ಯರು ಪೂರ್ಣಕಾಲಿಕ ರಾಜಕಾರಣಿಗಳಾಗಿದ್ದರು. ಅವರು ಯಾರೂ ಉದ್ಯೋಗದ ಅನುಭವ ಇದ್ದವರಾಗಿರಲಿಲ್ಲ. ಆದರೆ ರಾಜೀವ್, ಇಂಡಿಯನ್ ಏರ್‌ಲೈನ್ಸ್‌ನಲ್ಲಿ ಕಮರ್ಷಿಯಲ್ ಪೈಲಟ್ ಆಗಿ ಕೆಲಸ ಮಾಡಿದ ಅನುಭವ ಇದ್ದವರು. ಇದು ಅವರಿಗೆ ವೃತ್ತಿಪರರ ಜೊತೆ ಹೇಗೆ ಕೆಲಸ ಮಾಡಬೇಕೆಂಬುದನ್ನು ಅರ್ಥೈಸಿತ್ತು. ಅವರು ತಾಂತ್ರಿಕ ಪರಿಣತಿಯನ್ನು ಗೌರವಿಸುತ್ತಿದ್ದರು ಮತ್ತು ಹೊಸ ತಂತ್ರಜ್ಞಾನಗಳ ಅಗತ್ಯದ ಅರಿವು ಅವರಿಗಿತ್ತು ಮತ್ತು ಅದಕ್ಕೆ ತರಬೇತಿ ಅಗತ್ಯ ಎಂಬುದನ್ನು ಅವರು ಮನಗಂಡಿದ್ದರು. ಅವರಿಗೆ ಫೋಕ್ಕರ್ ವಿಮಾನಗಳ ಚಾಲನೆಗೆ ಲೈಸನ್ಸ್ ಇತ್ತು. ಅವರು ತಮ್ಮ ಉದ್ಯೋಗ ಬಿಟ್ಟು ರಾಜಕೀಯ ಸೇರುವ ಹೊತ್ತಿಗೆ, ಜೆಟ್ ವಿಮಾನಗಳನ್ನು ಹಾರಿಸುವ ತರಬೇತಿ ಪಡೆಯಲು ಆರಂಭಿಸುವ ಹಂತದಲ್ಲಿದ್ದರು. ಎಲ್ಲ ಸಚಿವರು ಮತ್ತು ಬಹುತೇಕ ಎಲ್ಲ ಹಿರಿಯ ಸರ್ಕಾರಿ ಅಧಿಕಾರಿಗಳು ಕಂಪ್ಯೂಟರ್ ನಿರಕ್ಷರಿಗಳಾಗಿರುವ ಹೊತ್ತಿಗೆ, ರಾಜೀವ್ ಗಾಂಧಿ ಬಹಳ ಆರಾಮವಾಗಿ ಕಂಪ್ಯೂಟರ್ ಬಳಸಬಲ್ಲವರಾಗಿದ್ದರು. ಆಗ ರೈಲ್ವೇ ಸಚಿವರಾಗಿದ್ದ ಮಾಧವ ರಾವ್ ಸಿಂಧಿಯಾ ಅವರು ರೈಲ್ವೇಯಲ್ಲಿ ಹೆಚ್ಚುತ್ತಿರುವ ವೆಚ್ಚಗಳನ್ನು ಸರಿದೂಗಿಸಲು, ಸರಕು ಮತ್ತು ಪ್ರಯಾಣಿಕ ರೈಲುಗಳ ದರ ಹೆಚ್ಚಳದ ಪ್ರಸ್ತಾವವನ್ನು PMOಗೆ ತಂದಾಗ, ಈ ಕಂಪ್ಯೂಟರ್ ನಿರಕ್ಷರತೆಯ ವ್ಯತ್ಯಾಸ ಬಹಳ ಢಾಳಾಗಿ ತೋರಿತು. ಪ್ರಧಾನಮಂತ್ರಿಗಳು ಬೇರೆ ಪರ್ಯಾಯ ಸಾಧ್ಯತೆಗಳನ್ನು ಪರಿಶೀಲಿಸಬಯಸಿದ್ದರು. ಅವರು ಈ ಮಾತುಕತೆಯ ವೇಳೆ ಪ್ರತೀ ಬಾರಿ ಸಲಹೆಯೊಂದನ್ನು ಮುಂದಿಟ್ಟಾಗಲೂ, ರೈಲ್ವೇ ಅಧಿಕಾರಿಗಳು ತಮ್ಮ ಎಲೆಕ್ಟ್ರಾನಿಕ್ ಕ್ಯಾಲ್ಕುಲೇಟರ್‌ಗಳನ್ನು ಹೊರತೆಗೆದು, ಒಟ್ಟು ಆದಾಯದ ಮೇಲೆ ಆ ಸಲಹೆ ಬೀರುವ ಪರಿಣಾಮಗಳನ್ನು ಲೆಕ್ಕ ಹಾಕಲು ಪ್ರಯತ್ನಿಸುತ್ತಿದ್ದರು. ಆಗ ರಾಜೀವ್ ಅವರು, 'ಮಾಧವ್, ಇದನ್ನು ಹೀಗಲ್ಲ ಮಾಡುವುದು. ಇದನ್ನೆಲ್ಲ ಒಂದು ಸ್ಪ್ರೆಡ್‌ಶೀಟಿನಲ್ಲಿ ಹಾಕಿ ತಂದರೆ, ನಾಳೆ ಮತ್ತೊಮ್ಮೆ ನಾವು ಭೇಟಿ ಆಗಿ, ಸ್ವಲ್ಪ ಸೂಕ್ಷ್ಮವಾಗಿ ನಿರ್ಧಾರ ತೆಗೆದುಕೊಳ್ಳಬಹುದು' ಎಂದರು.

ಮರುದಿನ ಸಿಂಧಿಯಾ ಮತ್ತವರ ತಂಡ PMOಗೆ ಬಂತು. ಅವರಲ್ಲಿ ಒಬ್ಬರು ಅಧಿಕಾರಿ ಪ್ರಧಾನಿಯವರ ಮೇಜಿನ ಮೇಲೆ ಬಹಳ ಅಗಲವಾದ ಕಾಗದವೊಂದನ್ನು ಹರಡಿ ಇರಿಸಿದರು. ಆ ಕಾಗದದಲ್ಲಿ ಪರ್ಯಾಯ ದರಗಳ ವಿವಿಧ ಸಂಯೋಜನೆಗಳನ್ನು ಬರೆಯಲಾಗಿತ್ತು. ಜಗತ್ತಿಗೆ ಎರಡನೇ ಅತಿದೊಡ್ಡ ರೈಲ್ವೇ ವ್ಯವಸ್ಥೆಯನ್ನು ನಿಭಾಯಿಸುತ್ತಿದ್ದ ರೈಲ್ವೇಯ ಉನ್ನತ ಅಧಿಕಾರಿಗಳಿಗೆ, ಸ್ಪ್ರೆಡ್ ಶೀಟ್ ಎಂದರೆ ಏನೆಂದು ಗೊತ್ತಿಲ್ಲದ್ದು, ಪ್ರಧಾನಮಂತ್ರಿಗಳಿಗೆ ನಿಜಕ್ಕೂ ಅಚ್ಚರಿ ತರಿಸಿತ್ತು. ಆ ಹೊತ್ತಿಗಾಗಲೇ ಕಂಪ್ಯೂಟರ್ ಜಗತ್ತಿನಲ್ಲಿ ಲೋಟಸ್ 1-2-3 ವಾಣಿಜ್ಯ ಆವೃತ್ತಿ ಬಿಡುಗಡೆಗೊಂಡು ಮೂರು ವರ್ಷಗಳು ಕಳೆದಿದ್ದವು. ಇಲಾಖೆಗಳಲ್ಲಿ ಕಂಪ್ಯೂಟರಿನಲ್ಲಿ ನುರಿತ ಕಿರಿಯ ಅಧಿಕಾರಿಗಳಿದ್ದರು. ಆದರೆ ಅವರಿಗೆ ಪ್ರಧಾನಮಂತ್ರಿಗಳ ಜೊತೆ ಭೇಟಿಗೆ ಅವಕಾಶ ಇರಲಿಲ್ಲ!

ಆ ಬಳಿಕ ಪ್ರಧಾನಮಂತ್ರಿಗಳು ತಮ್ಮ PMOನ ಕಂಪ್ಯೂಟರ್ ಸೆಲ್‌ನಿಂದ ಸಿಬ್ಬಂದಿಯನ್ನು ಕಳುಹಿಸಿಕೊಟ್ಟು, ರೈಲ್ವೇ ಸಚಿವರು ಮತ್ತು ಅವರ ಹಿರಿಯ ಸಿಬ್ಬಂದಿಗೆ ಸ್ಪ್ರೆಡ್‌ಶೀಟ್ ವಿಶ್ಲೇಷಣೆಯ ಬಗ್ಗೆ ಕಲಿತುಕೊಳ್ಳಲು ಮತ್ತು ಅದಕ್ಕೆ ಅಗತ್ಯ ಇರುವ ಸಾಫ್ಟ್‌ವೇರ್ ಪ್ಯಾಕೇಜನ್ನು ಸ್ಥಾಪಿಸಲು ಸಹಾಯಹಸ್ತ ನೀಡಿದರು. ಇದಾಗಿ 24 ತಾಸುಗಳ ಬಳಿಕ, ಪ್ರಧಾನಮಂತ್ರಿಗಳು ಮತ್ತು ರೈಲ್ವೇ ಸಚಿವರು ಬಹಳ ಆರಾಮವಾಗಿ, ಪ್ರಯಾಣಿಕರ ಮತ್ತು ಸರಕಿನ ವಿವಿಧ ಪರ್ಯಾಯ ದರ ಸಂಯೋಜನೆಗಳನ್ನು ಮತ್ತು ಹೆಚ್ಚುವರಿ ಆದಾಯದ ಮೇಲೆ ಅವುಗಳ ಪ್ರಭಾವವನ್ನು ಸುಲಭವಾಗಿ ಪರಿಶೀಲಿಸುವುದು ಸಾಧ್ಯವಾಯಿತು. ಅವರಿಗೆ ಇಬ್ಬರಿಗೂ ಸರಿ ಅನ್ನಿಸಿದ ಪರ್ಯಾಯವು ಸ್ವೀಕಾರಾರ್ಹ ಪರಿಹಾರ ಎಂದು ಇಬ್ಬರಿಗೂ ಅನ್ನಿಸಿತು. ಹೀಗೆ, ಹೊಸ ತಂತ್ರಜ್ಞಾನವು ಅಂತಿಮ ನಿರ್ಧಾರ ಕೈಗೊಳ್ಳುವವರಿಗೆ ಅಗತ್ಯ ಸಾಮರ್ಥ್ಯವನ್ನು ಒದಗಿಸಿತ್ತು, ಆದರೆ ಅಧಿಕಾರಶಾಹಿ ಈ ವ್ಯವಸ್ಥೆಯನ್ನು ನಕಾರಾತ್ಮಕವಾಗಿ ನೋಡಿತ್ತು!

ರಾಜೀವ್ ಗಾಂಧಿ ಹಲವು ಬಾರಿ ಅಧಿಕಾರದ ಶ್ರೇಣಿ ವ್ಯವಸ್ಥೆಯನ್ನು ಮುರಿಯುವ ಬಯಕೆಯನ್ನು ಆಗಾಗ ತೋರ್ಪಡಿಸುತ್ತಿದ್ದರು. ಸಾಂಪ್ರದಾಯಿಕವಾಗಿ ಹಣಕಾಸು ಸಚಿವರು ಬಜೆಟ್ ದಿನ ಬೆಳಿಗ್ಗೆ, ರಾಷ್ಟ್ರಪತಿಗಳನ್ನು ಭೇಟಿ ಮಾಡಿ, ಅವರಿಗೆ ಬಜೆಟ್ ವಿವರಗಳನ್ನು ನೀಡುವ ಕ್ರಮ ಇತ್ತು. 1987-88ನೇ ಸಾಲಿಗೆ ಹಣಕಾಸು ಸಚಿವರಾಗಿ ಬಜೆಟ್ ಮಂಡನೆ ಮಾಡಬೇಕಿದ್ದ ರಾಜೀವ್ ಗಾಂಧಿ ಅವರಿಗೆ, ನಾನು ರಾಷ್ಟ್ರಪತಿಗಳು ಎತ್ತಬಹುದಾದ ಪ್ರಶ್ನೆಗಳ ಬಗ್ಗೆ ವಿವರಣೆಗಳನ್ನು ಒದಗಿಸಿದ್ದೆ. ಅವರು ನೇರವಾಗಿ ನನ್ನನ್ನೇ ರಾಷ್ಟ್ರಪತಿಗಳ ಭೇಟಿಗೆ ಜೊತೆಯಲ್ಲಿ ಬರುವಂತೆ ಆಹ್ವಾನಿಸಿದ್ದರು. ನಾನು ಅವರ ವಾಹನಗಳ ಸರತಿ ಸಾಲಿನಲ್ಲಿದ್ದ ಒಂದು ಕಾರಿನ ಕಡೆ ಹೋಗುತ್ತಿದ್ದಾಗ, ಅವರು ತಾವು ಸಾಗುತ್ತಿದ್ದ SUVಗೆ ನನ್ನನ್ನು ಕರೆದು ಕುಳ್ಳಿರಿಸಿಕೊಂಡು, ತಾವೇ SUV ಚಲಾಯಿಸಿಕೊಂಡು, ರಾಷ್ಟ್ರಪತಿ ಭವನಕ್ಕೆ ನನ್ನನ್ನು ಕರೆದೊಯ್ದರು.

ರಾಜೀವ್ ಗಾಂಧಿ ಅನೌಪಚಾರಿಕ ವ್ಯಕ್ತಿತ್ವ ಹೊಂದಿದ್ದದ್ದು ಮಾತ್ರವಲ್ಲ, ವಿಭಿನ್ನ ದೃಷ್ಟಿಕೋನಗಳನ್ನು ಕೇಳಿಸಿಕೊಳ್ಳುವ ಪ್ರಾಮಾಣಿಕ ಆಸಕ್ತಿಯನ್ನೂ ಹೊಂದಿದ್ದರು. ಅವರು ನೀಡಬೇಕಿದ್ದ ಭಾಷಣವೊಂದನ್ನು ನಾವು ಪರಿಶೀಲಿಸುತ್ತಿದ್ದಾಗ ನಡೆದ ಒಂದು ಘಟನೆ ನೆನಪಾಗುತ್ತಿದೆ. ಆ ಭಾಷಣದಲ್ಲಿ ನಮ್ಮ ಮೌಲ್ಯ ವ್ಯವಸ್ಥೆಯಲ್ಲಿ ಅಹಿಂಸೆ ಆಳವಾಗಿ ಬೇರೂರಿದೆ ಎಂಬ ಮಾತು ಇತ್ತು. ನಾನು ಆ ಬಗ್ಗೆ ಏನೂ ಪ್ರತಿಕ್ರಿಯೆ ನೀಡಿರದಿದ್ದರೂ, ಅವರು ನನ್ನ ಇರುಸುಮುರುಸನ್ನು ಗಮನಿಸಿ, ನನ್ನದೇನಾದರೂ ಸಲಹೆ ಇದೆಯೇ ಎಂದು ಕೇಳಿದರು. ನಾನು ಆ ವಾಕ್ಯ ತೀರಾ ಉತ್ಪ್ರೇಕ್ಷೆಯಾಗಿದ್ದು, ಬೇರೆಲ್ಲ ದೇಶಗಳಂತೆ ನಮ್ಮ ಚರಿತ್ರೆಯಲ್ಲೂ ಹಿಂಸೆ ವ್ಯಾಪಕವಾಗಿ ಇತ್ತು ಎಂದು ಹೇಳಿದೆ. ಸ್ವಲ್ಪ ಹೊತ್ತು ಯೋಚಿಸಿದ ಅವರು 'ಹೌದು ಆಚರಣೆಯಲ್ಲಿ ನೀವು ಹೇಳಿದ್ದು ಸತ್ಯ ಇರಬಹುದು, ಆದರೆ ಅಹಿಂಸೆ ಒಂದು ತತ್ವವಾಗಿ ನಮ್ಮ ಸಂಸ್ಕೃತಿಯೊಳಗೆ ಆಳವಾಗಿ ಬೇರೂರಿದೆ. ನಾವು ಯಾವಾಗಲೂ ಅನುಸರಿಸದೇ ಇದ್ದರೂ, ಈ ತತ್ವಗಳು ಮುಖ್ಯವಾಗುತ್ತವೆ' ಎಂದಿದ್ದರು. ಅದು ಒಳ್ಳೆಯ ದೃಷ್ಟಿಕೋನವಾಗಿತ್ತು.

ಭಾವ-ಅನುಭಾವ-ಅಭಾವದ ಕವಿತೆಗಳು

ದೇವು ಪತ್ತಾರ

ಪದಗಳೊಡನೆ ಆಟ, ಭಾವಗಳ ಜಿಗಿದಾಟ, ಸೃಜನಶೀಲ ಹುಡುಕಾಟಗಳ ಜೊತೆ ಅಸಹಾಯಕತೆಯ ಹಳವಂಡವೂ ಸೇರಿದ ಕವಿತೆಗಳು ಚಿದಾನಂದ ಸಾಲಿ ಅವರ 'ಕನ್ನಡಿಯಲ್ಲಿ ಮನುಷ್ಯ ಮಾತ್ರ' ಸಂಕಲನದಲ್ಲಿವೆ. ಪ್ರತಿಷ್ಠಿತ ಮುದ್ದಣ ಕಾವ್ಯ ಪ್ರಶಸ್ತಿ (2022)ಗೆ ಭಾಜನವಾಗಿರುವ ಈ ಸಂಕಲನದಲ್ಲಿ ಏನಿದೆ? ಎಂದು ಹೇಳುವುದಕ್ಕಿಂತ ಏನೇನಿಲ್ಲ ಎಂದು ತಡಕಾಡುವುದೇ ಸುಲಭ. ನವ್ಯೋತ್ತರ ಕವಿತೆಯ ಝಲಕುಗಳು, ನವೋದಯದ ಪಲುಕುಗಳು, ಗಜಲ್‌ಗಳ ಬೆಳಕು, ಭಾವಗೀತೆಗಳ ಸೆಳಕುಗಳ ಜೊತೆಯಲ್ಲಿಯೇ ತತ್ವಪದಗಳು ಕೂಡ ಸೇರಿಕೊಂಡಿವೆ. 38 ವಿಭಿನ್ನ ಕವಿತೆಗಳ ಈ ಸಂಕಲನದಲ್ಲಿ ಪ್ರತಿಯೊಂದು ಕವಿತೆಯು ತಾನು ಮತ್ತೊಂದಕ್ಕಿಂತ ಭಿನ್ನವಾಗಲು ಹಟ ಹಿಡಿದು ಪ್ರಯತ್ನಿಸಿದೆ. ಈ ಪ್ರಯತ್ನವು ಚೆಲ್ಲುವರಿದ ಚಿತ್ರಗಳನ್ನು ನೀಡಿದೆ. ಒಡೆದ ಕನ್ನಡಿ ಬಿಂಬಗಳನ್ನು ಒದಗಿಸಿದೆ.

'ಕತೆಗಾರ' ಚಿದಾನಂದ ಸಾಲಿಯು ತಾನು ಕೇವಲ ಕತೆಗಾರ ಮಾತ್ರ ಅಲ್ಲ ಎಂಬುದನ್ನು ಸಾಬೀತು ಪಡಿಸುವ ಹಟದ ಹುಡುಕಾಟ-ಹುಡುಗಾಟಗಳಿರುತ್ತವೆ. ಪತ್ರಕರ್ತ ಸಾಲಿಯ ಪಕ್ಕದಲ್ಲಿಯೇ ಮೇಷ್ಟ್ರು ಸಾಲಿ. ಸತತ ಪರೀಕ್ಷೆಗಳನ್ನು ಬರೆಯುವ ಸದಾ ಜೀವಂತ ವಿದ್ಯಾರ್ಥಿ ಸಾಲಿಗೆ ಹೊಂದಿಕೊಂಡಂತೆ ಗಜಲ್ ರಚನಕಾರ ಕೂಡ ಇರುತ್ತಾನೆ. ಸ್ಪಷ್ಟ ಚಿತ್ರಣ ನೀಡುವ ಸಂದರ್ಶಕನ ಜೊತೆಗೆ ಅದೃಶ್ಯ, ಅಸ್ಪಷ್ಟಲೋಕದ ಅನಾವರಣ ಮಾಡುವ ಹುಕಿಯೂ ಸೇರಿರುತ್ತದೆ. ಇಷ್ಟು ಮಾತ್ರವಲ್ಲ, ಹುಚ್ಚು ಮನಸ್ಸಿಗೆ ಕೇವಲ ಹತ್ತೇ ಮುಖವೇಕೆ? ಹಲವು ಇರಬಹುದು. ಇವೆ. ಅವುಗಳ ಚಿತ್ರ-ಚಿತ್ರಣ ಕನ್ನಡಿಯಲ್ಲಿ ಕಾಣಿಸುತ್ತದೆ. ಆದರೆ, ಕನ್ನಡಿಯಲ್ಲಿ ಕಂಡದ್ದು ಮನುಷ್ಯ ಮಾತ್ರ ಎಂದು ಫರ್ಮಾನು ಹೊರಡಿಸುತ್ತದೆ. ಅದೇ ಹೊತ್ತಿಗೆ ಗಲಿಬಿಲಿಗೊಂಡು

'ಕಿಟಕಿಯಲ್ಲಿ ಇಣುಕಿದರೆ
ಹೆಗಲ ಮೇಲೊಬ್ಬ
ಹೆಣ ಹೊತ್ತು ನಡೆದಿದ್ದ
ಅದು ಯಾರದೆಂದು
ನಿಮಗೆ ಗೊತ್ತೆಂದು
ನನಗೆ ಗೊತ್ತು
ಹೇಳಬಾರದು ಅಷ್ಟೆ'

ಎಂದರೂ ಹೇಳದೇ ಇರಲಾರ. ಈ ಸಂಕಲನದ ಬಹುತೇಕ ಕವಿತೆಗಳು ಕವಿಯ ಹುಡುಕಾಟ ಆಗಿರುವ ಜೊತೆಗೆ ಓದುಗನನ್ನು ಕೂಡ ಹುಡುಕಾಡಲು ಹಚ್ಚುತ್ತವೆ. ಹುಡುಕಾಡದವನಿಗೆ ಸಿಗುವುದೇ ಇಲ್ಲ. ಹಾಗೆಯೇ ಹುಡುಕಿದವನಿಗೆ ಕೂಡ. 'ಹಾಗೋ ಹೀಗೋ ಅಂತೂ/ ಗೋಳ ಹೋಳು'. ತಾನು ಕೆಲಸ ಮಾಡುವ ಶಾಲೆಯಲ್ಲಿ ಗಣಿತ ಕಲಿಸುವ ಮೇಷ್ಟ್ರು ಸಾಲಿಗೆ ಕವಿತೆಯೂ ಒಂದು ಪ್ರಮೇಯ ಹಾಗೂ ಲೆಕ್ಕಾಚಾರ. ಅದು ಕೇವಲ ಅಂಕಗಣಿತ, ರೇಖಾಗಣಿತಕ್ಕೆ ಸೀಮಿತವಾಗಿಲ್ಲ. ಅಲ್ಲಿ 'ಬೀಜಗಣಿತ'ವೂ ಸೇರಿದೆ. ದೀರ್ಘ ಕವಿತೆಗಳ ಜೊತೆಯಲ್ಲಿಯೇ ಸುದೀರ್ಘ ಕವಿತೆಗಳೂ ಸೇರಿವೆ. ಹನಿಗಳು, ಚುಟುಕುಗಳು ತಪ್ಪಿಸಿಕೊಂಡಿವೆ. ಕತೆಯಾಗಲು ಹೊರಟು ಕವಿತೆಯಾದವುಗಳಿವೆ. ಕವಿತೆಯಾಗಲು ಪಟ್ಟುಬಿಡದೇ ಹೆಣಗುತ್ತಿರುವ ಗದ್ಯದ ಸಾಲುಗಳೂ ಇಲ್ಲವೆಂದೇನಿಲ್ಲ. ರೂಪಕದ ಭಾಷೆ ಕವಿಗೆ ಸಿದ್ಧಿಸಿದೆ. ಕವಿತೆಗಳಲ್ಲಿನ 'ರೂಪಕ'ಗಳು ಬದುಕಿನ ಕನ್ನಡಿಯಿಂದ ಎರವಲು ಪಡೆದವುಗಳು. ಪ್ರತೀಕ-ಪ್ರತಿಮೆಗಳೂ ವಿಪುಲ.


ಅನ್ನದ ಬಟ್ಟಲು ಕಿತ್ತುಕೊಂಡರೇನಂತೆ
ಅಚ್ಛೇ ದಿನ್ ಹತ್ತಿರವಾಗಿವೆ
ಎನ್ನುವ ರಾಜಕೀಯ ಪ್ರಜ್ಞೆ ಇರುವ ಕವಿ

'ಕೂರೋ ಜಾಗ ಕಸಗೊಂಡರೇನಂತೆ
ದೇಶದ ಕಸ ಗುಡಿಸಲಾಗುತ್ತಿದೆ
ಎಂದು ಪರಾಕು ಪಲುಕುತಿರುವರು
ಉದ್ಯಮಿಗಳೂ
ಮಧ್ಯಮಿಗಳೂ'

ಎಂದು ಛೇಡಿಸಬಲ್ಲ. ಹಾಗೆಯೇ ಝಾಡಿಸಬಲ್ಲ. ಸೂಚ್ಯ ಹಾಗೂ ವಾಚ್ಯಗಳೆರಡನ್ನೂ ಸರಿದೂಗಿಸಬಲ್ಲ.

'ಯಾವ ಮರವೂ
ಹುಸಿಯಲ್ಲ ಗೌಡ
ನೇಣಿಗೊಂದು ಕೊಂಬೆ
ಸಿದಿಗೆಗಷ್ಟು ಸೌದೆಯಿರುವಾಗ'

ಎಂದು ಮುಕ್ತಾಯವಾಗುವ ಕವಿತೆಯು



ಪು: 80 ₹80

ಕನ್ನಡಿಯಲ್ಲಿ ಮನುಷ್ಯ ಮಾತ್ರ
ಲೇ: ಚಿದಾನಂದ ಸಾಲಿ
ಪ್ರ: ಋತು ಪ್ರಕಾಶನ, ರಾಯಚೂರು
ಸಂ: 8310718310

'ಸಾಂಗತ್ಯದಗತ್ಯ
ಪ್ರೀತಿಯ ಮಹತ್ವ
ತಿಳಿಹೇಳಿ ನನಗೊಂದು
ಗಿಡಕೊಟ್ಟರು' ಎಂದು
ಆರಂಭವಾಗಿರುತ್ತದೆ.

ಕವಿ ಸಾಲಿಯ 'ಮೌನ' ಎಂಬ ಗಜಲ್‌ಗಳ ಸಂಕಲನ ಐದು ಮುದ್ರಣಗಳನ್ನು ಕಂಡಿದೆ. ಗಜಲ್‌ನ ಛಂದಸ್ಸು ಹಾಗೂ ರಚನೆಯ ಸೂಕ್ಷ್ಮಗಳನ್ನು ಅರಿತ ಕವಿ ಎಂಬುದು ಸಾಬೀತಾಗಿರುವ ಸಂಗತಿ. ಕೇಂದ್ರ ಸಾಹಿತ್ಯ ಅಕಾಡೆಮಿಯ ಮೂಲಕ ಕನ್ನಡದ ಗಜಲ್‌ಗಳ ಪ್ರಾತಿನಿಧಿಕ ಸಂಕಲನ ಪ್ರಕಟಿಸಿರುವ ಸಾಲಿಯು ಗಜಲ್‌ಗಳ ಬಗ್ಗೆ ಅಭ್ಯಾಸಪೂರ್ಣ ಪ್ರಸ್ತಾವನೆಯನ್ನೂ ಬರೆದಿದ್ದಾನೆ. ಸಾಲಿಯ ಚೆಂದದ ಮತ್ತು ಚೆಂದಗಾಣಿಸಿದ ಕವಿತೆಗಳನ್ನು ಓದಿದ ನಂತರ ಈ ಸಂಕಲನದ ಗಜಲ್‌ಗಳನ್ನು ಓದುವುದು ಕಿರಿಕಿರಿ ಎನ್ನಿಸುವ ಸಂಗತಿ. ಅದಕ್ಕಿಂತ ಹೆಚ್ಚು ಬೇಜಾರಾಗುವುದು ಗಜಲ್ ನಂತರದ ಸ್ಥಾನ ಪಡೆದಿರುವ ತತ್ವಪದಗಳೆಂದು ಕರೆದಿರುವ ಹಾಡುಗಳು. ಅವುಗಳಲ್ಲಿ ಸಾರ ಅಥವಾ ಸತ್ವ ಇಲ್ಲವೆಂದೇನಲ್ಲ. ಆದರೆ, ಅವುಗಳನ್ನು ಸಂಕಲನದಲ್ಲಿ ಜೋಡಿಸಿಟ್ಟಿರುವ ಕ್ರಮ ಓದುಗನಿಗೆ ಸವಾಲು ಒಡ್ಡುವಂತಿದೆ. ಬೇಸರ ಮೂಡಿಸುವ ಹಾಗಿದೆ.

'ರೆ' (2011) ಎಂಬ ಮೊದಲ ಮುಕ್ತಛಂದಸ್ಸಿನ ಕವಿತೆಗಳ ಸಂಕಲನ ಪ್ರಕಟಿಸಿದ್ದ ಸಾಲಿಯ ಎರಡನೇ ಸಂಕಲನವಿದು. ಇದನ್ನು ಗಜಲೇತರ ಸಂಕಲನ ಎಂದು ಕರೆಯಲಾಗುವುದಿಲ್ಲ. ಮುನ್ನುಡಿ-ಬೆನ್ನುಡಿಗಳ ಭಾರದ ಜೊತೆಗೆ 'ಬಹುಮಾನಿತ' ಕವಿತೆಗಳು ಕೂಡ ಭಾರ ಹೆಚ್ಚಿಸಿವೆ. ಓದುಗರ ಮೇಲೆ 'ಭಾರ' ಹಾಕುವ ಕವಿತೆಗಳು ಹುಟ್ಟಿಸುವ ನಿರೀಕ್ಷೆ ಒಟ್ಟು ಸಂಕಲನ ಓದಿ ಮುಗಿಸಿದಾಗ ಜೊತೆಗಿರುವುದಿಲ್ಲ ಎಂಬುದು ವಿಷಾದದ ಹಾಗೆಯೇ ಅಸಹಜವೆನ್ನಿಸುವ ಸಂಗತಿ.



ಕಲ್ಲು ಬಂಡೆಯ ಮೇಲೆ ಮಣ್ಣು ಹಾಕಿ ಶೇಖಮ್ಮ ವಾಣಿ ಹಾಗೂ ಹುಚ್ಚಪ್ಪ ದಂಪತಿ ಕೃಷಿ

ಹಸಿರು ಹೊದಿಸಿದ ಶೇಖಮ್ಮ

10ನೇ ಪುಟದಿಂದ...

ತೋಟಗಾರಿಕಾ ಕೃಷಿಯತ್ತಲೂ ಆಸಕ್ತಿ ತೋರಿಸಿದರು. ಪೇರಲ, ಲಿಂಬೆ, ಮಾವು ಸಮೃದ್ಧ ಫಸಲು ತಂದುಕೊಟ್ಟವು. ಹೊಲದಲ್ಲಿ ತಗ್ಗು ಪ್ರದೇಶ ಇರುವಲ್ಲಿ ಭತ್ತ, ಹುರುಳಿ, ನವಣೆ, ಸಜ್ಜೆ, ಅಲಸಂದಿ, ತೊಗರಿ, ಗುರೆಳ್ಳು ಬೆಳೆಯುತ್ತಾರೆ. ಹೊಲದ ಕೆಲಭಾಗಗಳಲ್ಲಿ ಇನ್ನೂ ಮಣ್ಣು ಹಾಕಿಲ್ಲ. ಅಂಥ ಬಂಡೆಗಳ ಮೇಲೂ ಪಡವಲಬಳ್ಳಿ, ಕುಂಬಳಕಾಯಿ ಬಳ್ಳಿಗಳನ್ನು ಹಬ್ಬಿಸಿದ್ದಾರೆ. ಮಳೆ ನೀರು ಸರಾಗವಾಗಿ ಹರಿದು ಒಂದೆಡೆ ಸೇರಲು ಹೊಂಡ ನಿರ್ಮಿಸಿದ್ದಾರೆ. ಜೋಳದ ದಂಟು, ಸೆಣಬು ತ್ಯಾಜ್ಯದಿಂದ ಕಲ್ಲುಸಂದಿಯಲ್ಲಿ ಎರೆಗೊಬ್ಬರ ತಯಾರಿಸುತ್ತಿದ್ದಾರೆ. ಕಲ್ಲು ಬಂಡೆಯ ಮೇಲೆ ಸಣ್ಣ ಪುಟ್ಟಿಯಲ್ಲಿ ಮಣ್ಣು ತುಂಬಿ ಅದಕ್ಕೆ ತರಕಾರಿಗಳ ಬೀಜಗಳನ್ನು ಹಾಕಿ ಅದನ್ನು ಬಂಡೆಯ ಮೇಲಿಟ್ಟು ಕೆಲ ದಿನ ನೀರು ಹಾಕುತ್ತಾರೆ. ಬಳ್ಳಿ ಚಿಗಿತ ಬಳಿಕ ಪುಟ್ಟಿ ತೆಗೆದರೆ ಬಳ್ಳಿ ಬೆಳೆಯುತ್ತದೆ. ಸದಾ ನಿರಾಸೆ, ಹತಾಶೆ ಹಾಗೂ ಬೇಸರದ ಭಾವನೆಯಿಂದ ರೈತನ ಕಷ್ಟದ ಬದುಕು ಯಾರಿಗೂ ಬೇಡ ಎಂದು ಬೇಸರ ಪಟ್ಟುಕೊಳ್ಳುವವರೇ ಹೆಚ್ಚು. ಆದರೆ ಶೇಖಮ್ಮ ಹಾಗೂ ಹುಚ್ಚಪ್ಪ ದಂಪತಿ ತಮ್ಮ ಹೊಲದ ಕಲ್ಲುಗಳನ್ನೇ ಕರಗಿಸಿ ಹಸಿರ ಸಿರಿಯ ಸೊಬಗು ಅರಳುವಂತೆ ಮಾಡಿದ್ದಾರೆ. ಅವರ ಶ್ರಮ ಹಾಗೂ ಅನನ್ಯ ಕೃಷಿ ಪ್ರೀತಿಯ ಬದುಕು ರೈತರ ನೂರಾರು ಸಮಸ್ಯೆಗಳನ್ನು ದೂರ ಮಾಡಿ ಪ್ರೇರಕ ಶಕ್ತಿ ಚಿಮ್ಮಿಸುವಂತಿದೆ.

ಹೊಲವೇ ನಮ್ಮ ಭಾಗ್ಯ

'ನಮ್ಮ ಹೊಲದಲ್ಲಿ ಬಂಡೆಗಳೇ ಹೆಚ್ಚಿವೆ ಎನ್ನುವ ಸತ್ಯವನ್ನು ಮೊದಲು ಒಪ್ಪಿಕೊಂಡು ಅದನ್ನು ಬದಲಿಸಲು ನಿರ್ಧರಿಸಿದ್ದೆ. ಬಂಡೆಗಳೇ ತುಂಬಿರುವ ಹೊಲದಲ್ಲಿ ಏನುತಾನೆ ಮಾಡಲು ಸಾಧ್ಯ ಎಂದು ಅನೇಕರು ಪ್ರಶ್ನಿಸಿದ್ದರು. ಇಲ್ಲದ ಸಾಹಸ ಮಾಡಬೇಡ ಎಂದು ಛೇಡಿಸಿದ್ದರು. ಪತಿಯ ನೆರವಿನೊಂದಿಗೆ ಬಂಡೆಗಳ ಮೇಲೆ ಮಣ್ಣು ಹಾಕಿ ಎರಡೂವರೆ ದಶಕಗಳಿಂದ ಕೃಷಿ ಮಾಡುತ್ತಿದ್ದೇವೆ. ಈಗ ನಮ್ಮ ಹೊಲವನ್ನು ನೋಡಲು ಹೊರರಾಜ್ಯಗಳಿಂದ ಜನ ಬರುತ್ತಿದ್ದಾರೆ. ಹೊಲವೇ ನಮ್ಮ ಭಾಗ್ಯ' ಎನ್ನುತ್ತಾರೆ ಶೇಖಮ್ಮ ವಾಣಿ.

ಕಾಲ್ಪನಿಕ ಕಥೆಗಳ ಗುಚ್ಛ 'ಗ್ರಿಮ್ಸ್ ಫೇರಿ ಟೇಲ್ಸ್'


ರೂಪಾ ಕೆ.ಎಂ.

ಇಂದಿನ ಮಕ್ಕಳಿಗೆ ಕಥೆ ಹೇಳುವುದು ಸುಲಭವಲ್ಲ. ಅವರ ಕುತೂಹಲ ತಣಿಸುವ, ಅವರಲ್ಲೇಳುವ ಪ್ರಶ್ನೆಗಳಿಗೆ ಸಾವಧಾನದ ಉತ್ತರ ನೀಡಲು ತುಸು ತಾಳ್ಮೆ, ಬಲು ಜಾಣ್ಮೆ ಎರಡೂ ಬೇಕಾಗುತ್ತವೆ. ಕಲ್ಪನಾಲೋಕವೊಂದನ್ನು ವಿಸ್ತರಿಸುವ ಕಥೆಗಳನ್ನು ಮಕ್ಕಳು ಎಲ್ಲ ಕಾಲಕ್ಕೂ ಕೇಳುತ್ತಾರೆ. ಫೋನ್, ಟ್ಯಾಬ್ ಹಿಡಿದ ಮಕ್ಕಳ ಮನೋಲೋಕವನ್ನು ಇಂಥ ಕಾಲ್ಪನಿಕ ಕಥೆಗಳು ಮತ್ತಷ್ಟು ಹಿಗ್ಗಿಸುತ್ತವೆ.

'ಗ್ರಿಮ್ಸ್ ಫೇರಿ ಟೇಲ್ಸ್'ನ ಸರಣಿ ಕಥಾ ಸಂಕಲನಗಳು ಹೊಸ ಬಗೆಯ ಕಲ್ಪನಾಲೋಕಕ್ಕೆ ಕರೆದುಕೊಂಡು ಹೋಗುತ್ತವೆ. ಇವನ್ನು ಎಂ.ರಾಮರಾವ್ ಕನ್ನಡಕ್ಕೆ ಬಹಳ ಸರಳವಾಗಿ, ಸಮರ್ಥವಾಗಿ ಅನುವಾದಿಸಿಕೊಟ್ಟಿದ್ದಾರೆ.

ಈ ಎಲ್ಲ ಸಂಕಲನಗಳಲ್ಲಿ ಇರುವ ಕಥೆಗಳ ವಿಶಿಷ್ಟತೆ-ಸಾಮಾನ್ಯರಲ್ಲಿ ಸಾಮಾನ್ಯರೇ ಕಥಾನಾಯಕರಾಗಿರುವುದು. ಆ ಮೂಲಕ ಅವರೇ ಬದುಕಿನ ನಾಯಕರು ಎಂಬುದನ್ನು ಮಕ್ಕಳ ಪುಟ್ಟ ಮನಸ್ಸಿಗೆ ಮನದಟ್ಟು ಮಾಡಿಸುವಂತಿದೆ. ಇದಕ್ಕೆ ಒಂದು ನಿದರ್ಶನ 'ಕುರುಬರ ಹುಡುಗ' ಕಥಾಸಂಕಲನದಲ್ಲಿರುವ 'ಕುರುಬರ ಹುಡುಗ' ಕಥೆಯಲ್ಲಿ ಬಹಳ ಬುದ್ಧಿವಂತ ಕುರುಬರ ಹುಡುಗನೊಬ್ಬ ಇರುತ್ತಾನೆ. ಆತ ಎಂಥ ಪ್ರಶ್ನೆಗಳಿಗೂ ಬುದ್ಧಿವಂತಿಕೆಯಿಂದ ಉತ್ತರಿಸುವ ಖ್ಯಾತಿ ಪಡೆದಿರುತ್ತಾನೆ. ಕೊನೆಗೆ ಆಸ್ಥಾನದ ಚಕ್ರವರ್ತಿಯೇ ಅವನ ಬುದ್ಧಿವಂತಿಕೆಗೆ ಶರಣಾಗಿ ಅವನನ್ನು ದತ್ತುಪುತ್ರನಾಗಿ ಸ್ವೀಕರಿಸುತ್ತಾನೆ ಎಂಬಲ್ಲಿಗೆ ಕಥೆ ಮುಗಿಯುತ್ತದೆ. ಇನ್ನೊಂದು ಉದಾಹರಣೆಯಾಗಿ, ಬಡರೈತ ಸ್ವರ್ಗಕ್ಕೆ ಹೋಗುವ ಕಥೆಯಿದೆ. ಹೊಲದಲ್ಲಿ ಕಷ್ಟಪಟ್ಟು ದುಡಿಯುವ ರೈತ ಸತ್ತುಹೋಗುತ್ತಾನೆ. ಬಡರೈತನ ಜತೆ ಶ್ರೀಮಂತನೊಬ್ಬನೂ ಸ್ವರ್ಗಕ್ಕೆ ಹೋಗುತ್ತಾನೆ. ಶ್ರೀಮಂತನಿಗೆ ಪ್ರೀತ್ಯಾದರ, ಮರ್ಯಾದೆ ಸಿಗುತ್ತದೆ. ಭೂಮಿಯಲ್ಲಿ ಶ್ರೀಮಂತ, ಬಡವ ಎಂಬ ಭೇದವಿರುವಂತೆ ಸ್ವರ್ಗದಲ್ಲಿಯೂ ಇದೆ ಎಂದು ಬಡರೈತ ಚಕಿತಗೊಳ್ಳುತ್ತಾನೆ. ಆಗ ಆ ಕಾವಲುಗಾರ 'ಈ ಸ್ವರ್ಗವೇ ಬಡವರ ಸ್ವತ್ತು. ಶ್ರೀಮಂತನಾದವರು ಅದರಲ್ಲಿಯೂ ಸ್ವರ್ಗದಲ್ಲಿ ವಾಸಿಸಲು ಅರ್ಹರಾದ ಶ್ರೀಮಂತರು ನೂರು ವರ್ಷಕ್ಕೊಮ್ಮೆ ಇಲ್ಲಿಗೆ ಬರುತ್ತಾರೆ' ಎಂದು ಹೇಳುತ್ತಾನೆ. ಇಡೀ ಸ್ವರ್ಗವೇ ಬಡವನ ಸ್ವತ್ತಾಗುವ ಮೂಲಕ ಒಳ್ಳೆಯತನ, ಪ್ರಾಮಾಣಿಕತನ, ಕಾಯಕನಿಷ್ಠೆ ಎತ್ತಿಹಿಡಿಯುವ ಒಳದನಿಯೊಂದು ಈ ಕಥೆಯಲ್ಲಿ ಅನಾವರಣಗೊಳ್ಳುತ್ತದೆ.

ಈ ಸಂಕಲನಗಳಲ್ಲಿರುವ ಎಲ್ಲ ಕಥೆಗಳು ದೇಶ, ಗಡಿ, ಭಾಷೆ ಎಲ್ಲವನ್ನೂ ಮೀರಿವೆ. ಯಾವ ಪಾತ್ರಕ್ಕೂ ಹೆಸರಿಲ್ಲ. ಪಾತ್ರಗಳ ಮನೋಧರ್ಮದಿಂದಲೇ ಅವನ್ನು ಗುರುತಿಸಲಾಗುತ್ತದೆ. ನಿತ್ಯ ರಾತ್ರಿ ಮಕ್ಕಳು ಕಥೆ ಕೇಳುವ ಅಭ್ಯಾಸ ಇಟ್ಟುಕೊಂಡಿದ್ದರೆ ಐಬಿಎಚ್ ಪ್ರಕಾಶನ ಹೊರತಂದಿರುವ 'ಗ್ರಿಮ್ಸ್ ಫೇರಿ ಟೇಲ್ಸ್‌ನ' ಸರಣಿ ಪುಸ್ತಕಗಳು ಸಹಾಯಕ್ಕೆ ಬರುತ್ತವೆ. ಈ ಸರಣಿಯಲ್ಲಿ ಒಟ್ಟು ಹತ್ತು ಕಥಾ ಸಂಕಲನಗಳಿವೆ.



ಗ್ರಿಮ್ಸ್ ಫೇರಿ ಟೇಲ್ಸ್ ಸರಣಿ
ಮೂಲ ಲೇಖಕರು: ಜೇಕಬ್ ಗ್ರಿಮ್ ಮತ್ತು ವಿಲಿಯಮ್ ಗ್ರಿಮ್
ಅನುವಾದ: ಎಂ. ರಾಮರಾವ್
ಪ್ರ: ಐಬಿಎಚ್ ಪ್ರಕಾಶನ
ಸಂ: 080-26676003

ಮೊದಲ ಓದು

ಬುದ್ಧಜೀವನದ ಪುಣ್ಯಕಥೆಗಳು



ಪು: 500 ₹1000

ಅವದಾನ ಕಲ್ಪಲತೆ
ಮೂಲಸಂಸ್ಕೃತ: ಕ್ಷೇಮೇಂದ್ರ
ತೆಲುಗು ಅನುವಾದ: ತಿರುಮಲ ರಾಮಚಂದ್ರ
ಕನ್ನಡ ಅನುವಾದ: ಆರ್. ಶೇಷಶಾಸ್ತ್ರಿ
ಪ್ರ: ಕಾಮಧೇನು ಪುಸ್ತಕ ಭವನ
ಸಂ: 99450 02444

ಬೌದ್ಧಸಾಹಿತ್ಯದ ಹರಹು ತುಂಬ ದೊಡ್ಡದು. ಇದು ನಮ್ಮ ದೇಶದಲ್ಲಿ ಪಾಲಿಭಾಷೆಯಲ್ಲಿ ವಿಶಾಲವಾಗಿ ಹರಡಿಕೊಂಡಿದೆ. ಜೊತೆಗೆ ಸಂಸ್ಕೃತಭಾಷೆಯಲ್ಲೂ ಯಥೇಷ್ಟವಾಗಿ ಲಭ್ಯ. ಇವುಗಳಲ್ಲಿ ಬೌದ್ಧದರ್ಶನವನ್ನು ಕುರಿತಾದ ಕೃತಿಗಳಿರುವಂತೆ, ಬುದ್ಧನ ಜೀವನಕ್ಕೆ ಸಂಬಂಧಿಸಿದ ಕೃತಿಗಳೂ ಇವೆ. ಈ ಕೃತಿಗಳು ಬೌದ್ಧದರ್ಶನದ ಆಳ-ಅಗಲಗಳನ್ನೂ ಬುದ್ಧನ ಜೀವನ-ದರ್ಶನಗಳ ಹಲವು ಆಯಾಮಗಳನ್ನೂ ತಿಳಿಸುತ್ತವೆ; ಮಾತ್ರವಲ್ಲ, ಇವು ಪ್ರಾಚೀನ ಭಾರತದ ಸಾಂಸ್ಕೃತಿಕ ಕೋಶಗಳಂತೆಯೂ ಒದಗುತ್ತವೆ.

ಕ್ಷೇಮೇಂದ್ರ (ಸು. ಕ್ರಿ. ಶ. 11ನೇ ಶತಮಾನ) ಸಂಸ್ಕೃತದಲ್ಲಿ ರಚಿಸಿರುವ 'ಅವದಾನ-ಕಲ್ಪಲತಾ' ವಿಶಿಷ್ಟ ಕೃತಿ; ಬುದ್ಧನ ಜೀವನವನ್ನು ಆಧರಿಸಿದ ಕಾವ್ಯ. 'ಅವದಾನ' ಎಂದರೆ ಪರಿಶುದ್ಧವಾದ, ಪುಣ್ಯಪ್ರದವಾದ ನಡವಳಿಕೆಯನ್ನು ನಿರೂಪಿಸುವ, ಆ ಮಾರ್ಗದಲ್ಲಿ ನಮ್ಮನ್ನು ಕೊಂಡೊಯ್ಯುವಂತೆ ಮಾಡುವ ಕಥೆ ಎಂದು ಅರ್ಥಮಾಡಬಹುದು. ಕ್ಷೇಮೇಂದ್ರನ ಈ ಕೃತಿಯಲ್ಲಿ ಇಂಥ 108 ಕಥೆಗಳಿವೆ. ಇವು ಬುದ್ಧನ ಕುಶಲಕಾರ್ಯಗಳನ್ನು ತಿಳಿಸುತ್ತವೆ; ಇವುಗಳಲ್ಲಿ ಹಿಂದಿನ ಜನ್ಮದ ಕಥೆಗಳೂ ಇವೆ; ವೀರೋಚಿತವಾದ, ಉದಾತ್ತವಾದ, ಪರಿಶುದ್ಧವಾದ ಕುಶಲಕಾರ್ಯಗಳೂ ಇವೆ; ಬುದ್ಧನ ಇತಿಹಾಸದ ಘಟನೆಗಳಲ್ಲಿಯ ಕುಶಲಕಾರ್ಯಗಳನ್ನು ತಿಳಿಸುವಂಥ ಕಥೆಗಳೂ ಇವೆ.

ಮೂಲಸಂಸ್ಕೃತ ಕೃತಿಯನ್ನು ತಿರುಮಲ ರಾಮಚಂದ್ರ ತೆಲುಗುಭಾಷೆಗೆ ಅನುವಾದ ಮಾಡಿದ್ದರು; ಇವರು ಕನ್ನಡದವರೇ. ಇದೀಗ ತೆಲುಗಿನಿಂದ ಕನ್ನಡಕ್ಕೆ 'ಅವದಾನ ಕಲ್ಪಲತೆ'ಯಾಗಿ ಆರ್. ಶೇಷಶಾಸ್ತ್ರಿ ತಂದಿದ್ದಾರೆ. ಈಗಾಗಲೇ ಲಲಿತವಿಸ್ತರ, ಮಹಾಬೌದ್ಧನಿಘಂಟು ಮುಂತಾದ ಕೃತಿಗಳನ್ನು ಕನ್ನಡಕ್ಕೆ ಕೊಟ್ಟಿರುವ ಶಾಸ್ತ್ರಿಗಳು, ಕನ್ನಡದಲ್ಲಿ ಬೌದ್ಧದರ್ಶನದ ಅಧ್ಯಯನಕ್ಕೆ ಬೇಕಾದ ಮೂಲಕೃತಿಗಳನ್ನು ಪರೋಕ್ಷರೂಪದಲ್ಲಿ ಒದಗಿಸುತ್ತಿರುವುದು ಪ್ರಶಂಸಾರ್ಹವಾಗಿದೆ.


ಕ್ರಿಕೆಟ್ ಜೊತೆ ಪ್ರೇಮದ 'ಆಟ'

ಬದುಕಿನ ಸಂಘರ್ಷ, ಪ್ರೀತಿ-ಪ್ರೇಮ, ಮೋಹ, ಪ್ರಯತ್ನದ ಮೂಲಕ ಜೀವನದ ಗುರಿಯ ಸಾಕಾರ... ಇವೆಲ್ಲವುಗಳ ಜೊತೆ ಕ್ರಿಕೆಟ್ ಕ್ರೀಡೆಯ ಬಹು ಆಯಾಮಗಳನ್ನು ಒಳಗೊಂಡ ಕಾದಂಬರಿ 'ಆಟ'.

ಕರಾವಳಿಯ ಸಮುದಾಯವೊಂದರ ಸಾಂಸ್ಕೃತಿಕ ಸಂಕಥನವನ್ನು 'ಶಾರದಾ' ಕಾದಂಬರಿಯ ಮೂಲಕ ಚಿತ್ರಿಸಿದ, 'ರಾಗಲೀಲೆ'ಯಲ್ಲಿ ಸಾಮಾನ್ಯ ವ್ಯಕ್ತಿಯೊಬ್ಬ ಸಂಗೀತಗಾರನಾಗಿ ಪ್ರಸಿದ್ಧಿ ಪಡೆಯುವುದನ್ನು ಬಣ್ಣಿಸಿದ ಉಜಿರೆಯ ಪ್ರೊ.ಜಿ.ಎನ್.ಪಟವರ್ಧನ್ 'ಆಟ'ದಲ್ಲಿ ತಮ್ಮ ಅರಿವಿಗೆ ನಿಲುಕುವ ಕ್ರಿಕೆಟ್ ಕುರಿತ ಅನುಭವದ ಆಧಾರದಲ್ಲಿ ಕಥೆಯನ್ನು ಹೆಣೆದಿದ್ದಾರೆ.

ಬಹುಸಂಸ್ಕೃತಿ ಬಿಂಬಿಸುವ, ಸಮುದಾಯಗಳು ಅನ್ಯೋನ್ಯವಾಗಿ ಬದುಕುವ ಹಿರಿಯೂರು ಎಂಬ ಕಾಲ್ಪನಿಕ ಊರಿನ ಚಿತ್ರಣದೊಂದಿಗೆ ಆರಂಭವಾಗುವ ಕೃತಿಯಲ್ಲಿ ಮೂರ್ತಿ ಎಂಬ ವ್ಯಕ್ತಿಯ ಪರಿಶ್ರಮದ ಬದುಕು, ಆತನ ಪತ್ನಿ ರಾಧಾಳ ದುಡಿಮೆ, ಈ ದಂಪತಿಯ ಮಗ ಮೋಹನನ ಕ್ರಿಕೆಟ್ ಪ್ರೀತಿ, ಆಟದ ಸೊಗಸು ಮತ್ತು ಬೆಳವಣಿಗೆ, ಮೋಹಿನಿಯ ಆಕರ್ಷಣೆ, ಪ್ರೇಮ, ಶಾಲಿನಿಯ ಕುತಂತ್ರ ಮತ್ತು ಮದುವೆ ಇತ್ಯಾದಿಯನ್ನು ಒಳಗೊಂಡ ಸಂಘರ್ಷದ ಬದುಕು ಅನಾವರಣಗೊಂಡಿದೆ.

ಮೋಹಿನಿಯ ಮಗ ಇರುವ ಕ್ರಿಕೆಟ್ ಪಂದ್ಯದಲ್ಲಿ ಮೋಹನನ ಮಗ ವೀಕ್ಷಕ ವಿವರಣೆಕಾರನಾಗಿ ಭಾಗವಹಿಸುವಂತೆ ಮಾಡಿರುವ ಕಾದಂಬರಿಕಾರ ಕೃತಿಯ ಪ್ರತಿ ಹಂತದಲ್ಲೂ ಕುತೂಹಲ ಕೆರಳಿಸುವ ತಂತ್ರವನ್ನು ಬಳಸುವುದರ ಮೂಲಕ ಓದುಗನ ಗಮನ ಹಿಡಿದಿರಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಪು: 136 ₹150

ಆಟ (ಕಾದಂಬರಿ)
ಲೇ: ಪ್ರೊ.ಎನ್.ಜಿ.ಪಟವರ್ಧನ್
ಪ್ರ: ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು
ಸಂ: 9886069116


ಬದುಕಿನ ಒಳನೋಟ ಕಟ್ಟಿಕೊಡುವ ಕಥೆ

ಶಿಕ್ಷಕಿ, ಲೇಖಕಿ ಆರತಿ ಪಟ್ರಮೆ ತಮ್ಮ ತಂದೆ ಕಡಂಬಿಲ ಭೀಮ ಭಟ್ಟರ ಆತ್ಮಕಥೆಯನ್ನು 'ಅನಾಮಧೇಯ ಅಧ್ಯಾಪಕನ ಆತ್ಮಚರಿತ್ರೆ'ಯಲ್ಲಿ ದಾಖಲಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿಕ್ಷಕರಾಗಿದ್ದ ಕಡಂಬಿಲ ಭಟ್ಟರ ಬದುಕಿನ ಕಥೆಯನ್ನಿಲ್ಲಿ ಮಗಳು ಆರತಿ ಬಹಳ ಸುಲಭವಾದ ಶೈಲಿಯಲ್ಲಿ ನಿರೂಪಿಸಿದ್ದಾರೆ.

ಸ್ವತಂತ್ರಪೂರ್ವದಲ್ಲಿ ಜನಿಸಿದ ಭಟ್ಟರು ಸರಿಯಾದ ನೆಲೆಯಿಲ್ಲದೆ, ಊರೂರು ಅಲೆಯುತ್ತ ಬದುಕನ್ನು ಕಟ್ಟಿಕೊಂಡ ಕಥೆಯನಿಲ್ಲಿ ಹೇಳುತ್ತ ಹೋಗುತ್ತಾರೆ. ಉಜಿರೆಯಲ್ಲಿ ಬಹುಪಾಲು ಶಿಕ್ಷಣ ಮುಗಿಸಿ, ದಕ್ಷಿಣ ಕನ್ನಡದ 'ಎಳನೀರು' ಎಂಬ ಊರಿನಲ್ಲಿ ಶಿಕ್ಷಕ ವೃತ್ತಿಯ ಆರಂಭಿಸುವ ಭಟ್ಟರು ವೃತ್ತಿಯ ಪ್ರಾರಂಭಿಕ ದಿನಗಳನ್ನು ಮೆಲುಕು ಹಾಕಿದ್ದಾರೆ.

ಕುಟುಂಬದವರಿಂದ ಬಳುವಳಿಯಾಗಿ ದಕ್ಕಿದ ಯಕ್ಷಗಾನದಲ್ಲಿ ಭಟ್ಟರಿಗೂ ಆಸಕ್ತಿ ಇತ್ತು. ಹೀಗಾಗಿ ಕೃತಿಯ ಅಲ್ಲಲ್ಲಿ ಯಕ್ಷಲೋಕ ತೆರೆದುಕೊಳ್ಳುತ್ತದೆ. 'ಖ್ಯಾತನಾಮರ ಆತ್ಮಕಥೆಗಳನ್ನು ಬರೆಯುವುದು, ಅವುಗಳನ್ನು ಜನಸಾಮಾನ್ಯರು ಕುತೂಹಲದಿಂದ ಗಮನಿಸುವುದು ಲೋಕಾರೂಢಿ. ಸಾಮಾನ್ಯರಾಗಿಯೇ ಇದ್ದಂತೆ ಬದುಕುವವರಲ್ಲಿ ಲೋಕಕ್ಕೆ ಪಾಠವಾಗಬಲ್ಲಂಥ ಕಥೆಗಳಿರಲಾರವೇ?' ಕೃತಿಯ ಬೆನ್ನುಡಿಯಲ್ಲಿನ ಈ ಪ್ರಶ್ನೆಗೆ ಭಟ್ಟರ ಬದುಕಿನ ಹಲವು ಘಟನೆಗಳು ಉತ್ತರವಾಗಿವೆ.

ಇಲ್ಲಿನ ಬಹುಪಾಲು ಕಥೆಗಳು ಸಾಮಾನ್ಯರ ಬದುಕಿನ ಕಥೆಗಳೂ ಹೌದು. ಹೀಗಾಗಿ ಇಡೀ ಕೃತಿ ಓದಿಗೆ ಆಪ್ತವೆನಿಸುತ್ತದೆ. ನಮ್ಮ ಬದುಕಿನ ಕಥೆಗಳನ್ನೇ ಅಕ್ಷರ ರೂಪದಲ್ಲಿ ಕಂಡಂತಾಗುತ್ತದೆ.



ಪು: 168 ₹200


ಅನಾಮಧೇಯ ಅಧ್ಯಾಪಕನ ಆತ್ಮಚರಿತ್ರೆ
ನಿರೂಪಣೆ: ಆರತಿ ಪಟ್ರಮೆ
ಪ್ರ: ಅಂಕುರ್ ಮೀಡಿಯಾ ಪಬ್ಲಿಕೇಶನ್ಸ್
ಸಂ:9449525854

ಧರ್ಮಶಾಲೆ... ನಿಸರ್ಗ ಲೀಲೆ...

ಧರ್ಮಶಾಲಾದಲ್ಲಿ ಕಣ್ಣುಮುಚ್ಚಿ ಪ್ರಾರ್ಥಿಸಲು ದೇವಸ್ಥಾನಗಳಿವೆ, ಮೆಕ್‌ಲೋಡ್‌ಗಂಜ್‌ನ ಬುದ್ಧ ದೇವಾಲಯದಲ್ಲಿ ನಿಂತು ಧ್ಯಾನಸ್ಥ ಆಗಲೂಬಹುದು. ಟಿಬೆಟಿಯನ್ ಧರ್ಮಕ್ಕೆ ಸಂಬಂಧಿಸಿದ ಹಸ್ತಪ್ರತಿಗಳ ಸಂಗ್ರಹಾಲಯ, ಸುಂದರವಾದ ಕ್ರಿಕೆಟ್ ಕ್ರೀಡಾಂಗಣ ಇವೆಲ್ಲವೂ ಹಿಮಾಚ್ಛಾದಿತ ಭಿತ್ತಿಯಲ್ಲಿ ಮೂಡಿದ ಚಿತ್ರಿಕೆಗಳಂತೆ ಚಿತ್ತಾಪಹಾರಿಯಾಗಿವೆ.

ನಿರಂಜನ ವಾನಳ್ಳಿ

ಪ್ರವಾಸ




ಬಾನೆತ್ತರದಿಂದ ಹಿಮಾಚಲ ಪ್ರದೇಶದ ಧರ್ಮಶಾಲಾ ಹೀಗೆ ಅದ್ಭುತ...

ಹಿಮಾಚಲ ಎಂದಾಕ್ಷಣ ಸಾಮಾನ್ಯವಾಗಿ ನೆನಪಿಗೆ ಬರುವುದು ಶಿಮ್ಲಾ, ಕುಲು-ಮನಾಲಿ, ಹೆಚ್ಚೆಂದರೆ ರೋಹತಾಂಗ್ ಪಾಸ್. ಆದರೆ ಹಿಮಾಚಲದ ಇನ್ನೊಂದು ಪಾರ್ಶ್ವದಲ್ಲಿರುವ, ಹಿಮಾಚಲದ ಚಳಿಗಾಲದ ರಾಜಧಾನಿಯೆಂದೇ ಕರೆಸಿಕೊಳ್ಳುವ ಧರ್ಮಶಾಲಾ, ಜೀವನದಲ್ಲಿ ಒಮ್ಮೆ ನೋಡಬೇಕಾದ ರಮಣೀಯ ಪ್ರಾಕೃತಿಕ ತಾಣ ಎಂಬುದು ಬಹಳ ಜನಕ್ಕೆ ಗೊತ್ತಿಲ್ಲ. ಇದು ಕಾಂಗ್ರ ಜಿಲ್ಲೆಗೆ ಸೇರಿದ್ದು, ಗಗ್ಗಲ್ (ಕಾಂಗ್ರಾ) ವಿಮಾನ ನಿಲ್ದಾಣದಿಂದ 15 ಕಿ.ಮೀ. ದೂರದಲ್ಲಿದೆ.

ಧರ್ಮಶಾಲಾ ನಮ್ಮನ್ನು ಕೈಬೀಸಿ ಕರೆಯುವುದು ಅನೇಕ ಕಾರಣಗಳಿಂದಾಗಿ. ಒಂದು, ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳು ನಡೆಯುವ ಚಂದದ ಸ್ಟೇಡಿಯಂ ಇಲ್ಲಿದೆ. ಇದನ್ನು ನೋಡಲಿಕ್ಕೆ ಸಾವಿರಾರು ಜನ ಪ್ರತಿನಿತ್ಯ ಬರುತ್ತಾರೆ. ಧರ್ಮಶಾಲಾಕ್ಕೆ ಇರುವ ಜಾಗತಿಕ ಮಾನ್ಯತೆಗೆ ಇನ್ನೊಂದು ಕಾರಣ ಟಿಬೆಟಿಯನ್ ಧರ್ಮಗುರು ದಲೈಲಾಮಾ ಅವರ ವಾಸಸ್ಥಾನವಿದು ಎನ್ನುವುದು. ಪ್ರತಿನಿತ್ಯ ಜಗತ್ತಿನ ವಿವಿಧ ಭಾಗಗಳಲ್ಲಿ ನೆಲೆಸಿರುವ ಟಿಬೆಟಿಯನ್ನರು ತಮ್ಮ ಧರ್ಮಗುರುವಿನ ದರ್ಶನ ಮಾಡಲು ಬರುತ್ತಾರೆ. ಚೀನಾದವರಿಂದ ಜೀವಭಯ ಇರುವುದರಿಂದ ದಲೈಲಾಮಾ ಅವರಿಗೆ ಸರ್ಕಾರ ಭಾರಿ ರಕ್ಷಣೆ ಒದಗಿಸಿದೆ. ರಕ್ಷಣೆಯ ಭದ್ರ ಕೋಟೆಯನ್ನು ಭೇದಿಸಿ ಒಳಹೋದರೆ, 87ರ ಅಜ್ಜ ಪ್ರೀತಿಯ ಹೊಳೆಯನ್ನೇ ಹರಿಸುತ್ತಾರೆ. 'ಕರುಣಾ ಕರುಣಾ' ಎಂದು ಕನವರಿಸುವ ಕರುಣಾಮಯಿಯನ್ನು ಕಂಡಾಗ ದೂರದೂರದಿಂದ ಬಂದವರಿಗೆ ಸಾರ್ಥಕ ಭಾವ ಉಂಟಾಗುತ್ತದೆ.

ಇನ್ನು ಧರ್ಮಶಾಲಾ ಇರುವುದು ಸಮುದ್ರ ಮಟ್ಟದಿಂದ 1457 ಮೀಟರ್ ಎತ್ತರದಲ್ಲಿ. ಕೆಳಗಿನ ಧರ್ಮಶಾಲೆ ಮತ್ತು ಮೇಲಿನ ಧರ್ಮಶಾಲೆಯೆಂಬುದು ಒಂದು ವಿಂಗಡಣೆ. ಕೆಳಗಿನ ಧರ್ಮಶಾಲಾ ವಾಣಿಜ್ಯ ಕೇಂದ್ರವಾದರೆ, ಮೇಲಿನ ಧರ್ಮಶಾಲೆ ಪ್ರಾಕೃತಿಕ ಸೌಂದರ್ಯಕ್ಕೆ ಹೆಸರುವಾಸಿ. ಕೆಳಗಿನ ಧರ್ಮಶಾಲಾದಲ್ಲಿ ಸಿಗದ ವಸ್ತುಗಳಿಲ್ಲ. ಮೂಲತಃ ಟಿಬೆಟಿಯನ್ನರ ಮಣಿಗಳು, ಕೌದಿಗಳು, ದೇವರ ಪೂಜೆಯ ವಸ್ತುಗಳಿಗೆ ಇದು ಹೆಸರುವಾಸಿ. ಮೇಲಿನ ಧರ್ಮಶಾಲಾ ಎಂದರೆ ಹಿಮಾಲಯದ ಹಿಮಾಚ್ಛಾದಿತ ಗುಡ್ಡಗಳ ನಡುವೆ ಇರುವ ಇಲ್ಲಿನ ಗಿರಿ ಕಂದರಗಳು. ಈ ಪ್ರದೇಶವನ್ನು 'ದೌಲಾಧಾರ್ ರೇಂಜ್' ಎಂದು ಕರೆಯುತ್ತಾರೆ.



'ಧರ್ಮಶಾಲಾ'ದ ವಿಹಂಗಮ ನೋಟ

ಧರ್ಮಶಾಲಾಕ್ಕೆ ಸನಿಹದಲ್ಲೇ ಇರುವ ಭಗಳಾಮುಖಿ, ಜ್ವಾಲಾಮುಖಿ, ಚಾಮುಂಡಾ ದೇವಿಯ ದೇವಸ್ಥಾನಗಳು ಭಕ್ತರ ಪವಿತ್ರ ಕ್ಷೇತ್ರಗಳು. ಭಗಳಾಮುಖಿ ಜನರ ಸಂಕಷ್ಟಗಳನ್ನು ದೂರಮಾಡುವ ದೇವಿಯೆಂದು ನಂಬಿರುವವರು ಅಸಂಖ್ಯ. ಜ್ವಾಲಾಮುಖಿ- ಆರದ ಬೆಂಕಿ-ಅದುವೇ ದೇವಿಯ ಪ್ರತಿನಿಧಿ. ನಮ್ಮ ಮೈಸೂರಿನ ಚಾಮುಂಡಿ ಇಲ್ಲಿ 'ಚಾಮುಂಡ' ಆಗಿದ್ದಾಳೆ. ಧರ್ಮಶಾಲೆಗೆ ಹೋಗುವ ಆಸ್ತಿಕರು, ಈ ಮೂರೂ ದೇವಾಲಯಗಳಿಗೆ ತಪ್ಪದೇ ಭೇಟಿ ನೀಡುತ್ತಾರೆ.

ದಲೈಲಾಮಾ ಅವರ ವಾಸಸ್ಥಾನ ಇರುವುದು ಮೆಕ್‌ಲೋಡ್‌ಗಂಜ್ ಎಂಬ ಪರ್ವತ ಪ್ರದೇಶದಲ್ಲಿ. ಅಲ್ಲಿರುವ ಬುದ್ಧನ ದೇವಾಲಯ ಪವಿತ್ರವಾದುದು. ದಲೈಲಾಮಾ ಅವರ ಮನೆಯ ಸಂಕೀರ್ಣದಲ್ಲಿರುವ ಥೆಕ್‌ಚೆನ್‌ಚೋಲಿಗ್ ದೇವಾಲಯ, ಗ್ರಂಥಾಲಯ, ಟಿಬೆಟಿಯನ್ ಧರ್ಮಕ್ಕೆ ಸಂಬಂಧಿಸಿದ ಹಸ್ತಪ್ರತಿಗಳ ಸಂಗ್ರಹಾಲಯ ಅಮೂಲ್ಯವಾದುದು. ಮೆಕ್‌ಲೋಡ್‌ಗಂಜಿನಿಂದ ಇಳಿದು ಬರುವಾಗ ಸಿಗುವ ಇನ್ನೊಂದು ಅಪರೂಪದ ಸ್ಥಳ ಇಂದ್ರುನಾಗ್ ದೇವಸ್ಥಾನ. ಇದರ ಪುರಾಣ ವಿಚಿತ್ರವಾಗಿದ್ದು, ಎಷ್ಟೋ ದಕ್ಷಿಣ ಭಾರತೀಯರು ಕಂಡು ಕೇಳರಿಯದ್ದು. ಇಂದ್ರುನಾಗ್ ದೇವಸ್ಥಾನದಿಂದ ಕೆಳಗೆ ನೋಡಿದರೆ ಕಾಣುವ ಧರ್ಮಶಾಲೆಯ ದೃಶ್ಯ ಅಪರೂಪದ್ದು. ಹಾಗೆಯೇ ಇಲ್ಲಿಂದ ಮೇಲೆ ಕಣ್ಣು ಹಾಯಿಸಿದಷ್ಟೂ ದೂರಕ್ಕೆ ಕಾಣುವ ಹಿಮಾವೃತ ಪರ್ವತಗಳ ದೃಶ್ಯ ಅಮೋಘ. ಇಲ್ಲಿ ನಿಂತಾಗ ಪ್ರಕೃತಿಯ ಎದುರು ನಮ್ಮ ಸಾಧನೆಗಳೆಲ್ಲ ಎಷ್ಟು ಸಣ್ಣದು ಎನಿಸಿಬಿಡುತ್ತದೆ. ಇಲ್ಲಿಂದ ಪ್ಯಾರಾ ಗ್ಲೈಡಿಂಗ್ ವ್ಯವಸ್ಥೆಯೂ ಇದ್ದು, ಸಾಹಸಿಗಳನ್ನು ಕರೆಯುತ್ತದೆ.

ಧರ್ಮಶಾಲಾದಿಂದ ಮೇಲಕ್ಕೆ ಕಡಿದಾದ ರಸ್ತೆಯಲ್ಲಿ ಸಾಗಿಬಂದರೆ ಕಾಣುವ ಹಿಮಾಚ್ಛಾದಿತ ಪರ್ವತಗಳು, ಪೈನ್ ವೃಕ್ಷಗಳ ಕಣಿವೆಗಳು, ಅಲ್ಲಲ್ಲಿ ಹರಿವ ಝರಿಗಳು, ಅವುಗಳು ಸೃಷ್ಟಿಸುವ ಜಲಪಾತಗಳು, ತಣ್ಣನೆಯ ಗಾಳಿಯ ಸ್ಪರ್ಶ, ಅಲೌಕಿಕ ಅನುಭವ ನೀಡುತ್ತದೆ. ಮೆಕ್‌ಲೋಡ್ ಗಂಜ್‌ನಿಂದ ಮೇಲಕ್ಕೆ ಭಾಗಸುನಾಗ್ ಜಲಪಾತವಿದೆ. ನದಿ ನೀರು ಇಲ್ಲಿ ಎರಡು ಕವಲಾಗಿ ಕೆಳಬೀಳುತ್ತದೆ. ಧರ್ಮಶಾಲಾದ ಇನ್ನೊಂದು ಆಕರ್ಷಣೆಯಾಗಿ ರೋಪ್‌ವೇ ಇದೆ. ಅದರಲ್ಲಿ ಕುಳಿತು ಧರ್ಮಶಾಲಾ ಮಾತ್ರವಲ್ಲ ಇಡೀ ಹಿಮಾಲಯದ ದೃಶ್ಯವನ್ನು ಕಣ್ತುಂಬಿಕೊಳ್ಳಬಹುದು. 1852ರಷ್ಟು ಹಿಂದೆ ಕಟ್ಟಿದ ಸೇಂಟ್ ಜಾನ್ಸ್ ಚರ್ಚು ಧರ್ಮಶಾಲೆಯ ಇನ್ನೊಂದು ಆಕರ್ಷಣೆ. 1905ರಲ್ಲಿ ಆದ ಭೀಕರ ಭೂಕಂಪದಲ್ಲೂ ಅಲುಗಾಡದೇ ನಿಂತ ಚರ್ಚು ಶತಮಾನದ ಹಿಂದಿನ ವಾಸ್ತುಶಿಲ್ಪದ ಅತ್ಯುಚ್ಛ ಉದಾಹರಣೆಯಾಗಿ ಜನರ ಸೆಳೆಯುತ್ತದೆ.



ಧರ್ಮಶಾಲಾದ ಕ್ರಿಕೆಟ್ ಕ್ರೀಡಾಂಗಣವೂ ಪ್ರವಾಸಿ ಆಕರ್ಷಣೆ

ಇತ್ತೀಚೆಗೆ ಭಯಂಕರ ಮಳೆ ಹಾಗೂ ಭೂಕುಸಿತದಿಂದಾಗಿ ಧರ್ಮಶಾಲಾ ಸುದ್ದಿಯಲ್ಲಿತ್ತು. ನಾವು ನಡೆದಾಡಿದ ಜಾಗಗಳು ಹೊರ ಜಗತ್ತಿನಿಂದ ಸಂಪರ್ಕ ಕಡಿದುಕೊಂಡಿದ್ದವು. ಈಗ ಅಲ್ಲಿ ಹೇಗಿರಬಹುದೆಂದು ನೆನೆಸಿಕೊಂಡರೆ ಕುಳಿತಲ್ಲೇ ಭೂಮಿ ಕಂಪಿಸಿದಂತೆ ಆಗುತ್ತದೆ. ❖

ಕರೆದರೂ ಕೇಳದೆ...

10ನೇ ಪುಟದಿಂದ...

ಕಚೇರಿಗೆ ಬಾರದಿರಲು ಮೂನ್‌ಲೈಟಿಂಗ್ ಕೂಡ ಕಾರಣವಾಯಿತೆ?

ಕೆಲ ತಿಂಗಳ ಹಿಂದೆ ಮುನ್ನೆಲೆಗೆ ಬಂದ ಸಾಫ್ಟ್‌ವೇರ್ ಉದ್ಯೋಗಿಗಳು ಎರಡೆರಡು ಕಡೆ ನೌಕರಿ ಮಾಡುವ 'ಮೂನ್‌ಲೈಟಿಂಗ್' ಕೂಡ ಕೆಲ ನೌಕರರು ಕಚೇರಿಗೆ ಬಾರದಿರಲು ಕಾರಣ ಎಂಬ ಮಾತುಗಳೂ ಇವೆ. ಒಂದೆಡೆ ಲಾಕ್‌ಡೌನ್ ಅವಧಿಯಲ್ಲಿ ಹಲವರು ಉದ್ಯೋಗ ಕಳೆದುಕೊಂಡರು. ಕಂಪನಿ ಉದ್ಯೋಗ ಕಂಡುಕೊಂಡರೆ ಮುಂದೊಂದು ದಿನ ಪಿಂಕ್ ಸ್ಲಿಪ್ (ನೌಕರಿಯಿಂದ ವಜಾ) ಪಡೆಯುವ ಸಾಧ್ಯತೆ ಇದೆ ಎಂದೇ ನಂಬಿರುವ ಬಹಳಷ್ಟು ನೌಕರರು, ಜಮೀನು ಖರೀದಿಸಿ ಕೃಷಿ, ಹೈನುಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇನ್ನೂ ಕೆಲವರು ತಮ್ಮದೇ ಆದ ಸ್ಟಾರ್ಟ್‌ಅಪ್‌ಗಳನ್ನು ಆರಂಭಿಸಿ ಮೂಲ ಕಂಪನಿ ಹಾಗೂ ಸ್ಟಾರ್ಟ್‌ಅಪ್ ಎರಡೂ ಕಡೆ ದುಡಿಯುತ್ತಿದ್ದಾರೆ. ಇನ್ನೂ ಕೆಲವರು ಎರಡು ಬೇರೆಯದೇ ಕಂಪನಿಗಳ ಕೆಲಸ ಮಾಡಿಕೊಂಡು ಹೆಚ್ಚಿನ ಗಳಿಕೆಯ ಹಾದಿ ಕಂಡುಕೊಂಡಿದ್ದಾರೆ.

ವರ್ಕ್ ಫ್ರಮ್ ಹೋಮ್‌ನಿಂದ ಪ್ರಾಜೆಕ್ಟ್‌ನಲ್ಲಿ ಯಾವುದಾದರೂ ಗೊಂದಲ ಇದ್ದರೆ ಅದನ್ನು ನೇರವಾಗಿ ಕೇಳಲು ಸಾಧ್ಯವಿಲ್ಲ. ಏಕಕಾಲಕ್ಕೆ ಎಲ್ಲರೂ ಕೆಲಸ ಮಾಡಿದರೆ ಹೊಸ ಆಲೋಚನೆಗಳು ಹೊಳೆಯುತ್ತವೆ. ಹಾಗೆಯೇ ಇರುವ ಯೋಜನೆಗೆ ಸಂಬಂಧಿಸಿದಂತೆ ಇರುವ ಗೊಂದಲಗಳೂ ದೂರವಾಗುತ್ತವೆ. ಆದರೆ ಈಗ ಹಾಗಾಗುತ್ತಿಲ್ಲ. ಕಚೇರಿಗೆ ಬನ್ನಿ ಎಂದು ಕರೆದರೆ, ಟ್ರಾಫಿಕ್, ಶಾಲೆ ಶುಲ್ಕ, ಮನೆ ಬಾಡಿಗೆ, ಅಪೂರ್ಣ ಮೆಟ್ರೊ ಮಾರ್ಗ, ಕುಟುಂಬ ಹಾಗೂ ಸಂಬಂಧಗಳಿಗೆ ಹೆಚ್ಚಿನ ಒತ್ತು ಹೀಗೆ ಸಾಲು ಸಾಲು ಕಾರಣಗಳನ್ನು ಕೊಡುತ್ತಿದ್ದಾರೆ. ಹೀಗಾಗಿ ಸದ್ಯ ಇದು ಹೈಬ್ರಿಡ್ ಹಂತಕ್ಕೆ ಬಂದು ನಿಂತಿದೆ' ಎನ್ನುತ್ತಾರೆ ಅವರು.

ಕಚೇರಿಗೆ ಬಂದು ಕೆಲಸ ಮಾಡುವುದೇ ಅನಿವಾರ್ಯವಾದರೆ ಇಂಥ ಎರಡೆರಡು ಗಳಿಕೆ ಕಷ್ಟವಾಗಲಿದೆ ಎನ್ನುವುದು ಕೆಲವರ ವಾದ. 'ಸದ್ಯ ಹಲವು ಕೆಲಸಗಳನ್ನು ನಾವು ಏಕಕಾಲಕ್ಕೆ ಮಾಡುತ್ತಿದ್ದೇವೆ. ಬೆಂಗಳೂರು ಬಲು ದುಬಾರಿಯಾಗಿದ್ದು, ಇಲ್ಲಿ ಬದುಕುವುದೇ ಕಷ್ಟವಾಗಿದೆ. ಹೀಗಾಗಿ ಎರಡು ಕೆಲಸ ಅನಿವಾರ್ಯ. ಜತೆಗೆ ಮನೆ, ಮಕ್ಕಳ ಲಾಲನೆ, ಪಾಲನೆಯೂ ಅಗತ್ಯ. ಕಚೇರಿ ಕೆಲಸ ಮುಗಿಸಿ ಉಳಿದ ಸಮಯದಲ್ಲಿ ಬೇರೆ ಕೆಲಸ ಮಾಡುವ ಮೂಲಕ ಒಂದಷ್ಟು ಹೆಚ್ಚಿನದನ್ನು ಗಳಿಸಲಾಗುತ್ತಿದೆ. ಸಂಜೆ ಮಕ್ಕಳು ಶಾಲೆಯಿಂದ ಬಂದ ನಂತರ ಅವರನ್ನು ಯಾವುದಾದರೂ ಕ್ರೀಡೆಗೆ ಸೇರಿಸಿ, ಅಲ್ಲಿಯೇ ಲ್ಯಾಪ್‌ಟಾಪ್ ತೆರೆದು ಕೆಲಸ ಮಾಡುತ್ತೇವೆ. ನಮ್ಮ ದುಡಿಯುವ ಅವಧಿ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಟ್ರಾಫಿಕ್‌ನಲ್ಲಿ ಅನಗತ್ಯವಾಗಿ ಕಳೆಯುತ್ತಿದ್ದ ಸಮಯ ಈಗ ವೃತ್ತಿಗೆ ಬಳಕೆಯಾಗುತ್ತಿದೆ. ಆದರೆ, ಕಂಪನಿಗಳ ಉದ್ದೇಶವೇ ಬೇರೆ ಇದೆ. ರಿಯಲ್ ಎಸ್ಟೇಟ್ ತಾಳಕ್ಕೆ ತಕ್ಕಂತೆ ಅವು ಕುಣಿಯುತ್ತಿವೆ' ಎಂದು ಹೆಸರು ಹೇಳಲು ಇಚ್ಛಿಸದ ಕೆಲವು ಸಾಫ್ಟ್‌ವೇರ್ ಉದ್ಯೋಗಿಗಳು ವಾಸ್ತವ ತೆರೆದಿಡುತ್ತಾರೆ.

'ವರ್ಕೋವೆಕೇಷನ್'ನಿಂದ ಹೆಚ್ಚಿದ ಪ್ರವಾಸೋದ್ಯಮ

ಉಪಾಹಾರ ಮತ್ತು ಮಧ್ಯಾಹ್ನದ ಊಟದ ನಡುವೆ ಮಾಡುವ 'ಬ್ರಂಚ್'ನಂತೆಯೇ ಈಗ ವೃತ್ತಿಯಲ್ಲೂ ಕೆಲಸ, ಪ್ರವಾಸ ಎರಡನ್ನೂ ಬೆರೆಸಿದ 'ವರ್ಕೋವೆಕೇಷನ್' ಎಂಬ ಪರಿಕಲ್ಪನೆ 'ವರ್ಕ್ ಫ್ರಮ್ ಹೋಮ್'ನಿಂದಾಗಿ ಸಾಧ್ಯವಾಗಿದೆ. ಮನೆಯಿಂದಲೇ ಕೆಲಸ ಮಾಡುವ ಕೆಲ ಉದ್ಯೋಗಿಗಳು ಈಗ ಮನೆಯಿಂದಲೂ ಅಲ್ಲದೆ ತಮ್ಮ ಇಷ್ಟದ ತಾಣದಿಂದಲೇ ಕೆಲಸ ಮಾಡುವ ಅವಕಾಶವನ್ನು ವರ್ಕ್ ಫ್ರಮ್ ಹೋಮ್‌ನಿಂದ ಪಡೆದಿದ್ದಾರೆ. ಇಷ್ಟದ ಪ್ರವಾಸಿ ತಾಣ, ಮೆಚ್ಚಿನ ಹೋಂ ಸ್ಟೇ, ಸ್ನೇಹಿತರು ಹಾಗೂ ಸಂಬಂಧಿಕರ ಮನೆ... ಭೇಟಿ ನೀಡಬೇಕೆನಿಸಿದ ಸ್ಥಳದಿಂದಲೇ ಕೆಲಸ ಮಾಡುತ್ತಿದ್ದಾರೆ.

ವರ್ಕ್ ಫ್ರಮ್ ಹೋಮ್‌ನಿಂದಾಗಿ ಐಟಿಯನ್ನೇ ನಂಬಿಕೊಂಡಿರುವ ಪೂರಕ ಉದ್ಯಮಗಳು ನೆಲ ಕಚ್ಚಿದ್ದವು. ಸಾಕಷ್ಟು ನಷ್ಟದ ನಂತರ ಆ ಉದ್ಯಮಗಳಲ್ಲಿ ಇರುವವರೂ ಈಗ ಹೈಬ್ರಿಡ್‌ನಿಂದ ಒಂದಷ್ಟು ಗಳಿಕೆಯ ಹಾದಿಗೆ ಮರಳಿದ್ದಾರೆ.

'ಹಳೆಯ ಉದ್ಯೋಗಿಗಳು ಕಚೇರಿಗೆ ಬರಲು ಒಪ್ಪುತ್ತಿಲ್ಲ. ಆದರೆ ಹೊಸ ಉದ್ಯೋಗಿಗಳಿಗೆ ಕಚೇರಿಗೆ ಬರಲು ಯಾವುದೇ ಸಮಸ್ಯೆ ಇಲ್ಲ. ಹೊಸದಾಗಿ ಸೇರಿದವರು ವಾರದ ಐದೂ ದಿನ ಈಗ ಕಚೇರಿಗೆ ಬರುತ್ತಿದ್ದಾರೆ. ಇದರಿಂದಾಗಿ ಅವರಿಗೆ ಅಗತ್ಯವಿರುವ ಸೌಕರ್ಯಗಳನ್ನು ನೀಡಲು ಕಂಪನಿ ಮುಂದಾಗುತ್ತಿದೆ. ಇದರಿಂದ ನಮಗೂ ಒಂದಷ್ಟು ಗಳಿಕೆಯಾಗುತ್ತಿದೆ. ಹಳತನ್ನೇ ನಂಬಿ ಕೂರುವ ಬದಲು ಹೊಸತನ್ನು ನಂಬಿಕೊಂಡು ಮುಂದಡಿ ಇಡಬೇಕಷ್ಟೆ' ಎನ್ನುವುದು ಐಟಿ ಕಂಪನಿಗಳಿಗೆ ಕಾಫಿ ಮೇಕರ್ ಯಂತ್ರ ಸರಬರಾಜು ಮಾಡುವ ಸಂದೀಪ್ ಅವರ ಭರವಸೆಯ ಮಾತುಗಳು.

ಸದ್ಯದ ಪರಿಸ್ಥಿತಿಯಲ್ಲಿ ಹೈಬ್ರಿಡ್ ಮಾದರಿಯಿಂದ ಶೇ 60ರಷ್ಟು ಉದ್ಯೋಗಿಗಳು ಕಚೇರಿಗೆ ಬರಲು ಆರಂಭಿಸಿದ್ದಾರೆ. ಸೇವಾ ವಲಯದಲ್ಲಿ ಇದು ಶೇ 50ಕ್ಕಿಂತ ಹೆಚ್ಚು ಇದೆ. ಆದರೆ ಒಇಎಂ ಕ್ಷೇತ್ರದಲ್ಲಿ ಇದು ಇನ್ನಷ್ಟೇ ಏರಬೇಕಿದೆ ಎನ್ನುವುದು ಐಟಿ ಪಂಡಿತರ ಲೆಕ್ಕಾಚಾರ. ❖



• ಎಂ.ಎಸ್.ಪೂಜಾರ

ಪದ ಪರಿಚಯ ಪರೀಕ್ಷೆ

ಇಲ್ಲಿ ಕೊಟ್ಟಿರುವ 'ವಿ' ಅಕ್ಷರಗಳ ಹಿಂದೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರ ಆಯ್ದು ಹಿಂದೆ ತುಂಬಿದರೆ ಮೂರಕ್ಷರಗಳ ಪದಗಳಾಗುತ್ತವೆ. ಪ್ರಯತ್ನಿಸಿ.

ಅಕ್ಷರ ಪಟ್ಟಿ

ನ	ರ	ಲ್ಲ	ಣ	ಮ
ಭೈ	ಕ	ಕ	ಲ್ಲಾ	ಹ
ಡ	ರ	ಣ	ಳ	ಉ
ಬ	ಗಿ	ಪ	ಅ	ರ

1			ವಿ
2			ವಿ
3			ವಿ
4			ವಿ
5			ವಿ
6			ವಿ
7			ವಿ
8			ವಿ
9			ವಿ
10			ವಿ

ಹುಡುಕಾಟ

ಈ ಚಿತ್ರದಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಅಡಗಿದ್ದಾರೆ. ಅವರನ್ನು ಪತ್ತೆಹಚ್ಚಿ.



ತಮಾಷೆ ಗಣಿತ

1.
6-9
9-10
40-50
=6 ಹೇಗೆ ಸಾಧ್ಯ?

ಪರಿಹಾರ
SIX-IX=S
IX-X=I
XL-L=X
=SIX(6)

2. ಒಂಬತ್ತರ ಅರ್ಧ ನಾಲ್ಕು ಹೇಗೆ?

ಪರಿಹಾರ

IX = ~~IX~~ = IV




ಡಗ್ಗು ಚಕ್ಕು ಕೇಶ್ರಷ್ಟು ಕಥೆಯ — ಬೆಂಕಿಯಿಂದ ಬಾಣಲೆಗೆ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಬಾನೆತ್ತರದಲ್ಲಿ ಹಾರಾಡುತ್ತಿದ್ದ ಹೆಲಿಕಾಪ್ಟರ್ ಒಂದರಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿತು. ಆ ಹೆಲಿಕಾಪ್ಟರ್ ಇನ್ನೇನು ಸ್ಫೋಟಗೊಳ್ಳುತ್ತದೆ ಎಂದು ಅರಿತ ಪೈಲಟ್ ಪ್ಯಾರಾಚೂಟ್ ಧರಿಸಿ ಅದರಿಂದ ಜಿಗಿದ. ಆದರೆ ಆತ ಜಿಗಿಯುವ ಮುನ್ನ ಕೆಳಗೇನಿದೆ ಎನ್ನುವುದನ್ನು ಗಮನಿಸಿಯೇ ಇರಲಿಲ್ಲ. ಕೆಳಗೊಂದು ದೊಡ್ಡ ಕೆರೆಯಿತ್ತು, ಅದರಲ್ಲಿದ್ದ ಮೊಸಳೆಯೊಂದು ಬಾಯ್ತೆರೆದು ಪೈಲಟ್ ಕೆಳಗೆ ಬೀಳುವುದನ್ನೇ ಕಾಯುತ್ತಿತ್ತು. ಅದನ್ನು ಕಂಡ ಪೈಲಟ್ ಕಾಪಾಡಿ...ಕಾಪಾಡಿ... ಎಂದು ಕೂಗತೊಡಗಿದ.



ಅಪರೂಪದ ಪದ

OBSERVE- ಇದೊಂದು ವಿಶೇಷ ಪದ. ಏಕೆಂದರೆ ಶಬ್ದದಲ್ಲೇ ಅದರ ಅರ್ಥವೂ ಅಡಕವಾಗಿದೆ.

OBSERVE=SEE

ಕೊಂಚ ತಂತ್ರ

ಆ ಸಂಶಿ ಚಾ

ಈ ವಾಕ್ಯ ನೆನಪಿಟ್ಟುಕೊಂಡರೆ ಕರ್ನಾಟಕದ ಪ್ರಮುಖ ಘಾಟಿಗಳ ಹೆಸರುಗಳನ್ನು ಸುಲಭವಾಗಿ ನೆನಪಿಡಬಹುದು.

ಆ = ಆಗುಂಬೆ
ಸಂ = ಸಂಪಾಜೆ
ಶಿ = ಶಿರಾಡಿ
ಚಾ = ಚಾರ್ಮಾಡಿ



ಪೇಚಿನ ಪ್ರಶ್ನೆಗಳು

1. What is the end of life?
2. TV ನಡುವೆ ಏನಿದೆ?

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಸುಮ | ಕರ | ಗಡು
ಗಣಿ | ಗಳಿ | ಕರಿ

ಅಕ್ಷರ ಪಟ್ಟಿ

ತ	ತ	ಚಿ	ವು	ಸಾ	ತ
ಕಿಂ	ಸು	ತಿ	ಕು	ಕೆ	ಣಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು


ಪದಬೆಸುಗೆ: 1.ಸಂಭವನ 2.ಕಮರುಕ 3.ಕಲಹರಿ 4.ವಸಂತಸ 5.ಶ್ರೀಗಂಧಕ 6.ಖಾತರಿಸು

ಸ್ವಲ್ಪ ಯೋಚ್ನೆ ಮಾಡಿ: 1.ಹಲಗಿ 2.ಡಂಬರಗಿ 3.ಜತಿಗಿ 4.ಉದ್ದಿಗಿ 5.ಬೊಟಗಿ

ಮೋಜಿನ ಇಂಗ್ಲಿಷ್: 1. Ball 2.Bell 3.Bull 4.Bill 5.Call 6.Cell 7.Fall 8.Full 9.Fill 10.Kill 11.Hall 12.Mill 13.Mall 14.Till (Wall, Will ಹೀಗೆ ಬೇರೆ ಪದಗಳೂ ಆಗಬಹುದು)

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ರುಚಿತಾ ಎಂ.ಎನ್. ಉತ್ತರಕನ್ನಡ



ಹಾಸಿನಿ ಎಸ್. ಹಾಸನ



ಭುವನ್ ವಿ.ತಾಳಿಕೋಟಿ ಹುಬ್ಬಳ್ಳಿ



ಈಶಪ್ಪ ಗಬ್ಬೂರು



ಪೂರ್ಣಾನಕ್ ರಾಜ್ ಕುಣಿಗಲ್



ಶಾರ್ವರಿ ಎಸ್. ಹಾಸನ

ಜನಾಂಗೀಯ ನಿಂದನೆ: ಕೇರಳ ಎಫ್‌ಸಿ ಆಕ್ರೋಶ

ಕೊಚ್ಚಿ (ಪಿಟಿಐ): ಬೆಂಗಳೂರು ಎಫ್‌ಸಿ ವಿರುದ್ಧ ಇಂಡಿಯನ್ ಸೂಪರ್ ಲೀಗ್ ಪಂದ್ಯದ ವೇಳೆ ತನ್ನ ಆಟಗಾರನ ವಿರುದ್ಧ ನಡೆದಿದೆ ಎನ್ನಲಾದ ಜನಾಂಗೀಯ ನಿಂದನೆ ಪ್ರಕರಣಕ್ಕೆ ಕೇರಳ ಬ್ಲಾಸ್ಟರ್ಸ್ ಫುಟ್‌ಬಾಲ್ ಕ್ಲಬ್ ತೀವ್ರ ಅಸಮಾಧಾನ ಮತ್ತು ಕಳವಳ ವ್ಯಕ್ತಪಡಿಸಿದೆ.

ಕೊಚ್ಚಿಯ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಎಸ್‌ಎಲ್ ಹತ್ತನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ಆಟಗಾರ ರಯಾನ್ ವಿಲಿಯಮ್ಸ್ ಅವರು ಕೇರಳ ಬ್ಲಾಸ್ಟರ್ಸ್ ಡಿಫೆಂಡರ್ ಐಬಾನ್ ದೊಹ್ಲಿಂಗ್ ಅವರನ್ನು ನಿಂದಿಸಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ. 82ನೇ ನಿಮಿಷ ಈ ಘಟನೆ ನಡೆದಿದೆ. ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ಜಯಗಳಿಸಿತ್ತು.

‘ಬೆಂಗಳೂರು ಎಫ್‌ಸಿ ಆಟಗಾರನೊಬ್ಬ ನಮ್ಮ ಆಟಗಾರನಿಗೆ ನಿಂದನಾತ್ಮಕ ಸಂಜ್ಞೆ ಮಾಡಿದ್ದಾರೆ. ಇಂಥ ಜನಾಂಗೀಯ ಮತ್ತು ಅವಹೇಳನಕಾರಿ ವರ್ತನೆಗೆ ನಾವು ಯಾವುದೇ ರೀತಿಯಲ್ಲಿ ಆಸ್ಪದ ನೀಡುವುದಿಲ್ಲ ಎಂದು ಸ್ಪಷ್ಟಪಡಿಸುತ್ತೇವೆ. ಜನಾಂಗೀಯ ನಿಂದನೆ, ತಾರತಮ್ಯ, ಅಗೌರವದ ನಡವಳಿಕೆಗೆ ಫುಟ್‌ಬಾಲ್ ಮೈದಾನ ಅಥವಾ ಎಲ್ಲಿಯೂ ಜಾಗವಿಲ್ಲ’ ಎಂದು ಕೇರಳ ಬ್ಲಾಸ್ಟರ್ಸ್ ಹೇಳಿಕೆಯಲ್ಲಿ ತಿಳಿಸಿದೆ.

ಈ ಸಂಬಂಧ ಅಧಿಕಾರಿಗಳಿಗೆ ಅಧಿಕೃತವಾಗಿ ದೂರು ಸಲ್ಲಿಸಲಾಗಿದ್ದು, ಪ್ರಕರಣದ ಬಗ್ಗೆ ವಿವರವಾದ ತನಿಖೆ ನಡೆಸುವಂತೆ ಒತ್ತಾಯಿಸಲಾಗಿದೆ ಎಂದೂ ಕ್ಲಬ್ ತಿಳಿಸಿದೆ.

‘ಫುಟ್‌ಬಾಲ್, ವೈವಿಧ್ಯಮಯ ಹಿನ್ನೆಲೆ ಮತ್ತು ಸಂಸ್ಕೃತಿಯಿಂದ ಬಂದಿರುವ ಜನರನ್ನು ಒಗ್ಗೂಡಿಸುವ ಕ್ರೀಡೆಯಾಗಿದೆ. ಪರಸ್ಪರ ಗೌರವಕ್ಕೆ ವೇದಿಕೆಯೂ ಸಹ’ ಎಂದು ಕ್ಲಬ್ ತಿಳಿಸಿದೆ.

ಈ ಪ್ರಕರಣದ ವಿಡಿಯೊದ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಡಿಎಚ್ ಕಪ್: ವಿಸೆನ್‌ಗೆ ಗೆಲುವು

ಬೆಂಗಳೂರು: ಗೋಲಿನ ಮಳೆಗರೆದ ವಿಸೆನ್ ಇನ್ಫೋಟೆಕ್ ತಂಡ, ಇಲ್ಲಿ ನಡೆಯುತ್ತಿರುವ ಟ್ರೂ ಆಲ್ಟ್ ಬಯೊಎನರ್ಜಿ ಡಿಎಚ್ ಕಪ್–2023 ‘ಫೈವ್ ಎ ಸೈಡ್’ ಕಾರ್ಪೊರೇಟ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವು ಸಾಧಿಸಿತು.

ಶನಿವಾರ ನಡೆದ ಪಂದ್ಯದಲ್ಲಿ ವಿಸೆನ್ 11–0 ಗೋಲುಗಳಿಂದ ಟಿಮ್‌ಕೆನ್ ಇಂಡಿಯಾ ಲಿಮಿಟೆಡ್ ತಂಡವನ್ನು ಮಣಿಸಿತು.

ಇನ್ನೊಂದು ಪಂದ್ಯದಲ್ಲಿ ಬಾಷ್ 8–0 ಗೋಲುಗಳಿಂದ ಕಾರ್ಲೆ ಇನ್‌ಫ್ರಾ ವಿರುದ್ಧ ಗೆದ್ದಿತು.

ಇತರ ಪಂದ್ಯಗಳಲ್ಲಿ ಟಿವಿಎಸ್ ಮೋಟರ್ ಕಂಪೆನಿ 5–1 ಗೋಲುಗಳಿಂದ ಜೆನೆಕ್ಸ್ ವಿರುದ್ಧ; ಎಂಯು ಸಿಗ್ಮಾ 1–0 ಗೋಲಿನಿಂದ ಸ್ವಿಸ್ ರೇ ವಿರುದ್ಧ ಗೆದ್ದಿತು.

ಐಕ್ವಿಯಾ ಮತ್ತು ಅಡೋಬಿ ನಡುವಣ ಪಂದ್ಯ ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತು.

ಕ್ರಿಕೆಟ್: ಇಂದೋರ್‌ನಲ್ಲಿ ರಾಹುಲ್–ಕಮಿನ್ಸ್ ಪಡೆಗಳ ಹಣಾಹಣಿ

ಸರಣಿ ಕೈವಶದತ್ತ ಭಾರತ ಚಿತ್ತ


ಇಂದೋರ್ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಭಾರತ ತಂಡವು ಆಸ್ಟ್ರೇಲಿಯಾ ಎದುರಿನ ಏಕದಿನ ಸರಣಿಯನ್ನು ಕೈವಶ ಮಾಡಿಕೊಳ್ಳುವತ್ತ ಚಿತ್ತ ನೆಟ್ಟಿದೆ.

ಮೂರು ಪಂದ್ಯಗಳ ಸರಣಿಯಲ್ಲಿ ಭಾರತ ತಂಡವು 1–0 ಮುನ್ನಡೆ ಸಾಧಿಸಿದೆ. ಭಾನುವಾರ ಹೋಳ್ಕರ್ ಮೈದಾನದಲ್ಲಿ ನಡೆಯಲಿರುವ ಪಂದ್ಯದಲ್ಲಿ ಗೆದ್ದು ಸರಣಿಯನ್ನು ತನ್ನ ಮಡಿಲಿಗೆ ಹಾಕಿಕೊಳ್ಳುವ ಉತ್ಸಾಹದಲ್ಲಿದೆ.

ಮೊಹಾಲಿಯಲ್ಲಿ ನಡೆದ ಮೊದಲ ಪಂದ್ಯದಲ್ಲಿ ಮೊಹಮ್ಮದ್ ಶಮಿ ಐದು ವಿಕೆಟ್ ಗೊಂಚಲು ಗಳಿಸಿ ಮಿಂಚಿದ್ದರು. ಬ್ಯಾಟಿಂಗ್‌ನಲ್ಲಿ ಶುಭಮನ್ ಗಿಲ್, ಋತುರಾಜ್ ಗಾಯಕವಾಡ, ರಾಹುಲ್ ಮತ್ತು ಸೂರ್ಯಕುಮಾರ್ ಯಾದವ್ ಅವರು ಅರ್ಧಶತಕ ಗಳಿಸಿ ಗುರಿಯನ್ನು ಸುಲಭವಾಗಿ ಸಾಧಿಸಿದ್ದರು.

ಆದರೆ ಶ್ರೇಯಸ್ ಅಯ್ಯರ್ ಮಾತ್ರ ಎಡವಿದರು. ಅವರು ಲಯಕ್ಕೆ ಮರಳಲು ಮತ್ತೊಂದು ಅವಕಾಶ ಇಂದೋರ್‌ನಲ್ಲಿ ಸಿಗುವುದು ಬಹುತೇಕ ಖಚಿತ.

ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಕುಲದೀಪ್ ಯಾದವ್ ಅವರು ವಿಶ್ರಾಂತಿ ಪಡೆದಿದ್ದಾರೆ. ಸರಣಿಯ ಮೂರನೇ ಪಂದ್ಯಕ್ಕೆ ಅವರು ಮರಳುವರು. ಮುಂದಿನ ತಿಂಗಳು ನಡೆಯುವ ವಿಶ್ವಕಪ್ ಟೂರ್ನಿಗೆ ಪೂರ್ವಭಾವಿ ಸಿದ್ಧತೆ ಎಂದೇ ಪರಿಗಣಿಸಲಾಗಿರುವ ಈ ಸರಣಿಯ ಗೆಲುವು ತಂಡದ ಆತ್ಮಬಲ ವೃದ್ಧಿಸುವುದರಲ್ಲಿ ಸಂಶಯವಿಲ್ಲ.



ಭಾರತದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್

ದೀರ್ಘಕಾಲದ ನಂತರ ಏಕದಿನ ಕ್ರಿಕೆಟ್ ತಂಡಕ್ಕೆ ಮರಳಿರುವ ಅನುಭವಿ ಆರ್. ಅಶ್ವಿನ್ ಅವರ ಮೇಲೂ ಆಯ್ಕೆ ಸಮಿತಿ ಕಣ್ಣಿಟ್ಟಿದೆ. ಆದರೆ ಶುಕ್ರವಾರ ನಡೆದಿದ್ದ ಪಂದ್ಯದಲ್ಲಿ ಅವರು ಆಸ್ಟ್ರೇಲಿಯಾ ಬ್ಯಾಟರ್‌ಗಳಿಗೆ ಕಠಿಣ ಸವಾಲೊಡ್ಡುವಲ್ಲಿ ಯಶಸ್ವಿಯಾಗಲಿಲ್ಲ.

ಪ್ರವಾಸಿ ತಂಡದಲ್ಲಿ ಡೇವಿಡ್ ವಾರ್ನರ್, ಲಯಕ್ಕೆ ಮರಳಿದ್ದಾರೆ. ಸ್ಟೀವ್ ಸ್ಮಿತ್, ಮಾರ್ನಸ್ ಲಾಬುಷೇನ್ ಹಾಗೂ ಮಾರ್ಕಸ್ ಸ್ಟೊಯಿನಿಸ್ ಅವರು ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಬಲಾಢ್ಯವಾಗಲು ಕಾರಣರಾಗಿದ್ದಾರೆ. ಅವರನ್ನು ಕಟ್ಟಿಹಾಕುವುದು ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು.

ವೇಗಿ ಪ್ಯಾಟ್ ಕಮಿನ್ಸ್ ಬ್ಯಾಟಿಂಗ್‌ನಲ್ಲಿಯೂ ಮಿಂಚುತ್ತಿರುವುದು ಆಸ್ಟ್ರೇಲಿಯಾ ತಂಡಕ್ಕೆ ಸಮಾಧಾನಕರ ಸಂಗತಿ. ಸ್ಪಿನ್ನರ್ ಆ್ಯಡಂ ಜಂಪಾ, ವೇಗಿ ಜೋಷ್ ಹ್ಯಾಜಲ್‌ವುಡ್ ಅವರು ಭಾರತದ ಬ್ಯಾಟರ್‌ಗಳನ್ನು ಕಾಡಲು ಸಿದ್ಧರಾಗಿದ್ದಾರೆ. ಆಸ್ಟ್ರೇಲಿಯಾ ತಂಡವು ಈ ಪಂದ್ಯದಲ್ಲಿ ಜಯಿಸಿದರೆ ಸರಣಿ ಜಯದ ಕನಸು ಜೀವಂತವಾಗುಳಿಯಲಿದೆ. ಅಲ್ಲದೇ ರಾಜ್‌ಕೋಟ್‌ನಲ್ಲಿ ನಡೆಯಲಿರುವ ಮೂರನೇ ಹಾಗೂ ಕೊನೆಯ ಪಂದ್ಯವು ರೋಚಕವಾಗಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಪೋರ್ಟ್ಸ್ 18,
ಜಿಯೊ ಸಿನಿಮಾ ಆ್ಯಪ್

ಮೋಟೊಜಿಪಿ: ಮಾರ್ಟಿನ್‌ಗೆ ಅಗ್ರಸ್ಥಾನ

ಗ್ರೇಟರ್ ನೋಯ್ಡಾ (ಎಎಫ್‌ಪಿ): ಆರಂಭದಿಂದಲೇ ಮುನ್ನಡೆ ಕಾಯ್ದುಕೊಂಡ ಸ್ಪೇನ್‌ನ ಜಾರ್ಜ್ ಮಾರ್ಟಿನ್ ಅವರು ಮೋಟೊಜಿಪಿ ಬೈಕ್‌ರೇಸ್‌ನ ಸ್ಪ್ರಿಂಟ್ ವಿಭಾಗದಲ್ಲಿ ಅಗ್ರಸ್ಥಾನ ಪಡೆದರು.

ಬುದ್ಧ ಇಂಟರ್‌ನ್ಯಾಷನಲ್ ಸರ್ಕಿಟ್‌ನಲ್ಲಿ ಶನಿವಾರ ನಡೆದ ರೇಸ್‌ನಲ್ಲಿ ಡುಕಾಟಿ–ಪ್ರಮ್ಯಾಕ್ ತಂಡವನ್ನು ಪ್ರತಿನಿಧಿಸಿದ ಮಾರ್ಟಿನ್ ಅವರು ಗ್ರಿಡ್‌ನಲ್ಲಿ ಎರಡನೆಯವರಾಗಿ ಸ್ಪರ್ಧೆ ಆರಂಭಿಸಿದ್ದರು.

ರೇಸ್ ಆರಂಭವಾದ ಮೊದಲ ತಿರುವಿನಲ್ಲಿ ಕೆಲವು ರೈಡರ್‌ಗಳು ಬೈಕ್‌ನ ಮೇಲೆ ನಿಯಂತ್ರಣ ಕಳೆದುಕೊಂಡು ಬಿದ್ದರು. ಈ ವೇಳೆ ಮುನ್ನಡೆ ಗಳಿಸಿದ ಮಾರ್ಟಿನ್ ಅದನ್ನು ಕೊನೆಯವರೆಗೂ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾದರು.

ವಿಶ್ವ ಚಾಂಪಿಯನ್ ಅಗಿರುವ ಇಟಲಿಯ ರೈಡರ್ ಫ್ರಾನ್ಸೆಸ್ಕೊ ಬನ್ಯಾಯಾ ಅವರು ಎರಡನೇ ಸ್ಥಾನ ತಮ್ಮದಾಗಿಸಿಕೊಂಡರೆ, ಮಾರ್ಕ್ ಮಾರ್ಕ್ವೆಜ್ ಮೂರನೇ ಸ್ಥಾನ ಗಳಿಸಿದರು. ಪೋಲ್ ಪೊಸಿಷನ್‌ನಲ್ಲಿ ಸ್ಪರ್ಧೆ ಆರಂಭಿಸಿದ್ದ ಮಾರ್ಕೊ ಬೆಜೆಚಿ ಅವರು ಮೊದಲ ತಿರುವಿನಲ್ಲಿ ಬೈಕ್ ಮೇಲಿನ ನಿಯಂತ್ರಣ ಕಳೆದುಕೊಂಡರು. ಇದರಿಂದ ಹಿಂದೆ ಬಿದ್ದ ಅವರಿಗೆ ಆ ಬಳಿಕ ಮುನ್ನಡೆ ಸಾಧಿಸಲು ಆಗಲಿಲ್ಲ. ಅವರು ಐದನೆಯವರಾಗಿ ಸ್ಪರ್ಧೆ ಕೊನೆಗೊಳಿಸಿದರು.

ಮಾರ್ಟಿನ್ ಅವರು ಈ ಹಿಂದೆ ಮಿಸಾನೊದಲ್ಲಿ ನಡೆದಿದ್ದ ರೇಸ್‌ನಲ್ಲಿ ಗೆದ್ದಿದ್ದರು.

ಶ್ರೇಯಸ್ ಹರೀಶ್ ನೆನಪು

ಬೆಂಗಳೂರು: ಮೋಟೊಜಿಪಿ ರೇಸ್ ಆಯೋಜನೆಯಾಗಿರುವ ಗ್ರೇಟರ್ ನೋಯ್ಡಾದ ಬುದ್ಧ ಇಂಟರ್‌ನ್ಯಾಷನಲ್ ಸರ್ಕಿಟ್‌ನಲ್ಲಿ ಸ್ಥಾಪಿಸಿರುವ ಒಂದು ಮಳಿಗೆಯು ಬೆಂಗಳೂರಿನ ಬಾಲಕನ ‘ನನಸಾಗದ ಕನಸಿ’ಗೆ ಸಂಬಂಧಿಸಿದ ಕಥೆಯನ್ನು ಹೇಳುತ್ತದೆ.

ಆಗಸ್ಟ್‌ನಲ್ಲಿ ಚೆನ್ನೈನಲ್ಲಿ ನಡೆದಿದ್ದ ಎಂಆರ್‌ಎಫ್ ಇಂಡಿಯನ್ ನ್ಯಾಷನಲ್ ಮೋಟರ್‌ಸೈಕಲ್ ರೇಸಿಂಗ್ ಚಾಂಪಿಯನ್‌ಷಿಪ್ ವೇಳೆ ದುರಂತ ಮರಣವನ್ನಪ್ಪಿದ್ದ 13 ವರ್ಷದ ಶ್ರೇಯಸ್ ಹರೀಶ್ ಅವರ ನೆನಪಿಗಾಗಿ ಮಳಿಗೆ ತೆರೆಯಲಾಗಿದೆ.

ಬೈಕ್ ರೇಸಿಂಗ್‌ನಲ್ಲಿ ಮಗ ಹೊಂದಿದ್ದ ಪ್ರೀತಿಯನ್ನು ಎಲ್ಲರಿಗೂ ತಿಳಿಸುವ ಉದ್ದೇಶದಿಂದ ಶ್ರೇಯಸ್ ತಂದೆ, ತಂದೆ ಹರೀಶ್ ಪರಂಧಾಮನ್ ಅವರು ಈ ಮಳಿಗೆ ತೆರೆದಿದ್ದಾರೆ.

‘ಅವನು ಈ ಕ್ರೀಡೆಗಾಗಿ ತನ್ನ ಜೀವವನ್ನೇ ತ್ಯಾಗ ಮಾಡಿದ್ದಾನೆ. ಆತನ ಕತೆ ಇಲ್ಲಿಗೆ ಕೊನೆಗೊಳ್ಳಲು ಬಿಡುವುದಿಲ್ಲ’ ಎಂದು ಹರೀಶ್ ಅವರು ಪ್ರತಿಕ್ರಿಯಿಸಿದ್ದಾರೆ.